ಬೆಲೆ: ಎರಡು ಆಣೆ

ಕರ್ಮವೀರ

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

ಸಂಪಾದಕರು :
ಹ. ರಾ. ಪುರೋಹಿತ ಎಂ. ಎ.

Editor :
H. R. Purohit, M. A.

---(ಸಂಪುಟ ೧೯)---
ಹುಬ್ಬಳ್ಳಿ ಸೋಮವಾರ ತಾರೀಖು ೧೪---೭---೧೯೪೭
---(ಸಂಚಿಕೆ ೧೫)---

ಭಾರತ ಸ್ವಾತಂತ್ರ್ಯ ಮಸೂದೆಯ ವಿವರಗಳು

ಆಗಸ್ಟ ೧೫ ರಲ್ಲಿ ಹಿಂದೀಯರಿಗೆ ಸಂಪೂರ್ಣ ಅಧಿಕಾರದಾನ— ಬ್ರಿಟಿಶ ಭಾರತ ಮತ್ತು ಅದಕ್ಕೆ ಸೇರಿದ ಎಲ್ಲ ಪ್ರದೇಶಗಳ ಮೇಲಿನ ಅಧಿಕಾರವನ್ನೂ ಚಕ್ರವರ್ತಿಗಳು ಬಿಟ್ಟು ಕೊಡುವರು— "ಹೊಸ ಸಾಮಂತ ಸರಕಾರಗಳು" ರಚಿಸುವ ಯಾವ ಕಾಯಿದೆಯನ್ನೂ ಬ್ರಿಟಿಶ ಸರಕಾರವು ಅಲ್ಲಗಳೆಯಲಾರದು.

ಜುಲೈ ನಾಲ್ಕರಲ್ಲಿ ಪಾರ್ಲಿಮೆಂಟಿನಲ್ಲಿ ಹಿಂದೀ ಸ್ವಾತಂತ್ರ್ಯ ಮಸೂದೆಯು ಮಂಡಿಸಲ್ಪಟ್ಟದು ಸುಪ್ರಸಿದ್ಧವಿದೆ. ಅನೇಕ ವರ್ಷಗಳ ಹೋರಾಟದ ಫಲವಾಗಿ ...ವಾಗಿಯಾದರೂ ಭಾರತವು ಸ್ವಾತಂತ್ರ್ಯವನ್ನು ಪಡೆಯುವಂತಾದುದೇ ಸುದೈವವೆನ್ನಬೇಕು. ಆಗಸ್ಟ ೧೫ರಿಂದ ಹಿಂದುಸ್ತಾನ ಪಾಕಿಸ್ತಾನಗಳೆಂಬ ಎರಡು ಭಿನ್ನ ಸಾಮಂತ ರಾಜ್ಯಗಳಾಗುವವು. ಇದನ್ನು ಸಾರುವ "ಭಾರತ ಸ್ವಾತಂತ್ರ್ಯ ಮಸೂದೆ"ಯ ವಿವರಗಳು ಈಗ ಪ್ರಸಿದ್ಧಿಸಲ್ಪಟ್ಟವೆ. ಕೆಲವೇ ದಿವಸಗಳಲ್ಲಿ ಮಸೂದೆಯ ರೂಪದಲ್ಲಿದ್ದ ಇದು ಕಾಯದೆಯಾಗಿ ಪರಿಣಮಿಸುತ್ತದೆ. ಅದರನ್ವಯ ಹಿಂದುಸ್ತಾನ ಪಾಕಿಸ್ತಾನಗಳು ಸಾಮಂತರಾಷ್ಟ್ರಗಳಾಗಿ ತಮ್ಮ ಒಳ ಆಡಳಿತದಲ್ಲಿ ಸಂಪೂರ್ಣ ಸ್ವಾತಂತ್ರ್ಯ ವಹಿಸಿ ದೇಶದಲ್ಲಿಯ ದುಃಸ್ಥಿತಿಯನ್ನು ನಿವಾರಿಸಲು ಅನುವು ದೊರೆಯುತ್ತದೆ. ಮಸೂದೆಯ ವಿವರಗಳು ಹೀಗಿವೆ:—

ವಿಭಾಗ ೧. ಆಗಸ್ಟ ೧೫ರಿಂದ ಹಿಂದುಸ್ತಾನದಲ್ಲಿ ಹಿಂದುಸ್ತಾನ ಪಾಕಿಸ್ತಾನಗಳೆಂಬ ಎರಡು ಸ್ವತಂತ್ರ ಸಾಮಂತ ರಾಜ್ಯಗಳು ಸ್ಥಾಪಿಸಲ್ಪಡುವುವು. ಉಪವಿಭಾಗ (೧) ಈ ಮಸೂದೆಯಲ್ಲಿ ಇನ್ನು ಮೇಲೆ ಉಕ್ತ ಸಾಮಂತ ರಾಜ್ಯಗಳನ್ನು "ಹೊಸ ಸಾಮಂತ ರಾಜ್ಯಗಳೆ"ಂದು ಕರೆಯಲಾಗುತ್ತದೆ.

ಸಾಮಂತ ರಾಜ್ಯಗಳಿಗೆ ಸೇರುವ ಪ್ರದೇಶಗಳು

ವಿಭಾಗ ೨ರ ೧ ನೆಯ ಉಪವಿಭಾಗದ ಪ್ರಕಾರವಾಗಿ ಉಪವಿಭಾಗ (೨) ರಲ್ಲಿ ಹೇಳಿರುವುದನ್ನು ಬಿಡು ಆಗಸ್ಟ ೧೫ರ ವರೆಗೆ "ಬ್ರಿಟಿಶ ಹಿಂದುಸ್ತಾನ"ವೆಂದಿರುವ ಎಲ್ಲ ಪ್ರದೇಶಗಳೂ ಹೊಸ ಹಿಂದುಸ್ತಾನ ಸಾಮಂತ ರಾಜ್ಯಕ್ಕೆ ಸೇರತಕ್ಕದ್ದು. ಉಪವಿಭಾಗ (೨) ರನ್ವಯ ಸಿಂಧ, ಚೀಫ್ ಕಮಿಶನ್ನರ ಕೈಕೆಳಗಿರುವ ಬ್ರಿಟಿಶ ಬಲೂಚಿಸ್ತಾನ, ಈಗ ನಡೆವ ಮತಗಣನೆಯ ಪರಿಣಾಮವಾಗಿ ಬಹುಮತದಿಂದ ನಿರ್ಣಯವಾದರೆ ಗಡಿನಾಡು, ೩ನೆಯ ವಿಭಾಗದನ್ವಯ ಪ್ರಜೆಗಳು ಬಹುಮತದಿಂದ ನಿರ್ಣಯಿಸಿದರೆ ಸಿಲ್ಹೆಟ್ ಜಿಲ್ಹೆ, ಪೂರ್ವ ಬಂಗಾಲ ಮತ್ತು ೪ನೆಯ ವಿಭಾಗದನುಸಾರ ಪಶ್ಚಿಮ ಪಂಜಾಬ— ಇವು ಹೊಸ ಸಾಮಂತ ರಾಜ್ಯವಾದ ಪಾಕಿಸ್ತಾನಕ್ಕೆ ಸೇರತಕ್ಕದ್ದು.

ಪ್ರದೇಶಗಳ ಹಕ್ಕು ಬಾಧ್ಯತೆಗಳು

ವಿಭಾಗ ೩. ಇದರ (೩)ನೆಯ ಉಪವಿಭಾಗದ ಪ್ರಕಾರ ಯಾವ ಪ್ರದೇಶವಾದರೂ ಯಾವ ಕಾಲದಲ್ಲಾದರೂ ಈ ಎರಡು ಸಾಮಂತ ರಾಜ್ಯಗಳಲ್ಲಿ ಯಾವ ಒಂದನ್ನಾದರೂ ಸೇರಬಹುದು ಅಥವಾ ಬಿಟ್ಟು ಹೋಗಬಹುದು; ಆದರೆ ಉಪವಿಭಾಗ (೧) ಅಥವಾ (೨)ರಲ್ಲಿ ಹೇಳಿದ ಪ್ರದೇಶಗಳನ್ನು ಆಯಾ ಸಾಮಂತ ರಾಜ್ಯದ ಒಪ್ಪಿಗೆ ಪಡೆಯದೆ ಸೇರಿಸಿಕೊಳ್ಳಲಾಗುವದಿಲ್ಲ. ಹಾಗೇ "ನಿರ್ದಿಷ್ಟ ತಾರೀಕೆ" ನಿಸಿದ ಆಗಸ್ಟ ೧೫ ರ ನಂತರ ಪಾಕಿಸ್ತಾನ ಅಥವಾ ಹಿಂದುಸ್ತಾನ ಸಾಮಂತ ರಾಜ್ಯದಲ್ಲಿ ಸೇರಿಕೊಂಡ ಪ್ರದೇಶವು ಆಯಾ ಸಾಮಂತ ರಾಜ್ಯದ ಒಪ್ಪಿಗೆ ಪಡೆಯದೆ ಹೊರ ಹೋಗಲಾಗದು.

ಮೇಲಿನ ವಿಭಾಗದ ಉಪವಿಭಾಗ (೪) ರ ಪ್ರಕಾರ (೩) ಉಪವಿಭಾಗದಲ್ಲಿ ಹೇಳಿರುವ ಪಕ್ಕೆ ಥಕ್ಕೆ ತಗಲದಂತೆ ಯಾವ ಹಿಂದೀ ಸಂಸ್ಥಾನವಾದರೂ ಎರಡು ಹೊಸ ಸಾಮಂತ ರಾಜ್ಯಗಳಲ್ಲಿ ಯಾವುದೊಂದನ್ನು ಬೇಕಾದರೂ ಸೇರಬಹುದು.

ಈಗ ಪಾರ್ಲಿಮೆಂಟಿನಲ್ಲಿ ಮಂಡಿಸಲಾದ ಭಾರತ ಸ್ವಾತಂತ್ರ್ಯ ಮಸೂದೆಯ ಪ್ರಕಾರ ಆಗಸ್ಟ ೧೫ ರಿಂದ ಭಾರತದಲ್ಲಿ ಹಿಂದುಸ್ತಾನ ಪಾಕಿಸ್ತಾನಗಳೆಂಬ "ಹೊಸ ಸಾಮಂತರಾಜ್ಯಗಳು" ಉದಯಿಸುವವು. ಗಡಿನಾಡು ಸಿಲ್ಹೆಟ್ಟಗಳ ಗತಿ ಮತಗಣನೆಯ ಪರಿಣಾಮದಂತೆ ನಿರ್ಣಯಿಸಲ್ಪಡುವುದು. "ನಿರ್ದಿಷ್ಟ ದಿನ"ವಾದ ಆಗಸ್ಟ ೧೫ ರಿಂದ ಪಾಕಿಸ್ತಾನ ಹಿಂದುಸ್ತಾನಗಳ ಘಟನಾ ಸಮಿತಿಗಳೇ ಅವುಗಳ ಶಾಸನ ಸಭೆಗಳಾಗುತ್ತವೆ. ಚಕ್ರವರ್ತಿಗಳು ಚಕ್ರವರ್ತಿಯೆಂಬ ಬಿರುದನ್ನೂ ಹಿಂದೀ ಸಂಸ್ಥಾನಿಕರೊಡನಿದ್ದ ಎಲ್ಲ ಸಂಬಂಧವನ್ನೂ ತ್ಯಜಿಸುವರು. ಭಾರತ ಮಂತ್ರಿಗಳ ಸಲಹೆಗಾರರನ್ನು ತೆಗೆದು ಹಾಕಲಾಗುತ್ತದೆ. ವರಿಷ್ಠಾಧಿಕಾರ ಮುಕ್ತಾಯವಾಗಿ ನಡುಗಾಲದಲ್ಲಿ ಗವರ್ನರ ಜನರಲ್ಲರು ಸಾಮಂತ ರಾಜ್ಯಗಳ ಮಂತ್ರಿಗಳನ್ನು ಕೇಳದೆ ಯಾವ ಆಜ್ಞೆಯನ್ನೂ ಹೊರಡಿಸಲಾರರು.

ಹೊಸಸಾಮಂತ ರಾಜ್ಯಗಳ ಗವರ್ನರ ಜನರಲ್ಲರು

ವಿಭಾಗ ೫. ಇದರ ಅನುಸಾರವಾಗಿ ಎರಡು ಹೊಸ ಸಾಮಂತರಾಜ್ಯಗಳಿಗೂ ಚಕ್ರವರ್ತಿಗಳು ಒಬ್ಬೊಬ್ಬ ಗವರ್ನರ ಜನರಲ್ಲನನ್ನು ನಿಯಮಿಸತಕ್ಕದ್ದು. ಆದರೆ ಸಾಮಂತರಾಜ್ಯಗಳಲ್ಲಿ ಯಾವುದಾದರೊಂದರ ಶಾಸನ ಸಭೆಯು ತದ್ವಿರುದ್ಧವಾಗಿ ಒಬ್ಬ ಗವರ್ನರ ಜನರಲ್ಲನು ಎರಡೂ ಸಾಮಂತ ರಾಜ್ಯಗಳನ್ನಾಳಬೇಕೆಂದು ಠರಾವು ಪಾಸು ಮಾಡಿದರೆ ಹಾಗೇ ಆಗತಕ್ಕದ್ದು.

ಶಾಸನ ರಚನಾಧಿಕಾರ

ವಿಭಾಗ ೬. ಇದರ ಉಪವಿಭಾಗ (೧) ರ ಪ್ರಕಾರ ಹೊಸ ಸಾಮಂತ ರಾಜ್ಯಗಳ ಶಾಸನ ಸಭೆಗಳು ಹೊರನಾಡಿಗೆ ಸಂಬಂಧಿಸಿದ ಮತ್ತು ತಮ್ಮ ರಾಜ್ಯಗಳಿಗನ್ವಯಿಸುವ ಯಾವ ಕಾಯದೆಯನ್ನೂ ಪಾಸುಮಾಡಬಹುದು. ಇದರ (೨) ನೆಯ ಉಪವಿಭಾಗಕ್ಕೆ ಅನುಗುಣವಾಗಿ ಸಾಮಂತ ರಾಜ್ಯಗಳು ಪಾಸುಮಾಡಿದ ಕಾಯಿದೆಗಳು ಬ್ರಿಟನ್ನಿನ ಕಾಯದೆಯೊಂದಕ್ಕೆ ವಿರುದ್ಧವಾಗಿದೆಯೆಂಬ ಕಾರಣದಿಂದಾಗಲಿ ಮತ್ತಾವ ಕಾರಣದಿಂದಾಗಲಿ ರದ್ದು ಮಾಡುವ ಒತ್ತಾಯಕ್ಕೆ ಗುರಿಯಾಗಲಾರವು. ಅವರವರ ರಾಜ್ಯದ ಯಾವ ಕಾಯದೆಯ ಭಾಗವನ್ನು ಬೇಕಾದರೂ ಆಯಾ ಶಾಸನ ಸಭಾ ಸದಸ್ಯರು ತಿದ್ದಲಿ ಇಲ್ಲವೆ ರದ್ದುಗೊಳಿಸಲು ಸ್ವತಂತ್ರರು. (೩) ನೆಯ ಉಪವಿಭಾಗದ ಪ್ರಕಾರ ಸಾಮಂತ ರಾಜ್ಯದ ಶಾಸನ ಸಭೆಗಳಲ್ಲಿ ಪಾಸಾದ ಕಾಯದೆಗೆ ಚಕ್ರವರ್ತಿಗಳ ಹೆಸರಿನಲ್ಲಿ ಒಪ್ಪಿಗೆ ಕೊಡುವ ಅಧಿಕಾರವು ಗವರ್ನರ ಜನರಲ್ಲನಿಗಿದೆ. ಪಾಸಾದ ಯಾವ ಕಾಯದೆಯ ಭಾಗವನ್ನೇ ಆಗಲಿ ಚಕ್ರವರ್ತಿಗಳು ತಡೆಹಿಡಿದಿಡುವುದು, ಅವರ ಸಮ್ಮತಿಗಾಗಿ ಕಾಯದೆಗಳನ್ನು ಕಾದಿಡುವುದು, ಅಥವಾ ಅವರ ಸಮ್ಮತಿ ಸಿಗುವ ವರೆಗೆ ಪಾಸಾದ ಕಾಯದೆಗಳನ್ನು ಜಾರಿಯಲ್ಲಿ ತರದಿರುವುದು- ಈ ಯಾವುದೂ ಹೊಸ ಸಾಮಂತ ರಾಜ್ಯಗಳ ಶಾಸನಸಭೆಗಳಿಗೆ ಅನ್ವಯಿಸುವುದಿಲ್ಲ.

ವರಿಷ್ಠಾಧಿಕಾರದ ಕೊನೆ

ವಿಭಾಗ ೭. ಇದರ ಉಪವಿಭಾಗ ಒಂದರನ್ವಯ "ನಿರ್ದಿಷ್ಟ ದಿನ"ವಾದ ಆಗಸ್ಟ ೧೫ ರಿಂದ ಸಂಯುಕ್ತ ರಾಜ್ಯದಲ್ಲಿಯ ಚಕ್ರವರ್ತಿಗಳ ಸರಕಾರಕ್ಕೆ ಆ ತಾರೀಕಿನ ವರೆಗೆ ಬ್ರಿಟಿಶ ಹಿಂದುಸ್ತಾನವೆಂದು ಕರೆಯಲ್ಪಡುತ್ತಿದ್ದ ಭಾಗದ ಯಾವ ಪ್ರದೇಶದ ಆಡಳಿತದ ಹೊಣೆಯೂ ಇರುವುದಿಲ್ಲ. ಹಿಂದೀ ಸಂಸ್ಥಾನಗಳ ಮೇಲಿನ ಚಕ್ರವರ್ತಿಗಳ ವರಿಷ್ಠಾಧಿಕಾರವೂ ಅದರೊಡನೇ ಸಂಸ್ಥಾನಾಧಿಪತಿಗಳೊಡನೆ ಮಾಡಿಕೊಂಡ ಎಲ್ಲ ಕವಲು ಕರಾರುಗಳೂ ಪರಸ್ಪರ ಕರ್ತವ್ಯ ಸಹಾಯಗಳೂ ಎಲ್ಲ ಅಧಿಕಾರ, ಹಕ್ಕು, ಕರ್ತವ್ಯ, ಅಳಿಕೆ ಮುಂತಾದವುಗಳೂ ಕೊನೆಗೊಳ್ಳುವವು.

ಇಂಗ್ಲಂಡಿನ ರಾಜರ ಬಿರುದಿನಲ್ಲಿ ಬದಲಾವಣೆ

ಮೇಲಿನ ವಿಭಾಗದ ಉಪವಿಭಾಗ ೨ ರನ್ವಯ "ಹಿಂದುಸ್ತಾನವನ್ನು ಆಳಲು ಸರ್ವತಂತ್ರ ಸ್ವತಂತ್ರ" ಮತ್ತು "ಹಿಂದುಸ್ತಾನದ ಚಕ್ರವರ್ತಿ" ಎಂಬ ಪದಗಳನ್ನು ರಾಜರ ಬಿರುದಿನಿಂದ ತೆಗೆದು ಹಾಕಲು ಈ ಮೂಲಕ ಪಾರ್ಲಿಮೆಂಟು ಒಪ್ಪಿಗೆಯಿತ್ತಿದೆ.

ಸಾಮಂತ ರಾಜ್ಯಗಳ ನಡುಗಾಲದ ಆಡಳಿತ

ವಿಭಾಗ ೮. ಇದರ ಉಪವಿಭಾಗ (೧) ರಂತೆ ಘಟನಾನಿರ್ಮಿತಿಗೆ ಅನುವು ದೊರೆಯುವಂತೆ ಮಾಡುವುದರ ಸಲುವಾಗಿ ಪ್ರತಿಯೊಂದು ಸಾಮಂತ-ರಾಜ್ಯದ ಘಟನಾಸಮಿತಿಯೂ ಆ ರಾಜ್ಯದ ಶಾಸನ ಸಭೆಯಾಗಿ ಕೆಲಸಮಾಡತಕ್ಕದ್ದು. ಮತ್ತು ಮೇಲೆ ಹೇಳಿದ ಘಟನಾಸಮಿತಿಯು ಪಾಸುಮಾಡುವ ಕಾಯದೆ ಅಥವಾ ಕ್ರಮಗಳಲ್ಲದೆ ಉಳಿದೆಲ್ಲ ವಿಷಯಗಳಲ್ಲಿಯೂ ಮೊದಲ ೧೯೩೫ರ ಹಿಂದುಸ್ತಾನ ಸರಕಾರದ ಕಾಯದೆಯಂತೆಯೇ ಆಡಳಿತ ನಡೆಯತಕ್ಕದ್ದು.

ಕಾಯದೆಯನ್ನು ಜಾರಿಗೆ ತರುವ ಕ್ರಮ

ವಿಭಾಗ ೯. ಗವರ್ನರ ಜನರಲ್ಲರು ಈ ಕಾಯಿದೆಯನ್ನು ಜಾರಿಗೆ ತರಲು ಅವಶ್ಯವೆನಿಸುವ ಎಲ್ಲ ಕ್ರಮಗಳನ್ನೂ ಕೈಗೊಳ್ಳಲು ಅಧಿಕೃತರಾಗಿದ್ದಾರೆ. ಹೊಸ ಪ್ರಾಂತಗಳಿಗೂ ಹೊಸ ಸಾಮಂತ ರಾಜ್ಯಗಳಿಗೂ ಈ ಕಾಯದೆಯ ಪ್ರಕಾರ ತಮಗೆ ಸೇರಿದ್ದ ಅಧಿಕಾರ, ಹಕ್ಕು, ಸೊತ್ತು, ಕರ್ತವ್ಯ, ಸಾಲಗಳನ್ನು ಹಂಚಿಕೊಡಲು ಸಂಪೂರ್ಣಾಧಿಕಾರವಿರುತ್ತದೆ.

ಉಪವಿಭಾಗ ೨ರಂತೆ ಗವರ್ನರ ಜನರಲ್ಲನಿಗೆ ಇರುವ ಅಧಿಕಾರವನ್ನು ತಮ್ಮ ತಮ್ಮ ಪ್ರಾಂತಗಳಲ್ಲಿ ಗವರ್ನರರೂ ಮೇಲೆ ಹೇಳಿದ ರೀತಿಯಲ್ಲಿ ಬಳಸಬಹುದು.

೩ನೆಯ ಉಪವಿಭಾಗದನ್ವಯ ಈ ವಿಭಾಗವು ೧೯೪೭ರ ಜೂನ ೩ರಿಂದಲೇ ಜಾರಿಗೆ ಬಂದಿದೆಯೆಂದು ತಿಳಿಯತಕ್ಕದ್ದು.

೪ ನೆಯ ಉಪವಿಭಾಗದಂತೆ ಈ ವಿಭಾಗದನುಸಾರ ಹೊರಡಿಸುವ ಆಜ್ಞೆಗಳು ಬ್ರಿಟಿಶ ಹಿಂದುಸ್ತಾನದಲ್ಲಿ ಆಗಸ್ಟ ೧೫ ರ ವರೆಗೂ ಹೊಸ ಸಾಮಂತ ರಾಜ್ಯಗಳಲ್ಲಿ ಆ ತಾರೀಕಿನಲ್ಲಿ ಮತ್ತು ಮುಂದೆಯೂ ಅವುಗಳ ಹೊರಗೆ ಆಯಾ ಸಾಮಂತ ರಾಜ್ಯದ ಕಾಯದೆಗಳು ನಿರ್ದೇಶಿಸುವಂತೆಯೂ ಜಾರಿಯಲ್ಲಿ ಬರುವುವು.

ಉಪವಿಭಾಗ ೫ ರಂತೆ ಈ ವಿಭಾಗದೊಳಗೆ ಪ್ರಾಂತದ ಗವರ್ನರರು ಆಗಸ್ಟ ೧೫ ರ ನಂತರವೂ ಗವರ್ನರ ಜನರಲ್ಲರು ೧೯೪೮ರ ಮಾರ್ಚ ೩೧ ಅಥವಾ ಘಟನಾ ಸಮಿತಿಗಳ ಶಾಸನದಿಂದ ನಿರ್ದಿಷ್ಟವಾದ ತಾರೀಕಿನ ನಂತರವೂ ಯಾವ ಆಜ್ಞೆಯನ್ನೂ ಹೊರಡಿಸಲಾರರು.

ಆಯ್. ಸಿ. ಎಸ್. ಅಧಿಕಾರಿಗಳು

೧೦ ನೆಯ ವಿಭಾಗದನ್ವಯ ಭಾರತ ಮಂತ್ರಿಗಳು ಆಯ್. ಸಿ. ಎಸ್. ಅಧಿಕಾರಿಗಳನ್ನು ನಿಯಮಿಸುವುದು ನಿಂತುಹೋಗುತ್ತದೆ; ಮತ್ತು ನೌಕರಿಯ ಸ್ಥಳಗಳನ್ನು ಅವರು ಇನ್ನು ಮುಂದೆ ಕಾದಿಡಲಾರರು.

ಈಗ ಅಧಿಕಾರದಲ್ಲಿರುವ ಆಯ್. ಸಿ. ಎಸ್ ಅಧಿಕಾರಿಗಳು ನಾಳಿನ ಸಾಮಂತ ರಾಜ್ಯಗಳಲ್ಲಿಯೂ ಅಧಿಕಾರದಲ್ಲಿರಲು ಒಪ್ಪಿದರೆ ಬದಲಾದ ಪರಿಸ್ಥಿತಿ ಅವಕಾಶವೊದಗಿಸಿ ಕೊಟ್ಟಷ್ಟರ ಮಟ್ಟಿಗೆ ಮೊದಲಿನ ನೌಕರಿಯ ಸವಲತ್ತುಗಳನ್ನು ಸಾಮಂತ ರಾಜ್ಯಗಳಿಂದ ಪಡೆಯಲರ್ಹರಿರುತ್ತಾರೆ.

ಹಿಂದುಸ್ತಾನದ ಸಶಸ್ತ್ರ ದಲಗಳು

೧೧ ನೆಯ ವಿಭಾಗದನುಸಾರವಾಗಿ ಈ ಕಾಯದೆಯ ಮೇಲಿನ ವಿಭಾಗಗಳನ್ವಯ ಗವರ್ನರ ಜನರಲ್ಲರು ಹಿಂದುಸ್ತಾನವನ್ನು ವಿಭಜಿಸುವಾಗ ಅದರ ಸಶಸ್ತ್ರ ದಲಗಳನ್ನು ಯಥಾಕ್ರಮ ವಿಭಜಿಸುವರು.

೨ ನೆಯ ಉಪವಿಭಾಗ:— ಚಕ್ರವರ್ತಿ ದಲದ ಅಧಿಕಾರಿಗಳು ಚಕ್ರವರ್ತಿಗಳ ಹಿಂದೀ ದಲದಲ್ಲಿ ಕೆಲಸ ಮಾಡುತ್ತಿದ್ದರೆ ಆಗಸ್ಟ ೧೫ ರಿಂದ ಅವರು ಹೊಸ ಸಾಮಂತ ರಾಜ್ಯಗಳು ಪಾಸು ಮಾಡುವ ಕಾಯದೆಗನುಗುಣವಾಗಿ ಅಥವಾ ಈ ಕಾಯದೆಯನ್ವಯ ಗವರ್ನರ ಜನರಲ್ಲರು ಹೊರಡಿಸುವ ಆಜ್ಞೆಯನುಸಾರವಾಗಿ ಕೈಕೆಳಗಿನವರಿಗೆ ಆಜ್ಞೆ ಕೊಡಲು ಇಲ್ಲವೆ ಅವರನ್ನು ಶಿಕ್ಷಿಸಲು ಅಧಿಕಾರವುಳ್ಳವರಾಗುತ್ತಾರೆ; ಆದರೆ ಇದನ್ನು ಪಾಸುಮಾಡುವ ತಾರೀಕಿನಲ್ಲಿ ಜಾರಿಯಲ್ಲಿರುವ ಯಾವ ಕಾಯದೆಯಂಶವೂ ಹಿಂದೀ ದಲಕ್ಕೆ ಅನ್ವಯಿಸುವ ಕಾಯದೆಗಳಿಗೆ ಅವರನು ಒಳಪಡಿಸಲಾರದು.

ಹಿಂದುಸ್ತಾನದಲ್ಲಿರುವ ಬ್ರಿಟಿಶ ದಲಗಳು

ವಿಭಾಗ ೧೨— ಆಗಸ್ಟ ೧೫ ರೊಳಗಾಗಲಿ ಅನಂತರವಾಗಲಿ ಹಿಂದುಸ್ತಾನ ದಲಗಳೆನಿಸಿಕೊಳ್ಳದ ಆದರೆ ಆಗಸ್ಟ ೧೫ ರ ವರೆಗೆ ಹಿಂದುಸ್ತಾನದೊಳಗೆ ಸೇರಿಸಿಕೊಂಡ ಯಾವ ಬ್ರಿಟಿಶದಲಗಳೇ ಆಗಲಿ ಸಾಮಂತ ರಾಜ್ಯಗಳಲ್ಲಿ ಉಳಿದರೆ ಅವುಗಳಿಗೆ ಈ ಕಾಯದೆಯ ಯಾವ ಅಂಶವೂ ಅನ್ವಯಿಸುವುದಿಲ್ಲ.

ಇದರ ೩ ನೆಯ ಉಪವಿಭಾಗದ ಪ್ರಕಾರ ಮೇಲೆ ಹೇಳಿದ ಬ್ರಿಟಿಶ ದಲಗಳು ಗವರ್ನರ ಜನರಲ್ಲರು ಅವುಗಳನ್ನು ತಿರುಗಿ ಕಳಿಸುವ ವ್ಯವಸ್ಥೆಯನ್ನು ಮಾಡುವವರೆಗೆ ಮೊದಲಿನಂತೆಯೇ ಕರ್ತವ್ಯ ನಿರ್ವಹಣ ಮಾಡುತ್ತಿರಬೇಕು.

ಭಾರತ ಮಂತ್ರಿಗಳು ಮತ್ತು ಭಾರತದ ಗೃಹಖಾತೆಯ ಲೆಕ್ಕ ತಪಾಸು ಮಾಡುವವರು

೧೪ ನೆಯ ವಿಭಾಗ: ೧೯೩೫ರ ಹಿಂದುಸ್ತಾನ ಸರಕಾರ ಕಾಯದೆಯನ್ವಯ ಇರುವ ಅಥವಾ ರಚಿತವಾಗುವ ಸರಕಾರಗಳ ಪರವಾಗಿ ಹಣ ಕೊಡುವ ಮುಂತಾದ ಕಾರ್ಯಗಳನ್ನು ತಾತ್ಕಾಲಿಕವಾಗಿ ಮೊದಲಿಂತೆಯೇ ಭಾರತಮಂತ್ರಿಗಳು ಅಥವಾ ತತ್ಸಂಬಂಧ ಅಧಿಕಾರಿಗಳು ನಿರ್ವಹಿಸುತ್ತಿರಬೇಕು. ಆದರೆ ಆಗಸ್ಟ ೧೫ ರಿಂದ ಹಿಂದುಸ್ತಾನ ಸರಕಾರ ಕಾಯದೆಯ ೨೭೮ ನೆಯ ವಿಭಾಗದನ್ವಯ ವಿಧಿಸಲಾದ ಅವರ ಸಲಹೆಗಾರರ ಸ್ಥಳಗಳು ತೆಗೆದುಹಾಕಲ್ಪಡುವುವು. ಹಾಗೇ ತಾತ್ಕಾಲಿಕವಾಗಿ ಭಾರತದ ಗೃಹಖಾತೆಯ ಲೆಕ್ಕ ತಪಾಸುಮಾಡುವವರೂ ಮೊದಲಿನಂತೆಯೇ ಕೆಲಸ ಸಾಗಿಸುತ್ತಿರಬೇಕು.

—೬ನೇ ಪುಟಕ್ಕೆ

ಕಾಫೀ ಚಹಾ ತೋಟಗಳಲ್ಲಿಯ ಕೂಲಿಕಾರರ ಪರಿಸ್ಥಿತಿ

ಕೂಲಿಕಾರರ ಸಾಲದ ಹೊರೆ— ಅದರ ವಿಮೋಚನೆಗಾಗಿ ಕಾಫೀ ಚಹಾ ತೋಟಗಳಲ್ಲಿ ದುಡಿತ— ವೇತನದ ಅಲ್ಪತೆ— ವಸತಿ ಸೌಕರ್ಯಗಳ ದುಸ್ಥಿತಿ— ಕೆಟ್ಟ ಹವೆ ಆಹಾರಗಳಿಂದ ರೋಗರುಜಿಗಳು— ಚಿಕಿತ್ಸೆಯಿಲ್ಲದೆ ನರಳಾಟ— ತೋಟದೊಡೆಯರ ಮತ್ತು ಅವರ ಅಧಿಕಾರಿಗಳ ನಿರ್ದಯತೆ, ಹಿಂಸೆ, ದರ್ಪ, ಕ್ರೌರ್ಯಗಳ ಅನುಭವ— ಇತ್ಯಾದಿಗಳನ್ನು ತೋಟವೊಂದರಲ್ಲಿ ಕೆಲಸ ಮಾಡುತ್ತಿರುವ ಶ್ರೀ ಕಾ. ಪು. ಶ್ಯಾಮ ಸೆಟ್ಟರು ಕರುಳು ಕರಗುವಂತೆ ಬಣ್ಣಿಸುತ್ತಾರೆ.

ಸಾಲಕೊಟ್ಟ ಒಡೆಯನ ಮಾತನ್ನು ಅಧರಿಸಿಕೊಂಡು ಬಹಳವಾದ ಗಾಳಿ ಮಳೆಯಲ್ಲಿ ನೂರಾರು ಮೈಲು ದೂರ ನಮ್ಮ ಮಕ್ಕಳು ಮರಿಗಳನ್ನು ಕಟ್ಟಿಕೊಂಡು, ಅಲ್ಲಲ್ಲಿ ತಂಗುತ್ತ, ಮುಂದೆ ನಡೆಯುತ್ತ, ಆಹಾರದ ಅಭಾವದಿಂದ ಒಂದೆರಡು ದಿನಗಳನ್ನು ನಾವೂ ನಮ್ಮ ಮಕ್ಕಳೂ ಉಪವಾಸ ಮಾಡಿ ಕಳೆಯುತ್ತ ತೋಟಗಳನ್ನು ಸೇರುವೆವು.

ನಮ್ಮ ಬಿಡಾರಗಳು

ತೋಟಕ್ಕೆ ಬಂದು ಸೇರಿದ ಮೇಲೆ ನಮಗಾಗಿ ಬೈಹುಲ್ಲಿನ ೯ ಅಡಿ ಉದ್ದದ ೫—೧೦ ಕೋಣೆಗಳಿರುವ ಸಾಲಾದ ಬಿಡಾರಗಳನ್ನು ತಯಾರಿಸಿ ಇಟ್ಟಿರುವರು. ಇವಕ್ಕೆ ಕಿಟಕಿ—ಬಾಗಿಲುಗಳಾಗಲೀ, ಗೋಡೆಯಾಗಲೀ ಇರದೆ ಮೇಲಿನ ಮಳೆಯ ನೀರು ಹರಿದು ಹೋಗುವಂತೆ ಹುಲ್ಲಿನ ಮಾಡು ಮಾತ್ರ ಇದೆ. ಇದನ್ನು ಸೊಪ್ಪು ಸದೆಗಳಿಂದಲೇ ಕೊಠಡಿಗಳನ್ನಾಗಿ ವಿಭಾಗಿಸಿ ಅಡ್ಡ ತಟ್ಟಿ ಕಟ್ಟಿರುವರು. ಇವುಗಳ ಸಹಾಯದಿಂದ ಶೀತ ಗಾಳಿಯಿಂದ ಸ್ವಲ್ಪ ಮಾತ್ರ ರಕ್ಷಿಸಿಕೊಳ್ಳಲಾಗುತ್ತದೆ. ಮೇಲ್ಮಾಡು ತಳಹದಿಯಿಂದ ೪ ಅಡಿ ಎತ್ತರದಲ್ಲಿಯೇ ಇದ್ದುದರಿಂದ ಒಳಹೋಗಲು ಬಗ್ಗಿ ಪ್ರವೇಶಿಸಬೇಕು. ಮಳೆಗಾಲದಲ್ಲಿ ಅಗಲೇ ಕಂಡ ನೀರುಂಡ ಕಟ್ಟಿಗೆಯನ್ನು ತಂದು ಬೆಂಕಿ ಉರಿಸುವುದರಿಂದ ಹೊಗೆ ಹೆಚ್ಚಳದಿಂದ ಕಣ್ಣು ತೆರೆದು ಇರಲು ಸಾಧ್ಯವಿಲ್ಲ. ಆ ಹೊಗೆಯನ್ನೇ ಶ್ವಾಸೋಚ್ಛ್ವಾಸ ಮಾಡದೆ ನಿರ್ವಾಹವಿಲ್ಲ. ರಾತ್ರಿ ಕಾಲದಲ್ಲಿ ಹಾವು ಇಲಿಗಳು ಈ ಸೊಪ್ಪಿನ ಗೋಡೆಗಳಲ್ಲಿ ಹರಿದು "ಭರ-ಭರ" ಎಂಬ ಶಬ್ದವು ನಿದ್ರಿಸಿರುವವನನ್ನು ಎಚ್ಚರಿಸುವದಲ್ಲದೆ ಎಷ್ಟೋ ಬಾರಿ ಮಲಗಿರುವವರನ್ನು ಕಚ್ಚಿ ಮರಣಕ್ಕೆ ಗುರಿಮಾಡುತ್ತವೆ. ಬಿಡಾರದ ಸುತ್ತಲೂ ಕೊಳಕು ಹುಲ್ಲು, ಕಸಗುಪ್ಪೆಗಳಲ್ಲದೆ ಕೊಚ್ಚೆಗುಂಡಿಗಳಿದ್ದು ಬಹುತರವಾದ ಕೆಟ್ಟ ವಾಸನೆಯುಳ್ಳ ಅನಿರ್ಮಲ ವಾಯುವಿನ ಪ್ರಸರಣೆಯು ನಮ್ಮ ಶ್ವಾಸಕೋಶಕ್ಕೆ ಹೊಕ್ಕು ಚಿರರೋಗಿಗಳನ್ನಾಗಿ ಮಾಡುತ್ತವೆ. ಬಿಡಾರದ ಸುತ್ತಲೂ ದೊಡ್ಡ ದೊಡ್ಡ ಮುಳ್ಳು ಪೊದರುಗಳಲ್ಲದೆ, ಮುಳ್ಳುಬಳ್ಳಿಗಳು ಹರಿದು ಮಾಡನ್ನು ಆವರಿಸಿ ಬಿಡುತ್ತವೆ. ನಮ್ಮ ಬಿಡಾರವು ಅತಿ ಚಿಕ್ಕದಾಗಿರುವುದಲ್ಲದೆ, ತಕ್ಕುದಾದ ಚಿಕ್ಕ ಜಗಲಿಯಾಗಲಿ ಇತರ ಕೊಂಚ ಸ್ಥಳವಾಗಲಿ ಇಲ್ಲದಾಗಿದೆ. ಒಂಬತ್ತು ಅಡಿ ಉದ್ದದ ಅರೆಗಳಲ್ಲಿ ದಂಪತಿ—ಮಕ್ಕಳುಗಳಲ್ಲದೆ, ನಮ್ಮ ಸಮೀಪ ಸಂಬಂಧಿಕರೆಂತ ೪—೫ ಜನರನ್ನು ಬಲಾತ್ಕಾರದಿಂದ ಇರಹೇಳುತ್ತಾರೆ. ಈ ಚಿಕ್ಕ ವಿಭಾಗದಲ್ಲಿಯೇ ಅಡಿಗೆ ಮಾಡಿ ಉಣಬೇಕು, ಹಡೆದ ಚಿಕ್ಕಮಗುವನ್ನು ಸಲಹಬೇಕು, ಕೆಲಸಮಾಡಲು ಕೊಟ್ಟ ಹಾರೆ, ಕುಂಟಾಣಿ, ಸಬ್ಬಳ, ಪಿಕ್ಕಾಸು, ಮುಳ್ಳುಗತ್ತಿ, ಚಾಕುಗಳನ್ನು ಜೋಪಾನದಲ್ಲಿ ಇರಿಸಿ ವಾಪಸು ಕೊಡಬೇಕು. ಹೀಗೆ ೪—೫ ಜನರ ಉಪಕರಣಗಳು ಎಷ್ಟಾಗುತ್ತವೆ ಎಂಬುದನ್ನೆಣಿಸಿರಿ.

ಮಳೆಗಾಲದ ಗೋಳಾಟ

ಅಸ್ವಸ್ಥನಾಗಿದ್ದರೆ ಚಿಕಿತ್ಸೆ ಹೊಂದಬೇಕು, ಬತ್ತ ಕುಟ್ಟಬೇಕು, ಕಟ್ಟಿಗೆ ತಂದು ಮಳೆ ನೀರು ಬೀಳದಂತೆ ಇರಿಸಬೇಕು, ಅಲ್ಲದೆ ೪—೫ ಜನರು ಮಲಗಲು ಅವಕಾಶ ಕಲ್ಪಿಸಿ ಕಠಿಣ ರಾತ್ರಿ ಕಳೆಯಬೇಕು. ಮಾಲಕರು ಹಂಚಿನ ಮನೆಯಿಂದ ವೃಥಾ ಖರ್ಚು ಅಗುವುದೆಂದು ತಿಳಿದು ಕಾಡಿನಿಂದ ಬಿದಿರುಗಳನ್ನು ತಂದು ಲೈನು ಕಟ್ಟಿ ಕಾಡಿನ ಹುಲ್ಲನ್ನು ತಂದು ಮಾಡು ಮಾಡಿಸುತ್ತಾರೆ. ಇಷ್ಟು ಹುಲ್ಲು ಎಷ್ಟಕ್ಕೂ ಅಗಬೇಕೆಂದು ಬೇಕಾದಷ್ಟಕ್ಕಿಂತಲೂ ಕಡಿಮೆ ಕೊಟ್ಟು ತೆಳ್ಳಗೆ ಮಾಡು ಮಾಡಿಸುವರು. ಈ ವಿಧವಾಗಿ ಮಾಡು ಮಾಡಿದ್ದರಿಂದ ಮಳೆಗಾಲದಲ್ಲಿ ಮಳೆ ಹುಯ್ಯುತ್ತಿರುವಾಗ ಮಳೆಯ ನೀರು ಅಲ್ಲಲ್ಲಿ ಧಾರಾಕಾರವಾಗಿ ಸೋರಿ ರಾತ್ರಿ ಮಲಗಿರುವ ನಮ್ಮನ್ನು ಒದ್ದೆ ಮಾಡುವುದಲ್ಲದೆ, ಇತರ ಅಕ್ಕಿ, ಜೀನಸುಗಳನ್ನು ಅತ್ತಿಂದ ಇತ್ತ ಸ್ಥಳಾಂತರಿಸಬೇಕಾಗುವದು. ಅಲ್ಲದೆ ಮಳೆಯು ನಿಲ್ಲುವ ವರೆಗೆ ರಾತ್ರಿ ಜಾಗರಣೆಯಿಂದಿರಬೇಕಾಗುತ್ತದೆ. ಕೆಲಸಕ್ಕೆ ಹೋದಲ್ಲಿ ನಮ್ಮ ಸಾಮಾನುಗಳಿಗೆ ಗೋಣಿ ಮತ್ತು ಕಂಬಳಿಗಳನ್ನು ಮುಚ್ಚಿ ಇಡಬೇಕಾಗಿದೆ. ಸ್ವಲ್ಪ ವಿಶ್ರಾಂತಿಯನ್ನು ಹೊಂದಲೆಂದರೆ ಸೊಪ್ಪಿನ ತಟ್ಟಿಗಳ ಎಡೆಯಲ್ಲಿ ತಣ್ಣನೆಯ ಗಾಳಿಯು ತೂರಿ ನಮ್ಮನ್ನು ರಾತ್ರಿಯಲ್ಲಿ ಛಳಿಯಿಂದ ನಡುಗಿಸುವುದನ್ನು ತಪ್ಪಿಸಲು ಹುಡ್ಕಿ ಕಟ್ಟಿಗೆಗಳನ್ನು ಉರಿಸಿ ಕಾವುದಾಗಿ ಇರಿಸಬೇಕಾಗುತ್ತದೆ. ಇದರಿಂದ ಕೆಲವೊಂದು ಬಾರಿ ಅಂಗಿ ಬಟ್ಟೆಗಳಿಗೆ ಬೆಂಕಿ ಹಿಡಿಯುವುದಲ್ಲದೆ, ಇಡೀ ಬೈಸಗೆ ಸೊಪ್ಪಿನ ತಟ್ಟಿಗೆಗಳ ಮೂಲಕ ಬೆಂಕಿ ಹಿಡಿಯುತ್ತದೆ. ಕೆಲ ಬಿಡಾರದ ಸಾಲುಗಳಿಗೆ ಮಣ್ಣಿನ ಗೋಡೆಗಳಿರುವವಾದರೂ, ಮಣ್ಣಿನ ಗೋಡೆಯು ಮೊದಲಿನ ಒಟು ಸ್ಥಿತಿಯಲ್ಲೇ ಇರುವುದರಿಂದ ಒಡೆಗಿದಾಗ ದೇಹಕ್ಕೆ ತಾಗಿತೆಂದರೆ ಅತಿ ದೊಡ್ಡ ಗಾಯವಾಗುವುದರಲ್ಲಿ ಸಂಶಯ ಇರಲಾರದು. ಅಲ್ಲದೆ ಗೋಡೆಯು ಒಡೆಗಿದಾಗ ದೊಡ್ಡ ಬಿರುಕು ಬಿದ್ದು, ಅವರಲ್ಲಿ ಹಾವು, ಇಲಿ, ಚೇಳು ಇತರ ಚಿಕ್ಕ ಕಾಡು ಜಂತುಗಳು ವಾಸಿಸಲು ಎಡೆ ಕಲ್ಪಿಸಿ ಕೊಟ್ಟಂತಾಗಿದೆ. ಮಟ್ಟವಿಲ್ಲದ ಸ್ಥಳವಾಗಿದ್ದರೂ ಕಂಬಗಳನ್ನು ನೆಟ್ಟು ಮೇಲ್ಮಾಡು ಏರಿಸಿ ಬಿದಿರುಬಿಗಿದು, ನೆಲವನ್ನು ಆಯಾ ಕೋಣೆಗೆ ತಕ್ಕಂತೆ ಕೆತ್ತಿ ಅಂಕಣ ಅಂಕಣವನ್ನಾಗಿರಿಸುತ್ತ ಪುಡಿ ಮಣ್ಣಿಗೆ ನೀರು ಚಿಮುಕಿಸಿ ಸರಿಮಾಡಿದ ಮೇಲೆ ಯಾರು ಯಾರು ಆ ಬಿಡಾರದಲ್ಲಿರುವರೋ ಅವರೇ ಸೆಗಣಿ ಸಾರಿಸಿದರಾಯಿತು. ಈ ಗೋಡೆ ತಟ್ಟಿಗಳ ಎಡೆಯಲ್ಲಿ ವಿಷಜಂತುಗಳಲ್ಲದೆ ಸೊಳ್ಳೆ, ಚಿಗಟ, ತಗಣೆ, ಇರುವೆಗಳೂ ವಾಸಿಸುತ್ತವೆ. ಹಗಲು ದಣಿದ ದೇಹಕ್ಕೆ ರಾತ್ರಿ ಕೊಂಚ ವಿಶ್ರಮಿಸಲೆಂದರೆ, ತಗಣೆ ಚಿಗಟಗಳ ಕಾಟ; ಬೆಳಗ್ಗೆ ನಿದ್ದೆಯಿಂದ ಎದ್ದಾಗ ಅವುಗಳ ಕಡಿತದ ಚಿಹ್ನಗಳು ಬಟ್ಟೆಯಲ್ಲಿ ಚುಕ್ಕೆಗಳಾಗಿ ಕಾಣುತ್ತವೆ. ಹಲವು ಬಾರಿ ಮಳೆಯು ಸೋರು ವಿಕೆಯಿಂದ ನೀರು ಗೋಡೆಯಲ್ಲಿ ಬಿದ್ದು ನೆನೆದು ಗೋಡೆಯು ಮಲಗಿದವರ ಮೇಲೆ ಕುಸಿದು ಬೀಳುತ್ತದೆ. ಸರಿಪಡಿಸಿಕೊಡಿರೆಂದು ತೋಟಗಾರರಿಗೆ ಬಿನ್ನವಿಸಿದರೆ—ಅದರಲ್ಲಿ ಇರುವೆಯಾದರೆ ಸರಿಪಡಿಸಿಕೊ—ಎಂದೆನ್ನುವರು. ನಾವು ನಮ್ಮ ನೆತ್ತರನ್ನು ಬೆವರಿನಂತೆ ಸುರಿಸಿ ಕಷ್ಟಪಟ್ಟುದರ ಪ್ರತಿಫಲವಾಗಿ ನಮಗೆ ಸ್ವಲ್ಪ ವಿಶ್ರಾಂತಿ ಕೂಡ ಸಿಗದಾಯಿತೇ? ನಮ್ಮ ಶ್ರಮದ ಫಲವಾಗಿ ನಾವು ಈ ಅಧೋಗತಿಗೆ ಬಿದ್ದು ದುಃಖಪಡುತ್ತಿರಬೇಕಾಯಿತೇ? ಹಾ! ಸಭ್ಯ ಜಗತ್ತೇ!!

ಹೊಲಸು ನೀರು

ಎತ್ತರದಿಂದ ಹರಿಯುವ ನೀರನ್ನು ತೋಡುಗಳ ಮುಖಾಂತರ ಅಡ್ಡವಾಗಿ ೨—೩ ಫರ್ಲಾಂಗುಗಳ ಅಂತರದಿಂದ ಬಿಡಾರಗಳ ಇದಿರು ಹರಿದು ಹೋಗುವಂತೆ ಮಾಡಿದ್ದಾರೆ. ಆ ನೀರನ್ನು ಕುಡಿಯಬೇಕು. ಈ ವಿಧವಾಗಿ ನೀರನ್ನು ಸಾಮೀಪ್ಯಕ್ಕೆ ತಂದಿರುವರಾದರೂ, ನಮಗೆ ವಿಷವನ್ನು ತಿನ್ನಿಸುವದಕ್ಕೇ ಆಗಿದೆ. ದಟ್ಟವಾದ ಮರಗಿಡಗಳ ಇಕ್ಕಟ್ಟಾದ ತಗ್ಗುಗಳಿಂದ ಜಿನುಗುವ, ಅಲ್ಲಲ್ಲಿಯ ಸೊಪ್ಪು ಸದೆಗಳೊಡಗೂಡಿ ಕಲ್ಲುಗಳ ಎಡೆಯಲ್ಲಿ ಹರಿಯುತ್ತ, ಕ್ರಿಮಿ-ಕೀಟಗಳನ್ನು ಹೊತ್ತು ಬರುವ ಆ ನೀರನ್ನು ಕುಡಿಯುವದರಿಂದ ಯಾವ ತರಹದ ಸುಖವು ಪ್ರಾಪ್ತಿಯಾಗಬಹುದೆಂಬದನ್ನು ನೀವೇ ತಿಳಿಯಿರಿ. ಕೆಲ ವೇಳೆ ಕಡಿದು, ಅಗೆದು ಮಾಡಿದ ಕೆಲಸದ ದಣಿವಿಂದ ಅದ ಬಾಯಾರಿಕೆಯು, ನಿರೆಂಬ ದ್ರವ ಪದಾರ್ಥ ಸಿಕ್ಕಿದರೆ ಸಾಕೆನಿಸುತ್ತದೆ. ಬಿಡಾರದ ಇದಿರಲ್ಲಿ ಚಿಕ್ಕ ತೋಡಿನ ರೂಪದಲ್ಲಿ ಹರಿಯುವ ನೀರಿನಲ್ಲಿ ಅರಿವಿಲ್ಲದ ಚಿಕ್ಕ ಮಕ್ಕಳು ಆಟವಾಡುತ್ತ ಹೇಸಿಗೆ ಮಾಡುವದಲ್ಲದೆ, ದನ, ಕರು, ನಾಯಿ—ಹಂದಿಗಳು ತೋಡಿನಲ್ಲಿ ಅಡ್ಡಾಡಿ ನೀರನ್ನು ಮತ್ತೂ ಕಶ್ಮಲಯುತವಾಗಿ ಮಾಡುತ್ತವೆ. ಬಿಡಾರಗಳ ಪಕ್ಕದ ಕಸ ಗುಪ್ಪೆಗಳನ್ನು ಕೋಳಿಯು ಕೆರೆಕೆರೆದು ಆ ನೀರಿಗೆ ಹಾಕಿ, ಮತ್ತೂ ಅನಿರ್ಮಲವನ್ನಾಗಿ ಮಾಡುತ್ತದೆ. ತೋಟಗಾರರು ಇರುವ ತೋಟಗಳಲ್ಲಿ ನೀರಿನ ಉಗಮಕ್ಕೆ "ಟಾಕಿ" ಕಟ್ಟಿ ನಾಳಗಳ ಏರ್ಪಾಡು ಮಾಡಿಸಿ, ಅದರಿಂದ ಅವರಿಗೆ ಮತ್ತು ಅವರ ಉದ್ಯಾನಕ್ಕೆ ಮಾತ್ರ ನೀರಿನ ಪೂರೈಕೆ ಮಾಡಿಕೊಂಡಿರುವರು. ಹಾ! ನಮ್ಮ ದುರ್ದಿನವೇ!!

ಮಿತಿಮೀರಿದ ಶ್ರಮ

ನಾವು ವಿಪರೀತ ಸಾಲಗಳ ದೆಸೆಯಿಂದ, ಅವನ್ನು ತೀರಿಸಲು ಬಹು ವಿಧ ಪ್ರಯತ್ನಪಟ್ಟರೂ ನಮ್ಮ ಪ್ರಯತ್ನಫಲವು ಕೈಸೇರದೆ ಬಹಳ ದುಃಖಪಡುತ್ತೇವೆ. ನಾವು ದಿನವೂ ೮—೯ ಗಂಟೆಯ ಕಠಿಣ ಶ್ರಮದನ್ನು ಮಾಡಿದರೆ ನಮಗೆ ಸಿಗುವ ಸಂಬಳವು ಗಂಡಾಳಿಗೆ ಏಳಾಣೆ, ಹೆಣ್ಣಾಳಿಗೆ ಆರಾಣೆ. ಕಠಿಣತಮ ಜೀವನಾವಸ್ಥೆಯಲ್ಲಿ ನಮ್ಮ ಶ್ರಮಕ್ಕೆ ಇಂತಹ ಸಂಬಳ ದೊರಕಿಸಿದ ದುರದೃಷ್ಟಕ್ಕೆ ಕೊರಗುವೆವು. ಅಲ್ಲದೆ ನಮ್ಮ ಸಾಲದ ಪರಿಮಿತಿಯು ಕೀಳು ದರ್ಜೆಗೆ ಬರಲು ಒಪ್ಪದಾಗಿದೆ. ನಮ್ಮ ಶ್ರಮವೆಂದರೆ ೧೦೦೦ ಚದರಡಿ ನೆಲವನ್ನು ತಪ್ಪದೆ ೧॥ ಅಡಿ ಆಳಕ್ಕೆ ಕುಂಟಾಣಿಯಿಂದ ಅಗೆದು ಮಣ್ಣನ್ನು ವಿರಳವಾಗಿ ಮಾಡುವದು, ಹೀಗೆ ಇತರ ದಟ್ಟ ಕಳೆ ಕಸವನ್ನು ಮುಚ್ಚಿ ೨೫೦೦ ಚದರಡಿ ಸ್ಥಳವನ್ನು ಅಗೆದುದರ ಪ್ರತಿಫಲವು ಏಳಾಣೆಯದಾಗಿದೆ. ಇನ್ನೂ ತರತರಹದ ೩೦೦೦—೪೦೦೦ ಚದರಡಿ ವಿಸ್ತೀರ್ಣದ ನೆಲವನ್ನು ಒಂದೇ ದಿನದಲ್ಲಿ ಒಬ್ಬನು ಅಗೆಯುವದೂ ಇದೆ. ಇದಲ್ಲದೆ ಮರಕಸಿ, ಕಳೆ ತೆಗೆಯುವುದು, ಗುಂಡಿ ತೋಡುವುದು—ಇವೆಲ್ಲ ಕೆಲಸಗಳಿವೆ. ಈ ವಿಧದ ಕೆಲಸಗಳಿಗಾಗಿ ೮—೯ ಗಂಟೆಗಳು ಅನ್ನ ನೀರಿಲ್ಲದೆ ಶ್ರಮಿಸಬೇಕು.

ಅಧಿಕಾರಿಗಳ ಉಗ್ರ ಶಾಸನ

ಬೆಳಗ್ಗೆ ೬॥ ಗಂಟೆಗೆ ಜನರು ಕೆಲಸಕ್ಕೆ ಬಂದ ನಂತರ ಕಾರಕೂನರು ।ಇಂಥಿಂಥ ಕೆಲಸಕ್ಕೆ ಇಷ್ಟು ಜನ ಎಂತ ನೇಮಿಸಿ ಪಟ್ಟಿ ಮಾಡುವರು. ಅರುವರೆ ಗಂಟೆಗೆ ಬರಬೇಕಾದರೆ, ನಮ್ಮ ಊಟದ ಏರ್ಪಾಡು ಮುಂಜಾನೆ ೪ ಗಂಟೆಗೆ ಎದ್ದು, ಗಂಜಿಯುಂಡು ೬ ಗಂಟೆಗೆ ತಯಾರಾಗಿ ಹೊರಟರೆ ಮಾತ್ರ ಆ ದಿನದ ಕೆಲಸಕ್ಕೆ ಸೇರಬಹುದು: ಕೆಲವು ನಿಮಿಷಗಳು ತಡವಾದರೆ ವಾಪಸು ಬರಬೇಕು. ಕಬ್ಬಿಣದ ಯಂತ್ರ ಚಲಿಸಿದಂತೆ ಕೆಲಸ ಮಾಡುತ್ತಿರಬೇಕು. ಇಲ್ಲವೆ ಮೇಸ್ತ್ರಿಗಳು ಬೆನ್ನ ಹಿಂದೆಯೇ ಬೆತ್ತಗಳನ್ನು ಹಿಡಿದು ಕೆಲಸ ನೋಡುತ್ತಿರುವರು. ಮಗದೊಂದು ಕಡೆ ಕಾರಕೂನರು, ತೋಟಗಾರರು ಸುತ್ತುತ್ತಿರುವರು. ಸಾಯಂಕಾಲ ನಾಲ್ಕು ಗಂಟೆಗೆ ಕೆಲಸ ಪೂರಯಿಸಿಕೊಂಡು ಬಿಡಾರಕ್ಕೆ ಬಂದರೆ, ಮಳೆಯಿಂದ ಒದ್ದೆಯಾದ ಕಂಬಳಿಯನ್ನು ಅರಿಸಿ (ರಾತ್ರಿ ಚಳಿಗೆ ಹೊದ್ದುಕೊಳ್ಳಲು ಬೇಕಾದುದರಿಂದ), ಊಟಕ್ಕಾಗಿ ಗಂಜಿ ಬೇಯಿಸಲು ಕಟ್ಟಿಗೆ ತಂದು ಇರಿಸಬೇಕಾದ ಕಾರಣ ಕಾಡಿಗೆ ಹೋಗಿ, ಕಟ್ಟಿಗೆ ತಂದು ಗಂಜಿ ಮಾಡಿ ಉಣ್ಣಲು ಅಪರಾಹ್ಣ ೬ ಗಂಟೆಯಾಗುತ್ತದೆ. ಅಪರಾಹ್ಣ ೪ ಗಂಟೆಯ ಮುಂಚೇ ಅಸೌಖ್ಯದಿಂದ ವಾಪಸುಬಂದರೆ ಆತನ ಏಳಾಣೆಗೆ ಸೊನ್ನೆ. ನಮ್ಮ ಕೆಲಸಗಳಲ್ಲಿ ಸ್ವಲ್ಪವೇ ತಪ್ಪು ಸಿಕ್ಕಿದುದಾದರೆ ಕಾರಕೂನರ್ರೂ, ಮೆನೇಜರರು ಮತ್ತು ಮೇಸ್ತ್ರಿಗಳ ಪೆಟ್ಟು, ಒದೆ—ದಪ್ಪವಾದ ಬೂಟ್ಸು, ಮೆಟ್ಟುಗಳಿಂದ. ಈ ತರಹದ ನೋವು ಒಂದೆಡೆ, ಮತ್ತೊಂದೆಡೆ ಆತನಿಗಾದ ಅವಮಾನದ ಜಾತಿಯ ದಂಡವೆಂದು ನಮ್ಮ ಮೇಲೆ ಮತ್ತೆ ಸಾಲದ ಹೊರೆ! ಹೀಗೆ ಶಕ್ತಿಯಂತೆ ನಮ್ಮ ಮೇಲೆ ಆಚರಿಸುವುದು ಯಾವ ಮಾನವಂತನಿಗೆ ತಕ್ಕದ್ದು? ಹೇಳಿದ ಮಾತನ್ನು ಯಾವುದೋ ಒಂದು ತೊಂದರೆಯಿಂದ ಅಲ್ಲಗಳೆದರೆ ದಂಡ. ಈ ವಿಧದ ಸಹಿಸಲಾರದ ಅನ್ಯಾಯವನ್ನು ನಮ್ಮ ಮೇಲೆ ಮಾಡುತ್ತಿರುವುದು—ಯಾವ ಧರ್ಮದೇವತೆಗೆ ಸರಿಯೆನಿಸುವುದೋ ತಿಳಿಯದು.

ತೋಟಗಾರರ ಬಂಡವಾಳಶಾಹಿ

ಇಷ್ಟೊಂದು ಹೀನ ಸ್ಥಿತಿಯಲ್ಲಿರುವ ನಮ್ಮ ಜೀವನಮಟ್ಟವು ಅತಿ ಸೂಕ್ಷ್ಮ ಖರ್ಚು ವೆಚ್ಚಗಳಲ್ಲಿ ಕಳೆಯುವುದೆಂದರೆ ಯಾವ ವಿಧವಾಗಿರಬಹುದೆಂಬುದನ್ನು ನೀವೇ ತಿಳಿಯಿರಿ. ಕನಿಷ್ಠ ತರಗತಿಯ ಆಹಾರ; ತಾನೇ ಅಟ್ಟುಂಡರೂ ಸಾಕಾಗದು; ಹಾಗಾದರೆ ಇನ್ನು ಮಕ್ಕಳು ಮರಿಗಳದ್ದವರ ಗತಿ ಏನು? ರೋಗಿಯಾಗಿದ್ದು ಕೆಲಸಕ್ಕೆ ಹೋಗದ ವೇಳೆಯಲ್ಲಿ ಆತನ ಮತ್ತು ಮಕ್ಕಳ ಸ್ಥಿತಿ ಏನು? ನಮ್ಮಗಳ ೮—೯ ಗಂಟೆಯ ದೈನಿಕ ಕಠಿಣ ಪರಿಶ್ರಮದಿಂದ ಒದಗುವ ಬಹು ಫಲಾಂಶವನ್ನು ತೋಟಗಾರರೇ ಹಂಚಿಕೊಂಡು ಭೋಗಿಸುವುದರ ಅರ್ಥವೇನು? ಕೆಲ ಯುರೋಪಿಯನ್ ತೋಟಗಾರರು ಬಹಳವಾದ ಹಣವನ್ನು ನಮಗೆ ಪಂಚಿಸಿ ಅವರ ತವರೂರಿಗೆ ಒಯ್ದರು. ಇನ್ನು ದೇಶೀಯ ತೋಟಗಾರರು ನಮ್ಮನ್ನು ದ್ವೇಷಿಸಿ ಕಷ್ಟಕಾರ್ಪಣ್ಯಕ್ಕೆ ಗುರಿಮಾಡಿ, ಹಣ ಗಳಿಸಿ ಇಂಗ್ಲೀಷಿನ ೨೬ ಅಕ್ಷರಗಳಲ್ಲಿ ಕೆಲವನ್ನು ತಮ್ಮ ನಿಜ ಹೆಸರಿನಲ್ಲಿ ಸೇರಿಸುವುದಕ್ಕಾಗಿ, ಸರಕಾರಕ್ಕೆ ಧನ ಸಹಾಯವೀಯುವರು. ಇನ್ನು ಇತರ ಬಹಾದ್ದೂರ, ಸೇವಾನಿರತ, ಧರ್ಮರತ್ನಾಕರ, ಸರ್ ಬಿರುದುಗಳನ್ನು ಪಡೆಯಲು ಸರಕಾರವು ಇವರಿಗೆ ಉತ್ತೇಜನವನ್ನು ಈಯುತ್ತದೆ; ಇನ್ನೂ ಅಧಿಕವಾಗಿ ನಮ್ಮ ರಕ್ತವನ್ನು ಹೀರುವಂತೆ ಉತ್ತೇಜಿಸುವರು. ನಾವು "ಸಪ್ಲೈಯರ"ನ ಸಾಲದ ಹೊರೆಗಾಗಿ ೭ ಆಣೆ, ೬ ಅಣೆಯಂತೆ ದಿನವಿಡೀ ಶ್ರಮಿಸಿ ಪಡೆದ ಗಳಿಕೆಯಲ್ಲಿ ನಮಗೆ ನಮ್ಮ ಶರೀರದಲ್ಲಿ ಆತ್ಮವು ನೆಲೆಗೊಂಡು ಇದ್ದು ಮುಂದಿನ ಕೆಲಸ ಸಾಗಲೆಂದು ಸ್ವಲ್ಪ ನಮ್ಮ ಖರ್ಚಿಗೆ ಕೊಟ್ಟು ಉಳಿದುದನ್ನು "ಸಪ್ಲೈಯರರು" ಸಾಲದ ಲೆಕ್ಕಕ್ಕೆ ವಜಾ ಮಾಡಿಕೊಳ್ಳುವರು.

ಕುಗ್ರಾಸ ಭೋಜನ

ವಾರದ ಖರ್ಚಿಗಾಗಿ ಗಂಡಾಳಿಗೆ ೧ ರೂಪಾಯಿಯಂತೆಯೂ ಹೆಣ್ಣಾಳಿಗೆ ಹನ್ನೆರಡಾಣೆಯಂತೆಯೂ ಕೊಡುವರು. ಹೀಗೆ ದಂಪತಿಗಳಿಗೆ ೧-೧೨-೦ ಗಳು; ಅವರಿಬ್ಬರ ಕೆಲಸದ ಪ್ರತಿಫಲ ಅದು; ಅದು ವಾರದ ಖರ್ಚಿಗೆ! ಇದರಿಂದ ಆ ದಂಪತಿಗಳು ಮಕ್ಕಳನ್ನು ಪೋಷಿಸಬೇಕು; ೭ ದಿನಗಳಿಗೆ ಬೇಕಾಗುವ ಅಕ್ಕಿ, ಉಪ್ಪು, ಮೆಣಸು, ತೆಂಗಿನಕಾಯಿ, ವಿಷ್ಟ ಸಾಂಬಾರ ಜೀನಸು ಮುಂತಾದವುಗಳನ್ನು ಕೊಳ್ಳಬೇಕು. ಐದು-ಆರು ಕೆಲಸಗಳನ್ನು ಮಾಡಿದರೆ ಮಾತ್ರ ವಾರದಲ್ಲಿ ೫-೬ ಅಣೆಗಳು ಬೋನಸ್ಸಿನ ರೂಪದಲ್ಲಿ ದೊರಕುವುವು. ಅದಕ್ಕಿಂತ ಕಮ್ಮಿ ಕೆಲಸಗಾರರಿಗೆ ಬೋನಸ್ಸು ಇರಲಾರದು. ನಮ್ಮ (ದಂಪತಿಗಳ) ನಾಲ್ಕಾಣೆಯ ದೈನಿಕ ಖರ್ಚಿನಿಂದ ನಾವೇನು ಉಂಡು ಮರುದಿನದ ಕೆಲಸಕ್ಕೆ ರಕ್ತವನ್ನು ಕೂಡಿಸಿಕೊಳ್ಳಬಹುದು? ಮತ್ತು ನಮ್ಮ ಚಿಕ್ಕಮಕ್ಕಳಿಗೆ ಏನನ್ನು ತಿನ್ನಿಸಬಹುದು? ಇದರ ಬೇಗೆಗೆ ಕಾಡಿನಲ್ಲಿ ಅಲೆದು ಕಂಡ ಮೂಲಗಳನ್ನು ಅಗೆದು ತಂದು ಬೇಯಿಸಿ ತಿನ್ನದೆ ನಿರ್ವಾಹವಿಲ್ಲದಾಗಿದೆ. ಈ ತರಹದ ನರಕ ಯಾತನೆಯನ್ನು ಅನುಭವಿಸಿ ನರಳುವುದಕ್ಕಿಂತ ಸಾಯುವುದೇ ಲೇಸು ಎನಿಸುವುದು. ಪೌಷ್ಟಿಕ ಆಹಾರವಂತೂ ನಮಗಿಲ್ಲ; ಇನ್ನು ಅಗ್ಗವಾಗಿ ಸಿಗುವ ಆಹಾರ ಕೂಡ ಸಿಗದು. ಅತಿ ಚಿಕ್ಕ ವೆಚ್ಚದ ಆಹಾರವಾದ ಅಕ್ಕಿ ಕೂಡ ನಮಗೆ ದೊರಕದೆ ಅರೆಹೊಟ್ಟೆ, ಉಪವಾಸಗಳಿಂದ. ಈ ತೋಟದ ಅಗೆಯುವ ಕಡಿಯುವ ಕೆಲಸ ಮಾಡಲು ಶಕ್ತಿ ಎಲ್ಲಿ ಬರಬೇಕು? ರಕ್ತವಿದ್ದರೆ ಶಕ್ತಿ ಇರುವುದು! ೮-೯ ಗಂಟೆಯ ಕಠಿಣ ಶ್ರಮಕ್ಕಾಗಿ ವ್ಯಯವಾದ ರಕ್ತವನ್ನು ಬರಿಯ ಎರಡಾಣೆಯ ಆಹಾರವು ಭರ್ತಿ ಮಾಡಬಹುದೇ? ಇವೆಲ್ಲ ತಾವೇ ಊಹಿಸಿರಿ. ನಮ್ಮ ದೇಹವನ್ನು ನೀವೊಂದು ಬಾರಿ ನೋಡಿದರೆ ಅದರ ದುಸ್ಥಿತಿಯನ್ನು ಕಂಡು ಮತ್ತೊಂದು ಸಲ ನಮ್ಮನ್ನು ನೋಡಲು ಹೇಸುವಿರಿ; ಅಲ್ಲದೆ ನಮ್ಮ ಹೆಸರು ಎತ್ತಿದರೆ— ನಿಮ್ಮ ಪ್ರಫುಲ್ಲಿತ ವದನವು ಕಾಂತಿಹೀನವಾಗಿ ಹೋಗುವಷ್ಟು ಹೀನ ಚಿತ್ರವು ನಿಮ್ಮ ಮನಃಪಟಲದಲ್ಲಿ ಬಂದು ನಿಲ್ಲುವುದು. ತೋಟಗಾರ-ಮೇನೇಜರುಗಳಾರಿಗೂ ಇಂದಿನ ನಿಯಂತ್ರಣ-ಪದ್ಧತಿಗಳಿರಲಾರವೆಂಬಂತೆ ತೋರುವುದು. ಅವರು ಶರೀರಕ್ಕೆ ಶ್ರಮ ಕೊಡದೆ, ಪೌಷ್ಟಿಕ ಅಹಾರಗಳನ್ನು ಉಂಡು ತೇಗಿ ಬೆಳೆದು, ನಮ್ಮಲ್ಲಿ ಚೆಲುವೆಯರಾದ ಹೆಂಡಿರನ್ನು ಗಂಡನಿದಿರು ಬಲಾತ್ಕಾರದಿಂದ ಸೇರುವ ಸನ್ಮಾನ್ಯರಾಗಿದ್ದಾರೆ. ಇದಾವ ಪ್ರಪಂಚದ ನಡತೆಯೋ ತಿಳಿಯದು!

ನಮ್ಮ ಮಕ್ಕಳು

ನಾವು ತೋಟದ ವಿಸ್ತೀರ್ಣದ ಪರಿಮಿತಿಗೆ ಅನುಸಾರವಾಗಿ ಒಂದೊಂದು ತೋಟದಲ್ಲಿ ೧೦೦ರಿಂದ ೫೦೦-೬೦೦ ಜನರ ವರೆಗೆ ಇರುವೆವು. ಅಂತೆಯೇ ನಮ್ಮ ಮಕ್ಕಳ ಸಂಖ್ಯೆಯು ೫೦ರಿಂದ ೨೦೦ರ ಮೇಲ್ಪಟ್ಟು ಇರುತ್ತದೆ. ಅವುಗಳು ಗಾಳಿ ಬಿಸಿಲೆನ್ನದೆ ಅತ್ತಿಂದಿತ್ತ ಬೊಬ್ಬೆ ಹಾಕುತ್ತ ಇರುವುವಾದರೂ ಅವಕ್ಕೆ ವಿದ್ಯಾಭಿವೃದ್ಧಿಗಾಗಿ ಶಾಲೆಗಳನ್ನು ಏರ್ಪಡಿಸಲಾರೆವು. ಅವುಗಳ ಬಡಕಲಾದ ದೇಹ, ಕಡ್ಡಿಗಳಂತಾದ ಕೈಕಾಲುಗಳು, ಮಡಕೆಯಂತೆ ಉಬ್ಬಿದ ಹೊಟ್ಟೆ, ಗುಳಿಸೇರಿದ ಕಣ್ಣುಗಳು, ಬತ್ತಲೆ, ವಿಕಾರವಾಗಿ ತಿರುಗುವ ದೃಶ್ಯ— ಇವನ್ನು ಕಂಡೊಡನೆ ಮಾನವನ ಸಹೃದಯವು ಇಬ್ಬಾಗವಾಗದಿರಲಾರದು. ಇನ್ನು ಚಿಕ್ಕ ಮಗುವಿಗೆ ತಾಯಿಯ ಎದೆ ಹಾಲು ಇಲ್ಲದುದರಿಂದ ಒಂದೆರಡು ತಿಂಗಳೊಳಗೇ ಅನ್ನವನ್ನು ಮೃದು ಮಾಡಿ ಕೊಡಲು ಉಪಕ್ರಮಿಸುವರು. ಅವಕ್ಕೆ ದನದ ಹಾಲನ್ನ ಕೊಡಲೆಂದರೆ, ತೋಟಗಳಲ್ಲಿ ದನಕರುಗಳ

—೧೬ನೇ ಪುಟಕ್ಕೆ

ಸಂಪಾದಕೀಯ ಟೀಕೆ ಟಿಪ್ಪಣಿಗಳು

ರಾಜಪುರೋಹಿತರಿಗೆ ಸತ್ಕಾರ

ಕನ್ನಡದ ಪ್ರಸಿದ್ಧ ಇತಿಹಾಸ ಸಂಶೋಧಕರಾಗಿರುವ ಶ್ರೀ ರಾಜಪುರೋಹಿತ ನಾರಾಯಣರಾಯರಿಗೆ ಇದೇ ಜೂನಕ್ಕೆ ಅರವತ್ತು ವರುಷಗಳು ತುಂಬಿದವು. ಅವರ ಷಷ್ಟ್ಯಬ್ದಪೂರ್ತಿ ಮಹೋತ್ಸವವನ್ನು ಕನ್ನಡಿಗರು ವಿಜೃಂಭಣೆಯಿಂದ ಜರುಗಿಸಬೇಕೆಂದು ನಿರ್ಧರಿಸಿ ಸತ್ಕಾರ ಸಮಿತಿಯೊಂದನ್ನು ನೇಮಿಸಲಾಗಿದೆ. ಈ ಉತ್ಸವವನ್ನು ಇದೇ ಅಕ್ಟೋಬರದಲ್ಲಿ ಮಾಡಬೇಕೆಂದು ಗೊತ್ತುಪಡಿಸಲಾಗಿದೆ. ರಾಜಪುರೋಹಿತರು ಮಾಡಿದ ಕರ್ನಾಟಕ ಇತಿಹಾಸ ಸಂಶೋಧನ ಕಾರ್ಯಕ್ಕನುರೂಪವಾಗಿ ಅವರಿಗೆ ಅದರ ಸತ್ಕಾರ ನಡೆಯುವದವಶ್ಯವಾಗಿದೆ. ಅವರು ಈ ದಿಸೆಯಲ್ಲಿ ಮಾಡಿದ ಕಾರ್ಯವೇನು ಕನ್ನಡಿಗರಿಗೆ ಗೊತ್ತಿಲ್ಲದಿಲ್ಲ. ಸುಮಾರು ೩೭ ವರುಷಗಳಿಂದಲೂ ಅವರು ಈ ಕಾರ್ಯವನ್ನು ಮಾಡಿ ಕರ್ನಾಟಕದ ಇತಿಹಾಸದ ಮೇಲೆ ಹೊಸ ಬೆಳಕು ಕೆಡಹಿರುವರು. ಇಂಥವರ ಸನ್ಮಾನಕ್ಕಾಗಿ ಕನ್ನಡಿಗರೆಲ್ಲ ಮುಂದೆ ಬಂದು ತಮ್ಮ ಮುಡಿಪನ್ನು ಸಲ್ಲಿಸುವದವಶ್ಯವಾಗಿದೆ. ಅಲ್ಲಲ್ಲಿ ಸತ್ಕಾರ ಸಮಿತಿಯವರು ಪಾವತಿಪುಸ್ತಕಗಳನ್ನು ಕಳಿಸಿದ್ದು ರಾಜಪುರೋಹಿತರಲ್ಲಿ ಆದರವಿದ್ದವರೆಲ್ಲ ತಮ್ಮ ಕಾಣಿಕೆ ಕೊಟ್ಟು ಪಾವತಿ ಪಡೆಯಬೇಕು. ನೇರವಾಗಿ ಸಹಾಯ ಸಲ್ಲಿಸುವವರು ಶ್ರೀ ಎನ್. ಆರ್. ಕುಲಕರ್ಣಿ ದೇಶಪಾಂಡೆ ಓಣಿ ಧಾರವಾಡ ಈ ವಿಳಾಸಕ್ಕೆ ಹಣ ಕಳಿಸಬೇಕು. ರಾಜಪುರೋಹಿತರಂಥ ಕನ್ನಡನಾಡ ಸೇವಕರಿಗೆ ಸತ್ಕಾರ ಸಲ್ಲಿಸುವಲ್ಲಿ ಎಲ್ಲರೂ ಮುಂದೆ ಬಂದು ಕರ್ತವ್ಯ ಮಾಡಬೇಕೆಂದು ಅಗ್ರಹಪಡಿಸುತ್ತೇವೆ.

ಸ್ವಾತಂತ್ರ್ಯ ಮಸೂದೆ

ಬ್ರಿಟಿಶ್ ಮುಖ್ಯ ಮಂತ್ರಿಗಳಾದ ಮಿ. ಅಟ್ಲಿಯವರು ಕಾಮನ್ಸ ಸಭೆಯಲ್ಲಿ ಹಿಂದೀ ಸ್ವಾತಂತ್ರ್ಯ ಮಸೂದೆಯನ್ನು ಮಂಡಿಸಿರುವರು. ಬರುವ ೨೦ನೆಯ ತಾರೀಕಿನೊಳಗಾಗಿ ಅದು ಪಾರ್ಲಮೆಂಟಿನಲ್ಲಿ ಸ್ವೀಕೃತವಾಗಿ ಕಾಯದೆಯಾಗಿ ಪರಿಣಮಿಸುವುದೆಂದು ನಿರೀಕ್ಷಿಸಲಾಗಿದೆ. ಅಷ್ಟೊಂದು ವೇಗದಿಂದ ಘಟನೆಗಳಾಗಹತ್ತಿವೆ. ೧೯೪೮ನೇ ಜೂನದಲ್ಲಿ ಅಧಿಕಾರತ್ಯಾಗ ಮಾಡುವುದಾಗಿ ಬ್ರಿಟಿಶ್‌ರು ಸಾರಿದ್ದರೂ ಹತ್ತು ತಿಂಗಳ ಮೊದಲೆ ಅಂದರೆ ಅಗಸ್ಟ ೧೫ಕ್ಕೇ ಅವರು ಹಿಂದುಸ್ತಾನಕ್ಕೆ ಸಾಮಂತ ಸರಕಾರವನ್ನು ಕೊಟ್ಟು ಬಿಡಲು ನಿರ್ಧರಿಸಿದ್ದು ನಿಜವಾಗಿಯೂ ಅಭಿನಂದನೀಯ ಮತ್ತು ಸ್ವಾಗತಾರ್ಹವಾದ ಸಂಗತಿಯಾಗಿದೆ. ಹಿಂದುಸ್ತಾನವನ್ನು ಆಳುವ ಯಾವುದೊಂದು ಕಾಯದೆ ಮಾಡಬೇಕಾದರೆ ಹತ್ತಾರು ವರುಷ ಹಿಡಿಯುತ್ತಿದ್ದುದು ಅನುಭವದ ಮಾತಾಗಿದೆ. ಆದರೆ ಅಧಿಕಾರ ತ್ಯಾಗದ ಈ ಮಸೂದೆ ಇಷ್ಟು ಬೇಗ ಸ್ವೀಕೃತವಾಗುತಿರುವುದು ಲಕ್ಷಿಸತಕ್ಕ ಸಂಗತಿಯಾಗಿದೆ. ಈ ಮಸೂದೆಯ ವಿವರಗಳನ್ನೆಲ್ಲ ಬೇರೆ ಕಡೆ ಕೊಟ್ಟಿದ್ದೇವೆ. ಅಧಿಕಾರ ತ್ಯಾಗಕ್ಕೆ ಬ್ರಿಟಿಶ್‌ರು ಇಷ್ಟೊಂದು ಆಸ್ಥೆ ವಹಿಸಿದ್ದು ಮೇಲೆ ಹೇಳಿದಂತೆ ಅಭಿನಂದನೀಯವಾಗಿದ್ದರೂ ಈ ಮಸೂದೆಯಲ್ಲಿಯ ಮಹತ್ವದ ಲೋಪದೋಷಗಳನ್ನು, ಕುಹಕತನವನ್ನು ನೋಡಿದರೆ ಯಾರಿಗಾದರೂ ಕ್ಲೇಷವುಂಟಾಗದಿರದು. ವಿವಿಧ ರಾಜ್ಯಗಳ ಆಡಳಿತದಲ್ಲಿ ಸಿಕ್ಕು ಖಂಡವಾಗಿದ್ದ ಹಿಂದುಸ್ತಾನವನ್ನು ಒಂದುಗೂಡಿಸಿ ಅಖಂಡ ಹಿಂದುಸ್ತಾನವನ್ನಾಳಿದೆವೆಂದು ಒಳ್ಳೆ ಹೆಮ್ಮೆಯಿಂದ ಹೇಳಿಕೊಳ್ಳುತಿದ್ದ ಬ್ರಿಟಿಶರೆ ಅದನ್ನೀಗ ತುಂಡಾಗಿ ಕತ್ತರಿಸಿ ಹೋಗುತಿರುವರು! ಹಿಂದುಸ್ತಾನದಲ್ಲಿಯ ವಿವಿಧ ಜನಾಂಗಗಳ ಮತ್ಯೈಕ್ಯವಾಗದ್ದರಿಂದಲೆ ಹಿಂದುಸ್ತಾನದ ವಿಭಜನೆ ಅನಿವಾರ್ಯವಾಯಿತೆಂದು ಬ್ರಿಟಿಶ್ ಮುತ್ಸದ್ದಿಗಳು ಕಾರಣ ಹೇಳಬಹುದಾದರೂ ಆ ಬಗೆಯ ಪರಿಸ್ಥಿತಿಯನ್ನು ದೇಶದಲ್ಲಿ ಉಂಟುಮಾಡಿದವರು ಬ್ರಿಟಿಶ್ ಶಕುನಿಗಳೆ ಎಂಬಲ್ಲಿ ಸ್ವಲ್ಪೂ ಸಂದೇಹವಿಲ್ಲ. ಹಿಂದು ಮುಸಲ್ಮಾನ ದ್ವಿರಾಷ್ಟ್ರವೆಂದು ಹಿಂದುಸ್ತಾನವನ್ನು ಒಡೆದುದು ಸಾಲದೆ ಸಂಸ್ಥಾನಿಕರನ್ನೂ ಎಬ್ಬಿಸಿ ಕೂಡ್ರಿಸಿರುವರು. ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು ಸಾರುವಾಗಲೂ ಬ್ರಿಟಿಶ್ ಸರಕಾರದವರು ತಮ್ಮ ಕಾಯಕವನ್ನು ನಡೆಸದೆ ಬಿಡಲಿಲ್ಲೆಂಬುದು ಕಂಡು ಬಂದಿರುವದು. ಆದರೂ ಸ್ವಾತಂತ್ರ್ಯ ಸಂಪಾದನೆಯ ನಂತರ ದೇಶದಲ್ಲಿ ಐಕ್ಯ ಪ್ರಸ್ಥಾಪಿತವಾಗಿ ಇಂದು ಖಂಡವಾದ ಹಿಂದುಸ್ತಾನ ಮತ್ತೆ ಅಖಂಡವಾಗುವದೆಂಬ ಭರವಸೆಯಿಂದಲೆ ಈ ಮಸೂದೆಯನ್ನು ಭಾರತೀಯರು ಸ್ವಾಗತಿಸಿರುವರು.

ಸಿಂಹಾವಲೋಕನ

ಅಧಿಕಾರ ತ್ಯಾಗ ಮಾಡುವ ಈ ಕಾಲದಲ್ಲಿ ಬ್ರಿಟಿಶರಾಳಿಕೆಯ ಸಿಂಹಾವಲೋಕನ ಮಾಡುವದು ಅಪ್ರಾಸಂಗಿಕವಾಗಲಾರದು. ಬ್ರಿಟಿಶ್ ಸರಕಾರದವರು ನೇರವಾಗಿ ಹಿಂದುಸ್ತಾನದಲ್ಲಿ ಅಧಿಕಾರವನ್ನು ಕೈಕೊಂಡಿದ್ದು ೧೮೫೮ರಲ್ಲಿ. ಆಗ ವಿಕ್ಟೋರಿಯಾ ಮಹಾರಾಣಿಯವರು ಘೋಷಣೆಯೊಂದನ್ನು ಹೊರಡಿಸಿ ತಮ್ಮ ಧೋರಣವನ್ನು ಒಳ್ಳೆ ಅತ್ಮೀಯತೆಯಿಂದ ಸಾರಿದ್ದರು. 'ಹಿಂದುಸ್ತಾನದ ಸಮೃದ್ಧಿಯಲ್ಲಿಯೆ ನಮ್ಮ ಶಕ್ತಿ ಅದರ ಸಂತುಷ್ಟಿಯಲ್ಲಿಯೆ ನಮ್ಮ ಭದ್ರತೆ' ಎಂದು ಅವರು ಘೋಷಿಸಿದ್ದರು. ಆ ಘೋಷಣೆಯಂತೆ ಹಿಂದುಸ್ತಾನವಿಂದು ಸಮೃದ್ಧವಾಗಿದೆಯೇ? ಅದಿಂದು ಸಂತುಷ್ಟಿಯಲ್ಲಿದೆಯೇ ಎಂಬ ಪ್ರಶ್ನೆಗಳನ್ನು ಯಾರಾದರೂ ವಿಚಾರಿಸಿದ್ದರೆ, 'ಇಲ್ಲ' 'ಇಲ್ಲ' ಎಂದು ಘಂಟಾಘೋಷವಾಗಿ ಹೇಳದೆ ಗತ್ಯಂತರವುಳಿಯದು. ಸರ್ವ ಸಮೃದ್ಧವಾಗಿದ್ದ ಹಿಂದುಸ್ತಾನವಿಂದು ಬಡತನದಿಂದ ಬಳಲುತಿದೆ. ಪ್ರತಿಯೊಂದು ಪದಾರ್ಥಗಳಿಗಾಗಿ, ಅಹಾರ ಪದಾರ್ಥಗಳಿಗಾಗಿ ಕೂಡ ಪರದೇಶಗಳನ್ನವಲಂಬಿಸುವ ದುಃಸ್ಥಿತಿಯುಂಟಾಗಿದೆ. ಅಹಾರ ಪದಾರ್ಥಗಳಿಗಾಗಿ ಯಾವ ರಾಷ್ಟ್ರ ಪರಕೀಯರನ್ನವಲಂಬಿಸಬೇಕಾಗುವದೊ ಅದು ರಾಜಕೀಯ ಸ್ವಾತಂತ್ರ್ಯವನ್ನು ಪಡೆಯದೆಂಬುದು ಸಿದ್ಧಾಂತ. ಈ ದೃಷ್ಟಿಯಿಂದಲೆ ಬ್ರಿಟಿಶ ಬಂಡವಲುದಾರರು ಹಿಂದುಸ್ತಾನವನ್ನು ತಮ್ಮ ಸರಕುಗಳ ಮಾರಾಟದ ಮುಖ್ಯ ಪೇಟೆಯನ್ನಾಗಿ ಪರಿವರ್ತಿಸಿಕೊಂಡಿರುವರು. ದೇಶವಿಂದು ಬರಗಾಲಕ್ಕೆ ತುತ್ತಾಗಿದೆ. ಹಿಂದುಸ್ತಾನದಲ್ಲಿಯ ಹೊನ್ನೆಲ್ಲ ಪರದೇಶಗಳಿಗೆ ಬಳಿದು ಹೋಗಿದೆ. ಸಮೃದ್ಧಿಯ ದುರ್ದಸೆಯಿಂತಿದ್ದರೆ ಸಂತುಷ್ಟಿಯ ಮಾತು ಇದಕ್ಕೂ ಹೀನವಾಗಿದೆ. ಎಲ್ಲಿ ನೋಡಿದಲ್ಲಿ ಅಸಮಾಧಾನದ ಕೊರಗು ಕೇಳಬರುತ್ತಿದೆ. ಅತ್ಯಾಚಾರ ಕೊಲೆ ಸುಲಿಗೆಗಳಂತೂ ಅತ್ತೀಚೆ ಹೆಚ್ಚಿರುವವು. ಪ್ರಾಂತಿಕ ಮಂತ್ರಿಗಳ ಹೊಣೆಯಿದೆಂದು ಹೇಳಿ ಬ್ರಿಟಿಶರು ತಮ್ಮ ಹೊಣೆಗಾರಿಕೆಯನ್ನು ಜಾರಿಸಿಕೊಳ್ಳಲಾರರು. ಅವರ ಸಾಮ್ರಾಜ್ಯ ಇಲ್ಲಿರುವ ವರೆಗೆ ದೇಶದಲ್ಲಿ ಶಾಂತಿಯ ಹೊಣೆ ಅವರದೆ ಎಂಬುದು ನಿಃಸಂಶಯ. ರಾಜ್ಯತ್ಯಾಗದ ಕಾಲದಲ್ಲಿ ಈ ರೀತಿ ದೇಶವನ್ನು ಬಗೆಬಗೆಯಿಂದ ಅಸಂತುಷ್ಟ ಸ್ಥಿತಿಯಲ್ಲಿಟ್ಟುದು ಬ್ರಿಟಿಶ್ ಆಳಿಕೆಗೆ ಕಪ್ಪು ಬಳಿಯುವಂಥದೆ. ವಿಕ್ಟೋರಿಯಾ ಮಹಾರಾಣಿಯವರ ಘೋಷಣೆ ಸ್ವಲ್ಪಮಟ್ಟಿಗೂ ಫಲಕಾರಿಯಾಗಲಿಲ್ಲೆಂಬುದೂ ಗೊತ್ತಾಗುವದು. ಇದಲ್ಲದೆ ಜಾತಿ ಜಾತಿಗಳಲ್ಲಿ ಬಡಿದಾಟ ಹೆಚ್ಚಿದ್ದಕ್ಕೆ ಬ್ರಿಟಿಶರ ಧೋರಣೆಯೆ ಕಾರಣವೆಂಬುದು ನಿರ್ವಿವಾದ. ಇಷ್ಟೆಲ್ಲ ಮಾಡಿ ಬ್ರಿಟಿಶರಿಂದು ಕಾಲ್ದೆಗೆಯಲು ನಿರ್ಧರಿಸಿದ್ದು ಸಂತೋಷದ ಸಂಗತಿ.

ಸಂಸ್ಥಾನಿಕರ ಸಮಸ್ಯೆ

ಬ್ರಿಟಿಶರು ಸಂಸ್ಥಾನಿಕರನ್ನೆಬ್ಬಿಸಿ ಕೂಡ್ರಿಸಿದ್ದು ಮತ್ತೊಂದು ಮಹತ್ವದ ತೊಡಕು. ತಮ್ಮ ಕಡೆಗಿದ್ದ ವರಿಷ್ಠಾಧಿಕಾರ ನಷ್ಟವಾದ ಕೂಡಲೆ ಅದು ಸಂಸ್ಥಾನಿಕರ ಕಡೆಗೇ ಹೋಗುವುದೆಂಬ ಅರ್ಥದ ಘೋಷಣೆಯನ್ನು ಬ್ರಿಟಿಶ ಸರಕಾರದವರು ಮಾಡಿದ್ದರಿಂದ ಹಲ ಕೆಲ ಸಂಸ್ಥಾನಗಳು ಹಿಂದೀ ಒಕ್ಕೂಟದಿಂದ ಸಿಡಿದು ನಿಲ್ಲಲು ಪ್ರಯತ್ನಿಸುತಿವೆ. ನಿಜವಾಗಿ ವಿಚಾರ ಮಾಡಿದರೆ ಈ ವರಿಷ್ಠಾಧಿಕಾರ ಅಲ್ಲಲ್ಲಿಯ ಜನತೆಗೇ ಹೋಗುವುದು. ಆಯಾ ಸಂಸ್ಥಾನಿಕರು ತಮ್ಮ ಪ್ರಜೆಗಳ ಅಭಿಪ್ರಾಯವನ್ನು ತಿಳಿದುಕೊಂಡು ಅವರಿಗೆ ಹೊಣೆಗಾರ ಅಧಿಕಾರವನ್ನು ಕೊಟ್ಟು ತಮ್ಮ ಧೋರಣವನ್ನು ನಿರ್ಧರಿಸಬೇಕು. ಸಂಸ್ಥಾನಗಳಲ್ಲಿ ಸ್ವಾಯತ್ತತೆಯನ್ನು ಸಂಸ್ಥಾಪಿಸಿಕೊಂಡರೂ ಹಿಂದುಸ್ತಾನದ ಒಕ್ಕೂಟದಲ್ಲಿ ಸೇರಬೇಕು. ಬಹುಸಂಖ್ಯಾಕ ಸಂಸ್ಥಾನಗಳು ಈಗ ಘಟನಾ ಸಮಿತಿಯಲ್ಲಿ ಸೇರಲು ಸಿದ್ಧವಾಗಿದ್ದರೂ ಹೈದರಾಬಾದ ತಿರುವಾಂಕೂರು ಕಾಶ್ಮೀರಗಳಂಥ ದೊಡ್ಡ ಸಂಸ್ಥಾನಗಳು ಸಿಡಿದು ನಿಂತಿದ್ದು ಶೋಚನೀಯ. ಬ್ರಿಟಿಶರ ಕೈವಾಡವೆ ಇದರಲ್ಲಿ ಇದೆಂಬುದು ನಿರ್ವಿವಾದ. ವರಿಷ್ಠದ ಮೇಲಿನ ತಮ್ಮ ಅಧಿಕಾರ ನಷ್ಟವಾದ ಕೂಡಲೆ ಅದರ ಭವಿತವ್ಯವೇನೆಂಬ ಪ್ರಶ್ನೆಯನ್ನು ಬ್ರಿಟಿಶರು ಗೂಢವಾಗಿರಿಸಿದ್ದರಿಂದ ಅದರ ಮೇಲೆ ಪ್ರಭುತ್ವ ಪಡೆಯಬಯಸುವ ನಿಜಾಮರಲ್ಲಿ ಮತ್ತು ಹಿಂದೀ ಒಕ್ಕೂಟ ಸರಕಾರದಲ್ಲಿ ಮನಸ್ತಾಪಕ್ಕೆ ಅವಕಾಶವುಂಟಾಗಿದೆಂದು ಹೇಳಬಹುದು. ಆ ಪ್ರಶ್ನೆಯನ್ನು ಸಮಾಧಾನಕರವಾಗಿ ಬಿಡಿಸಿಕೊಳ್ಳುವದು ಭಾರತೀಯರ ಕರ್ತವ್ಯವಾಗಿದೆ. ಬ್ರಿಟಿಶರು ಇಂತು ಹಲ ಕೆಲವು ಅಡೆತಡೆಗಳನ್ನಿಟ್ಟು ಅಧಿಕಾರ ತ್ಯಾಗ ಮಾಡಲು ಸಿದ್ಧರಾಗಿರುವರು. ಆದರೆ ಯಾವದೇ ನೆವ ಮುಂದೆ ಮಾಡಿ ಅವರು ಮತ್ತೆ ತಮ್ಮ ಕಾಯಕವನ್ನು ನಡೆಸದಿರಲೆಂದೆ ಈ ಸಮಯದಲ್ಲಿ ಭಾರತೀಯರು ಬಯಸಬೇಕಾಗಿದೆ. ಬ್ರಿಟಿಶರು ಭಾರತದ ಪುನರ್ರಚನೆಗೆ ಎಲ್ಲ ಬಗೆಯಿಂದ ಸಹಾಯಕರೆ ಆಗಬೇಕಲ್ಲದೆ ಅಡ್ಡಗಾಲು ಹೊಡೆಯಬಾರದೆಂದು ಕೇಳಿಕೊಳ್ಳಬೇಕಾಗಿದೆ.

ಸೂಕ್ತ ಸಲಹೆ

ಸದ್ಯದ ಸಮಯದಲ್ಲಿ ಸಂಸ್ಥಾನಿಕರ ಸಮಸ್ಯೆ ಇಂತು ಕಠಿಣವಾದುದನ್ನು ಲಕ್ಷಿಸಿಯೆ ಸರದಾರ ವಲ್ಲಭಭಾಯಿ ಪಟೇಲರು ಸಹಕಾರದ ಹಸ್ತವನ್ನು ಸಂಸ್ಥಾನಿಕರಿಗೆ ನೀಡಿದ್ದಾರೆ. ಅವರು ಕಾಂಗ್ರೆಸ್ಸಿನ ಸಹಕಾರಕ್ಕೆ ಓಗೊಟ್ಟು ಕಾರ್ಯಪ್ರವೃತ್ತರಾದರೆ ಎಂಥ ಕಠಿಣವಾದ ಸಮಸ್ಯೆಯೂ ಬಗೆಹರಿಯುವದೆಂಬಲ್ಲಿ ಸಂದೇಹವಿಲ್ಲ. ಬಿಕಾನೇರದ ಮಹಾರಾಜರೂ ಈ ಸಂದರ್ಭದಲ್ಲಿ ಪ್ರಕಟನೆಯೊಂದನ್ನು ಹೊರಡಿಸಿ ಸರದಾರರು ಮುಂದೆ ಮಾಡಿದ ಸಹಕಾರ ಮತ್ತು ಮಿತ್ರತ್ವದ ಹಸ್ತವನ್ನು ಸ್ವೀಕರಿಸಿರೆಂದು ಬಿನ್ನವಿಸಿಕೊಂಡಿರುವರು. ಈ ಮಿತ್ರತ್ವದ ಭಾವನೆಯಿಂದಲೆ ನಾವೆಲ್ಲ ಸಮಸ್ಯೆ ಬಿಡಿಸಲು ಪ್ರವೃತ್ತರಾದರೆ ಎಲ್ಲ ಪಕ್ಷಗಳಿಗೂ ಸಮಾಧಾನವಾಗುವ ರೀತಿಯಲ್ಲಿ ಅವುಗಳ ಪರಿಹಾರವಾಗುವದೆಂದು ಹೇಳಿರುವರು. ಸಂಸ್ಥಾನ ಕಾಂಗ್ರೆಸ್ಸಿನವರೂ ಪ್ರಜಾ ಪಕ್ಷದವರೂ ಇದೇ ಬಗೆಯ ಸ್ನೇಹ ಸೌಹಾರ್ದ ಭಾವವನ್ನು ತಾಳಬೇಕೆಂದೂ ಅವರು ಕೇಳಿಕೊಂಡಿರುವರು. ಸಂಸ್ಥಾನಿಕರು ಹಿಂದೆ ಬೀಳಲಾರರೆಂಬಲ್ಲಿ ವಿಶ್ವಾಸವಿಟ್ಟು ಪ್ರಜಾ ಪರಿಷತ್ತಿನವರು ತಮ್ಮ ಧೋರಣವನ್ನು ಸರಿಪಡಿಸಿಕೊಳ್ಳಬೇಕೆಂದು ಅವರು ಬಿನ್ನವಿಸಿರುವರು. ಬಿಕಾನೇರ ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಹೊಣೆಗಾರ ಸರಕಾರ ಕೊಡುವದನ್ನು ನಿರ್ಧರಿಸಿ ನಾಗರಿಕ ಸ್ವಾತಂತ್ರ್ಯವನ್ನು ದಯಪಾಲಿಸಿದಂತೆ ಉಳಿದ ಸಂಸ್ಥಾನಿಕರೂ ಹಾಗೆಯೆ ಮಾಡಿದರೆ ಸಂಸ್ಥಾನ ಪ್ರಜೆ ಮತ್ತು ಸಂಸ್ಥಾನಿಕರಲ್ಲಿ ತಿಕ್ಕಾಟಕ್ಕೆ ಅವಕಾಶವೆ ಉಳಿಯಲಾರದೆಂಬುದು ಖಂಡಿತ. ಬಿಕಾನೇರ ಮಹಾರಾಜರು ಹಾಕಿಕೊಟ್ಟ ಈ ಮಾರ್ಗವನ್ನು ಉಳಿದ ಸಂಸ್ಥಾನಿಕರೂ ಅನುಸರಿಸಿದ್ದಾದರೆ ಸಂಸ್ಥಾನ ಸಮಸ್ಯೆಗಳ ಪರಿಹಾರವಾದಂತಾಗುವದು. ಇದರಿಂದ ಸಂಸ್ಥಾನಿಕರು ತಮ್ಮ ಸಂಸ್ಥಾನಗಳ ಪ್ರಶ್ನೆಗಳನ್ನಷ್ಟೇ ಬಿಡಿಸಿದಂತಾಗದೆ ಇಡೀ ರಾಷ್ಟ್ರದ ಭವಿತವ್ಯವನ್ನು ನಿರ್ಣಯಿಸುವಲ್ಲಿಯೂ ಸಹಾಯಕರಾದಂತಾಗುವದು. ಸರದಾರ ಪಟೇಲರು ಹಾರೈಸಿದಂತೆ ನಮ್ಮ ಮಾತೃಭೂಮಿಯಲ್ಲಿ ಸುಖ ಶಾಂತಿಗಳನ್ನು ಸಂಸ್ಥಾಪಿಸಿದ್ದ ಶ್ರೇಯಸ್ಸು ಪ್ರಾಪ್ತವಾಗುವದು. ಎಲ್ಲ ಸಂಸ್ಥಾನಿಕರು ಈಗಲಾದರೂ ತಮ್ಮ ಧೋರಣವನ್ನು ಬದಲಿಸಿ ಸರದಾರರು ಕೇಳಿಕೊಂಡಂತೆ ಸಹಕಾರವನ್ನು ನೀಡುವರೆಂದು ನಂಬುತ್ತೇವೆ.

ಅಲ್ಪಸಂಖ್ಯಾಕರು

ಹಿಂದುಸ್ತಾನದಲ್ಲಿ ಅಗಸ್ಟ ೧೫ಕ್ಕೆ ಹಿಂದುಸ್ತಾನ ಮತ್ತು ಪಾಕಿಸ್ತಾನ ಎಂಬ ಎರಡು ಪ್ರತ್ಯೇಕ ರಾಜ್ಯಗಳು ಸ್ಥಾಪಿತವಾಗುವವಷ್ಟೆ. ಅನಂತರ ಆಯಾ ಭಾಗಗಳಲ್ಲಿರುವ ವಿಶೇಷತಃ ಪಾಕಿಸ್ತಾನದಲ್ಲಿರುವ ಅಲ್ಪಸಂಖ್ಯಾಕರ ಗತಿಯೇನೆಂಬ ಪ್ರಶ್ನೆ ಎಲ್ಲರ ತಲೆ ತಿನ್ನಹತ್ತಿದೆ. ಈ ಬಗ್ಗೆ ಬಗೆ ಬಗೆಯ ಸೂಚನೆಗಳನ್ನು ಮಾಡಲಾಗುತ್ತಿದೆ. ದೇಶವನ್ನು ಹಿಂದೂ ಮುಸಲ್ಮಾನ ಬಹುಸಂಖ್ಯಾಕ ತತ್ವದನ್ವಯ ಒಡೆದಿದ್ದರೂ ಇನ್ನೂ ಶಾಂತಿ ಪ್ರಸ್ಥಾಪಿತವಾಗಲೊಲ್ಲದು. ಕೊಲೆ, ಸುಲಿಗೆ ಕೊಳ್ಳಿಗಳು ಅನಿರ್ಬಂಧವಾಗಿ ಸಾಗಿವೆ. ಆಯಾ ಜಾತೀಯ ಮುಖಂಡರು ಶಾಂತಿಯ ಬಗ್ಗೆ ಪ್ರಕಟನೆ ಹೊರಡಿಸಿ ಕೆಲ ಭಾಗಗಳಲ್ಲಿ ಸಂಚರಿಸಿದರೂ ಅವಶ್ಯಕ ಶಾಂತಿ ಪ್ರಸ್ಥಾಪಿತವಾಗಲೊಲ್ಲದು. ಪಾಕಿಸ್ತಾನ ಪ್ರದೇಶಗಳಲ್ಲಿ ಹಿಂದುಸ್ತಾನ ಸರಕಾರದ ಅಧಿಕಾರ ನಡೆಯುತಿರುವ ಈ ಕಾಲದಲ್ಲಿಯೆ ಪರಿಸ್ಥಿತಿ ಶಾಂತವಾಗಲೊಲ್ಲದೆಂದಬಳಿಕ ಪಾಕಿಸ್ತಾನ ಪ್ರಸ್ಥಾಪಿತವಾದಬಳಿಕ ಶಾಂತಿ ಪ್ರಸ್ಥಾಪಿತವಾಗಬಹುದೆಂದು ಅಪೇಕ್ಷಿಸುವುದೆಂತು? ಅಂತೆಯೆ ಸಿಂಧದ ಪ್ರಮುಖ ಕಾಂಗ್ರೆಸ್ಸಿಗರಾದ ಡಾ. ಚೊಯಿತರಾಮ ಗಿಡ್ವಾನಿಯವರು ಮುಂಬಯಿಯಲ್ಲಿಯ ಒಂದು ಸಭೆಯಲ್ಲಿ ಮಾತಾಡುತ್ತ ತಮ್ಮ ಮೇಲೆ ಆಗುತಿರುವ ಅನ್ಯಾಯದ ಅತಿರೇಕವನ್ನು ಬಣ್ಣಿಸಿದರು. 'ನಮ್ಮ ಉದ್ಯೋಗ ಧಂದೆಗಳು ಹತ್ತಿಕ್ಕಲ್ಪಟ್ಟಿವೆ. ವ್ಯಾಪಾರವು ಮಣ್ಣು ಮುಕ್ಕಿಹೊಗಿದೆ. ನಮ್ಮ ಮಕ್ಕಳ ಶಿಕ್ಷಣಕ್ಕೆ ಬಹಳ ಮಟ್ಟಿಗೆ ಅಘಾತವಾಗಿದೆ. ಸರಕಾರಿ ನೌಕರಿಗಳಲ್ಲಿ ನ್ಯಾಯ್ಯವಾಗಿ ದೊರೆಯತಕ್ಕ ಪಾಲನ್ನು ಕಸಿದುಕೊಳ್ಳಲಾಗಿದೆ' ಎಂದು ಗಿಡ್ವಾನಿಯವರು ಮರುಗಿದರಲ್ಲದೆ ಪ್ರಾಂತದಲ್ಲಿ ಸ್ಥಾನಿಕ ಸಂಸ್ಥೆಗಳ ಆಡಳಿತದ [illegible] ಪಕ್ಷ ನಡೆದಿದ್ದು ಅವುಗಳನ್ನು ರದ್ದುಪಡಿಸಿದ ಹುಕೂಮುಗಳು ದಿನಾಲು ಹೊರಡುತ್ತಿವೆ ಎಂದು ಸಾರಿದರು. ಇದರಿಂದ ಸಿಂಧದಲ್ಲಿ ಅಲ್ಪಸಂಖ್ಯಾಕರ ಪರಿಸ್ಥಿತಿ ಎಷ್ಟೊಂದು ನಿಕೃಷ್ಟವಾಗಿದೆಂಬುದು ಗೊತ್ತಾಗುವದು. 'ಮುಸ್ಲಿಂ ಲೀಗು ಬ್ರಿಟಿಶರ ಈ ಯೋಜನೆಯನ್ನು ಸ್ವೀಕರಿಸಿದ್ದು ಕೊನೆಯ ಒಡಂಬಡಿಕೆಯೆಂದಲ್ಲ ಆದರೆ ಸಿಕ್ಕಷ್ಟನ್ನು ಪಡೆದು ಹೆಚ್ಚಿನ ಪ್ರದೇಶಕ್ಕಾಗಿ ಹೊಡೆದಾಡುವಾ ಎಂದೂ ಅವರು ಇದನ್ನು ಸ್ವೀಕರಿಸಿರುವರು' ಎಂದೂ ಅವರು ಹೇಳಿದರು. ಮುಸ್ಲಿಂ ಲೀಗಿನವರ ಕೈವಾಡದ ಅನುಭವ ನಿತ್ಯ ಪಡೆಯುತಿರುವ ಸಿಂಧದ ಧುರೀಣರ ಈ ಅಭಿಪ್ರಾಯದ ಬಗ್ಗೆ ಗಂಭೀರ ರೀತಿಯಿಂದ ವಿಚಾರ ಮಾಡುವದು ಅತ್ಯವಶ್ಯವಾಗಿದೆ.

ಸರಹದ್ದದಲ್ಲಿ ಮತದಾನ

ಸರಹದ್ದ ಪ್ರಾಂತದಲ್ಲಿ ಮತದಾನ ಪ್ರಾರಂಭವಾಗಿದೆ. ಪ್ರಾಂತದಲ್ಲಿಯ ಬಹುಸಂಖ್ಯಾಕ ಪಕ್ಷವಾದ ಕಾಂಗ್ರೆಸ್ಸು ಅದನ್ನು ಬಹಿಷ್ಕರಿಸಿದ್ದರಿಂದ ಮತಪ್ರದಾನದಲ್ಲಿ ಅಷ್ಟೊಂದು ಉತ್ಸಾಹವೇ ಇಲ್ಲ. ಪಾಕಿಸ್ತಾನದ ನೆರಳು ಕೂಡ ಬೇಡ ಎಂದು ಹೇಳಿ ಖುದಾಯಿ ಖಿದಮತಗಾರರು ಮತಗಣನೆಯನ್ನು ಬಹಿಷ್ಕರಿಸಿರುವರಲ್ಲದೆ ಮತಗಣನೆಯಲ್ಲಿ ಭಾಗ ವಹಿಸಿದ್ದಾದರೆ ಸೋಲುವ ಸಂಭವವಿದ್ದಿತೆಂದಲ್ಲೆಂದು ಮುಂತಾಗಿ ಮುಖ್ಯ ಮಂತ್ರಿ ಡಾ. ಖಾನಸಾಹೇಬರು ಸ್ಪಷ್ಟೀಕರಿಸಿದ್ದಾರೆ. ಗಡಿನಾಡಿನಲ್ಲಿಯ ಮತಗಣನೆಯನ್ನು ಕಾಂಗ್ರೆಸ್ಸು ಎಂದಿಗೂ ಒಪ್ಪಿಲ್ಲ. ಪಠಾಣಿಸ್ತಾನದ ಬೇಡಿಕೆ ಪಾಕಿಸ್ತಾನದ ಬೇಡಿಕೆಗಿಂತ ಹಳೆಯದು ಎಂದು ಸರಹದ್ದದ ಧುರೀಣರಾದ ಖಾನ ಅಬ್ದುಲ್ ಗಫರಖಾನರು ಸಾರಿ ಕಾಂಗ್ರೆಸ್ಸು ಮತಗಣನೆಯ ಬಹಿಷ್ಕಾರದ ಬಗ್ಗೆ ವೈಸರಾಯರೊಡನೆ ಪತ್ರವ್ಯವಹಾರ ನಡೆಸಿದೆಂದೂ ಹೇಳಿದರು. ಪಂಡಿತ ಜವಾಹರಲಾಲರು ಮ್ಯಾಂಚೆಸ್ಟರ ಗಾರ್ಡಿಯನ್ ಪತ್ರಿಕೆಯಲ್ಲಿ ಬರೆಹವೊಂದನ್ನು ಬರೆದು ಭಾರತದಿಂದ ಸಿಡಿದು ಹೋಗಲು ಪಠಾಣಿಸ್ತಾನದ ಬೇಡಿಕೆಯಿಲ್ಲ, ಕಾಂಗ್ರೆಸ್ಸು ವಚನಭಂಗ ಮಾಡಿದೆಂಬ ಅರೋಪ ನಿರಾಧಾರವಾದದ್ದು ಎಂದು ಮುಂತಾಗಿ ಸ್ಪಷ್ಟೀಕರಿಸಿರುವರು. ಇದೆಲ್ಲವನ್ನು ವಿಚಾರಿಸಿದರೆ ಕಾಂಗ್ರೆಸ್ಸು ವಹಿಸಿದ ಪಾತ್ರ ಸಮಂಜಸವೆಂದು ಸಿದ್ಧವಾಗದಿರದು. ಕೇವಲ ಜಾತೀಯ ಪ್ರಶ್ನೆಯ ಮೇಲೆ ನಡೆದ ಮತಗಣನೆಯಲ್ಲಿ ಉಂಟಾಗಬಹುದಾದ ಹೊಡೆದಾಟವನ್ನು ತಪ್ಪಿಸಲು ಖಾನ ಅಬ್ದುಲ್ ಗಫರಖಾನರೂ ಅವರ ಮಿತ್ರರೂ ಮತಗಣನೆಯಲ್ಲಿ ಭಾಗವಹಿಸಬಾರದೆಂದು ನಿರ್ಧರಿಸಿದರೆಂದೂ ಅವರು ಈ ಬರೆಹದಲ್ಲಿ ಬರೆದಿದ್ದಾರೆ. ಕಾಂಗ್ರೆಸ್ಸು ಜಾತೀಯತೆಗೆ ಸ್ವಲ್ಪೂ ಅವಕಾಶ ಕೊಡಬಾರದೆಂದೂ ಈ ವಿಧದ ಧೋರಣ ವಹಿಸಲಾಯಿತೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಫ್ರೆಂಚ-ಪೋರ್ತುಗೀಜ ಹಿಂದುಸ್ತಾನ

ಬ್ರಿಟಿಶ್‌ರು ಹಿಂದುಸ್ತಾನದಿಂದ ಕಾಲ್ತೆಗೆದ ಬಳಿಕ ಇಲ್ಲಿರುವ ಫ್ರೆಂಚ ಮತ್ತು ಪೋರ್ತುಗೀಜ ವಸಾಹತುಗಳ ಭವಿತವ್ಯವೇನು ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಚಕ್ರವರ್ತಿಗಳೆಂದು ಅಡಳಿತ ನಡಿಸುತಿದ್ದ ಬ್ರಿಟಿಶರೆ ಅಧಿಕಾರ ತ್ಯಾಗ ಮಾಡಿದ ಬಳಿಕ ಹಿಂದುಸ್ತಾನದಲ್ಲಿಯ ಫ್ರೆಂಚ ಮತ್ತು ಪೋರ್ತುಗೀಜರು ಅಧಿಕಾರ ತ್ಯಾಗ ಮಾಡುವದು ಕ್ರಮಪ್ರಾಪ್ತವಾಗಿದೆ. ಆಯಾ ಭಾಗಗಳಲ್ಲಿಯ ನಿವಾಸಿಗಳು ಆ ಬಗೆಯ ಬೇಡಿಕೆಯನ್ನೂ ಮಾಡಿದ್ದುಂಟು. ಈ ಸಂಬಂಧದಲ್ಲಿ ಫ್ರೆಂಚರು ಕೆಲಮಟ್ಟಿಗೆ ಸಹಾನುಭೂತಿಪರ ಧೋರಣವನ್ನು ವಹಿಸಿರುವರೆಂದು ಹೇಳಬಹುದು. ಬ್ರಿಟಿಶರು ಹಿಂದುಸ್ತಾನದಿಂದ ಹೊರಟು ಹೋದ ಬಳಿಕ ತಮ್ಮ ವಸಾಹತುಗಳ ಗತಿಯೇನೆಂಬದನ್ನು ವಿಚಾರಿಸಲು ಅವರು ಈಗಾಗಲೆ ಫ್ರೆಂಚ ಹಿಂದೀ ಗವರ್ನರರನ್ನು ಪ್ಯಾರಿಸಿಗೆ ಕರೆಸಿಕೊಂಡಿರುವರೆಂದೂ ತಿಳಿಯುತ್ತದೆ. ಭಾರತದಲ್ಲಿ ಇನ್ನು ಮುಂದೆ ಪರಕೀಯರ ಸತ್ತೆ ನಡೆಯದೆಂಬುದು ಈ ಅವಧಿಯಲ್ಲಿ ಫ್ರೆಂಚ ಪೋರ್ತುಗೀಜ ಅಧಿಕಾರಿಗಳಿಗೆ ಮನವರಿಕೆಯಾಗಿರಲು ಸಾಕು. ಜನತೆಯ ಬೆಂಬಲವಿಲ್ಲದೆ ಇನ್ನು ಮುಂದೆ ಹಿಂದುಸ್ತಾನವನ್ನಾಳುವದು ಶಕ್ಯವೇ ಇಲ್ಲ ಆದುದರಿಂದ ಫ್ರೆಂಚ ಪೋರ್ತುಗೀಜ ಹಿಂದುಸ್ತಾನದಲ್ಲಿಯ ಅಧಿಕಾರಿಗಳು ತಮ್ಮ ಸರಕಾರಗಳಿಗೆ ನಿಜ ಪರಿಸ್ಥಿತಿಯನ್ನು, ಜನತೆಯ ಮನದ ಹಂಬಲವನ್ನು ತಿಳಿಸಿಕೊಟ್ಟು ಅಧಿಕಾರ ತ್ಯಾಗ ಮಾಡಿ ಹೊರಟು ಹೋಗಲು ಸಲಹೆ ಕೊಡಬೇಕು ಅಂದರೆ ಆಯಾ ಭಾಗಗಳು ತಮಗೆ ಅನುಕೂಲವಾಗುವ ಸ್ವಾಭಾವಿಕ ವಿಭಾಗಗಳಲ್ಲಿ ಕೂಡಿಕೊಂಡು ತಮ್ಮ ಮತ್ತು ದೇಶದ ಪ್ರಗತಿಯನ್ನು ಸಾಧಿಸಲು ಶಕ್ತವಾಗಬಲ್ಲವು.

ನಡುಗಾಲ ಸರಕಾರದ ಲೀಗ ಮಂತ್ರಿಗಳ ರಾಜೀನಾಮೆ

ಹಿಂದೀ ಸ್ವಾತಂತ್ರ್ಯ ಮಸೂದೆಯ ಲೋಪ ದೋಷಗಳು— ಸಂಸ್ಥಾನಿಕರಿಗೆ ಸರದಾರ ಪಟೇಲರ ಬಿನ್ನಹ—ತ್ರಿಶಂಕು ಸ್ವರ್ಗ—ಗಡಿನಾಡಿನ ವಿವಾದ

ನಡುಗಾಲ ಸರಕಾರದ ಲೀಗ್ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ. ಅವರು ಹೀಗೆ ಮಾಡಲು ವಾಯಿಸರಾಯರು ಒತ್ತಾಯಗೊಳಿಸಿದರೆಂದೂ ರಾಜೀನಾಮೆ ಕೊಡದಿದ್ದರೆ ಕಿತ್ತುಹಾಕುವದಾಗಿ ಬೆದರಿಕೆ ಹಾಕಲಾಯಿತೆಂದೂ ತಿಳಿಯುತ್ತದೆ. ಅಗಸ್ಟ ೧೫ ರ ವರೆಗೆ ಕಾಂಗ್ರೆಸ್ಸಿಗರೇ ಸರಕಾರವನ್ನು ನಿರ್ವಹಿಸಬಹುದೆಂದೂ ಪಾಕಿಸ್ಥಾನ ಪ್ರಾಂತಗಳ ಬಗ್ಗೆ ಸಲಹೆ ಕೊಡಲು ಬಂಗಾಲದಲ್ಲಿ ಮಾಡಿದಂತೆ ಲೀಗಿನವರ ಛಾಯಾ ಮಂತ್ರಿಮಂಡಲ ರಚಿಸಬಹುದೆಂದೂ ಊಹಿಸಲಾಗಿದೆ.

ಬ್ರಿಟಾನಿಯೊಳ ವಾನಪ್ರಸ್ಥ

ಹಿಂದುಸ್ಥಾನವನ್ನು ಎರಡು ಸ್ವತಂತ್ರ ರಾಜ್ಯಗಳಾಗಿ ಅಂಗೀಕರಿಸುವ ಮಸೂದೆ ಬ್ರಿಟಿಶ ಪಾರ್ಲಮೆಂಟಿನ ಮುಂದೆ ಮಂಡಿಸಲ್ಪಟ್ಟ ದಿನವೆಂದರೆ ಆ ಸಭೆಯ ಇತಿಹಾಸದಲ್ಲೆ ಅಪೂರ್ವ ಸಂಧಿ. ಬ್ರಿಟಿಶರು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಸ್ವಾತಂತ್ರ್ಯವನ್ನು ೧೬೦ ವರ್ಷಗಳ ಹಿಂದೆ ಅಂಗೀಕರಿಸಿದಾಗ ಅವರು ಅಮೇರಿಕನ್ ಸ್ವಾತಂತ್ರ್ಯವಾದಿಗಳ ಕೈಲಿ ಯುದ್ಧದಲ್ಲಿ ಸೋತು ವಿಧಿಯಿಲ್ಲದೆ ಒಪ್ಪಿಕೊಂಡರು. ಆದರೆ ಹಿಂದೀ ಸ್ವಾತಂತ್ರ್ಯಕ್ಕೆ ಅವರು ಕೊಟ್ಟ ಮನ್ನಣೆ ಅಂಥ ಮಿಲಿಟರಿ ಅಪಜಯದ ಫಲವಲ್ಲ. ಅದು ಈ ದೇಶದ ಸಾತ್ವಿಕ ತೇಜಕ್ಕೆ ದೊರೆತ ಮನ್ನಣೆಯನ್ನಬೇಕು. ಅದರಿಂದಲೇ ದ್ವಿರಾಷ್ಟ್ರ ಸ್ವಾತಂತ್ರ್ಯವಾದಿಗಳಾದ ಸರದಾರ ಪಟೇಲರು ಕೂಡ ಈ ಸಂಧಿಯ ಅಪೂರ್ವತೆಗೆ ಕಪ್ಪ ಕೊಟ್ಟರು. ಚರ್ಚಿಲ್ಲರ ‘‘ಬ್ರಿಟಿಶ ಚಕ್ರವರ್ತಿಯ ಕಿರೀಟದ ಅತ್ಯುಜ್ವಲ ರತ್ನವೆನಿಸಿದ ಹಿಂದುಸ್ಥಾನ’’ ಕೈಬಿಟ್ಟು ಹೋಗುವದರ ಜತೆಗೆ ಬ್ರಿಟಿಶ ಅರಸನ ಚಕ್ರವರ್ತಿ ಬಿರುದಿನ ಅನ್ವರ್ಥತೆಯೂ ನಾಶವಾಯಿತೆಂಬದನ್ನು ಲಕ್ಷಿಸಿ, ಬರಿ ‘‘ಅರಸ’’ನೆಂದು ಅವನು ಉಲ್ಲೇಖಿಸಲ್ಪಡತಕ್ಕದ್ದೆಂದು ಸರಕಾರ ಮಾಡಿದ ಸೂಚನೆಗೆ ಅರಸನು ಸಮ್ಮತಿ ಕೊಟ್ಟಿದ್ದಾರೆ. ಸಾಮ್ರಾಜ್ಯ ವೈಭವದ ದ್ಯೋತಕವಾದ ಇನ್ನೊಂದು ಶಬ್ದವಾದ ‘‘ಡೋಮಿನಿಯನ್’’ (ಅಧಿಪತ್ಯ) ಎಂಬವನ್ನು ಕಿತ್ತೊಗೆದು ‘‘ಕಾಮನವೆಲ್ತ’’ (ರಾಜ್ಯಮಂಡಲ) ಎಂಬ ಸಮಾನತ್ವದ್ಯೋತಕ ಶಬ್ದವನ್ನು ಬ್ರಿಟಿಶ ಸಾಮ್ರಾಜ್ಯವೆಂಬರ್ಥದಲ್ಲಿ ಉಪಯೋಗಿಸಬೇಕೆಂದು ಗೊತ್ತುಪಡಿಸಿದ್ದು ಈ ಬದಲಿಕೆಯನ್ನು ಮನಗಂಡದ್ದರ ಪರಿಣಾಮವೇ ಆಗಿದೆ. ಶತಮಾನಗಳ ರಾಜ್ಯಭೋಗಿಸಿದ ಬ್ರಿಟಾನಿಯಾ ಇಂದು ಸಾರ್ಥಕ್ಯವುಳ್ಳ ವಾನಪ್ರಸ್ಥಾಶ್ರಮ ಗ್ರಹಣ ಮಾಡಿದ್ದಾಳೆಂದರೆ ಅಷ್ಟು ಅತಿಶಯೋಕ್ತಿಯಾಗಲಿಕ್ಕಿಲ್ಲ. ಕಾನ್ಸರ್ವೇಟಿವ ಪಕ್ಷದ ಮುಂಗಮುಷ್ಟಿಗಳು ಕೂಡ ಈ ಮಹಾಪರಿವರ್ತನೆಯ ಅನಿವಾರ್ಯತೆಯನ್ನು ಕಂಡುಕೊಂಡಿದ್ದಾರೆ. ಪಾರ್ಲಮೆಂಟಿನಲ್ಲಿ ಬ್ರಿಟಿಶ ಸಾಮ್ರಾಜ್ಯದ ‘‘ದಿವಾಳಿ’’ ಎಬ್ಬಿಸುವ ಈ ಮಸೂದೆಗಳು ಬಂದಾಗ ವಿರೋಧಿ ಪಕ್ಷದ ಕಾನ್ಸರ್ವೇಟಿವರು ಏಕೊಂದು ತಂಟೆಯನ್ನೂ ಎಬ್ಬಿಸಲಿಲ್ಲ. ಲಾರ್ಡ ಬಿವರಬ್ರೂಕರ ಗುಂಪಿನವರು ಪ್ರತಿಭಟಿಸುವರೆಂಬ ಸುದ್ದಿ ಮೊದಲು ಇದ್ದರೂ ಅವರು ಕೂಡ ತೆಪ್ಪಗಾದಂತೆ ಕಾಣುತ್ತದೆ. ಹೀಗಾಗಿ, ತಾ. ೧೨ ರೊಳಗೆ ಅದರ ಎರಡೂ ವಾಚನಗಳು ಮುಗಿದು, ಲಾರ್ಡ್ಸ ಸಭೆಯಲ್ಲಿ ಅನಿರೀಕ್ಷಿತ ತೊಡಕುಗಳೇಳದೆ ಹೋದರೆ ತಾ. ೨೦ ರೊಳಗೆ ಈ ಮಸೂದೆಗೆ ಅರಸನ ಮುದ್ರೆ ಬಿದ್ದು ಅದು ಕಾಯಿದೆಯಾಗಬಹುದು. ಅದರೊಡನೆ ಹಿಂದುಸ್ಥಾನದ ಮೇಲೆ ಬ್ರಿಟಿಶ ಪಾರ್ಲಿಮೆಂಟಿನ ಅಧಿಕಾರ ಮುಕ್ತಾಯಗೊಳ್ಳುವದು. ಭಾರತ ಕಚೇರಿ ರದ್ದಾಗುವದು. ಮತ್ತು ‘‘ರಾಜ್ಯಮಂಡಲ’’ ಶಾಖೆಯಲ್ಲಿ ಹಿಂದೀ ವಿಭಾಗವನ್ನು ನೋಡಿಕೊಳ್ಳಲು ಒಬ್ಬ ವಿಶೇಷ ಮಂತ್ರಿ ನೇಮಿಸಲ್ಪಡಬಹುದೆಂದು ತಿಳಿಯುತ್ತದೆ.

ಅಮೇರಿಕೆಯ ವಾಗ್ದಾನ

ಹಿಂದುಸ್ಥಾನಕ್ಕೆ ಸ್ವಾತಂತ್ರ್ಯದಾನವಾಗುವದನ್ನು ಸ್ವಾಗತಿಸಿ ಹೊಸದಿಲ್ಲಿಯಲ್ಲಿ ಅಮೇರಿಕೆಯ ರಾಯಭಾರಿಯಾಗಿರುವ ಡಾ. ಹೆನ್ರಿ ಗ್ರೇಡಿಯವರು ಯೋಗ್ಯ ಸಹಾಯ ನೀಡುವ ಅಮೇರಿಕೆಯ ಇಚ್ಛೆಯನ್ನು ವ್ಯಕ್ತಗೊಳಿಸಿದರು. ಹಿಂದುಸ್ಥಾನ ಪಾಕಿಸ್ಥಾನಗಳ ಹೊಸ ಸ್ಥಾನಮಾನಗಳನ್ನು ಅಮೇರಿಕೆ ಒಪ್ಪಲು ಯಾವ ಅಭ್ಯಂತರವಿಲ್ಲವೆಂದೂ ಅವರು ಹೇಳಿದರು. ‘‘ಸ್ವಾತಂತ್ರ್ಯಪ್ರಾಪ್ತಿಯಾದ ನಂತರ ಈ ವಿಶಾಲ ರಾಷ್ಟ್ರದ ಪ್ರಗತಿಗಾಗಿ ಪ್ರಯತ್ನಿಸಿ ಎಲ್ಲ ವರ್ಗದ ಜನರ ಜೀವನದ ಮಟ್ಟವನ್ನು ಸುಧಾರಿಸುವಿರೆಂದಾಶಿಸುತ್ತೇನೆ’’ ಎಂದು ಹಾರೈಸಿದ್ದಲ್ಲದೆ ಅವರು ಹಿಂದೀಯರಲ್ಲಿ ಕುಶಾಗ್ರಬುದ್ಧಿಯ ಮುಂದಾಳುಗಳೂ ಉದ್ಯೋಗಿಗಳ ಪ್ರಗತಿಗೆ ಅವಶ್ಯವಿರುವ ಪ್ರಾಕೃತಿಕ ಸಂಪತ್ತಿಯೂ ಹೇರಳವಾಗಿರುವದನ್ನುಲ್ಲೇಖಿಸಿ ‘‘ನಿಮಗೆ ಅಮೇರಿಕೆಯ ತಜ್ಞರ ಸಹಾಯಬೇಕಿದ್ದರೆ... ಅಂಥ ಸಹಾಯವನ್ನು ದೊರಕಿಸಿಕೊಡಲು ಪ್ರಯತ್ನಿಸುವ’’ ದಾಗಿ ಮಾತುಕೊಟ್ಟರು. ಅದಕ್ಕೆ ‘‘ನಿಮಗೆ ನಮ್ಮ ನೆರವುಬೇಕಾದರೆ ಮಾತ್ರ ನಾವು ಸಂಕೋಚದಿಂದ ನೆರವಾಗುವೆವು. ತಾವಾಗಿಯೆ ಅತುರದಿಂದ ಮುಂದೆಬಿದ್ದು ನೆರವಾಗಲಾರೆವು... ನಮಗೆ ನಿಮ್ಮ ರಾಷ್ಟ್ರದ ಮೇಲೆ ಆರ್ಥಿಕ ಇಲ್ಲವೆ ರಾಜಕೀಯ ವರ್ಚಸ್ಸು ಹೇರುವ ಇಚ್ಛೆಯಿಲ್ಲ’’ ಎಂಬ ಅಭಯವೂ ಅವರಿಂದ ದೊರಕಿದೆ. ಆದರೆ ಸಮಕಾಲೀನ ಇತಿಹಾಸದಿಂದ ಪಾಠಕಲಿತು ಈ ವಾಗ್ದಾನವನ್ನು ನಾವು ಸತರ್ಕರಾಗಿಯೆ ಸ್ವೀಕರಿಸಬೇಕಾಗುವದು.

ಸಂಸ್ಥಾನಗಳ ಪ್ರಶ್ನೆ

ಹಿಂದೀ ಸ್ವಾತಂತ್ರ್ಯಮಸೂದೆಯೇನು ದೋಷರಹಿತವಾದುದಲ್ಲ. ಹಲವು ಲೋಪಗಳು ತೊಡಕುಗಳು ಅದರಲ್ಲಿ ಇದ್ದೇ ಇವೆಯೆಂದು ಸರದಾರರು ಒಪ್ಪಿದ್ದಾರೆ. ಅದರೂ ಹಿಂದುಸ್ಥಾನದ ವಿಚ್ಛೇದವಾದುದೊಂದಲ್ಲದೆ . ಅದರಲ್ಲಿರುವ ಇನ್ನೊಂದು ದೊಡ್ಡ ದೋಷವೆಂದರೆ ಸಂಸ್ಥಾನಗಳ ಪ್ರತಿಗಾಮಿ ಅಧಿಪತಿಗಳಿಗೆ ಪಾಯಸದಲ್ಲಿನ ಪಾಪೋಸುಗಳಾಗುವ ಅವಕಾಶ ಕೊಟ್ಟದ್ದು. ಸಂಸ್ಥಾನಗಳ ಮೇಲಿನ ವರಿಷ್ಠಾಧಿಕಾರವನ್ನು ಭಾವೀ ಹಿಂದುಸ್ಥಾನ ಸರಕಾರಕ್ಕೆ ವರ್ಗಾಯಿಸದೆ ಅದು ‘‘ಅದೃಶ್ಯ’’ವಾಗುವದೆಂದು ಸಾರಿ ಬ್ರಿಟಿಶ ಸರಕಾರ ಸ್ವತಂತ್ರ ಹಿಂದುಸ್ಥಾನದ ದಾರಿಯಲ್ಲಿ ಮುಳ್ಳುಗಳನ್ನು ನಟ್ಟಿದೆ. ಡಾ. ಅಂಬೇಡಕರರಂಥ ಬ್ರಿಟಿಶ ಪಕ್ಷಪಾತಿಗಳೆನಿಸಿಕೊಂಡವರು ಕೂಡ ಈ ವಿಷಯದಲ್ಲಿ ಕ್ಷೋಭೆಗೊಂಡು ‘‘ಭಾರತವನ್ನು ತುಂಡರಿಸಿ ಎರಡು ಸಾಮಂತ ರಾಜ್ಯಗಳನ್ನು ನಿರ್ಮಿಸಿದ್ದಕ್ಕೆ ಕಾರಣಗಳಿವೆಯೆಂದು ಬೇಕಾದರೆ ನೆವ ಹೇಳಬಹುದು. ಆದರೆ ವಸಾಹತುಗಳಿಗೂ ಸಂಸ್ಥಾನಗಳಿಗೂ ನಡುವೆ ಭೇದೋಪಾಯದಿಂದ ಜಗಳದ ಬೀಜ ಬಿತ್ತಲು ಎಳ್ಳಷ್ಟು ಕಾರಣವಿದ್ದಿಲ್ಲ. ಇಂಥ ಅಧಿಕಪ್ರಸಂಗತನಕ್ಕೆ ಬ್ರಿಟಿಶರು ಜಾಗತಿಕ ನ್ಯಾಯಮಂಡಲದೆದುರು ಉತ್ತರ ಕೊಡಬೇಕಾದೀತು’’ ಎಂದು ನುಡಿದಿದ್ದಾರೆ. ಹಿಂದುಸ್ಥಾನದಲ್ಲಿ ಆಡಳಿತದ ಐಕ್ಯವನ್ನು ಸಾಧಿಸಿ ಮಹಾಕಾರ್ಯ ಮಾಡಿದೆವೆಂದು ಹೆಮ್ಮೆಪಡುತಿದ್ದ ಬ್ರಿಟಿಶರೇ ಈಗ ಅದಕ್ಕೆ ಸ್ವಾತಂತ್ರ್ಯ ಕೊಡುವ ಮೊದಲು ಅದನ್ನು ತುಂಡು ತುಂಡು ಮಾಡಿ ತಾವು ಬರುವದಕ್ಕೆ ಮೊದಲಿನ ಅನರ್ಥಕಾರಿ ಪರಿಸ್ಥಿತಿಯನ್ನುಂಟು ಮಾಡಿದ್ದಾರೆಂದು ಅವರು ಹೇಳಿದ್ದು ನಿಜವಾಗಿದೆ. ಭಾರತ ಮಂತ್ರಿ ಲಾರ್ಡ ಲಿಸ್ಟೋವೆಲ್ಲರು, ಸಂಸ್ಥಾನಗಳಿಗೆ ಸರ್ವತಂತ್ರ ಸ್ವತಂತ್ರವಾಗಲು ಉತ್ತೇಜನ ಕೊಡುವದಿಲ್ಲವೆಂದು ನುಡಿದದ್ದೇನೋ ನಿಜ. ಅವರು ತಿರುವಾಂಕೂರು, ಹೈದರಾಬಾದುಗಳನ್ನು ಹೆಸರುಗೊಂಡು ಹೇಳಿ, ಅವೂ ಯಾವದೊಂದು ಘಟನಾ ಸಮಿತಿಯನ್ನು ಸೇರಬೇಕೆಂದು ಹಾರೈಸಿದರು. ಆದರೆ ಸರ್ ಸಿ. ಪಿ. ಯವರಂಥ ಈ ವರೆಗೆ ಸ್ವಾಮಿಭಕ್ತರಾಗಿದ್ದು ಈಗ ಒಮ್ಮಿಂದೊಮ್ಮೆ ಸ್ವಾತಂತ್ರ್ಯ ಪಿಪಾಸುಗಳಾದ ಸಂಸ್ಥಾನ ದಿವಾಣರು ಲಿಸ್ಟೋವೆಲ್ಲರಿಗೇ ಬುದ್ಧಿ ಹೇಳಹೊರಟಿದ್ದಾರೆ. ಹೈದರಾಬಾದ ನಿಜಾಮರು ಮಾತಿನಲ್ಲಿ ಕಾಲಹರಣ ಮಾಡದೆ ಒಳಗಿಂದೊಳಗೇ ಸನ್ನಾಹ ಮಾಡುತಿರುವಂತೆ ತೋರುತ್ತದೆ. ನೂರಕ್ಕೆ ೧೨ ರಷ್ಟಿರುವ ಮುಸ್ಲಿಂ-ಅಲ್ಪಸಂಖ್ಯಾಕರ ತಲೆಯಲ್ಲಿ ‘‘ತಾವು ಆಳುವ ವರ್ಗ’’ವೆಂಬ ಭ್ರಾಂತಿಯನ್ನು ತುಂಬಿ, ಕೆಲ ಪ್ರತಿಗಾಮಿ ಹಿಂದೂ ಜಮೀನದಾರ ಮತ್ತು ಸ್ವಾರ್ಥಸಾಧಕರ ಬೆಂಬಲ ಪಡೆದು ಅವರು ಜನ ಸಾಮಾನ್ಯದ ಇಚ್ಛೆಯನ್ನು ತುಳಿಯ ಹೊರಟಿಂತಿದೆ. ವರಂಗಲ್ಲಿನಲ್ಲಿ ನಡೆದ ಜಾತೀಯ ಗಲಭೆಗಳು ಹೆಚ್ಚುಕಡಿಮೆ ಹೀಗೆ ಮಾಡಿಸಿದಂತಿವೆ. ಅದರಿಂದ ಸಾವಿರಾರು ನಿರಾಶ್ರಿತರು ಮನೆ ಮಾರು ಬಿಟ್ಟು ಪಲಾಯನ ಮಾಡಬೇಕಾಯಿತು. ಈಗ ಪಠಾಣ ಸೈನಿಕರನ್ನು ನಿಜಾಮ ಸರಕಾರದವರು ಭರ್ತಿಮಾಡಿಕೊಳ್ಳುತಿದ್ದಾರೆಂದು ವದಂತಿಯಿದ್ದಿದೆ. ಇತ್ತ ಹಿಂದುಸ್ಥಾನ ಪಾಕಿಸ್ಥಾನ ಸರಕಾರಗಳೊಡನೆ ಸಂಧಾನ ಮಾಡಿಕೊಳ್ಳಲಿಕ್ಕಾಗಿ ಅವರು ದಿವಾಣ ಛತ್ತಾರಿ ನವಾಬ ಮತ್ತು ಘಟನಾತ್ಮಕ ಸಲಹೆಗಾರ ಸರ್ ವಾಲ್ಟರ ಮೊಂಕಟನ್ನರೇ ಮೊದಲಾದವರಿಂದೊಡಗೂಡಿದ ಸಮಿತಿಗಳನ್ನೂ ಕಳಿಸಿರುವರು. ಈ ಸಮಿತಿ ವರ್ಹಾಡವನ್ನು ನಿಜಾಮರಿಗಾಗಿ ತಿರುಗಿ ಗಳಿಸಲು ಶಕ್ತಿ ಮೀರಿ ಹೋಡೆದಾಡಬಹುದು. ಅಲ್ಲದೆ ಮಚ್ಛಲೀಪಟ್ಟಣ ಬಂದರವನ್ನು ದೊರಕಿಸಿಕೊಳ್ಳುವದು ಸುಂಕದಿಂದ ಮುಕ್ತತೆಯನ್ನು ಬೇಡುವದು ಮೊದಲಾದ ಪ್ರಯತ್ನಗಳೂ ನಡೆಯಬಹುದು. ಆದರೆ ಸರದಾರ ಪಟೇಲರು ವರ್ಹಾಡವನ್ನು ಒಕ್ಕೂಟಕ್ಕೆ ಉಳಿಸಿಕೊಳ್ಳಲು ಶತಪ್ರಯತ್ನ ಮಾಡದಿರರು.

ವರ್ಹಾಡದ ಭವಿತವ್ಯ

ಈ ವರ್ಹಾಡ ಪ್ರಶ್ನೆಯೂ ರಾಜಕೀಯ ರಂಗದಲ್ಲಿ ಸಾಕಷ್ಟು ಗಡಿಬಿಡಿಯನ್ನೆಬ್ಬಿಸಿದೆ. ಅಗಸ್ಟ ೧೫ ಕ್ಕೆ ವರಿಷ್ಠಾಧಿಕಾರ ಮಾಯವಾಗಿ ಸಂಸ್ಥಾನಿಕರೊಡನೆ ಬ್ರಿಟಿಶರು ಮಾಡಿಕೊಂಡ ಒಪ್ಪಂದ ಇಲ್ಲದಂತಾದೊಡನೆ ಈ ೪೦ ಲಕ್ಷ ಜನರಿಂದೊಡಗೂಡಿದ ಭೂಭಾಗದ ರಾಜಕೀಯ ಸ್ಥಾನಮಾನ ತ್ರಿಶಂಕುವಿನಂತಾಗುವದು. ವರ್ಹಾಡ ಪ್ರಾಂತ ಈ ಸ್ವಾತಂತ್ರ್ಯ ಮಸೂದೆಯಲ್ಲಿ ಹಿಂದೀ ಸಾಮಂತ ಸರಕಾರದೊಳಗೆ ಸೇರಿಸಲ್ಪಟ್ಟಿಲ್ಲ. ಆದರೆ ಅದು ಈಗ ಮಧ್ಯಪ್ರಾಂತದ ಭಾಗವಾಗಿರುವದರಿಂದ ಅದು ನಿಜಾಮರ ಸ್ವಾಧೀನಕ್ಕೆ ತಂತಾನೆ ಹೋಗಲಾರದು. ಘಟನಾ ಸಮಿತಿಯಲ್ಲೇನೋ ಅದರ ನಾಲ್ವರು ಪ್ರತಿನಿಧಿಗಳಿರುವರು. ಆದರೆ ಪ್ರತ್ಯಕ್ಷ ಪರಿಸ್ಥಿತಿ ಬೇರೆ ಇರುವದರಿಂದ ಅದರ ಬಗ್ಗೆ ನಿಜಾಮರೊಡನೆ ಅಗಸ್ಟ ೧೫ ರೊಳಗೆ ಒಪ್ಪಂದ ಮಾಡಿಕೊಳ್ಳಬೇಕಾಗುವದೆಂದೂ ಅದು , ಸಾಧ್ಯವಾಗದಿದ್ದರೆ ಅದು ನಡುವೆ ನೇತಾಡಬೇಕಾಗುವದೆಂದೂ ಸುಧಾರಣ ಕಮೀಶನರರಾದ ವಿ. ಪಿ. ಮೆನೋನರು ಹೇಳಿದರು. (ಶ್ರೀ ಮೆನೋನರು ಈ ಮಸೂದೆಯ ಸಂಬಂಧದಲ್ಲಿ ಹಿಂದುಸ್ಥಾನ ಸರಕಾರದ ಪರವಾಗಿ ಬಹಳ ಕೆಲಸ ಮಾಡಿದವರು). ಅಗಸ್ಟ ೧೫ ರ ನಂತರ ವರ್ಹಾಡದ ಜನರೇ ತಮ್ಮ ಭವಿತವ್ಯ ನಿರ್ಣಯಿಸುವರೆಂದು ಸರದಾರ ಪಟೇಲರು ಹೇಳಿದರೂ ನಿಜಾಮರೊಡನೆ ಒಪ್ಪಂದ ಬೇಕೆಂಬದನ್ನು ಅಲ್ಲಗಳೆಯಲಿಲ್ಲ. ಡಾ. ಅಂಬೇಡಕರರಾದರೋ ಅದಕ್ಕಿಂತಲೂ ಮುಂದೆ ಹೋಗಿ ಹಿಂದೀ ಸ್ವಾತಂತ್ರ್ಯ ಮಸೂದೆಯ ಕಲಮುಗಳನ್ವಯ ಅಗಸ್ಟ ೧೫ ರ ನಂತರ ಹೊಸ ಒಪ್ಪಂದವಾಗುವ ವರೆಗೆ ವರ್ಹಾಡ ಹೀಗೆಯೆ ಉಳಿಯುವದೆಂದು ಹೇಳಬರುವದಿಲ್ಲೆಂದೂ (ಅರ್ಥಾತ್ ನಿಜಾಮರೇ ಅದಕ್ಕೆ ತಂತಾನೆ ಹಕ್ಕುದಾರರಾಗುವರೆಂದು) ಭಯಪಟ್ಟಿದ್ದಾರೆ. ಮದ್ರಾಸಿನ ಅಡ್ವೋಕೇಟ ಜನರಲ್ಲರಾಗಿದ್ದ ಸರ್ ಅಲ್ಲಾದಿ ಕೃಷ್ಣಸ್ವಾಮಿಯವರೂ ವರ್ಹಾಡವನ್ನು ಸ್ಪಷ್ಟವಾಗಿ ಹಿಂದೀ ಒಕ್ಕೂಟದಲ್ಲಿ ಸೇರಿಸುವ ಕಲಮುಗಳನ್ನು ಸ್ವಾತಂತ್ರ್ಯ ಮಸೂದೆಯಲ್ಲಿ ಸೇರಿಸುವಂತೆ ಬ್ರಿಟಿಶ ಸರಕಾರಕ್ಕೆ ಒತ್ತಾಯ ಮಾಡಬೇಕೆಂದು ಸೂಚಿಸಿದ್ದಾರೆ. ಆದರೆ ಶ್ರೀ ಎಂ. ಎಸ್. ಅಣೆಯವರು ಡಾ. ಅಂಬೇಡಕರ ಹಾಗು ಸರ್ ಅಲ್ಲಾದಿಯವರ ಅಭಿಪ್ರಾಯವನ್ನು ಅಲ್ಲಗಳೆದು ಅಗಸ್ಟ ೧೫ ರ ನಂತರ ವರ್ಹಾಡ ನಿಜಾಮರ ಅಧೀನಕ್ಕೆ ತಂತಾನೇ ಹೋಗಲಾರದೆಂದು ಹೇಳಿ ಒಂದು ವೇಳೆ ನಿಜಾಮರು ಬಲಪ್ರಯೋಗದಿಂದ ಅದನ್ನು ಆಕ್ರಮಿಸಲೆಳಸಿದರೆ ಹಿಂದುಸ್ಥಾನ ಸರಕಾರ ಅದನ್ನು ನೋಡುತ್ತ ತೆಪ್ಪಗೆ ಕುಳ್ಳಿರಲಾರದೆಂದಿದ್ದಾರೆ.


ಸರದಾರರ ಕರೆ

ಕೆಲ ಸಂಸ್ಥಾನಗಳು ಹೀಗೆ ಅತಂತ್ರದ ಧೋರಣ ವಹಿಸಿದ್ದರೂ ಬಹುಸಂಖ್ಯಾಕ ಸಂಸ್ಥಾನಗಳು ಘಟನಾ ಸಮಿತಿಯಲ್ಲಿ ಭಾಗವಹಿಸಲು ಮುಂದೆ ಬಂದಿವೆ. ನಾಳೆ ಸೇರಲಿರುವ ಘಟನಾ ಸಮಿತಿಯ ಅಧಿವೇಶನದಲ್ಲಿ ಒಟ್ಟು ಸಂಸ್ಥಾನಗಳಿಗೆ ದೊರೆತ ೯೩ ಸ್ಥಾನಗಳಲ್ಲಿ ೬೦ ಸ್ಥಾನಗಳ ಸದಸ್ಯರು ಭಾಗವಹಿಸುವರು. ಈಗ ಹೊರಗುಳಿದಿರುವ ಸಂಸ್ಥಾನಗಳಲ್ಲಿ ಪ್ರಮುಖವೆಂದರೆ ಕಾಶ್ಮೀರ (೪ ಸ್ಥಾನ), ಹೈದರಾಬಾದ (೧೬ ಸ್ಥಾನ), ತಿರುವಾಂಕೂರು (೬ ಸ್ಥಾನ) ಇವು ಪ್ರಧಾನ. ಇವಲ್ಲದೆ ಭೋಪಾಳ, ಇಂದೂರು, ಭವಾಲಪುರ ಮೊದಲಾದ ಕೆಲ ಸಂಸ್ಥಾನಗಳು ಡೋಲಾಯಮಾನ ಚಿತ್ತದಿಂದಿವೆ. ತಿರುವಾಂಕೂರಿನ ಸರ್ ಸಿ. ಪಿ. ಯವರು ತಮ್ಮ ಸ್ವಾತಂತ್ರ್ಯಕ್ಕೆ ಬ್ರಿಟಿಶ, ಅಮೇರಿಕನ್ ಮನ್ನಣೆ ದೊರಕಿಸಿಕೊಳ್ಳಲಿಕ್ಕೋ ಏನೋ ರಶಿಯಾದೊಡನೆ ರಾಯಭಾರ ಒಪ್ಪಂದ ಮಾಡಿಕೊಂಡ ಒಕ್ಕೂಟದಲ್ಲಿ ತಾವು ಸೇರಲಾರೆವೆಂದು ರಶಿಯನ್ ಭೂತವನ್ನು ಮುಂದೆ ಮಾಡಿದ್ದಾರೆ! ಇರಲಿ. ಬಹುಸಂಖ್ಯಾಕ ಸಂಸ್ಥಾನಗಳು ಒಕ್ಕೂಟ ಸೇರಲು ನಿರ್ಧರಿಸಿದ್ದರಿಂದ ಕಾಂಗ್ರೆಸ್ ಮುಂದಾಳುಗಳು ಸಂಸ್ಥಾನಗಳ ಬಗ್ಗೆ ಹೆಚ್ಚು ನಯದಿಂದ ಮಾತಾಡತೊಡಗಿದ್ದಾರೆ. ಸರದಾರ ಪಟೇಲರು ಈಚೆಗೆ ಹೊರಡಿಸಿದ ಹೇಳಿಕೆಯೊಂದರಲ್ಲಿ ಮನವೊಲಿಸುವ ಮಾತುಗಳಲ್ಲಿ ಪರಸ್ಪರ ಹಿತಕ್ಕಾಗಿಯೂ ಸಾಮೂಹಿಕ ಶಕ್ತಿವೃದ್ಧಿಗಾಗಿಯೂ ಸಂಸ್ಥಾನಗಳು ಒಕ್ಕೂಟವನ್ನು ಸೇರಬೇಕೆಂದು ಬಿನ್ನವಿಸಿದ್ದಾರೆ. ಪರಿಹಂಚಾಗಿದ್ದುದರಿಂದಲೇ ಹಿಂದುಸ್ಥಾನ ಪರದಾಸ್ಯಕ್ಕೊಳಗಾಗಬೇಕಾಯಿತು. ಇನ್ನೊಮ್ಮೆ ಅದೇ ತಪ್ಪನ್ನು ಮಾಡೋಣ ಬೇಡ. ಸಂಸ್ಥಾನಗಳಿಗೆ ಸ್ವತಂತ್ರ ಹಿಂದುಸ್ಥಾನದಲ್ಲಿ ಸ್ವಾಯತ್ತತೆಯನ್ನು ಕೊಡಲಾಗುವದೆಂದು ಅವರು ಆಶ್ವಾಸನ ಕೊಟ್ಟರು. ಡಾ. ಪಟ್ಟಾಭಿಯವರೂ ತಿರುವಾಂಕೂರಿಗೆ ಇದೇ ಬಗೆಯ ಬಿನ್ನಹ ಮಾಡಿಕೊಂಡಿದ್ದಾರೆ. ಇದರ ಪರಿಣಾಮ ಏನಾಗುವದೋ ನೋಡಬೇಕು.

ಗಡಿನಾಡ ವಿವಾದ

ಜನಮತಗ್ರಹಣ ಪ್ರದೇಶಗಳಲ್ಲೊಂದಾದ ಅಸಾಮದ ಸಿಲ್ಹೆಟ ಜಿಲ್ಹೆಯಲ್ಲಿ ಅಂಥಿಂಥ ಅನಾಹುತವಿಲ್ಲದೆ ಮತಗ್ರಹಣ ಮುಗಿದಿದೆ. ಅಲ್ಲಿಯ ಜನರಲ್ಲಿ ಬಹುಸಂಖ್ಯಾಕರು ಅಸಾಮದಲ್ಲಿ ಉಳಿಯಲು ಮತಕೊಟ್ಟಿದ್ದಾರೆಂದೂಹಿಸಲಾಗಿದೆ. ಇನ್ನೊಂದು ಪ್ರದೇಶವಾದ ವಾಯವ್ಯ ಗಡಿನಾಡಿನ ಪ್ರಾಂತದಲ್ಲಿಯೂ ಮತಗ್ರಹಣ ಪ್ರಾರಂಭವಾಗಿದೆ. ಅಲ್ಲಿ ಶಾಂತಿ ರಕ್ಷಣೆಗಾಗಿ ಬಿಗಿಯಾದ ಸೈನ್ಯವ್ಯವಸ್ಥೆಯಿರುವದರಿಂದ ಉಲ್ಲೇಖಾರ್ಹವಾದ ರಕ್ತಪಾತವಾಗಿಲ್ಲ. ಆದರೆ ಕಾಂಗ್ರೆಸ್ಸು ಮತಗ್ರಹಣವನ್ನು ಬಹಿಷ್ಕರಿಸಿದ್ದರ ಫಲವಾಗಿ ಹಿಂದುಗಳಾಗಲಿ ಸೀಖರಾಗಲಿ ಮತಹಾಕಲು ಹೋಗಲೇ ಇಲ್ಲ. ಇದರಿಂದ ಹಲಕೆಲವು ಮತಗಟ್ಟೆಗಳು ಸರ್ವಥಾ ಶೂನ್ಯವಾಗಿದ್ದವು. ಇದಲ್ಲದೆ ಮುಸ್ಲಿಂ ಲೀಗ್ ಪಕ್ಷದವರು ಪಾಕಿಸ್ಥಾನಕ್ಕೆ ವಿರುದ್ಧ ಮತಹಾಕುವವರನ್ನು ಜೀವಸಹಿತ ಬಿಡಕೂಡದೆಂದು ಮುಸ್ಲಿಮರಿಗೆ ಬೋಧಿಸುತಿದ್ದಾರೆಂದು ಸುದ್ದಿ ಬಂದಿದೆ. ಕಾಂಗ್ರೆಸ್ಸಿನ ಬಹಿಷ್ಕಾರವನ್ನು ವಿವರಿಸುತ್ತ, ಈ ಮೂಲಕ ಕಾಂಗ್ರೆಸ್ಸು ಒಪ್ಪಂದ ಮುರಿದಂತಾಗಿಲ್ಲವೆಂದೂ ಅದು ಗಡಿನಾಡಿನಲ್ಲಿ ಜಾತೀಯ ತಳಹದಿಯ ಮೇಲೆ ಮತಗ್ರಹಣ ಮಾಡಲು ಎಂದೂ ಒಪ್ಪಿದ್ದಿಲ್ಲವೆಂದೂ ಸಾರಿದ್ದಾರೆ. ಪಠಾಣಿಸ್ಥಾನದ ಬೇಡಿಕೆಯೇನೂ ಹೊಸದಲ್ಲವೆಂದು ಅವರು ಹೇಳಿದರು. ೧೯೩೦ರಿಂದಲೇ ಅದು ಇತ್ತು. ಸ್ವಾಯತ್ತ ಗಡಿನಾಡಿನ ಪ್ರಾಂತಕ್ಕೆ ಹಿಡಿದು ಹೋಗುವ ಅಧಿ[illegible]ತ್ತರೆ ತಾವು ಪಾಕಿಸ್ಥಾನದಲ್ಲಿ ಸೇರಲು ಸಿದ್ಧರಿದ್ದುದಾಗಿಯೂ ಜಿನ್ನಾರು ಅದಕ್ಕೊಪ್ಪಲಿಲ್ಲವಾಗಿಯೂ ಅವರು ಹೇಳಿದರು. ಪಂ. ಜವಾಹರಲಾಲರು ‘‘ಮ್ಯಾಂಚೆಸ್ಟರ ಗಾರ್ಡಿಯನ್’’ ಪತ್ರಿಕೆಗೆ ಒಂದು ಪತ್ರ ಬರೆದು ಪಠಾಣಿಸ್ಥಾನದ ಬೇಡಿಕೆ ಸಾರ್ವಭೌಮ ರಾಜ್ಯದ ಬೇಡಿಕೆಯಲ್ಲವೆಂದು ಸ್ಪಷ್ಟಗೊಳಿಸಿದ್ದಾರೆ. ಈ ಮತಗಣನೆಯಲ್ಲಿ ತಾವು ಭಾಗವಹಿಸಿದ್ದರೆ ತಾವು ಖಂಡಿತವಾಗಿ ಯಶಸ್ವಿಯಾಗುತಿದ್ದೆವು. ಆದರೆ ಅದರಿಂದ ರಕ್ತಪಾತ ಸಂಭವಿಸಿ ಅಲ್ಪಸಂಖ್ಯಾಕರ ಜೀವಿತವಿತ್ತಗಳು ನಾಶವಾಗುತಿದ್ದವು, ಎಂದು ಹೇಳಿ ಗಡಿನಾಡ ಮುಖ್ಯಮಂತ್ರಿ ಡಾ. ಖಾನಸಾಹೇಬರು ಮತಗಣನೆಯಲ್ಲಿ ಒಟ್ಟು ಮತದಾರ ಸಂಖ್ಯೆಯಲ್ಲಿ ೩೦ ರಷ್ಟು ಜನರು ಪಾಕಿಸ್ಥಾನದ ಪರವಾಗಿ ಮತವಿತ್ತರೆ ತಾವು ರಾಜೀನಾಮೆ ಕೊಡುವದು ವಿಹಿತವಾಗುವದೆಂದು ಅಭಿಪ್ರಾಯಪಟ್ಟರು. ಹಾಗಾದರೆ ತಿರುಗಿ ಶಾಸನ ಸಭೆಗಳಿಗೆ ಚುನಾವಣೆಗಳಾಗಬೇಕಾಗುವದು. ಆಗ ಮತ್ತೆ ಬಹುಮತ ಗಳಿಸುವ ಧೈರ್ಯ ಖಾನಬಂಧುಗಳಿಗಿದೆ. ಅಂಥ ಪ್ರಸಂಗದಲ್ಲಿ ಮತ್ತೆ ಗಡಿನಾಡು ಖಾನಸಾಹೇಬರ ಪಕ್ಷದಲ್ಲಿನ ಮುಖ್ಯಾಗದಿರದು.

(೧೩ ನೇ ಪುಟಕ್ಕೆ)



[illegible] ...ಸ್ಥಾಪಕ ...ತ್ಸವವೂ ಹೈಸ್ಕೂಲಿನ ಜೂನ ೨೯ರಲ್ಲಿ ...ಂಜಿನ ಸದಸ್ಯ ...ಕೃಷ್ಣ ಎಂ. ಎ. ಅವರ [illegible] ...ಶಾಸ್ತ್ರಿ ಪಠಾಣ ...ದಾಗ ಮುಂಬಯಿ ಗೀರ ಸಭಾಭವನದಲ್ಲಿ [illegible] ಪ್ರಾಂತಿಕ ಕಾಂ. ಕಮಿಟಿಯ ಅಧ್ಯಕ್ಷರೇ ಮೊದಲಾದ ಮಾನ್ಯರು ಹಾಜರಿದ್ದು ವಂ... ನ್ನಾಚನ, ನಾಟಕಾಭಿನಯಾದಿಗಳು ನಡೆದುದಲ್ಲದೆ ಸಭಾಧ್ಯಕ್ಷರು ೬೫೦ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿದ್ಯಾಭ್ಯಾಸ ಮಾಡಿಸುವ ನಾಯಿಟ ಹೈಸ್ಕೂಲಿನ ಕಾರ್ಯವನ್ನು ಪ್ರಶಂಸಿಸಿ ಮಂಡಳಿಯ ವಿದ್ಯಾ ನಿಧಿಗೆ ೧೦೦೧ ರೂಪಾಯಿಗಳನ್ನು ದಾನಮಾಡಿದರು.

ಮುಂಬಯಿಯಲ್ಲಿ ಪ್ರಾರಂಭವಾಗಿದ್ದ, ೯ ದಿನಗಳಿಂದ ನಡೆದ ೨೫೦೦೦ ರೈಲಿನ ಕೆಲಸಗಾರರ ಸಂಪು ಇಂದು ಹಿಂತೆಗೆದುಕೊಳ್ಳಲ್ಪಟ್ಟಿತು. ಜೂನ ೩೦ರಿಂದ ಬೀಗ ಹಾಕಿದ್ದ ನಾಲ್ಕೂ ರೇಲ್ವೆ ವರ್ಕಶಾಪುಗಳು ಪುನಃ ಪ್ರಾರಂಭವಾಗುವವು. ರೈಲಿನ ಅಧಿಕಾರಿಗಳು ವರ್ಕಶಾಪುಗಳನ್ನು ಬಂದುಮಾಡಿದ ಆಜ್ಞೆಯನ್ನು ಹಿಂತೆಗೆದುಕೊಳ್ಳಲು ಒಪ್ಪಿದ್ದಾರೆ. ಕೆಲಸಗಾರರು ಸೋಮವಾರದಿಂದ ಕೆಲಸ ಪ್ರಾರಂಭಿಸಿದ್ದಾರೆ.

ಮುಂಬಯಿಯ ರಾಮನಾರಾಯಣ ರೂಯಿಯಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ವಿ. ಕೆ. ಭಾಗವತರು ಜುಲೈ ೫ರಲ್ಲಿ ಪುಣೆಯ ಸರ್ ಪರಶುರಾಮಭಾವು ಕಾಲೇಜಿನಲ್ಲಿ ಕೂಡಿದ ಶಿಕ್ಷಣ ಪ್ರಸಾರಕ ಮಂಡಳಿಯ ಆಜೀವ ಸಭಾಸದರ ಸಭೆಗೆ ಬಂದಾಗ ಹೃದಯ ವಿಕಾರದಿಂದ ಒಮ್ಮಿಂದೊಮ್ಮೆ ನಿಧನ ಹೊಂದಿದರು.

ಪುಣೆಯ ಹಿಂದೂ ಮಹಾಸಭೆಯ ಮುಖಂಡರೂ 'ಅಗ್ರಣಿ' ಎಂಬ ಮರಾಠಿ ದೈನಿಕ ಪತ್ರಿಕೆಯ ನಿರ್ದೇಶಕರೂ ಆದ ಶ್ರೀ ಎನ್. ಡಿ. ಆಪ್ಟೆಯವರನ್ನು ಜುಲೈ ನಾಲ್ಕರ ರಾತ್ರಿ ಬಂಧಿಸಿದರು. ಕೆಲವು ದಿನಗಳ ಹಿಂದೆ ನಗರದಲ್ಲಿ ಬಾಂಬು ಸಿಡಿದು ೧೧ ವರ್ಷದ ಹುಡುಗನೊಬ್ಬನು ಮೃತನಾಗಿದ್ದನು. ಆ ಬಾಂಬಿನ ಸಿಡಿತಕ್ಕೆ ಶ್ರೀ ಆಪ್ಟೆಯವರ ಸಂಬಂಧವಿದೆಯೆಂಬ ಸಂಶಯವೇ ಅವರ ಬಂಧನದ ಕಾರಣ. ಆದರೆ ಮನೆ ಝಡತಿಯಾದಾಗ ಸಂಶಯಾಸ್ಪದ ವಸ್ತುವೊಂದೂ ಸಿಗಲಿಲ್ಲ.

ವನ್ಯ ಮೃಗಗಳಿಂದ ಬೆಳೆಗಳನ್ನು ರಕ್ಷಿಸಲು ಮುಂಬಯಿ ಸರಕಾರದವರು ಅಹಮ್ಮದಾಬಾದಿನ ವಿರಮಗಾಂವ ತಾಲೂಕಿನಲ್ಲಿ 'ಶಿಕಾರಿ' ಅಧಿಕಾರಿಯನ್ನು ನಿಯಮಿಸಿದ್ದು ಅವನು ಹಳ್ಳಿಗಳಲ್ಲಿ ಬಂದೂಕು ಹೊಡೆಯಲು ಕಲಿಸುವ ಶಾಲೆಗಳನ್ನು ತೆರೆಯುವನೆಂದು ಸುದ್ದಿ.

ಹಿಂದುಸ್ತಾನದ ವಿಚ್ಛೇದನೆಯನ್ನೊಳಗೊಂಡ ಚಕ್ರವರ್ತಿ ಸರಕಾರದ ಜೂನ ೩ನೆಯ ತಾರೀಕಿನ ಯೋಜನೆಯನ್ನು ನಿಷೇಧಿಸಲು ಮಹಾಸಭೆಯ ಅಪ್ಪಣೆಯ ಪ್ರಕಾರ ಜುಲೈ ೩ರರಲ್ಲಿ ಸರಕಾರಿ ಅಪ್ಪಣೆಯನ್ನುಲ್ಲಂಘಿಸಿ ಮೆರವಣಿಗೆ ಹೊರಡಿಸಿದ್ದಕ್ಕಾಗಿ ಪೋಲೀಸರು ಮುಂಬಯಿ ಪ್ರಾಂತಿಕ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಎ. ಎಚ್. ಗದ್ರೆ ಹಾಗೂ ಮಹಾಸಭೆಯ ೧೦ ಸ್ವಯಂ ಸೇವಕರನ್ನು ಬಂಧಿಸಿದರು.

ಯರವಡಾ ತುರಂಗದಲ್ಲಿ ಸ್ಥಾನಬದ್ಧರಾಗಿರುವ ಪುರೋಗಾಮಿ ಪಕ್ಷದ ೬ ಕೈದಿಗಳು ತಮ್ಮ ಸಂಕಷ್ಟಗಳನ್ನು ಕೂಡಲೆ ನಿವಾರಿಸದಿದ್ದಲ್ಲಿ ಅನ್ನತ್ಯಾಗ ಕೈಕೊಳ್ಳುವೆವೆಂದು ಮುಂಬಯಿ ಸರಕಾರದ ಗೃಹಮಂತ್ರಿಗಳಿಗೆ ತಿಳಿಸಿದರೆಂದು ಗೊತ್ತಾಗಿದೆ.

ಸಿಂಧ

ಪಂಜಾಬ ಬಂಗಾಲಗಳ ಗಡಿನಿರ್ಣಯ ಸಮಿತಿಯ ಅಧ್ಯಕ್ಷರಾದ ಸರ್ ಸಿರಿಲ್ ರ್‍ಯಾಡಕ್ಲಿಫರು ಜುಲೈ ೮ರಲ್ಲಿ ವಿಮಾನದಿಂದ ಕರಾಚಿಗೆ ಬಂದು ದಿಲ್ಲಿಗೆ ತೆರಳಿದರು; ಮತ್ತು ಗಡಿನಿರ್ಣಯ ಸಮಿತಿಯ ಕೆಲಸವು ಎರಡು ತಿಂಗಳಲ್ಲಿ ಮುಗಿಯಬಹುದೆಂದು ಅಭಿಪ್ರಾಯಪಟ್ಟರು.

ಪಾಕಿಸ್ತಾನದ ರಾಜಧಾನಿಯಾದ ಕರಾಚಿಯಲ್ಲಿ ಆಕಾಶವಾಣಿಯ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಸಿಂಧ ಸರಕಾರದವರು ಸಿದ್ಧತೆ ನಡೆಸುತ್ತಿದ್ದಾರೆ.

ಸಿಂಧ ಬ್ಯಾಂಕುಗಳಿಂದ ಕಳೆದ ಕೆಲವು ದಿನಗಳಲ್ಲಿ ೬ ಕೋಟಿ ರೂಪಾಯಿಗಳನ್ನು ಹೊರಗೆ ಕಳುಹಲಾಗಿದೆಯೆಂಬೂ ಕೆಲವೊಂದು ಜನರು ಪಾಕಿಸ್ತಾನ ಸರಕಾರವು ಬ್ಯಾಂಕುಗಳಲ್ಲಿದ್ದ ಹಣವನ್ನು ಜಪ್ತಮಾಡಬಹುದೆಂದು ಹೇಳಿದ ಹೆದರಿಕೆಯೇ ಇದಕ್ಕೆ ಕಾರಣವೆಂದೂ ಈ ಹೆದರಿಕೆಯು ಸಂಪೂರ್ಣ ನಿರಾಧಾರವಾದುದೆಂದೂ ಜೂನ ೬ರಲ್ಲಿ ಸಿಂಧದ ಸರಕಾರೀ ಪತ್ರಾರಕೂ ಹೇಳಿದರು.

ಹೊಸದಿಲ್ಲಿ

ಈಗ ಹೊಸದಿಲ್ಲಿಯಲ್ಲಿರುವ ಇಂಡೋನೇಶಿಯ ವ್ಯಾಪಾರಿ ಶಿಷ್ಟಮಂಡಲದ ಬಿನ್ನಹದ ಮೇರೆಗೆ ಇಂಡೋನೇಶಿಯದ ಸದ್ಯದ ವಿದೇಶ ಮಂತ್ರಿಗಳಾದ ಡಾ. ಹಾ ಜಿ ಸಲೀಮರು ಭಾರತಕ್ಕೆ ಬರಲಿದ್ದಾರೆಂದು ಗೊತ್ತಾಗಿದೆ.

ಮುಸ್ಲಿಂಲೀಗ ಕಾರ್ಯದರ್ಶಿಗಳಾದ ಲಿಯಾಖತ ಅಲ್ಲಿಖಾನರು ಒಂದು ಪ್ರಕಟನೆ ಹೊರಡಿಸಿ ಮುಸ್ಲಿಮರಿಗೆ ಬ್ಯಾ. ಜಿನ್ನಾರವರ ಜೂನ ೧೬ರ ಪ್ರಕಟನೆಯನ್ನು ಗಮನಕ್ಕೆ ತಂದುಕೊಟ್ಟು ಪಾಕಿಸ್ತಾನ ಸ್ಥಾಪನೆಗೆ ಬೇಕಾದ ಹಣವನ್ನು ಕೊಡಲು ಬಿನ್ನವಿಸಿದ್ದಾರೆ.

ಜುಲೈ ೮ ರಲ್ಲಿ ಹೊಸದಿಲ್ಲಿಯ ಕೌನ್ಸಿಲ ಭವನದೆದುರು ಮತಪ್ರದರ್ಶನ ನಡೆಸಿದ ಸ್ವಾಮಿ ಕರಪತ್ರಿಜಿ ಮತ್ತು ಬೇರೆ ೧೬ ಸಾಧುಗಳನ್ನು ಬಂಧಿಸಲಾಗಿದೆ.

ಸರ್ವ ಹಿಂದೀಯರು ಹಾಗೂ ಅವರೊಡನೆ ಸ್ವಾತಂತ್ರ್ಯದ ಹೋರಾಟದಲ್ಲಿ ದುಡಿದವರು ಅನರ್ಥದ ನಿಜವಾದ ಚಿತ್ರವನ್ನು ಅರಿತುಕೊಂಡು ತಮಗೆ ಸೈನ್ಯವೇ ಬೇಡವೆಂದಾಗಲಿ ಇಲ್ಲವೆ ಕನಿಷ್ಠ ಪಕ್ಷ ಒಕ್ಕೂಟದಲ್ಲಿಯ ಅಥವಾ ಪಾಕಿಸ್ತಾನದಲ್ಲಿಯ ಮುಸಲ್ಮಾನ ಬಾಂಧವರ ವಿರುದ್ಧ ಸೈನ್ಯವನ್ನು ಉಪಯೋಗಿಸಲಾರೆವೆಂದಾಗಲಿ ಹೇಳಲಾರರೇ? ಎಂದು ಮಹಾತ್ಮರು ಪ್ರಾರ್ಥನೋತ್ತರ ಭಾಷಣದಲ್ಲಿ ಸೈನ್ಯದ ವಿಭಜನೆಯನ್ನು ಕುರಿತು ಪ್ರಶ್ನಿಸಿದರು.

ಕಾಂಗ್ರೆಸ ಮತ್ತು ಮುಸ್ಲಿಂಲೀಗುಗಳ ನಡುವೆ ನಡೆದ ತಾತ್ಪೂರ್ತಿಕ ಒಡಂಬಡಿಕೆಯ ಮಾತುಕತೆಗಳ ಮೇಲಿಂದ ಉಕ್ಕು, ಕಲ್ಲಿದ್ದಲು, ಕಬ್ಬಿಣ ಮೊದಲಾದ ಅವಶ್ಯಕ ಸರಕುಗಳ ಮೇಲಿನ ನಿಯಂತ್ರಣವನ್ನು ಮಾರ್ಚ ೩೧ರ ವರೆಗೆ ಹಾಗೆಯೇ ಇರಿಸಲಾಗುವುದೆಂದು ತಿಳಿದು ಬರುತ್ತದೆ.

ಸ್ಟರ್ಲಿಂಗ ಸಂಗ್ರಹಕ್ಕೆ ಸಂಬಂಧಪಟ್ಟ ದೇಶಗಳಿಗೆ ಹಿಂದುಸ್ತಾನದಿಂದ ದೊಡ್ಡ ಪ್ರಮಾಣದಲ್ಲಿ ಹಣಹೋಗಬಾರದೆಂದು ಹಿಂದುಸ್ತಾನ ಸರಕಾರವು ಆ ದೇಶಗಳಿಗೆ ಮೂಲಧನವನ್ನು ವರ್ಗಾಯಿಸಬಾರದು ಮತ್ತು ಖಾಸಗಿ ವ್ಯವಹಾರದ ನಿಮಿತ್ತ ಕೂಡ ಸರತಿಗೆ ೩೫೦ ಪೌಂಡಿಗಿಂತ (೩೩೦೦ ರೂ) ಹೆಚ್ಚು ಹಣ ಕಳಿಸಬಾರದೆಂದು ಬ್ಯಾಂಕುಗಳಿಗೆ ಆಜ್ಞೆ ವಿಧಿಸಲಾಗಿದೆ.

ಹಿಂದುಸ್ತಾನ ಸರಕಾರದ ಹೊಸ ಆಯಾತ ನಿಯಂತ್ರಣದ ಧೋರಣದ ಮೇರೆಗೆ ಪರದೇಶಗಳಿಂದ ಹಿಂದುಸ್ತಾನಕ್ಕೆ ಮೋಟಾರು, ಮೋಟಾರ ಸಾಯಕಲ್ಲು, ಸಾಯಕಲ್ಲು, ಚಹ, ಮದ್ಯ ಮೊದಲಾದವು ಬರುವುದು ಬಂದಾಗುವದು.

ಮುಸ್ಲಿಂ ಲೀಗಿನವರು ಪಾಕಿಸ್ತಾನ ಘಟನಾ ಸಮಿತಿಯ ಮೊದಲನೆಯ ಅಧಿವೇಶನವನ್ನು ಆಗಸ್ಟ ಮೊದಲನೆಯ ವಾರದಲ್ಲಿ ಹೊಸದಿಲ್ಲಿಯಲ್ಲಿ ಸೇರಿಸಲು ತೊಡಗಿದರೆ ಸಾಮ್ಯವಾದಿ ಪಕ್ಷದವರು ಅದನ್ನು ಪ್ರತ್ಯಕ್ಷವಾಗಿ ತಡೆಯಲು ನಿರ್ಧರಿಸಿದ್ದಾರೆಂದು ತಿಳಿದುಬರುತ್ತದೆ.

ಕರಾಚಿಯು ಇನ್ನು ಮೇಲೆ ಹಿಂದುಸ್ತಾನ ಸರಕಾರಕ್ಕೆ ಹಡಗುಗಳ ಹಾಗೂ ವಿಮಾನಗಳ ಅಭಿವೃದ್ಧಿಗೆ ಸಿಗುವ ಸಂಭವವಿಲ್ಲವಾದುದರಿಂದ ಹಿಂದುಸ್ತಾನ ಸರಕಾರದವರು ನವನಗರವನ್ನು ಬಂದರು ಹಾಗೂ ವಿಮಾನ ಠಾಣೆಯಾಗಿ ಅಭಿವೃದ್ಧಿಗೊಳಿಸುವ ಯೋಜನೆ ನಡೆಸಿರುವರೆಂದು ತಿಳಿಯುತ್ತದೆ. ತಜ್ಞರು ಅದೇ ಯೋಗ್ಯ ಸ್ಥಳವಾಗುವುದೆಂದು ಸೂಚಿಸಿರುವರು.

ಬ್ರಾಹ್ಮಣರ ಸಂಖ್ಯೆ ಅತ್ಯಲ್ಪವಿರುವುದರಿಂದ ತಮ್ಮ ಮಕ್ಕಳಿಗೆ ಶಾಲೆ ಕಾಲೇಜುಗಳಲ್ಲಿ ಇಲ್ಲವೆ ನೌಕರಿಯ ವಿಷಯದಲ್ಲಿ ಅನ್ಯಾಯವಾಗಬಹುದೆಂದು ಅವರು ಹೆದರಿದ್ದಾರೆಂದು ತಮಗೆ ಒಂದು ಪತ್ರಬಂದಿದೆಯೆಂದು ಹೇಳಿ ಅದಕ್ಕೆ ಉತ್ತರವಾಗಿ ಮಹಾತ್ಮರು ಹೊಸದಿಲ್ಲಿಯಲ್ಲಿ ಜುಲೈ ೩ ರ ಪ್ರಾರ್ಥನೋತ್ತರ ಭಾಷಣದಲ್ಲಿ ಶಾಲೆ ಕಾಲೇಜುಗಳಲ್ಲಿಯೇ ಜ್ಞಾನದೊರಕಿಸಿಕೊಳ್ಳಬಹುದೆಂಬುದು ತಪ್ಪೆಂದೂ ದೇವರ ಜ್ಞಾನಮಾಡಿಕೊಂಡು ಅದನ್ನು ಜನರಿಗರುಹುವುದೇ ಬ್ರಾಹ್ಮಣನ ಕರ್ತವ್ಯವೆಂದೂ ತಿಳಿಸಿದರು.

ಪಂಜಾಬ

ಪಂಜಾಬ ಸರಕಾರದವರು ಸಾರ್ವಜನಿಕ ರಕ್ಷಣೆಯ ಕಾನೂನಿನ ೨೧ ನೆಯ ವಿಭಾಗದನ್ವಯ ಲಾಹೋರಿನ "ಟ್ರಿಬ್ಯೂನ" ಪತ್ರಿಕೆಯ ಸಂಪಾದಕರಾದ ರಾಣಾ ಜಂಗ ಬಹಾದ್ದೂರರನ್ನು ಜೂನ ೨೪ ನೆಯ ತಾರೀಕಿನಲ್ಲಿ 'ಹಿಂದುಸ್ತಾನ—ಪಾಕಿಸ್ತಾನ ಯೋಜನೆ'ಯೆಂಬ ಆಕ್ಷೇಪಾರ್ಹ ಲೇಖ ಬರೆದುದಕ್ಕಾಗಿ ಮುದ್ರಕರೂ ಪ್ರಕಾಶಕರೂ ಆದ ಪಂ. ಭೋಲಾನಾಥರೊಡನೆ ಜುಲೈ ೮ ರಲ್ಲಿ ಬಂಧಿಸಿದರು.

ಲಾಹೋರಿನ 'ಅಜಿತ'ವೆಂಬ ದಿನಪತ್ರಿಕೆಯ ಸಂಪಾದಕರ ಪ್ರಶ್ನೆಗೆ ಉತ್ತರವಾಗಿ ಮಹಾತ್ಮರು ಶೀಖರೂ ಹಿಂದುಗಳೂ ಯಾವಾಗಲೂ ದೇವರ ಸಹಾಯದಲ್ಲಿ ವಿಶ್ವಾಸವಿಡಬೇಕೆಂದೂ ಪಾಕಿಸ್ತಾನದಲ್ಲಿ ನ್ಯಾಯ ಸಿಗುವುದಿಲ್ಲೆಂದು ಅವರು ಸಂಶಯ ಪಡಬಾರದೆಂದೂ ತಮ್ಮ ಸ್ವಂತ ಶಕ್ತಿಯನ್ನೇ ಅವರು ಅವಲಂಬಿಸಬೇಕೆಂದೂ ಹೇಳಿದರು.

ಗುಜರನವಾಲಾದಲ್ಲಿ ಜುಲೈ ೫ ರಲ್ಲಿ ಲಾಹೋರಿನ ದಂಗೆಗಾರರ ಮೇಲೆ ಪೋಲೀಸರು ಗೋಳೀಬಾರು ಮಾಡಿದುದರಿಂದ ೫ ಜನರು ಮಡಿದರು, ೪೦ ಜನರು ಗಾಯಗೊಂಡರು. ದಂಗೆಯಲ್ಲಿ ೨೦ ಮನೆಗಳು ಸುಟ್ಟು ಹೋಗಿದ್ದವು.

ಪೂರ್ವ ಪಂಜಾಬ ಮತ್ತು ಪಶ್ಚಿಮ ಪಂಜಾಬಗಳ ಗಡಿಗಳನ್ನು ನಿರ್ಣಯಿಸದೆ ಅಧಿಕಾರದಾನ ಮಾಡುವುದರಿಂದ ಶೀಖರಿಗೆ ಹಾನಿಯಿದೆಯೆಂದೂ ಆದುದರಿಂದ ಅವರು ಅದನ್ನು ಪ್ರತಿಭಟಿಸದಿರರೆಂದೂ ಸರದಾರ ಸ್ವರ್ಣಸಿಂಗರು ಹೇಳಿದರು.

ಪಾಕಿಸ್ತಾನ ಘಟನಾಸಮಿತಿಗೆ ಪಶ್ಚಿಮ ಪಂಜಾಬದ ೩ಸಾಮಾನ್ಯ ಸ್ಥಳಗಳಿಗೆ ಶ್ರೀಗಳಾದ ಲಾಲಾ ಭೀಮಸೇನ ಸಾಚಾರ, ಅವತಾರ ನಾರಾಯಣ ಹಾಗೂ ರಾಯಬಹಾದ್ದೂರ ಗಂಗಾಶರಣರು ಆರಿಸಿ ಬಂದಿದ್ದಾರೆ.

ಪಶ್ಚಿಮ ಪಂಜಾಬದ ಮುಸ್ಲಿಂ ಲೀಗ ಪಕ್ಷಕ್ಕೆ ಮಲ್ಲಿಕಫಿರೋಜಖಾನನೂನರು ಧುರೀಣರಾಗಿ ಆರಿಸಲ್ಪಟ್ಟದ್ದರಿಂದ ಉಂಟಾದ ಪರಿಸ್ಥಿತಿಯನ್ನು ವಿಚಾರಿಸಲು ಜುಲೈ ನಾಲ್ಕರಲ್ಲಿ ಲಾಹೋರಿನಲ್ಲಿ ಆ ಪಕ್ಷದ ಸಭೆ ಸೇರಿ ಪಕ್ಷದ ಸಂಪೂರ್ಣ ಸಭೆಯನ್ನು ಬೇಗನೆ ಕರೆಯಬೇಕೆಂದು ಪಂಜಾಬ ಶಾಸನ ಸಭೆಯ ಮುಸ್ಲಿಂ ಲೀಗ ಧುರೀಣರಾದ ಮಮದೋತಖಾನರಿಗೆ ವಿನಂತಿ ಮಾಡುವ ನಿರ್ಣಯಕ್ಕೆ ಬಂದಿತು.

ಮುಂಬರುವ ಪ್ರವಾಸದಲ್ಲಿ ಮಹಾತ್ಮರು ಲಾಹೋರಿಗೆ ಭೆಟ್ಟಿಕೊಟ್ಟಾಗ ಅವರು ಭಂಗೀ ವಸತಿಯಲ್ಲಿಯೇ ಇಳಿದುಕೊಳ್ಳಬೇಕೆಂದು ಲಾಹೋರ ನಗರ ಸಭೆಯ ಸದಸ್ಯರಾದ ಶ್ರೀ ಸೋಹನಲಾಲರು ಆಮಂತ್ರಿಸಿದ್ದಾರೆ. ಮಹಾತ್ಮರ ಸನ್ಮಾನಕ್ಕಾಗಿ ಹರಿಜನರ ಸ್ವಾಗತ ಸಮಿತಿಯೊಂದು ನಿಯಮಿಸಲ್ಪಟ್ಟಿದೆ.

ಮದ್ರಾಸ

ಶ್ರೀ ಟ. ಪ್ರಕಾಶಂರವರು ಜುಲೈ ೧೪ಕ್ಕೆ ಪ್ರಾರಂಭವಾಗುವ ಘಟನಾಸಮಿತಿಯ ಅಧಿವೇಶನದಲ್ಲಿ ಆಂಧ್ರ ಪ್ರಾಂತಕ್ಕೆ ಕೂಡಲೆ ಪ್ರತ್ಯೇಕ ಅಡಳಿತ ಬೇಕೆಂಬ ಠರಾವನ್ನು ಮಂಡಿಸಲಿರುವರೆಂದು ತಿಳಿಯುತ್ತದೆ.

ಅಕ್ಕಿಯ ಪೂರೈಕೆಯು ಕಡಿಮೆಯಾದುದರಿಂದ ಜುಲೈ ೧೩ ರಿಂದ ಪ್ರತಿಯೊಬ್ಬನಿಗೆ ಪ್ರತಿ ದಿನಕ್ಕೆ ಹತ್ತು ಔನ್ಸಿನಿಂದ ಎಂಟು ಔನ್ಸಿಗೆ ಇಳಿಸಲಾಗುವುದೆಂದು ಸರಕಾರಿ ಪ್ರಕಟನೆ ಹೊರಟಿದೆ.

ಜೂನ ೨೮ ರ ಹೈದರಾಬಾದ ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಸಂಭವಿಸಿದ ಗಲಭೆಯ ಪರಿಣಾಮವಾಗಿ ವರಂಗಲ್ಲಿನಿಂದ ಸುಮಾರು ೨೫೦೦ ನಿರಾಶ್ರಿತರು ಬೆಝವಾಡಕ್ಕೆ ಬಂದಿರುವರೆಂದೂ ಗಲಭೆಯಲ್ಲಿ ೨೫ ಜನರು ಸತ್ತಿದ್ದು ೧೨೫ ಜನರಿಗೆ ಗಾಯಗಳಾಗಿವೆಯೆಂದೂ ವರಂಗಲ್ಲಿನ ಡಾಕ್ಟರರೊಬ್ಬರು ಇರಿತದಿಂದ ಸತ್ತಿದ್ದು ಅವರ ತಾಯಿ ಮತ್ತು ಹೆಂಡತಿಯರು ಮಾನಭಂಗದ ಹೆದರಿಕೆಯಿಂದ ವಿಷತಿಂದು ಮೃತಪಟ್ಟರೆಂದೂ ತಿಳಿದುಬಂದಿದೆ.

ಮದ್ರಾಸಿನ ಕೂಲಿಕಾರ ಯೂನಿಯನ್ನಿನ ಮೇಲೂ ಬಕಿಂಗಹ್ಯಾಮ ಮತ್ತು ಕರ್ನಾಟಕ ಮಿಲ್ಲಿನ ಕೂಲಿಕಾರರ ಮುಖಂಡರಾದ ಶ್ರೀ ಕಲ್ಯಾಣ ಸುಂದರ ಮುದಲಿಯಾರ ಮತ್ತು ಅಂಥನಿ ಪಿಳ್ಳೆಯವರ ಮೇಲೂ ಹಾಕಲಾದ ಪ್ರತಿಬಂಧಾಜ್ಞೆಯನ್ನು ಹಿಂತೆಗೆದುಕೊಳ್ಳಲಿರುವರು.

ಬಂಗಾಲ

ಕಲಕತ್ತೆಯ ಪರಿಸ್ಥಿತಿಯು ಸುಧಾರಿಸುತ್ತಿದ್ದರೂ ಜುಲೈ ೮ ರಲ್ಲಿ ಗಲಭೆಯ ದೆಸೆಯಿಂದ ನಾಲ್ವರು ಸತ್ತರೆಂದೂ ೧೧ ಜನರು ಗಾಯಗೊಂಡರೆಂದೂ ತಿಳಿದುಬಂದಿದೆ.

ಡಾ ಪಿ. ಸಿ. ಘೋಷ ಮೊದಲಾದ ಹೊಸ ಮಂತ್ರಿಗಳಲ್ಲಿ ಜುಲೈ ೭ ರಲ್ಲಿ ದಪ್ತರ ಹಂಚುವಿಕೆ ಮುಗಿದು ಸರಕಾರೀ ಭವನದಲ್ಲಿ ಅವರಿಗೆ ಸ್ಥಳ ಮಾಡಿಕೊಡಲ್ಪಟ್ಟಿತು.

ನಿಖಿಲ ಬಂಗಾಲ ಶಿಕ್ಷಕ ಸಂಘದವರು ಶಿಕ್ಷಣ ಮತ್ತು ಶಿಕ್ಷಕರ ಹಕ್ಕು ಬಾಧ್ಯತೆಗಳ ತಾವು ಪಟಿದ ಕರಡನ್ನು ಸಿದ್ಧಪಡಿಸಿದ್ದಾರೆ. ಈ ಸಂಘಕ್ಕೆ ಬಂಗಾಲದ ೩೦,೦೦೦ ಮಾಧ್ಯಮಿಕ ಶಿಕ್ಷಕರು ಸದಸ್ಯರಾಗಿದ್ದಾರಂತೆ. ಶಿಕ್ಷಣದ ಸಂಪೂರ್ಣ ಹೊಣೆಯನ್ನು ಸರಕಾರವು ಹೊರಬೇಕೆಂದು ಆ ಕರಡಿನಲ್ಲಿ ಹೇಳಲಾಗಿದೆ.

ಜುಲೈ ೭ ರ ಮಧ್ಯಾಹ್ನದ ದಂಗೆಯಲ್ಲಿ ಕಲಕತ್ತೆಯಲ್ಲಿ ೨೧೫ ಜನರು ಗಾಯಗೊಂಡರೆಂದೂ ೪೧ ಜನರು ಸತ್ತರೆಂದೂ ವರದಿ ಬಂದಿದೆ. ಇದರ ದೆಸೆಯಿಂದ ಕಲಕತ್ತಾ ನಗರ ಸಭೆ ಕೊನೆಗಂಡಿತು.

ಪಶ್ಚಿಮ ಬಂಗಾಲದಲ್ಲಿಯ ಅಲ್ಪಸಂಖ್ಯಾಕ ಮುಸ್ಲಿಮರು ಯಾವ ರೀತಿಯಿಂದಲೂ ಹೆದರಬೇಕಾದ ಕಾರಣವಿಲ್ಲೆಂದೂ ಅವರಿಗೆ ಎಲ್ಲ ವಿಧದ ನ್ಯಾಯವಾದ ಸೌಕರ್ಯಗಳು ದೊರೆಯುವುವೆಂದೂ ಪಶ್ಚಿಮ ಬಂಗಾಲದ ಮಂತ್ರಿಮಂಡಲದ ಧುರೀಣರಾದ ಡಾ. ಪ್ರಫುಲ್ಲಚಂದ್ರ ಘೋಷರು ಜುಲೈ ೪ ರ ಸತ್ಕಾರವೊಂದರಲ್ಲಿ ಹೇಳಿದರು.

ಜಾತೀಯ ತಳಹದಿಯ ಮೇಲೆ ಬಂಗಾಲದ ವಿಭಜನೆಯಾಗಿದ್ದರೂ ಪ್ರಾಂತದಲ್ಲಿ ಶಾಂತ ವಾತಾವರಣವು ಬೇಗನೆ ಸ್ಥಾಪಿಸಲ್ಪಡುವ ಆಶೆಯಿಲ್ಲವಾದುದರಿಂದ ಪಶ್ಚಿಮ ಬಂಗಾಲದ ಹಿಂದುಗಳಿಗೆ ಎಲ್ಲರೂ ಬೆಂಬಲಿಗರಾಗಿ ನಿಲ್ಲಬೇಕೆಂದು ಡಾ. ಶ್ಯಾಮಪ್ರಸಾದ ಮೂಕರ್ಜಿಯವರು ಕಲಕತ್ತೆಯ ಸಭೆಯೊಂದರಲ್ಲಿ ಹೇಳಿದರು.

ಪೂರ್ವ ಬಂಗಾಲದಿಂದ ಪಾಕಿಸ್ತಾನ ಘಟನಾ ಸಮಿತಿಯ ಸಾಮಾನ್ಯ ಹಾಗೂ ಮುಸಲ್ಮಾನ ಸ್ಥಳಗಳಿಗೆ ಹುರಿಯಾಳಾಗಿ ನಿಂತು ವಿಜಯ ಹೊಂದಿದವರಲ್ಲಿ ನಡುಗಾಲ ಸರಕಾರದ ಅರ್ಥ ಮಂತ್ರಿಗಳಾದ ಲಿಯಾಖತ ಅಲಿಖಾನ, ಕಾಯಿದೆ ಮಂತ್ರಿಗಳಾದ ಜೆ. ಎನ್. ಮಂಡಲ ಹಾಗೂ ಇತ್ತೀಚಿನ ವರೆಗೆ ಬಂಗಾಲ ಶಾಸನ ಸಭೆಯ ವಿರುದ್ಧ ಪಕ್ಷದ ಧುರೀಣರಾಗಿದ್ದ ಕಿರಣ ಶಂಕರ ರಾಯರು ಪ್ರಮುಖರಿರುವರು.

ಕಲಕತ್ತೆಯ ಪೋಲೀಸರು ಸೈನ್ಯದವರೊಂದಿಗೆ ಜುಲೈ ೨ ರಲ್ಲಿ ಮುಚಿಪಾರಾ ಬೌಬಜಾರ ಹಾಗೂ ಅಮರ್ಸ್ಟ ಬೀದಿಯ ಪೋಲೀಸ ಠಾಣೆಗಳಲ್ಲಿ ೩೦ ಸ್ಥಳಗಳನ್ನು ಝಡತಿಮಾಡಿ ೧೮ ಜನರನ್ನು ಬಂಧಿಸಿದರು.

ಬಿಹಾರ

ಮೊಂಘೀರ ಜಿಲ್ಲೆಯ ಬರ್ಬಿಯ ಎಂಬ ಹಳ್ಳಿಯಲ್ಲಿ ಜಮೀನದಾರ ಒಕ್ಕಲಿಗರಲ್ಲಿ ಕೆಲವೊಂದು "ಬಕಶತ" ಭೂಮಿಯ ಸಂಬಂಧದಲ್ಲಿ ಹೊಡೆದಾಟವಾಗಿ ೬ ಜನರು ಮರಣಹೊಂದಿದ್ದು ಬಹಳ ಜನರಿಗೆ ಗಾಯವಾಗಿದೆ.

ಗಡಿನಾಡು

ಜನ ಮತಗಣನೆಯಲ್ಲಿ ಒಟ್ಟು ಮತದಾರರ ಸಂಖ್ಯೆಯಲ್ಲಿ ನೂರಕ್ಕೆ ೩೦ ರಷ್ಟು ಮುಸ್ಲಿಂ ಲೀಗಿಗೆ ಮತಗಳು ಬಿದ್ದರೆ ತಾವು ರಾಜೀನಾಮೆ ಕೊಡಬೇಕೆಂದಿರುವುದಾಗಿಯೂ ಆದರೆ ಕೊನೆಯ ನಿರ್ಣಯ ತೆಗೆದುಕೊಳ್ಳುವುದು ಗಡಿನಾಡು ಕಾಂಗ್ರೆಸ್ಸಿನ ಕೈಯಲ್ಲಿರುವುದಾಗಿಯೂ ಒಂದು ವೇಳೆ ತಾವು ರಾಜೀನಾಮೆ ಸಲ್ಲಿಸಿದರೆ ಸ್ವಾಭಾವಿಕವಾಗಿಯೇ ಹೊಸ ಚುನಾವಣೆ ನಡೆಯಬೇಕಾಗುವುದಾಗಿಯೂ ಡಾ. ಖಾನಸಾಹೇಬರು ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು.

ಜುಂದ್ರಿಗಾರರ ಆಹ್ವಾನವನ್ನು ಸ್ವೀಕರಿಸಿ 'ಪಾಕಿಸ್ತಾನ ವಿರುದ್ಧ ಪಠಾಣಿಸ್ತಾನ'ವೆಂಬ ತಳಹದಿಯ ಮೇಲೆ ಸಾರ್ವತ್ರಿಕ ಮತಗಣನೆಯನ್ನು ಎದುರಿಸಲು ನಾವು ಸಿದ್ಧರಿದ್ದೇವೆಂದು ಜುಲೈ ೬ರ ರಾತ್ರಿ ಪೇಶಾವರದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಖಾನಅಬ್ದುಲ್ ಗಫರಖಾನರು ಹೇಳಿದರು.

ಖುದಾಯಿ ಖಿದಮತಗಾರ ಮತ್ತು ಝುಲ್ಮೆ ಫಕ್ತೂನ ಸಂಸ್ಥೆಗಳ ಸುಮಾರು ೨೦೦೦೦ ಸ್ವಯಂ ಸೇವಕರ ಮೆರವಣಿಗೆಯು 'ಪಠಾಣಿಸ್ತಾನ ಝಿಂದಾಬಾದ,' 'ಬಾದಶಾಖಾನ ಝಿಂದಾಬಾದ್' ಎಂದು ಜಯಘೋಷ ಮಾಡುತ್ತ ಜುಲೈ ೬ರಲ್ಲಿ ಕಿಸ್ಸಾಖಾನಿ ಬಝಾರದಲ್ಲಿಂದ ಹಾಯ್ದು ಹೋಯಿತು. ಡಾ. ಖಾನಸಾಹೇಬರ ಆದೇಶದಂತೆ ಝುಲ್ಮೆಫಕ್ತೂನದವರು ಆಯುಧ ಹಿಡಿದಿರಲಿಲ್ಲ. ಅವರಂತೆ ಶೀಖರೂ ಮತದಾನವನ್ನು ಬಹಿಷ್ಕರಿಸಿದರು.

ಕರ್ನಾಟಕ

ಧಾರವಾಡ

ಹುಬ್ಬಳ್ಳಿ ಲೋಂಡಾ ನಡುವಿರುವ ತಾವರಗಟ್ಟಿ ಸ್ಟೇಶನದ ಹತ್ತರ ೬ ನೇ ತಾರೀಕು ರಾತ್ರಿ ಮಾಲುಗಾಡಿಯ ಡಬ್ಬಿಯೊಂದು ಉರುಳಿದ್ದರಿಂದ ಇತರ ಗಾಡಿಗಳ ಓಡಾಟಕ್ಕೆ ಮುಂದೆ ಎಂಟು ಗಂಟೆ ವರೆಗೆ ಅಡಚಣೆಯಾಗಿತ್ತು.

ಶ್ರೀ ಹುಕ್ಕೇರಿ ರಾಮರಾಯರ ಷಷ್ಟ್ಯಬ್ಧಿಯನ್ನು ನೆರವೇರಿಸಬೇಕೆಂದು ಅವರ ಸ್ನೇಹಿತರು ಧಾರವಾಡದಲ್ಲಿ ಸಭೆ ಸೇರಿ ನಿರ್ಧರಿಸಿದ್ದಾರೆ. ಬರುವ ಅಕ್ಟೋಬರ ೨೧ ಕ್ಕೆ ಅವರಿಗೆ ೬೦ ವರ್ಷ ತುಂಬುವುವಿದ್ದುದರಿಂದ ಅಂದು ಈ ಮಹೋತ್ಸವ ನಡೆಯಲಿದೆ. ಹುಕ್ಕೇರಿಕರ ರಾಮರಾಯರ ಸತ್ಕಾರ ಸಮಿತಿಯೊಂದು ಸ್ಥಾಪಿತವಾಗಿದ್ದು ಸಹಾಯ ಮಾಡುವವರು ಈ ಸಮಿತಿ[illegible] ವಿಳಾಸಕ್ಕೆ ಹಣ ಕಳಿಸಬೇಕಾಗಿ ಕೇ[illegible].

ಕರ್ನಾಟಕ ಪದವೀಧರ[illegible]ರದ ಸಭೆ ಧಾರವಾಡದಲ್ಲಿ ೬ ನೇ ತಾರೀಕ[illegible] ರಾ. ಬ. ಸಾವಕಾರರ [illegible] ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯವರು ಹೊರಡಿಸಿದ ಪ್ರಶ್ನಾವಲಿಗೆ ವರದಿಯನ್ನೊಪ್ಪಿಸಲು ಹತ್ತು ಜನರ ಶಿಷ್ಟಮಂಡಳವೊಂದನ್ನು ನೇಮಿಸಲಾಯಿತು.

ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ಸ್ಕೂಲ ಬೋರ್ಡ ಚುನಾವಣೆ ನಡೆದು ಎಂ. ವಾಯ. ಸವಣೂರ ಮತ್ತು ಬಿ. ವಿ. ಪಾಟೀಲರು ವಿದ್ಯೆಯಲ್ಲಿ ತಜ್ಞರೆಂದು, ಎ. ಎಚ್. ಹಾನಗಲ್ಲರು ಮುಸಲ್ಮಾನರ ಪ್ರತಿನಿಧಿಗಳೆಂದು ಎಚ್. ಕೆ. ರಾತೋಡರು ಹಿಂದುಳಿದ ವರ್ಗಗಳ ಪ್ರತಿನಿಧಿಯೆಂದು, ಅವ್ವಕ್ಕ ಅಂಗಡಿಯವರು ಸ್ತ್ರೀಯರ ಪ್ರತಿನಿಧಿಗಳೆಂದು, ದ್ಯಾಮಪ್ಪ ಶೀರಡಾಳ ಇವರು ಪರಿಶಿಷ್ಟ ವರ್ಗದ ಪ್ರತಿನಿಧಿಯೆಂದು ಆರಿಸಲ್ಪಟ್ಟರು.

ರೇಲ್ವೆ ಅನಿಯಮಿತತನದ ಬಗ್ಗೆ ಮಾಡಲಾಗುವ ಟೀಕೆಗೆ ಎಂ. ಎಸ್. ಎಂ. ರೇಲ್ವೆಯ ಹುಬ್ಬಳ್ಳಿ ವಿಭಾಗದ ಟ್ರಾಫಿಕ್ ಇನಸ್ಪೆಕ್ಟರರು ಉತ್ತರ ಕೊಡುತ್ತ ಎಂಜಿನುಗಳು ಚಲೊ ಇಲ್ಲದೆ ಇರುವದರಿಂದಲೂ ಕಾಲ ಕಾಲಕ್ಕೆ ಅವುಗಳ ರಿಪೇರ ಆಗದಿರುವದರಿಂದಲೂ ಅವು ಒಮ್ಮೊಲೆ ನಿಂತು ಹೋಗುತ್ತವೆ. ಕಲ್ಲಿದ್ದಲಿಯಲ್ಲಿ ದೋಷವಿರುವುದರಿಂದಲೂ ಓಡಾಟದಲ್ಲಿ ವ್ಯತ್ಯಯ. ಗಾರ್ಡ ಮತ್ತು ಡ್ರಾಯವರರ ದೋಷವೇನೂ ಇದರಲ್ಲಿ ಇಲ್ಲೆಂದು ಮುಂತಾಗಿ ಅವರ ಅಭಿಪ್ರಾಯ.

ಈ ವರೆಗೆ ಗದುಗಿನಲ್ಲಿದ್ದ ಬಿ. ವಿ. ಭೂಮರೆಡ್ಡಿ ಪೋಲಿಟೆಕ್ನಿಕಲ್ ಶಾಲೆಯನ್ನು ಹುಬ್ಬಳ್ಳಿಗೆ ತರಲಾಗಿದೆ. ಜುಲೈ ೧೦ ನೇ ತಾರೀಕಿನಿಂದ ಹೊಸ ಕಟ್ಟಡದಲ್ಲಿ ವರ್ಗಗಳು ಪ್ರಾರಂಭವಾಗಿವೆ.

ಗದಗಬೆಟಗೇರಿ ನಗರ ಸಭೆಯು ಭಂಗೀ ಜನರ ಬೇಡಿಕೆಗಳು ಮಾನ್ಯವಾದ್ದರಿಂದ ಅವರು ಸಂಪನ್ನು ನಿಲ್ಲಿಸಿರುವರು.

ಕರ್ನಾಟಕ ವಿದ್ಯಾವರ್ಧಕ ಸಂಘದ ೫೬ ನೆಯ ಸಂಸ್ಥಾಪನದಿನೋತ್ಸವ ೨೦—೭—೪೬ ನೇ ದಿನ ಸಾಯಂಕಾಲ ೬ ಗಂಟೆಗೆ ಜರಗುವದು. ನಿವೃತ್ತ ನ್ಯಾಯಾಧೀಶರಾದ ಲೋಕೂರ ನಾರಾಯಣರಾಯರು ಅಧ್ಯಕ್ಷರಾಗಲು ಒಪ್ಪಿರುವರು. ಈ ಉತ್ಸವದ ಅಂಗವಾಗಿ ಸಾಹಿತ್ಯ ಸ್ಪರ್ಧೆಗಳು ನಡೆಯುವವು.

ಧಾರವಾಡ ನಗರ ಸಭೆಯ ಕೆಳ ದರ್ಜೆಯ ನೋಕರರ ಸಭೆ ೬ ಕ್ಕೆ ಸೇರಿ ನಗರ ಸಭೆಯವರು ಬೋನಸ್ಸು ಮುಂತಾದ್ದನ್ನು ಜುಲೈ ೨೨ ರೊಳಗಾಗಿ ಕೊಡದಿದ್ದರೆ ಅಂದಿನಿಂದ ಸಂಪು ಹೂಡುವದಾಗಿ ನಿರ್ಧರಿಸಿದ್ದಾರೆ.

ಶಿಗ್ಗಾವಿ ತಾಲೂಕಿನ ಹುಲಗೂರಿನ ನಾಗನಗೌಡರ ಆಸ್ತಿಯ ಸಂಬಂಧದ ಖಟ್ಲೆ ಹುಬ್ಬಳ್ಳಿಯ ಸೀನಿಯರ ಕೋರ್ಟಿನಲ್ಲಿ ನಡೆದು ಬಸವಂತಗೌಡರು ದಾಸೀಪುತ್ರನಾತೆಯಿಂದ ಅರ್ಧ ಆಸ್ತಿಗೆ ಪಾಲುಗಾರರೆಂದು ತೀರ್ಪು ಕೊಡಲಾಯಿತು.

ಹುಬ್ಬಳ್ಳಿಯಲ್ಲಿ ಶ್ರೀ ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯಲ್ಲಿ ವೇದಶಾಸ್ತ್ರಾಧ್ಯಯನದ ಜೊತೆಯಲ್ಲಿ ಇಂಗ್ಲಿಶ್ ಅಭ್ಯಾಸ ಮಾಡುವವರಿಗೆ ಧರ್ಮಾರ್ಥ ಸಂಸ್ಕೃತ ಶಿಕ್ಷಣ ಕೊಡುವದನ್ನು ಗೊತ್ತುಪಡಿಸಿದ್ದು ವಿದ್ಯಾರ್ಥಿಗಳು ಇದರ ಲಾಭ ಪಡೆಯಬೇಕೆಂದು ಕೋರಲಾಗಿದೆ.

ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರ ಅಪ್ಪಣೆ ಇಲ್ಲದೆ ಯಾರಿಗೂ ಮದ್ದು ಗುಂಡು ಮಾರತಕ್ಕದ್ದಲ್ಲೆಂದು ಎಲ್ಲ ಮದ್ದಿನ ಅಂಗಡಿಯ ಲಾಯಸೆನ್ಸದಾರರಿಗೆ ವಿಧಿಸಿದ ಆಜ್ಞೆಯನ್ನು ಜುಲೈ ೮ ರಿಂದ ಮತ್ತೆ ೨ ತಿಂಗಳು ಬೆಳೆಸಿದ್ದಾರೆ.

ಹುಬ್ಬಳ್ಳಿಯ ಎ. ಆರ್. ಪಿ. ನಂ. ೩೧ ರ ಹಿಡೆಯರಾದ ಶ್ರೀ ಎಚ್. ಡಿ. ದೇಸಾಯಿ ಇವರು ರೇಶನಿಂಗ ನಿಯಮಗಳನ್ನುಲ್ಲಂಘಿಸಿದ್ದರಿಂದ ಅವರ ಕೇಣಿನ ಹಣ ೨೫೦ ರೂಪಾಯಿಗಳಲ್ಲಿ ೨೫ ರೂಪಾಯಿಗವನ್ನು ರದ್ದುಗೊಳಿಸಲಾಗಿದೆ. ಅವರ ಅಂಗಡಿಯನ್ನು ರದ್ದು ಪಡಿಸಲಾಗಿದೆ.

ವಿಜಾಪುರ

ವಿಜಾಪುರದ ವಿ. ಬ. ದರಬಾರ ಪ್ರಾಥಮಿಕ ಅಧ್ಯಾಪಕ ವಿದ್ಯಾಲಯದ ಧಾರ್ಮಿಕ ನೈತಿಕಶಿಕ್ಷಣ ವಿಭಾಗದ ಅಂಗವಾಗಿ ಕಳೆದ ತಿಂಗಳ ಕೊನೆಯ ದಿನ ಪ್ರಾರ್ಥನೆ ರಾ. ಬ. ಹಳಕಟ್ಟಿಯವರ ನೇತೃತ್ವದಲ್ಲಿ ಜರುಗಿತು. [illegible] ಅರ್ಥವನ್ನು ವಿವರಿಸಿ ಧರ್ಮ ಹಾಗು ಶಿಕ್ಷಣದ ವಿಷಯವಾಗಿ ಉಪನ್ಯಾಸವಿತ್ತರು. ಹಳ್ಳಿಗಳಲ್ಲಿಯ ಧಾರ್ಮಿಕ ಜೀವನವನ್ನು ಎಂತು ಮಾರ್ಪಡಿಸಬೇಕೆಂಬದನ್ನು ಅವರು ವಿವರಿಸಿದರು.

ವಿಜಾಪುರ ಜಿಲ್ಲೆಯಲ್ಲಿಯ ಗುಳೇದಗುಡ್ಡ ಮುನಿಸಿಪಾಲಿಟಿಯು ತನ್ನ ಕರ್ತವ್ಯದಲ್ಲಿ ತಪ್ಪಿದ್ದರಿಂದ ೭ನೇ ತಾರೀಕಿನಿಂದ ೨ ವರ್ಷಗಳ ವರೆಗೆ ರದ್ದುಗೊಳಿಸಲಾಗಿದೆಂದು ಮುಂಬಯಿ ಸರಕಾರದ ವಿಶೇಷ ಗ್ಯಾಜಿಟನಲ್ಲಿ ಪ್ರಸಿದ್ಧಿಸಲಾಗಿದೆ.

ವಿಜಾಪುರದ ತೂಕ ಅಳತೆಯ ಅಧಿಕಾರಿಗಳಾದ ಶ್ರೀ ಕಸಬೇಕರ ಎಂಬವರಿಗೆ ಲಂಚದ ಆರೋಪದ ಮೇಲೆ ೨ ತಿಂಗಳ ಶಿಕ್ಷೆ ಮತ್ತು ೨೦೦ ರೂಪಾಯಿ ದಂಡ ವಿಧಿಸಲಾಗಿದೆಂದು ತಿಳಿಯುತ್ತದೆ.

ವಿಜಾಪುರದ ಹರಿಜನ ಕಾರ್ಯಕರ್ತರಾದ ಶಾಕಾಕಾರಖಾನೀಸರು ಬೆಳಗಾವಿ ಜಿಲ್ಲೆಯ ಕಲ್ಲಪ್ಪಾ ಮಾನೆ ಸಿರಗಾವ ಮತ್ತು ಅವನ ಒಬ್ಬ ಮಗ ಮೂರು ಜನ ಹೆಣ್ಣುಮಕ್ಕಳ ಸಹಿತವಾಗಿ ವಿಧಿಪೂರ್ವಕ ೩ ನೇ ತಾರೀಕು ಶುದ್ಧೀಕರಣ ಮಾಡಿಕೊಂಡರು. ಅವರಿಗೆ ರಾಮರಾವ ಜಪ ಯಜ್ಞೋಪವೀತ ಧಾರಣ ಮಾಡಿಸಿದರು.

ಬಾಗಲಕೋಟೆಯಲ್ಲಿ ಕಳೆದವಾರ ಮೋಟರ ಕಾಮಗಾರಸಂಘ ಎಂಬ ಸಂಘ ಸ್ಥಾಪಿತವಾಗಿ ಅದರ ಮೊದಲನೆಯ ಸಭೆ ಶ್ರೀ ಜೋರಾಪೂರ ಗುರುರಾಯರ ಅಧ್ಯಕ್ಷತೆಯಲ್ಲಿ ಕೂಡಿ ಕಾರ್ಯಕಾರಿ ಮಂಡಲವನ್ನೂ ಘಟನಾಸಮಿತಿಯನ್ನೂ ನೇಮಿಸಲಾಯಿತು.

ಬೆಳಗಾವಿ

ಬೆಳಗಾವಿ ಜಿಲ್ಲಾ ಸಹಕಾರಿ ಸಂಘಗಳ ಸೆಕ್ರೆಟರಿಗಳ ಪರಿಷತ್ತು ಕಳೆದ ತಿಂಗಳ ಕೊನೆಯಲ್ಲಿ ಮುಂಬಯಿ ಶಾಸನ ಸಭೆಯ ಉಪಾಧ್ಯಕ್ಷರಾದ ಶ್ರೀ ಅಂಗಡಿ ಷಣ್ಮುಖಪ್ಪನವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಕಲ್ಲಯ್ಯಸ್ವಾಮಿ ಕವಟಗಿಮಠ ಇವರು ಅದರ ಪ್ರಾರಂಭಮಹೋತ್ಸವವನ್ನು ನೆರವೇರಿಸಿದರು. ಸೆಕ್ರೆಟರಿಗಳನ್ನು ನೇಮಿಸುವ ಅಧಿಕಾರವನ್ನು ಸರಕಾರದವರು ತಮ್ಮ ಕಡೆಗೇ ತೆಗೆದುಕೊಳ್ಳಬೇಕೆಂದು ಮುಂತಾದ ೧೦ ಗೊತ್ತುವಳಿ ಸ್ವೀಕೃತವಾದವು.

೧೯೪೨ ರಲ್ಲಿ ಇನಾಮದಾರ ಪಾಟೀಲೇಕರ ಪ್ರಕರಣದ ವಿಚಾರಣೆ ಪೋಲೀಸ ಖಾತೆಯ ಮುಖಾಂತರ ಇಷ್ಟರಲ್ಲಿ ಪ್ರಾರಂಭವಾಗಲಿದೆಂದು ತಿಳಿಯುತ್ತದೆ. ಮಧ್ಯಂತರದಲ್ಲಿ ಇನಸ್ಪೆಕ್ಟರರಾಗಿದ್ದ ಶ್ರೀ ಇನಾಮದಾರರನ್ನು ಮತ್ತೆ ಫೌಜದಾರರನ್ನಾಗಿ ಮಾಡಿ ಬೆಳಗಾವಿಗೆ ಹಾಕಿದ್ದಾರೆ. ನಿಪ್ಪಾಣಿಯಲ್ಲಿ ಲಂಚತೆಗೆದುಕೊಂಡರೆಂದು ಅಪಾದಿತರಾದ ಶ್ರೀ ಜಾಫರ ಫೌಜದಾರರ ವಿಚಾರಣೆಯು ಅಗತ್ಯದ್ದಿದೆ.

ಬಳ್ಳಾರಿ

ಹೂವಿನಹಡಗಲಿಯ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯ ಮಹಾಜನ ಸಭೆ ೨—೭—೪೬ ಕ್ಕೆ ಕೂಡಿ ಕೆ. ಎ. ಜಂಬಯ್ಯನವರು ಅಧ್ಯಕ್ಷರಾಗಿಯೂ ಬಿ. ಅನಂತಪ್ಪನವರು ಉಪಾಧ್ಯಕ್ಷರಾಗಿಯೂ ಪಾಟೀಲ ಚಂದ್ರಶೇಖರಗೌಡರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಬಳ್ಳಾರಿ ಜಿಲ್ಲಾ ಕಾಂಗ್ರೆಸ ಸಮಿತಿಯ ಸಾಧಾರಣ ಸಭೆಯು ೪ನೇ ತಾರೀಕು ನಾರಾಯಣದೇವರ ಕೇರಿಯಲ್ಲಿ ಸೇರಿ ಹೊಸಪೇಟೆ ಮುನಿಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ಸು ಭಾಗವಹಿಸಬಾರದೆಂದು ನಿರ್ಣಯಿಸಲಾಯಿತು.

ಹರಿಹರದ ಕೃಷ್ಣಮೂರ್ತಿ ಶೇಲಕರ ಎಂಬವರು ಕಳ್ಳತನದಿಂದ ಬಟ್ಟೆಯನ್ನು ಮೈಸೂರ ಸೀಮೆಗೆ ಸಾಗಿಸುತ್ತಿದ್ದರೆಂಬ ಅಪಾದನೆಯ ಮೇಲೆ ರಾಣೆಬೆನ್ನೂರ ಮ್ಯಾಜಿಸ್ಟ್ರೇಟರಲ್ಲಿ ಖಟ್ಲೆ ನಡೆದಿತ್ತು. ಆರೋಪಿಗೆ ೧ ತಿಂಗಳ ಕಠಿಣ ಶಿಕ್ಷೆ ೫೦ ರೂಪಾಯಿ ದಂಡ ವಿಧಿಸಲಾಯಿತು.

ಕನ್ನಡ ಸಂಸ್ಥಾನ

ಕಲಬುರ್ಗಿಯಲ್ಲಿ ಪ್ರತಿವರುಷದಂತೆ ಈ ಸಲವೂ ಶ್ರೀರಾಮ ಪಾಂಡು[illegible] ಮುಖರು [illegible]ದ ಜರುಗಿಸಿದರು. ಸರ್ವ[illegible]ಲ ಪಾರಾಯಣ, ಕೀರ್ತನ, ಭಜನೆ ವಾಹನೋತ್ಸವ ನಡೆದು ಹುಣ್ಣಿವೆಯ ದಿನ ರಥೋತ್ಸವವಾಗಿ ಪಂಡಿತರಿಗೆಲ್ಲ ಬಹುಮಾನ ವಿನಿಯೋಗಿಸಲಾಯಿತು. ಭೂಯಾರದ ಅದ್ಯರಾಮಾಚಾರ್ಯರು ಇಲ್ಲಿ ಗೀತಾಪ್ರವಚನ ಮೂಲಭಾರತದೊಂದಿಗೆ ಕುಮಾರವ್ಯಾಸ ಭಾರತ ವಿರಾಟಪರ್ವ ಸಹಿತ ಪ್ರಾರಂಭಿಸಿರುವರು.

ಸಾಂಗಲಿಯಲ್ಲಿಯ ಮರಾಠರು ಸಭೆ ಸೇರಿ ಕೊಲ್ಹಾಪುರ ಸಂಸ್ಥಾನದಲ್ಲಿ ಹೊಣೆಗಾರಿಕೆ ರಾಜ್ಯ ಪ್ರಸ್ಥಾಪಿಸಲು ಮಹಾರಾಜರಿಗೆ ಬಿನ್ನವಿಸುವ ಮತ್ತು ಸಿಂಹಾಸನಾರೋಹಣದ ಬಗ್ಗೆ ಅವರನ್ನಭಿನಂದಿಸುವ ನಿರ್ಣಯ ಸ್ವೀಕರಿಸಲಾಯಿತು.

ಕೊಲ್ಹಾಪುರದಲ್ಲಿರುವ ದಕ್ಷಿಣ ಸಂಸ್ಥಾನಗಳ ರೆಸಿಡೆಂಟರ ಕಚೇರಿ ಅಗಸ್ಟ ೧೫ರಿಂದ ರದ್ದಾಗುವದು.

ಮಿರಜ ಪ್ರಜಾಪರಿಷತ್ತು ಲಕ್ಷ್ಮಿಶ್ರೀ ಎಸ್. ಬಿ. ಜೋಶಿಯವರ ಅಧ್ಯಕ್ಷತೆಯಲ್ಲಿ ಸೇರಿ ದಕ್ಷಿಣ ಸಂಸ್ಥಾನಗಳ ಒಕ್ಕೂಟ ಯೋಜನೆಗೆ ಒಪ್ಪಿಗೆ ಕೊಟ್ಟಿತು.

ಜಮಖಂಡಿ ಸಂಸ್ಥಾನದಲ್ಲಿ ಕೊಡಮಾಡಿದ ಉಪಾಂತ್ಯ ಸುಧಾರಣೆಗಳನ್ವಯ ಮಂತ್ರಿಗಳಾಗಿ ಆರಿಸಲ್ಪಟ್ಟ ಶ್ರೀ ಜತ್ತಿ ಮತ್ತು ಬಿ. ಜಿ. ಹೊರ್ತಿ ಇವರು ಪ್ರತಿಜ್ಞೆಯನ್ನು ಕೈಕೊಂಡು ಅಧಿಕಾರ ಸ್ವೀಕರಿಸಿದರು. ಮೂರನೆ ಮಂತ್ರಿಗಳ ಹೆಸರು ತಿಳಿಸಲು ಮತ್ತು ಸಾಬಡೆಯವರ ಸ್ಥಳಕ್ಕೆ ಒಬ್ಬ ಉಮೇದವಾರರನ್ನು ಗೊತ್ತುಪಡಿಸುವದಕ್ಕಾಗಿ ಪ್ರಜಾಪರಿಷತ್ತಿನ ಸಭೆ ಕೂಡಲಿದೆ.

ಜಮಖಂಡಿಯ ಸಾಬಡೆಯವರ ಕೊಲೆಯ ಸಂಬಂಧದಲ್ಲಿ ಪುಣತಾಳಕರ ಇನಸ್ಪೆಕ್ಟರರಿಗೆ ಒಂದು ತಿಂಗಳ ರಜೆಕೊಡಲಾಗಿದೆ. ಅವರನ್ನು ಸಸ್ಪೆಂಡ ಮಾಡಬೇಕೆಂದು ಜನ ಕೇಳುತ್ತ ಕೊಲೆಯ ಸಂಬಂಧದಲ್ಲಿ ವಿಚಾರಣೆ ನಡೆಸಲು ನೇಮಕವಾಗಿದ್ದ ಕುಲಕರ್ಣಿಯವರು ಕೆಲಸವನ್ನು ಪ್ರಾರಂಭಿಸಿದ್ದಾರೆ.

ರಾಮದುರ್ಗ ಸಂಸ್ಥಾನದಲ್ಲಿ ಹೊಸದಾಗಿ ನೇಮಿಸಲ್ಪಟ್ಟ ಮಂತ್ರಿವರ್ಯ ಎಸ್. ಜಿ. ಗದಗ ಇವರಿಗೆ ಹಣಕಾಸು, ಶಿಕ್ಷಣ, ಸ್ಥಾನಿಕ ಸ್ವರಾಜ್ಯ, ಉದ್ಯೋಗ, ವಾಣಿಜ್ಯ ಗ್ರಾಮೋದ್ಧಾರ ಮತ್ತು ಅಹಾರ ಖಾತೆಗಳನ್ನು ಕೊಡಲಾಗಿದೆ. ಪಿ. ಜಿ. ಜೋಗ ಇವರಿಗೆ ಕಾಯದೆ ಸುವ್ಯವಸ್ಥೆ, ಕಂದಾಯ, ಪಿ. ಡಬ್ಲ್ಯು. ಡಿ ಅರಣ್ಯ, ಆರೋಗ್ಯ, ಸಹಕಾರ ನಿಯಂತ್ರಣ ಖಾತೆಗಳನ್ನು ಕೊಡಲಾಗಿದೆಂದು ಪ್ರಸಿದ್ಧಿಸಲಾಗಿದೆ.

ಉತ್ತರ ಕರ್ನಾಟಕದಲ್ಲಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಸಂಸ್ಥಾನಾಧೀಶರರು ತಮ್ಮದೊಂದು ಕೂಟ ನಿರ್ಮಿಸಿಕೊಂಡು ಅನಿಯಂತ್ರಿತ ತಮ್ಮ ಅರಸೊತ್ತಿಗೆಯನ್ನು ಅಬಾಧಿತವಾಗಿ ಕಾಯಿದುಕೊಳ್ಳುವ ಪ್ರಯತ್ನವನ್ನು ಉತ್ತರ ಕರ್ನಾಟಕ ಸಂಸ್ಥಾನಗಳ ಪ್ರಾದೇಶಿಕ ಸಮಿತಿಯವರು ನಿಷೇಧಿಸಿದ್ದಾರೆ. ಸಂಸ್ಥಾನಗಳ ಭವಿತವ್ಯ ನಿರ್ಣಯದ ಅಧಿಕಾರ ಜನತೆಗೇ ಸೇರಿದ್ದು. ಸಂಸ್ಥಾನಿಕರು ಅದರಲ್ಲಿ ಕೈಹಾಕಿ ನಡೆಸುವದು ನಿಷೇಧಾರ್ಹವಾಗಿದೆ.

ಸಾಂಗಲಿ ಮುನಿಸಿಪಾಲಿಟಿಯು ಮೇಲೆ ರಾಷ್ಟ್ರಧ್ವಜವನ್ನು ಹಚ್ಚಬೇಕೆಂದು ಮುನಿಸಿಪಾಲಿಟಿಯವರು ನಿರ್ಣಯಿಸಿದ್ದರು. ಆದರೆ ಅವಕ್ಕೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಪ್ರತಿಬಂಧಕ ಆಜ್ಞೆಯನ್ನು ಹೊರಡಿಸಿದ್ದರು. ಅದರ ವಿರುದ್ಧ ಅಪೀಲು ಮಾಡಲಾಗಿ ಧ್ವಜವನ್ನು ಹಾರಿಸಲು ಸ್ಥಾನಿಕ ಮಂತ್ರಿಗಳು ಅಪ್ಪಣೆ ಕೊಟ್ಟಿರುವರು.

ಉತ್ತರ ಕನ್ನಡ

ಜಿಲ್ಲೆಯಲ್ಲಿ ಅಡಿಕೆ ಬೆಳೆ ಈಗ ನಷ್ಟಗಿದೆ. ಇದೇ ಪರಿಸ್ಥಿತಿ ಇನ್ನೂ ಎರಡು ತಿಂಗಳು ಉಳಿದು ಕೊಳೆ ರೋಗ ಹಾಯಲಿಲ್ಲವಾದರೆ ಕಳೆದ ವರುಷಕ್ಕಿಂತ ೧೦೦ ಕ್ಕೆ ೪೦ ರಷ್ಟು ಹೆಚ್ಚು ಬೆಳೆ ಬರುವದೆಂದು ಅಂದಾಜು ಮಾಡಲಾಗಿದೆ. ಈ ಜಿಲ್ಲೆಯಿಂದ ಪ್ರತಿ ವರುಷ ೫ ಲಕ್ಷ ಚೀಲ ಅಡಿಕೆ ಮುಂಬಯಿಗೆ ನಿರ್ಯಾತವಾಗುತಿತ್ತು.

ನೀರಿನ ಕೊರತೆ ಇದ್ದ ಜಿಲ್ಲೆಯ ಹಳ್ಳಿಗಳಲ್ಲಿ ಪುನರ್ಯೋಜನೆಯ ಮೊದಲನೆ ೫ ವರುಷಗಳಲ್ಲಿ ೨೦೯ ಬಾವಿಗಳನ್ನು ಕಡಿಸಬೇಕೆಂದು ಜಿಲ್ಲಾ ಲೋಕಲ್ ಬೋರ್ಡಿನವರು ಗೊತ್ತುಪಡಿಸಿದ್ದಾರೆ. ಇದಕ್ಕೆ ೯ ಲಕ್ಷ ರೂಪಾಯಿ ವೆಚ್ಚ ಹತ್ತುವದು. ಮುಂಬಯಿ ಸರಕಾರದ ಲೋಕೋಪಯೋಗಿ ಖಾತೆಯವರು ಈಗ ಇದನ್ನು ಪರಿಶೀಲಿಸುತಿದ್ದಾರೆ.

ಜಿಲ್ಲೆಯ ಕಾಂಗ್ರೆಸ ಕಾರ್ಯಕರ್ತರಾಗಿದ್ದ ಶ್ರೀ ಗೋಪಾಲ ಕಿಣಿಯವರು ಮುಂಬಯಿ ಆಸ್ಪತ್ರೆಯಲ್ಲಿ ೨೦ ನೇ ತಾರೀಕು ನಿಧನ ಹೊಂದಿದರು. ಇವರು ಗರಗದಲ್ಲಿ ಐದು ವರುಷ ವಿಧಾಯಕ ಕಾರ್ಯ ಮಾಡಿದ್ದರು.

ಯಲ್ಲಾಪುರದಲ್ಲೊಂದು ದನಗಳ ಚಿಕಿತ್ಸಾಲಯ ತೆರೆಯಬೇಕೆಂದು ೫ ವರ್ಷಗಳ ಹಿಂದೆಯೋ ನಿರ್ಣಯವಾಗಿತ್ತು. ಆದರೆ ಜಿಲ್ಲಾ ಬೋರ್ಡಿನವರು ಒಂದಿಲ್ಲೊಂದು ಕಾರಣದಿಂದ ಅದನ್ನು ಮುಂದೂಡುತ್ತ ಬಂದರು. ಪ್ರಾಂತಿಕ ಸರಕಾರದ ಕೃಪೆಯಿಂದ ಈಗ ಆ ಚಿಕಿತ್ಸಾಲಯ ತೆರೆಯಲ್ಪಟ್ಟಿದೆ.

ಉಪ್ಪಿನ ಕರಿಗೆ ರದ್ದಾದುದರಿಂದ ಅದರ ಬೆಲೆಯೀಗ ಕಾರವಾರಪೇಟೆಯಲ್ಲಿ ಅರ್ಧಕ್ಕಾದರೂ ಇಳಿಯಬೇಕಿತ್ತು; ಆದರೆ ಅದು ಇನ್ನೂ ಇಳಿದಿಲ್ಲವೆಂದು ತಿಳಿದುಬಂದಿದೆ.

ಕರ್ಮವೀರ
ಹರಿಜನ ಪುರವಣಿ

ಸಾಮ್ಯವಾದಿಯೆಂದರೆ ಯಾರು?

(ಮೋ. ಕ. ಗಾಂಧಿಯವರಿಂದ)

ಸಾಮ್ಯವಾದವೆಂಬುದು ಸುಂದರ ಶಬ್ದ. ನನಗೆ ತಿಳಿದಮಟ್ಟಿಗೆ ಸಾಮ್ಯವಾದದಲ್ಲಿ ಸಮಾಜದ ಸದಸ್ಯರೆಲ್ಲರೂ ಸಮಾನರು-ಮೇಲು, ಕೀಳೆಂಬವರಿಲ್ಲ. ಒಂದು ದೇಹದ ಮೇಲ್ಭಾಗದಲ್ಲಿದ್ದಾಕ್ಷಣ ಅದು ಮೇಲಲ್ಲ; ಅಂಗಾಲು ನೆಲವನ್ನು ಮುಟ್ಟುವದೆಂದು ಅದು ಕೀಳೂ ಅಲ್ಲ. ದೇಹದ ಅಂಗೋಪಾಂಗಗಳು ಸಮಾನವಾಗಿರುವಂತೆಯೆ ಸಮಾಜದಲ್ಲಿಯೂ ಸದಸ್ಯರೆಲ್ಲರೂ ಸಮಾನರು. ಇದೀಗ ಸಾಮ್ಯವಾದ.

ಅದರಲ್ಲಿ ರಾಜನೂ ರೈತನೂ ಬಡವನೂ ಬಲ್ಲಿದನೂ ಒಡೆಯನೂ ಆಳೂ ಎಲ್ಲರೂ ಒಂದೇ ಮಟ್ಟದವರು. ಧಾರ್ಮಿಕ ಪರಿಭಾಷೆಯಲ್ಲಿ ಹೇಳಬೇಕಾದರೆ ಸಾಮ್ಯವಾದದಲ್ಲಿ ದ್ವೈತವಿಲ್ಲ. ಎಲ್ಲವೂ ಅದ್ವೈತ, ಐಕ್ಯ. ಆದರೆ ಜಗತ್ತಿನಲ್ಲಿ ಎಲ್ಲಿ ನೋಡಿದರೂ ಸಮಾಜದಲ್ಲಿ ದ್ವೈತವೂ ಭೇದವೂ ಕಾಣುತ್ತವೆ. ಐಕ್ಯವೆಂಬುದು ಇಲ್ಲವೇ ಇಲ್ಲ. ಇವನೊಬ್ಬ ಉಚ್ಚ, ಅವನೊಬ್ಬ ನೀಚ, ಈತ ಹಿಂದೂ, ಆತ ಮುಸ್ಲಿಂ, ಇನ್ನೊಬ್ಬ ಕ್ರೈಸ್ತ, ಮತ್ತೊಬ್ಬ ಪಾರ್ಸಿ, ಮಗದೊಬ್ಬ ಸೀಖ, ಮಾರೊಬ್ಬ ಯಹೂದ್ಯ. ಇವರೊಳಗೇ ಮತ್ತೆ ಒಳಪಂಗಡಗಳು ಬೇರೆ. ನನ್ನ ಕಲ್ಪನೆಯ ಐಕ್ಯವೆಂದರೆ, ಬಹುರೂಪದಲ್ಲಿ ರೂಪಸಾಮರಸ್ಯ, ಏಕರೂಪತೆ ಉಳ್ಳದ್ದು.

ಈ ಅವಸ್ಥೆಯನ್ನು ಮುಟ್ಟಬೇಕಾದರೆ, ದಾರ್ಶನಿಕನ ವಿರಕ್ತ ದೃಷ್ಟಿಯನ್ನಿಟ್ಟುಕೊಂಡು, ಎಲ್ಲರೂ ಸಾಮ್ಯವಾದಕ್ಕೆ ಒಲಿಯುವವರೆಗೆ ನಾವು ಮಾಡಬೇಕಾದುದೇನೂ ಇಲ್ಲವೆಂದು ತೆಪ್ಪಗೆ ಕೂತರೆ ಸಾಗದು. ನಮ್ಮ ಜೀವನವನ್ನು ಪರಿವರ್ತಿಸದೆಯೇ, ಬೇಕಾದಷ್ಟು ಭಾಷಣಗಳನ್ನು ಕೊಟ್ಟು, ಪಕ್ಷಗಳನ್ನು ಕಟ್ಟಿ ಬೇಟೆ ಹತ್ತಿರಬಂದೊಡನೆ ಹದ್ದಿನಂತೆ ಅದನ್ನು ಹಿಡಿದುಕೊಳ್ಳಬಹುದು. ಇದು ಸಾಮ್ಯವಾದವಲ್ಲ. ಅದೊಂದು ಹಿಡಿಯಬೇಕಾದ ಬೇಟೆಯೆಂದು ನಾವು ತಿಳಿದಷ್ಟು ಕಾಲ ಅದು ನಮ್ಮಿಂದ ದೂರವಾಗುತ್ತ ಹೋಗುವದು.

ಸಾಮ್ಯವಾದಕ್ಕೆ ಒಲಿಯುವ ಮೊದಲನೆ ಅನುಯಾಯಿಯೊಡನೆ ಅದು ಮೊದಲಾಗುತ್ತದೆ. ಅಂಥ ನಿಜ ಅನುಯಾಯಿಯೊಬ್ಬನಿದ್ದರೆ ಮುಂದೆ ಸೊನ್ನೆಗಳನ್ನು ಸೇರಿಸುತ್ತ ಹೋಗಬಹುದು. ಆ ಒಂದಕ್ಕೆ ಸೇರಿದ ಪ್ರತಿ ಸೊನ್ನೆಯೂ ಸಾಮ್ಯವಾದಿಗಳ ಸಂಖ್ಯೆಯನ್ನು ಹತ್ತುಮಡಿ ಬೆಳೆಸುತ್ತ ಹೋಗುವದು. ಆದರೆ, ಮೊದಲನೆಯವನೇ ಸೊನ್ನೆಯಾದರೆ, ಅರ್ಥಾತ್ ಯಾರೂ ಪ್ರಾರಂಭವನ್ನೇ ಮಾಡದಿದ್ದರೆ, ಮುಂದೆ ಎಷ್ಟೇ ಸೊನ್ನೆಗಳು ಸೇರಿದರೂ ಅದರ ಬೆಲೆ ಸೊನ್ನೆಯೇ ಆದೀತಲ್ಲದೆ ಬೇರೆಯಲ್ಲ. ಅಂಥ ಸೊನ್ನೆಗಳನ್ನು ಬರೆಯಲು ಉಪಯೋಗಿಸಿದ ಕಾಗದವೂ ವೆಚ್ಚ ಮಾಡಿದ ಸಮಯವೂ ದೊಡ್ಡ ಅಪವ್ಯಯವೇ ಸರಿ.

ಈ ಸಾಮ್ಯವಾದ ಸ್ಫಟಿಕದಂತೆ ಪರಿಶುದ್ಧವಾದುದು. ಆದುದರಿಂದ ಅದನ್ನು ಸಾಧಿಸಲು ಸ್ಫಟಿಕದಂಥ ಸಾಧನಗಳೇ ಬೇಕು. ಅಶುದ್ಧ ಸಾಧನಗಳಿಂದ ಸಾಧ್ಯಗಳೂ ಅಶುದ್ಧವಾಗುತ್ತವೆ. ಆದುದರಿಂದ ರಾಜನನ್ನೂ ರೈತನನ್ನೂ ಸಮಾನರಾಗಿ ಮಾಡುವ ಕೆಲಸ ರಾಜನ ತಲೆಯನ್ನು ಕಡಿದೊಗೆಯುವದರಿಂದ ಕೈಗೂಡುವದಿಲ್ಲ. ಒಡೆಯ ಆಳುಗಳನ್ನು ಸಮಾನರಾಗಿ ಮಾಡುವದಕ್ಕೂ ಈ ಕಡಿಯುವ ನೀತಿ ಉಪಯೋಗಕ್ಕೆ ಬಾರದು. ಅಸತ್ಯದ ಮೂಲಕ ಸತ್ಯವನ್ನು ಯಾರೂ ಮುಟ್ಟಲಾರರು. ಸತ್ಯಸಂಧತೆಯೊಂದೇ ಸತ್ಯವನ್ನು ಸಾಧಿಸುವ ಉಪಾಯ. ಅಹಿಂಸೆಯೂ ಸತ್ಯವೂ ಅವಳಿ ಜವಳಿಯಲ್ಲವೆ? ಇದಕ್ಕೆ "ಇಲ್ಲ" ಎಂಬುದೇ ಖಂಡಿತ ಉತ್ತರ. ಅಹಿಂಸೆಯಲ್ಲಿಯೇ ಸತ್ಯ ಅಡಕವಾಗಿದೆ, ಸತ್ಯದಲ್ಲಿಯೇ ಅಹಿಂಸೆಯುಂಟು! ಅದರಿಂದಲೇ ಅವು ಒಂದೇ ನಾಣ್ಯದ ಎರಡು ಮುಖಗಳೆಂದು ಹೇಳಲಾಗಿದೆ. ಒಂದರಿಂದ ಇನ್ನೊಂದನ್ನು ಬೇರ್ಪಡಿಸುವದು ಸಾಧ್ಯವಿಲ್ಲ. ಎರಡೂ ಬದಿಯ ಲಿಖಿತಗಳನ್ನೋದಿರಿ. ಅವುಗಳಲ್ಲಿ ಅಕ್ಷರಭೇದವಿದ್ದೀತೇ ಹೊರತು ಅರ್ಥಭೇದವಿರದು. ಈ ಪುನೀತಾವಸ್ಥೆಯನ್ನು ನಿರ್ದೋಷ ಪಾರಿಶುದ್ಧ್ಯವಿಲ್ಲದೆ ಮುಟ್ಟಲಳವಲ್ಲ. ಮನಸ್ಸಿನಲ್ಲಾಗಲಿ ಕಾಯದಲ್ಲಾಗಲಿ ಕಲ್ಮಷಕ್ಕೆ ಎಡೆಕೊಟ್ಟರೆ ಅಸತ್ಯ ಹಿಂಸೆಗಳು ನಿಮ್ಮಲ್ಲಿ ಮನೆಮಾಡಿದಂತೆಯೆ.

ಆದುದರಿಂದ ಸತ್ಯಸಂಧರೂ ಶುದ್ಧಾಚರಣಿಗಳೂ ಆದ ಸಾಮ್ಯವಾದಿಗಳು ಮಾತ್ರ ಹಿಂದುಸ್ತಾನದಲ್ಲೂ ಜಗತ್ತಿನಲ್ಲೂ ಸಾಮ್ಯವಾದಿ ಸಮಾಜವನ್ನು ಸ್ಥಾಪಿಸಬಲ್ಲರು. ನನಗೆ ತಿಳಿದಂತೆ ಶುದ್ಧ ಸಾಮ್ಯವಾದಿಯಾದ ದೇಶ ಜಗತ್ತಿನಲ್ಲಿ ಎಲ್ಲಿಯೂ ಇದ್ದಂತಿಲ್ಲ. ಮೇಲೆ ವಿವರಿಸಿದ ಸಾಧನಗಳಿಲ್ಲದೆ ಅಂಥ ಸಮಾಜ ಅಸ್ತಿತ್ವದಲ್ಲಿ ಬರುವದು ಅಸಾಧ್ಯ.

ಹೊಸದಿಲ್ಲಿ (ಗುಜರಾತಿಯಿಂದ)
೬—೭—೪೭

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

ಹೊಸದಿಲ್ಲಿ ೩೦-೬-೧೯೪೭

ಗಡಿನಾಡಿನ ಮತಗಣನೆ

ಗಡಿನಾಡಿನಲ್ಲಿ ಜರಗಲಿರುವ ಸಾರ್ವತ್ರಿಕ ಮತಗಣನೆಯು ಪ್ರಶ್ನೆಗೆ ಸಾರ್ವಜನಿಕ ದೃಷ್ಟಿಯಲ್ಲಿ ಬಹಳ ಮಹತ್ವ ಬರತೊಡಗಿದೆ. ಅದು ಈವರೆಗೆ ಮತ್ತು ಅಧಿಕೃತವಾಗಿ ಈಗಲೂ ಕಾಂಗ್ರೆಸ್ ಪ್ರಾಂತವಾಗಿರುವದೇ ಇದಕ್ಕೆ ಕಾರಣ. ಹಿಂದು ಇಲ್ಲವೆ ಮುಸ್ಲಿಂ ಎಂಬ ಅನ್ಯಾಯದ ಧ್ವನಿಯುಳ್ಳ ಹಿಂದುಸ್ತಾನ ಅಥವಾ ಪಾಕಿಸ್ತಾನ ಇವುಗಳಲ್ಲೊಂದನ್ನು ಆರಿಸಿಕೊಳ್ಳಿರೆಂಬುದು ಬಾದಶಹಾಖಾನರಿಗೂ ಅವರ ಅನುಯಾಯಿಗಳಿಗೂ ಸೊಗಸುವದಿಲ್ಲ. ಬಾದಶಹಾ ಅವರು ಈ ತೊಡಕಿನಿಂದ ಹೇಗೆ ಪಾರಾಗಬೇಕು? ಡಾ. ಖಾನಸಾಹೇಬರೊಡನೆ ವಿಚಾರಿಸಿ, ವ್ಹಾಯಿಸರಾಯರ ನೇರವಾದ ಮೇಲ್ವಿಚಾರಣೆಯಲ್ಲಿ ಜನಮತಗಣನೆಯಾಗಬೇಕೆಂಬುದಕ್ಕೆ ಕಾಂಗ್ರೆಸ್ಸು ವಚನಬದ್ಧವಾಗಿದೆ. ಅದೇ ಪ್ರಕಾರ ಗೊತ್ತುಮಾಡಿದ ವೇಳೆಗೆ ಮತಗಣನೆ ನಡೆದೂ ನಡೆಯುವದು. ಖುದಾಯಿ ಖಿದಮತಗಾರರು ಮಾತ್ರ ತಮ್ಮ ಮತಾಧಿಕಾರವನ್ನು ಉಪಯೋಗಿಸುವದಿಲ್ಲ. ಆ ಮೂಲಕ ಮುಸ್ಲಿಂ ಲೀಗಿಗೆ ಮುಕ್ತರಂಗವನ್ನೂ ಕೊಟ್ಟಂತಾಗುವದು, ತಮ್ಮ ಮನಸ್ಸಾಕ್ಷಿಗೆ ವಿರುದ್ಧವಾಗಿ ಆಚರಿಸದೆ ಪ್ರಾಮಾಣಿಕತೆಯನ್ನು ಕಾಯ್ದುಕೊಂಡಂತೆಯೂ ಆಗುವದು ಎಂದು ಅವರು ಬಗೆಯುತ್ತಾರೆ. ಇದರಿಂದ ಜನ ಮತಗಣನೆಯ ಸಂಬಂಧದಲ್ಲಿ ಮಾಡಿಕೊಂಡ ಒಪ್ಪಂದದ ಕಲಮುಗಳನ್ನು ಮುರಿದಂತಾಗುವದೆ? ಬ್ರಿಟಿಶರೊಡನೆ ನಿರ್ಭಯವಾಗಿ ಹೋರಾಡಿದ ಖುದಾಯಿ ಖಿದ್ಮತಗಾರರು ಮತಗಣನೆಯಲ್ಲಿ ಸೋಲಿಗೆ ಬೆದರುವವರಲ್ಲ. ಸೋಲು ಕಟ್ಟಿಟ್ಟದ್ದೆಂದು ಗೊತ್ತಿದ್ದೂ ಚುನಾವಣೆಗಳನ್ನು ಹೋರಾಡುವದು ರಾಜಕೀಯ ಪಕ್ಷಗಳ ಇತಿಹಾಸದಲ್ಲಿ ನಿತ್ಯವೆಂಬಂತೆ ನಡೆಯುವ ಘಟನೆ. ಬಹಿಷ್ಕಾರ ಹಾಕಿದ ಪಕ್ಷಕ್ಕೆ ಸೋಲು ಒದಗುವ ಸಂಭವ ಅದರಿಂದ ದೂರವಾದಂತಾಗುವದಿಲ್ಲ.

ಪಠಾಣಿಸ್ಥಾನವೇಕೆ

ಈ ಪಠಾಣಿಸ್ತಾನದ ಕೂಗು ಹೊಸದೆಂಬ ಆರೋಪವನ್ನು ಬಾದಶಹಾ ಖಾನರ ಮೇಲೆ ಹೊರಿಸಲಾಗುತ್ತಿದೆ. ನನಗೆ ತಿಳಿದ ಮಟ್ಟಿಗೆ, ಕಾಂಗ್ರೆಸ ಮಂತ್ರಿಮಂಡಲ ಅಧಿಕಾರಕ್ಕೆ ಬರುವ ಮೊದಲೇ ಅಂತರಿಕ ವಿಚಾರಗಳಲ್ಲಿ ಪಠಾಣರಿಗೆ ಸ್ವಾತಂತ್ರ್ಯ ಬೇಕೆಂದು ಬಾದಶಹಾ ಖಾನರು ಬಯಸುತ್ತಿದ್ದರು. ಹೊಸದೊಂದು ರಾಜ್ಯವನ್ನುಂಟುಮಾಡುವದು ಅವರ ಇಚ್ಛೆಯಲ್ಲ. ಪ್ರಾಂತದ ರಾಜ್ಯಘಟನೆಯನ್ನು ತಮಗೆ ಬೇಕಾದಂತೆ ರಚಿಸಿಕೊಳ್ಳಲು ಅನುವುಗೊಟ್ಟರೆ ಒಂದಲ್ಲ ಒಂದು ರಾಜ್ಯದಲ್ಲಿ ಸೇರಲು ಅವರು ಸಿದ್ಧರಾಗಿಯೆ ಇದ್ದಾರೆ. ಪಠಾಣರ ಈ ಸ್ವಾಯತ್ತತೆಯ ಉತ್ಕಟೇಚ್ಛೆಗೆ, ಅವರನ್ನು ಅವಮಾನಗೊಳಿಸಿ ಶರಣಾಗತರಾಗುವಂತೆ ಪಳಗಿಸುವದೇ ಉದ್ದೇಶವಾಗಿರದಿದ್ದರೆ, ಯಾರಾದರೂ ಏಕೆ ಅಡ್ಡಿ ಎತ್ತಬೇಕೋ ನನಗೆ ತಿಳಿಯದಾಗಿದೆ.

ಬಾದಶಹಾಖಾನರ ಮೇಲೆ ಇದಕ್ಕಿಂತಲೂ ಕೆಟ್ಟ ಇನ್ನೊಂದು ಅಪಾದನೆಯುಂಟು: ಅವರು ಅಫಗಾಣಿಸ್ತಾನದ ಕೈವಾಡಕ್ಕೊಳಗಾಗಿದ್ದಾರಂತೆ. ಅವರಿಂದ ಇಂಥ ಕೃತ್ಯ ಎಂದೆಂದೂ ಆಗದೆಂದು ನನ್ನ ನಂಬಿಕೆ. ಗಡಿನಾಡ ಪ್ರಾಂತವನ್ನು ಅಫಗಾಣಿಸ್ತಾನದವರು ಸೆಳೆದುಕೊಳ್ಳುವದನ್ನು ಅವರು ಸೈರಿಸಲಾರರು.

ನಾನು ಅವರ ಗೆಳೆಯನಾಗಿರುವದರಿಂದ ಅವರಲ್ಲಿರುವ ಒಂದು ದೋಷವನ್ನು ನಾನು ಒಪ್ಪಿಕೊಳ್ಳುತ್ತೇನೆ. ಬ್ರಿಟಿಶರ ಉದ್ದೇಶಗಳನ್ನೂ ವಚನಗಳನ್ನೂ ಅವರು ಅತ್ಯಂತ ಸಂಶಯಚಿತ್ತದಿಂದ ಕಾಣುತ್ತಾರೆ. ಈ ದೋಷ ಅವರೊಬ್ಬರ ವೈಶಿಷ್ಟ್ಯವೇನೂ ಅಲ್ಲ. ಆದುದರಿಂದ ಅದನ್ನು ಗಮನಿಸಬಾರದೆಂದು ನಾನು ಒತ್ತಾಯಪಡಿಸುತ್ತೇನೆ. ಅವರಂಥ ವರ್ಚಸ್ವಿ ಮುಂದಾಳುಗಳಿಗೆ ಅದು ಶೋಭಿಸುವದಿಲ್ಲೆಂದಿಷ್ಟೇ ಹೇಳಬಹುದು. ಒಂದು ದೃಷ್ಟಿಯಿಂದ ಅದನ್ನು ನಾನು ದೋಷವೆಂದು ಕರೆದಿದ್ದರೂ-ಅದು ದೋಷವೇ ಅಹುದು..ಇನ್ನೊಂದರಿಂದ ಅದೊಂದು ಗುಣವೆಂದೇ ನಾನು ಸಾಧಿಸುತ್ತೇನೆ. ಏಕೆಂದರೆ ಪ್ರಯತ್ನ ಪಟ್ಟರೂ ತಮ್ಮ ವಿಚಾರಗಳನ್ನು ಬಚ್ಚಿಡುವದು ಅವರಿಂದಾಗುವದಿಲ್ಲ, ಮುಚ್ಚುಮರೆ ಮಾಡಲು ಶಕ್ತಿಯೇ ಇಲ್ಲದಷ್ಟು ಪ್ರಾಮಾಣಿಕರವರು.

ಮಂದಿರಪ್ರವೇಶ

ನಾಯಮ್ಮ ಗಡಿನಾಡಿನಿಂದ ನಿಮ್ಮನ್ನು ರಾಮೇಶ್ವರಕ್ಕೆ ಕರೆದೊಯ್ಯಬಯಸುವೆ. ಅಲ್ಲಿ ಶ್ರೀರಾಮನು ಕಲ್ಲು ಹರಳುಗಳಿಂದ ಕಟ್ಟಲಾದ ಸೇತುವೆ ಕಟ್ಟಿ ಲಂಕೆಗೆ ತನ್ನ ಸೈನ್ಯವನ್ನು ಸಾಗಿಸಿ ಅದನ್ನು ಗೆದ್ದನಂತೆ—ಆದರೆ ಅದನ್ನು ತಾನು ಇಟ್ಟುಕೊಳ್ಳದೆ ರಾವಣನ ತಮ್ಮನಿಗೆ ಕೊಟ್ಟನಂತೆ. ಅಲ್ಲಿಯ ಪ್ರಸಿದ್ಧ ದೇವಾಲಯವಿಂದು ಹರಿಜನರಿಗೆ ತೆರೆದು ಹಾಕಲ್ಪಟ್ಟಿತು. ಅಲ್ಲಿಗೆ ದಕ್ಷಿಣಾಪಥದ ಪ್ರಸಿದ್ಧ ದೇವಾಲಯಗಳೆಲ್ಲವೂ— ಕೊಚ್ಚಿ ಸಂಸ್ಥಾನದಲ್ಲಿರುವವನ್ನು ಬಿಟ್ಟು—ಹರಿಜನರಿಗೆ ಮುಕ್ತವಾದಂತಾಯಿತು. ಅವುಗಳಲ್ಲಿ ಅತಿ ಪ್ರಸಿದ್ಧವಾದವುಗಳ ಯಾದಿಯನ್ನು ರಾಜಾಜಿ ನನಗೊದಗಿಸಿದ್ದು ಹೀಗಿದೆ: ಮದುರೆ, ತಿನ್ನವೆಲ್ಲಿ, ಚಿದಂಬರಂ, ಶ್ರೀರಂಗಂ, ಪಳನಿ, ತಿರುವಲ್ಲಿಕೇಣಿ, ತಿರುಪತಿ, ಕಂಚಿ, ಮತ್ತು ಗುರುವಾಯೂರು. ಈ ಯಾದಿ ಇಲ್ಲಿಗೇ ಪೂರ್ತಿಯಾಗಿಲ್ಲ. ಮದ್ರಾಸ ಶಾಸನ ಸಭೆಯ ಹರಿಜನ ಅಧ್ಯಕ್ಷರು ಈ ದೇವಸ್ಥಾನಗಳಲ್ಲಿ ಪ್ರವೇಶ ಪಡೆದ ಹರಿಜನ ಮತ್ತು ಇತರ ಭಕ್ತರ ಮುಂದಾಳಾಗಿದ್ದರು. ಉಚ್ಚಶಿಕ್ಷಣ ಹೊಂದಿದ ಹರಿಜನರೂ ಬೇರೆ ಕೆಲವರೂ ಈ ಎಂದೋ ಆಗಬೇಕಾಗಿದ್ದ ಸುಧಾರಣೆಯನ್ನು ಕಂಡು ನಗಬಹುದು. ಆದರೂ ಅದರ ಸೂಚ್ಯಾರ್ಥವನ್ನು ಯಾರೂ ಮರೆಯುವಂತಿಲ್ಲ. ಏಕೆಂದರೆ ಈ ಸುಧಾರಣೆ ಒಂದು ತೊಟ್ಟು ರಕ್ತ ಚೆಲ್ಲದೆ ಸಾಧಿಸಲ್ಪಟ್ಟಿದೆ. ಕೊಚ್ಚಿ ಸಂಸ್ಥಾನವೂ ತಿರ್ವಾಂಕೂರು, ತಮಿಳುನಾಡು ಮತ್ತು ಬ್ರಿಟಿಶ ಕೇರಳಗಳ ಹೆಜ್ಜೆಯನ್ನು ಬೇಗನೆ ಅನುಸರಿಸಲೆಂದು ಹಾರೈಸೋಣ. ಆದರೆ ಅವಶ್ಯಕ ಅಂತರಿಕ ಸುಧಾರಣೆಗಳು ದೇವಸ್ಥಾನಗಳಲ್ಲಿ ಆಗುವವರೆಗೂ ಮಂದಿರ ಪ್ರವೇಶ ಸುಧಾರಣೆ ಪೂರ್ಣವಾದಂತಾಗದು.

ಹೊಸದಿಲ್ಲಿ ೧—೭—೪೭

ಭಜನೆಯ ಅರ್ಥ

ಇಂದು ಪ್ರಾರ್ಥನಾ ಕಾಲದಲ್ಲಿ ಹಾಡಿದ ಭಜನೆಯನ್ನು ಕುರಿತು ಗಾಂಧೀಜಿ ಮಾತಾಡಿದರು. ಅದನ್ನು ಮಧ್ಯಪ್ರಾಂತದ ತುಕೋಜಿ ಮಹಾರಾಜರು ರಚಿಸಿದರು. ಅದು ಸರಳ ಹಿಂದುಸ್ತಾನಿಯಲ್ಲಿ ಬರೆಯಲ್ಪಟ್ಟಿರುವದರಿಂದ ಯಾರೂ ಸುಲಭವಾಗಿ ಅರ್ಥ ಮಾಡಿಕೊಳ್ಳಬಲ್ಲರು-ಪರಮಾತ್ಮ ಸಾಕ್ಷಾತ್ಕಾರದ ಕಂಟಕಮಯ ಮಾರ್ಗವನ್ನು ಕೊರೆಸಿಕೊಡುವದರಲ್ಲಿಯೇ ಅದರ ಹಿರಿಮೆಯುಂಟು. ಮನೆಮಾರುಗಳ ನಾಶ, ಅಪಮಾನ, ರೋಗರುಜೆಗಳೇ ಮೊದಲಾದ ವೈಯುಕ್ತಿಕ ಅನಾಹುತಗಳನ್ನು ಭಕ್ತನು ಧೈರ್ಯದಿಂದ ಎದುರಿಸಬೇಕೆಂದು ಅದು ಹೇಳುತ್ತದೆ. ಇಂಥ ತಾಪತ್ರಯದ ನಡುವೆಯೂ ಪರಮಾತ್ಮನನ್ನು ನೆನೆದುಕೊಂಡು ಒಳಗಿನ ಆನಂದವನ್ನು ಸವಿಯಬಲ್ಲವನೇ ಧನ್ಯನು.

ಹೃದಯಗಳ ಐಕ್ಯ

ನನ್ನ ಭಾಷಣಗಳಿಂದ ನಾನು ಭೌಗೋಲಿಕ ಪುನರ್ಮಿಲನವನ್ನು ಹಾರೈಸುತ್ತೇನೆಂದು ಅರ್ಥವಾಗುವದೆಂದು ಕೆಲವರು ತಿಳಿದಿದ್ದಾರೆ. ಈ ಆಸೆ ಬಯಲಾಸೆಯೆಂದೂ ಇದರಿಂದ ಮುಸ್ಲಿಮರ ಮನನೊಂದುದೊಂದೇ ಅಂತೆಂದೂ ಹೇಳುತ್ತಾರೆ. ಆದರಿಂದ ಉಭಯ ಭಾಗಗಳು ಸಹಕರಿಸಬೇಕೆಂದು ಉಪದೇಶ ಮಾಡಬೇಕೆಂದು ನನಗೆ ಸೂಚಿಸಲಾಗಿದೆ. ಪರಸ್ಪರ ಹಿತದೃಷ್ಟಿಯಿಂದ ಎರಡೂ ಭಾಗಗಳ ಪುನರ್ಮಿಲನವಾಗುವದನ್ನು ನಾನು ಯಾವಾಗಲೂ ಸ್ವಾಗತಿಸುವೆನಾದರೂ ಬಯಲಾಸೆಯನ್ನು ಕಟ್ಟಿಕೊಂಡ ಅಪವಾದಕ್ಕೆ ಅರ್ಹನಲ್ಲ. ವ್ಯರ್ಥವಾಗಿ ಯಾರ ಮನಸ್ಸನ್ನೂ ನೋಯಿಸಲೊಲ್ಲದ ನಾನು ಮುಸ್ಲಿಂ ಬಾಂಧವರ ಮನನೋಯಿಸಬಯಸುವದು ಕಲ್ಪನಾತೀತ. ನಾನು ಉಪದೇಶಿಸುತ್ತ ಬಂದಿರುವದು ಸಹಕಾರಕ್ಕಿಂತಲೂ ಮಿಗಿಲಾದದು. ಹಿರಿಯ ಜಾತಿ ಯೋಗ್ಯರೀತಿಯಲ್ಲಿ ನಡೆದುಕೊಳ್ಳಬೇಕೆಂದು ನಾನು ಬಿನ್ನವಿಸಿಕೊಂಡಿದ್ದೇನೆ. ಸೇಡಿನ ಭರದಲ್ಲಿ ರಾಷ್ಟ್ರದ್ವಯದ ಸಿದ್ಧಾಂತದ ಬಲೆಗೆ ಬೀಳುವ ಗಂಡಾಂತರವುಂಟೆಂದು ನಾನು ಜನರನ್ನು ಎಚ್ಚರಿಸಿದ್ದೇನೆ. ಬೇರೆ ರಾಷ್ಟ್ರವಾಗುವದೂ ಆಗದಿರುವದೂ ಹಿರಿಯ ಜಾತಿಯ ಕೈಯಲ್ಲಿದೆ. ಸಂಖ್ಯಾಬಲದ ಗರ್ವದಲ್ಲಿ ಮುಳುಗಿದರೆ ನಾವೆಂದೂ ಸರಿಯಾದ ನಿರ್ಣಯಕ್ಕೆ ಬರಲಾರೆವು. ಸಂಖ್ಯಾಬಲದಲ್ಲಿ ಗಂಡಾಂತರವುಂಟೆಂದು ಹೇಳುವದರಲ್ಲಿಯೂ ಸಂಖ್ಯಾಬಲದಲ್ಲಿ ಸುರಕ್ಷಿತತೆಯುಂಟೆಂಬ ಮಾತಿನಲ್ಲಿರುವಷ್ಟೇ ಸತ್ಯವುಂಟು. ಅಹಂಕಾರ, ದುರ್ಭಿಕತನಗಳನ್ನು ಬದಿಗಿಟ್ಟು ವಿನಯ, ವಿವೇಕಗಳನ್ನು ಆಶ್ರಯಿಸುವ ಕಾಲ ಬಂದಿದೆ. ಹಿಂದುಗಳೇ ಬಹಳ ಜನರಿರುವಲ್ಲಿ ಮುಸ್ಲಿಮ ಪ್ರವಾಸಿಗಳನ್ನು ಕೆಟ್ಟರೀತಿಯಲ್ಲಿ ನಡೆಸಿಕೊಳ್ಳಲಾಗುತ್ತಿದೆಯೆಂದು ದೂರಿಡುವ ತಂತಿಯೊಂದು ನನಗೆ ಮುಸ್ಲಿಮಲೀಗ್ ಕಾರ್ಯದರ್ಶಿಯೊಬ್ಬನಿಂದ ಬಂದಿದೆ. ಈ ದೂರಿನಲ್ಲಿ ಎಷ್ಟು ತಥ್ಯವುಂಟೋ ನಾನರಿಯೆ. ಇಂಥ ಎಷ್ಟೋ ದೂರುಗಳು ವಿಚಾರಿಸಿದಾಗ ಹುರುಳಿಲ್ಲದವುಗಳಾಗಿ ಕಂಡುಬಂದಿವೆ. ಆದರೂ ಉದಾಹರಣೆಗೆ ಈ ತಂತಿಯೆ ನನಗೆ ಸಾಕು. ಈ ಸುದ್ದಿಯಲ್ಲಿ ಸತ್ಯಾಂಶವಿಲ್ಲದಿರಲೆಂದು ಹಾರೈಸುತ್ತೇನೆ. ಇದ್ದರೆ ಮಾತ್ರ ಅದು ಹಿಂದುಗಳಲ್ಲಿಯ ಗರ್ವ, ಉದ್ಧಟತನಗಳ ಲಕ್ಷಣ. ಅದು ಯಾರಿಗಾದರೂ ಲಾಂಛನಾಸ್ಪದ ಸಂಗತಿ.

ಸೀಖರು

ಆ ಮೇಲೆ ಗಾಂಧೀಜಿ ಕೆಲ ಸೀಖ ಗೆಳೆಯರು ಬಂದು ತಮಗೆ ಭೆಟ್ಟಿಯಾದ ಸಮಾಚಾರವನ್ನೆತ್ತಿಕೊಂಡರು. ತಮ್ಮ ಗೆಳೆಯರೆಂದು ಯಾರನ್ನು ಕರೆಯುತ್ತಿದ್ದರೋ ಅವರನ್ನು ದುರ್ಲಕ್ಷಿಸುತ್ತಿದ್ದಾರೆಂಬ ಆರೋಪವನ್ನು ಹೊರಿಸಿ ಯುವಕನೊಬ್ಬನು ಬರೆದ ಪತ್ರವನ್ನೂ ಅವರು ಉಲ್ಲೇಖಿಸಿದರು. "ಸೀಖರನ್ನು ನನ್ನ ಗೆಳೆಯರೆಂದು ಕರೆಯಲು ನನಗೆ ಹೆಮ್ಮೆಯೆನಿಸುತ್ತದೆ" ಎಂದರು ಗಾಂಧೀಜಿ. "ಸೀಖರು ನನ್ನ ಸತ್ಯಾಹಿಂಸೆಗಳ ಉಪದೇಶವನ್ನು ಅನುಸರಿಸಲು ಒಪ್ಪಿಕೊಂಡದ್ದು ನಂಕಣಸಾಹೇಬ ದುರಂತ ಸಂಭವಿಸಿದಾಗ. ಅದರಿಂದ ಅವರಿಗೆ ಯಾವ ಹಾನಿಯೂ ಆಗಿಲ್ಲ. ಸ್ವತಃ ನನಗೆ ಸೀಖ ಧರ್ಮಕ್ಕೂ ಹಿಂದೂ ಧರ್ಮಕ್ಕೂ ಏನೂ ಭೇದ ಕಾಣುವದಿಲ್ಲ. ಅವೆರಡೂ ಒಂದೇ ಧರ್ಮದ ಎರಡು ವಿಭಾಗಗಳು. ದೇವನಾಗರೀ ಲಿಪಿಯಲ್ಲಿ ಬರೆದ ಗ್ರಂಥ ಸಾಹೇಬವನ್ನೋದಿದಾಗ ನನಗೆ ಅದರ ಭಾಷೆಯನ್ನು ಅರ್ಥ ಮಾಡಿಕೊಳ್ಳುವದು ಅಷ್ಟೇನೂ ಕಷ್ಟವಾಗಲಿಲ್ಲ. ನಾನಕ ಸಾಹೇಬರೂ ಇತರ ಗುರುಗಳೂ ರಚಿಸಿದ ಬೇರೆ ಬೇರೆ ಭಜನೆಗಳೆಲ್ಲ ವೇದಗಳಿಂದಲೂ ಪುರಾಣಗಳಿಂದಲೂ ಸಂಗ್ರಹಿಸಲ್ಪಟ್ಟವುಗಳೆಂದು ನನ್ನ ಭಾವನೆ. ಆದರೂ ಸೀಖರು ತಾವು ಹಿಂದುಗಳಿಗಿಂತ ಭಿನ್ನರೆಂದು ತಿಳಿದುಕೊಂಡರೆ ಅದಕ್ಕೆ ನನ್ನ ಆಕ್ಷೇಪವಿಲ್ಲ. ಈ ಭಾವನೆಯನ್ನು ಕಟ್ಟಿಕೊಂಡರೆ ಆಗ ಅವರ ಸ್ಥಿತಿ ನಿಸ್ಸಹಾಯವಾಗಿದೆಯೆಂದು ನಾನೊಪ್ಪುವೆ. ಇದರ ಪರಿಹಾರೋಪಾಯ ಅವರ ಕೈಯಲ್ಲೇ ಇದೆಯೆಂಬಲ್ಲಿ ಸಂದೇಹವಿಲ್ಲ ಖಡ್ಗಧಾರಣದಲ್ಲಿರುವ ಶೌರ್ಯಕ್ಕಿಂತ

—೮ನೇ ಪುಟಕ್ಕೆ

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣ

(೩ನೇ ಪುಟದಿಂದ)

ಅಗಾಧವಾದ ಉಚ್ಚತರ ಅಹಿಂಸಾ ಶೌರ್ಯವನ್ನು ಅವರು ತೋರಿಸಲು ಸಮರ್ಥರಾಗಿದ್ದಾರೆ. ಅವರೊಳ್ಳೇ ಉದ್ಯಮಶೀಲರು. ಕೆನಡಾದಲ್ಲಿ ಕೂಡ ಅವರನ್ನು ಕಾಣಬಹುದು. ಸೈರೋಬಿಗೆ ರೇಲ್ವೆಯನ್ನು ಕಟ್ಟಲು ಅವರೇ ಬಹಳ ಮಟ್ಟಿಗೆ ಕಾರಣರಾದರು. ಅವರ ಇತರ ಸಾಹಸಗಳನ್ನು ಉದಾಹರಿಸಬಲ್ಲೆ. ಅವರು ಕುಡಿಯುವ ಚಟವನ್ನು ಮಾತ್ರ ಬಿಟ್ಟು ಬಿಡಬೇಕೆಂದು ಕೇಳಿಕೊಳ್ಳುವೆ. ಸೀಖರೇಗಸರು ಏಕ-ಅರಾಮದ ಚಾಳಿಗಳಿಗೆ ಬಿದ್ದು ಶಕ್ತಿಪ್ರಾಸವಮಾಡಿಕೊಳ್ಳುತ್ತಾರೆಂದು ಕೇಳಿದ್ದೇನೆ. ಅದನ್ನೂ ತ್ಯಜಿಸಬೇಕು. ಉಳಿದವರೇನು ಸೀಖರಿಗಿಂತ ಸಂಭಾವಿತರೇ ಎಂದು ಅಪ್ಪ ಮಾತಾಡುವದರಿಂದ ಫಲವಿಲ್ಲ. ಸೀಖರು ತಮ್ಮ ಕೀರ್ತಿಯನ್ನು ಕಾಪಾಡಿಕೊಳ್ಳಬೇಕಾದರೆ ತಮ್ಮ ಸಂಖ್ಯಾದೌರ್ಬಲ್ಯವನ್ನು ಭರ್ತಿ ಮಾಡಿಕೊಳ್ಳಲು ಅಸಾಮಾನ್ಯ ಶೌರ್ಯವನ್ನೂ ಸರಳ ಜೀವನದಿಂದ ಹುಟ್ಟುವ ವಿಚಾರಶೀಲತೆಯನ್ನೂ ಸಾಧಿಸಬೇಕು. ಖಡ್ಗವೆಂಬುದು ತುಕ್ಕು ಹಿಡಿದ ಆಯುಧ. ಅದಕ್ಕಿಂತ ಪರಿಣಾಮಕಾರಿಯಾದ ಸಾಧನವೆಂದರೆ ಸಾತ್ವಿಕ ತೇಜ. ಅದಕ್ಕೆ ಏನೂ ಬೆಲೆ ತೆರಬೇಕಾದುದಿಲ್ಲ ಆದರೂ ಅದು ಅವಿನಾಶಿಯಾದುದು.”

ವಾಯಿಸರಾಯ ಭವನ

ವಾಯಿಸರಾಯ ಭವನಕ್ಕೆ ತಾವಿಂದು ಹೋಗಲು ಕಾರಣವೇನಿದ್ದಿರಬಹುದೆಂದು ತಿಳಿಯಲು ಜನರು ಆತುರ ಪಡುತ್ತಿರಬಹುದು, ಎಂದು ಗಾಂಧೀಜಿ ಹೇಳಿದರು. ವಾಯಿಸರಾಯರನ್ನು ಕಾಣಲೆಂದು ತಾವು ಹೋಗಿದ್ದಿಲ್ಲ. ಪಂ. ನೆಹರೂ ಹಾಗು ಇತರ ಮಿತ್ರರ ಸಂಗಡ ಕಾಲ ಕಳೆಯಲು ಹೋಗಿದ್ದೆವು. ಅವರ ಭೆಟ್ಟಿಯಾಯಿತೆಂಬದಕ್ಕಿಂತ ಹೆಚ್ಚು ಜನರ ಕುತೂಹಲವನ್ನು ಸಮಾಧಾನಗೊಳಿಸಲು ಶಕ್ಯವಿಲ್ಲಂದಾಗದೆಂದು ಅವರು ಹೇಳಿದರು. ಈ ಸಂಬಂಧದಲ್ಲಿ ಸುದ್ದಿಗಾರರೂ ಊಹಾಪೋಹ ನಡೆಸಬಾರದೆಂದು ಅವರು ಬಯಸಿದರು. ಸಂಧಿಕಾಲದಲ್ಲೂ ಸೂಕ್ಷ್ಮ ಪ್ರಸಂಗಗಳಲ್ಲೂ ಬರಲಿರುವ ಘಟನೆಗಳನ್ನು ಊಹಿಸಹೋಗುವದರಿಂದ ದೇಶಕ್ಕೆ ನಿಶ್ಚಯವಾಗಿಯೂ ಹಾನಿಯೊದಗುವದು.

ನಂಬುವದು ಕರ್ತವ್ಯ

ಕೊನೆಯಲ್ಲಿ ಗಾಂಧೀಜಿ ನಿನ್ನೆ ಸಭಾಂತ್ಯದಲ್ಲಿ ತಮಗೆ ಬಂದ ಒಂದು ಪತ್ರದ ಪ್ರಸ್ತಾಪವನ್ನೆತ್ತಿದರು. ಆ ಪತ್ರ ಬರೆದವನು ಇಂಗ್ಲೀಷ ಜನರು ವಿಶ್ವಾಸಕ್ಕೆ ಅಯೋಗ್ಯರೆಂದೂ ಎಂದೆಂದೂ ತಾವಾಗಿ ನ್ಯಾಯವಾದ ಕೆಲಸ ಮಾಡುವವರಲ್ಲೆಂದೂ ತಿಳಿಸಿದ್ದಲ್ಲದೆ, ವೈಸರಾಯರು ಸರಳ ರೀತಿಯಾಗಿ ಹೇಳುವ ಮಾತನ್ನು ನಂಬುವಷ್ಟು ಧೈರ್ಯ ತೋರಿದ ಗಾಂಧೀಜಿಯೂ ಅಯೋಗ್ಯರೆಂದು ಆರೋಪಿಸಿದ್ದನು. ಯಾವನೊಬ್ಬನನ್ನು ವಿಶ್ವಾಸಘಾತಕನೆಂದು ಸಿದ್ಧವಾಗುವ ವರೆಗೆ ಅವನಲ್ಲಿ ಅವಿಶ್ವಾಸ ತೋರಕೂಡದೆಂಬ ಶ್ರೇಷ್ಠ ನಿಯಮವನ್ನು ಅನುಸರಿಸಬೇಕೆಂದು ಗಾಂಧೀಜಿ ಅದಕ್ಕೆ ಉತ್ತರಕೊಟ್ಟರು. ಅವನು ವಿಶ್ವಾಸಕ್ಕೆ ಅನರ್ಹನೆಂದು ಸಿದ್ಧವಾದೊಡನೆ ಅವನೂ ಅವನ ಘನತೆಯೂ ಕುಸಿದು ಬೀಳುವದು. ತಮಗಾದರೂ ಅದೇ ನಿಯಮ ಅನ್ವಯಿಸುತ್ತದೆ. ತಾವು ನಿಜವಾಗಿ ಅಯೋಗ್ಯರಾಗಿದ್ದರೆ ಬದುಕುವ ಅಧಿಕಾರಕ್ಕೇ ಎರವಾಗುವದು ಖಂಡಿತ.

ಹೊಸದಿಲ್ಲಿ ೨—೭—೧೯೪೭

ಗತಿಗೇಡಿ ಧ್ಯೇಯಗಳು ಹಿಂದುಸ್ತಾನಿ

ಗತಿಗೆಟ್ಟ ಧ್ಯೇಯಗಳನ್ನು ಪ್ರಚುರಪಡಿಸುವದರಲ್ಲಿ ಜೀವನವನ್ನು ವ್ಯರ್ಥವಾಗಿ ಹಾಳು ಮಾಡುವರೆಂದು ತಮ್ಮನ್ನು ನಿಂದಿಸುವವರಿದ್ದಾರೆ ಎಂದು ಗಾಂಧೀಜಿ ಇಂದು ಪ್ರಾರ್ಥನೋತ್ತರ ಭಾಷಣದಲ್ಲಿ ಹೇಳಿದರು. “ಜೀವನದ ಸಂಧ್ಯಾಕಾಲದಲ್ಲಿ ನಾನು ನಿವೃತ್ತನಾಗಬೇಕು. ಇಲ್ಲವೆ ಹೆಚ್ಚು ಜನಪ್ರಿಯ ಧ್ಯೇಯಗಳನ್ನು ಪ್ರತಿಪಾದಿಸಬೇಕಂತೆ. ಗತಿಗೆಟ್ಟ ಧ್ಯೇಯಗಳನ್ನು ಎತ್ತಿಹಿಡಿಯುವವನು ನಾನೆಂಬ ಆರೋಪವನ್ನು ನಾನು ಸಂತೋಷದಿಂದ ಒಪ್ಪಿಕೊಳ್ಳುವೆ. ಆದರೆ ಅದರಿಂದ ನಾನು ನನ್ನ ಜೀವನವನ್ನು ವ್ಯರ್ಥ ವ್ಯಯಿಸುತ್ತಿದ್ದೇನೆಂಬುದು ಮಾತ್ರ ಸರಿಯಲ್ಲ. ಉದಾಹರಣೆಗಾಗಿ ನಾಗರಿ, ಉರ್ದು ಎರಡೂ ಲಿಪಿಗಳಲ್ಲಿ ಹಿಂದುಸ್ತಾನಿಯನ್ನು ಜನಪ್ರಿಯಗೊಳಿಸುವದನ್ನೆ ಪ್ರಯತ್ನಗಳು. ಅದೂ ಪಾಕಿಸ್ತಾನವೀಗ ಸ್ಥಾಪಿತವಾದಂತೆಯೆ ಆಗಿರುವಾಗ— ಮುಳಲಿನಿಂದ ಹಗ್ಗ ಹೊಸೆದಂತೆಂದು ಹೇಳಲಾಗಿದೆ. ಈ ಅಭಿಪ್ರಾಯಕ್ಕೆ ನಾನೆಂದೂ ಒಪ್ಪಲಾರೆ. ಪಾಕಿಸ್ತಾನದಿಂದ ರೂಪಿತವಾಗುವದೆಂದು ಹೇಳಲಾದ ಸಿದ್ಧಾಂತಕ್ಕೆ ಮನ್ನಣೆ ಕೊಡದಿರುವಷ್ಟು ಬುದ್ಧಿ ನನಗಿನ್ನೂ ಇದೆ. ಎರಡೂ ಲಿಪಿಗಳನ್ನು ಮನಸ್ಸುಗೊಟ್ಟು ಅಭ್ಯಸಿಸಿ ಎರಡರ ಸಮರಸ ಸಮ್ಮಿಶ್ರಣವುಳ್ಳ ಭಾಷೆಯಲ್ಲಿ ಮಾತಾಡುವದನ್ನು ಕಲಿಯಲು ಇದೀಗ ಎಲ್ಲಕ್ಕಿಂತ ಸುಮುಹೂರ್ತವೆಂದೇ ನನ್ನ ಹೇಳಿಕೆ. ಉತ್ತರದಲ್ಲಿ ಉರ್ದು ಲಿಪಿಯಲ್ಲಿ ಬರೆದ ಉರ್ದು ಭಾಷೆಯನ್ನಷ್ಟೆ ಬಲ್ಲ ಅನೇಕ ಹಿಂದುಗಳಿರುವರೆಂಬದನ್ನು ನಾವು ಮರೆಯಬಾರದು. ಈ ಹಿಂದುಗಳು ಉರ್ದು ಭಾಷೆಯನ್ನೂ ಲಿಪಿಯನ್ನೂ ಮರೆತು ನಾಗರೀ ಲಿಪಿಯಲ್ಲಿ ಬರೆದ ಹಿಂದಿಯನ್ನು ಕಲಿಯಬೇಕೆ? ನನಗೆ ಹುಚ್ಚು ಹಿಡಿದಿದೆಯೆಂದು ಹೇಳಿದರೂ ಆ ಹುಚ್ಚಿನಲ್ಲೊಂದು ಓರಣವುಂಟು. ಯಾವುದೊಂದು ಕಾರ್ಯ ಯೋಗ್ಯತೆಯನ್ನು ನಿರ್ಣಯಿಸಬೇಕಾದರೆ ಬೇರೆಯವರೂ ಆ ಮಾರ್ಗವನ್ನು ಹಿಡಿಯುದಿದ್ದರೆ, ಮುಳಲಿನಿಂದ ಹಗ್ಗ ಹೊಸೆಯುವ ಪ್ರಯತ್ನದಂತೆ, ಅದನ್ನು ಪ್ರಾರಂಭಿಸಿದವನಿಗೂ ಅದು ನಿರುಪಯೋಗಿಯಾಗಬಹುದೇ ಎಂದು ನೋಡಬೇಕು. ನನ್ನ ಹಿಂದುಸ್ತಾನೀ ವಿಚಾರವನ್ನು ಈ ಪರೀಕ್ಷೆಗೊಳಪಡಿಸೋಣ. ಇಡಿ ಹಿಂದುಸ್ತಾನದಲ್ಲಿ ಎರಡೂ ಲಿಪಿಗಳನ್ನರಿತವನೂ ಹಿಂದೀ ಉರ್ದು ಇವೆರಡರಲ್ಲಿಯೂ ಪ್ರಭುತ್ವಗಳಿಸಿದವನೂ ನಾನೊಬ್ಬನೇ ಇದ್ದರೆ ಆಗ ಪಾಕಿಸ್ತಾನದಲ್ಲಿಯೂ ಹಿಂದೀ ಒಕ್ಕೂಟದಲ್ಲಿಯೂ ಬಹಳ ಅವಶ್ಯ ಬೀಳುವ ಪ್ರಸಿದ್ಧ ವಿದ್ವಾಂಸನೆಂದು ಪರಿಗಣಿಸಲ್ಪಟ್ಟೇನು. ದುರ್ದೈವದಿಂದ ನಾನು ವಿದ್ವಾಂಸನಲ್ಲ. ನನ್ನ ಹಿಂದುಸ್ತಾನಿಯೂ ಮನವೋಹಕವಾಗುವಷ್ಟು ಮಧುರವಾಗಿಲ್ಲ. ಇದಲ್ಲದೆ ಜೀವನದ ಅವಸಾನ ಕಾಲದಲ್ಲಿ ಮನುಷ್ಯನು ಜನ ಮೆಚ್ಚುವ ಧ್ಯೇಯಗಳಿಗೇ ಬೆಂಬಲ ಕೊಡಬೇಕೆನ್ನುವದು ದುಷ್ಟ ಸೂಚನೆ. ಜನಪ್ರಿಯ ಧ್ಯೇಯಗಳಿಗೆ ಬೆಂಬಲವೇ ಬೇಕಾಗುವದಿಲ್ಲ. ಬದಲಿಗೆ ಜನಪ್ರಚುರವಾದ ಅಂಧಶ್ರದ್ಧೆಗಳಂತೆ ಅವುಗಳನ್ನೂ ಸರ್ವಸಾಮರ್ಥ್ಯದಿಂದ ಪ್ರತಿಭಟಿಸುವದು ಒಮ್ಮೊಮ್ಮೆ ಅವಶ್ಯವೆನಿಸುತ್ತದೆ. ಆದರಿಂದ ದೇಶವನ್ನು ವ್ಯಾಪಿಸಿರುವ ಹುಚ್ಚುತನದ ಲಹರಿಯನ್ನು ಎದುರಿಸಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಮೂಲತಃ ನ್ಯಾಯವಾದ ಯಾವ ಧ್ಯೇಯವನ್ನೂ ಗತಿಗೆಟ್ಟ ಧ್ಯೇಯವೆಂದು ಕರೆಯಬರುವದಿಲ್ಲ.”

ಹಳ್ಳಿಗಳು ಅಲಿಪ್ತ

ಹೊಸದಿಲ್ಲಿ ೩—೭—೪೭

ನೀರಿನಲ್ಲಿದ್ದ ಮೀನು ನೀರಡಿಸಿದಂತೆ ವರ್ತಿಸುತಿರುವದನ್ನು ನೋಡಿ ಜನ ನಗುತಿರುವದು ಎಂಬ ಸಾಯಂಕಾಲ ಭಜನೆಯ ಮೊದಲನೆಯ ಪಂಕ್ತಿಯನ್ನು ಗಾಂಧೀಜಿ ಉಲ್ಲೇಖಿಸಿದರು. ಪರಮಾತ್ಮನ ಲೋಕದಲ್ಲಿದ್ದುಕೊಂಡು ಅವನನ್ನು ತಿಳಿಯದ ಮನುಷ್ಯನ ಪರಿಸ್ಥಿತಿ ಆ ಕಲ್ಪನಾ ಸೃಷ್ಟಿಯಲ್ಲಿನ ಮೀನಿನಂತೆ ಇದೆ. ಮನುಷ್ಯ ತನ್ನನು ತಾ ತಿಳಿದುಕೊಂಡದ್ದಾದರೆ ಇಂದಿನ ದುಃಸ್ಥಿತಿಯಲ್ಲಿ! ಅವನೆಂದಿಗೂ ಉಳಿಯಲಾರ. ಆ ಪರಿಸ್ಥಿತಿಯನ್ನು ನಿರೀಕ್ಷಿಸುವದು ಅದೆಷ್ಟು ಸಂತೋಷಪ್ರದ? ಹಿಂದುಸ್ತಾನದ ದುರ್ದೈವದಿಂದ ಪಾಶವೀ ಹತ್ಯಾಕಾಂಡ ಕೇವಲ ನಗರಗಳಿಗೆ ಮತ್ತು ಅವುಗಳ ಸುತ್ತಲಿರುವ ಹಳ್ಳಿಗಳಿಗೆ ಪರಿಮಿತವಾಗಿತ್ತು. ೧೯೦೦ ಮೈಲು ಉದ್ದ ಮತ್ತು ೧೫೦೦ ಮೈಲು ಅಗಲದ ಹಿಂದುಸ್ತಾನದಂಥ ವಿಶಾಲ ದೇಶದಲ್ಲಿ ಇಂಥ ಹಳ್ಳಿಗಳು ಸಾವಿರಗಟ್ಟಲೆ ಎಣಿಸುವಷ್ಟು ಇರುವದಿಲ್ಲ. ನಗರಗಳಲ್ಲಿ ಮತ್ತು ಸುತ್ತಲಿನ ಹಳ್ಳಿಗಳಲ್ಲಿ ನಡೆದ ದುಷ್ಟಚಾರಗಳಿಂದ ಈ ಸಾವಿರಗಟ್ಟಲೆ ಹಳ್ಳಿಗಳು ಅಲಿಪ್ತವಾಗಿದ್ದುವೆಂಬುದು ಸುದೈವದ ಸಂಗತಿ.

ಬ್ರಾಹ್ಮಣ ಅಲ್ಪಸಂಖ್ಯಾಕರು

ತಾವು ವಿವರಿಸಬಯಸಿದ ವಿಷಯವನ್ನು ಮುಂದರಿಸುತ್ತ ಗಾಂಧೀಜಿ ತಮಗೆ ಬಂದ ಒಂದು ಪತ್ರವನ್ನು ಉಲ್ಲೇಖಿಸಿದರು. ಬ್ರಾಹ್ಮಣೇತರರ ಚಳವಳಿಯಿಂದ, ಅತ್ಯಲ್ಪ ಸಂಖ್ಯಾಕರಾಗಿರುವ ಬ್ರಾಹ್ಮಣ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕಾಲೇಜುಗಳಲ್ಲಿ ಮತ್ತು ನೌಕರಿಗಳಲ್ಲಿ ಪ್ರವೇಶ ಸಿಕ್ಕುವುದು ಬಹಳ ದುರ್ಲಭವಾಗಹತ್ತಿದ್ದರಿಂದ ಬ್ರಾಹ್ಮಣರ ಪರಿಸ್ಥಿತಿ ಬಹಳ ಕೆಡಹತ್ತಿದೆಂದು ಆ ಪತ್ರದಲ್ಲಿ ಬರೆಯಲಾಗಿದ್ದನ್ನು ಅವರು ತಿಳಿಸಿದರು. ಬ್ರಾಹ್ಮಣರು ಈ ವರೆಗೆ ಹೆಚ್ಚು ಗ್ರಾಹಕಶಕ್ತಿಯವರು, ಪರಿಶ್ರಮಿಗಳು ಮತ್ತು ಜ್ಞಾನಾರ್ಜನೆಗಾಗಿ ಹೆಚ್ಚು ಆತುರರಾಗಿದ್ದುದರಿಂದ ಅವರು ಪಾಶವೀ ಶಕ್ತಿಯಿಂದಲ್ಲದಿದ್ದರೂ ತಮ್ಮ ಶ್ರೇಷ್ಠ ಸದ್ಗುಣಗಳಿಗಾಗಿ ಎಲ್ಲದರಲ್ಲಿಯೂ ಗುತ್ತಿಗೆ ಹಿಡಿದಂತಾಗಿದ್ದುದರಿಂದ ಮೇಲಿನಂತೆ ತಕರಾರು ಮಾಡಿದವನ ಬಗ್ಗೆ ಸಹಾನುಭೂತಿಯೆನಿಸುತ್ತದೆ. ಈ ಬಗ್ಗೆ ತಾವು ಸಹಾನುಭೂತಿಯನ್ನು ಪ್ರದರ್ಶಿಸಿದರೂ ಅವರ ದುಃಖ ಅಥವಾ ಅಸಮಾಧಾನದಲ್ಲಿ ತಾವೇನು ಪಾಲು ವಹಿಸುವದಿಲ್ಲ, ಮೊದಲನೆಯದಾಗಿ ಬ್ರಾಹ್ಮಣರು ಅಲ್ಪಸಂಖ್ಯಾಕರೆಂಬುದನ್ನು ತಾವು ಒಪ್ಪುವದಿಲ್ಲ. ಒಂದೇ ರಾಷ್ಟ್ರದವರು ನಾವೆಲ್ಲ ಆಗಿದ್ದರೆ ಅಲ್ಪಸಂಖ್ಯಾಕರು ಮತ್ತು ಬಹುಸಂಖ್ಯಾಕರೆಂಬ ಪ್ರಶ್ನೆಯೆ ಉದ್ಭವಿಸುವದಿಲ್ಲ. ಮೊದಲು ತಾವು ಅಲ್ಪಸಂಖ್ಯಾಕರಾಗಿದ್ದುದಕ್ಕೆ ದೂರಿಕೊಂಡು ಅನಂತರ ಬಯಸಿದ ಎಲ್ಲ ಬಗೆಯ ಹಕ್ಕುಗಳು ಸಿಕ್ಕದಿರುವದಕ್ಕೆ ವಿಷಾದಪಟ್ಟುಕೊಳ್ಳಬೇಕಾಗುತ್ತದೆ. ಹಿಂದುಸ್ತಾನದ ಪ್ರಚಂಡ ಜನತೆಯನ್ನು ಬಿಟ್ಟು ತಾವೊಬ್ಬ ಬೇರೆ ವರ್ಗ ಇಲ್ಲವೆ ಗುಂಪಿನವರೆಂಬುದನ್ನು ಮರೆಯತಕ್ಕದ್ದೆಂದು ಬ್ರಾಹ್ಮಣ ಮಿತ್ರರಿಗೆ ತಾವು ಉಪದೇಶಿಸಬಯಸುತ್ತೇವೆ. ಒಂದೇ ಮಾತೃಭೂಮಿಯ ಮಕ್ಕಳು ಭಾರತೀಯರು ಎಂದು ಭಾವಿಸದೆ ಹಿಂದುಗಳೆಂದು ತಿಳಿದುಕೊಂಡರೂ ಹಿಂದೂ ಧರ್ಮದಲ್ಲಿ ಉಚ್ಚ ನೀಚವೆಂಬ ಭೇದಭಾವಗಳಿಲ್ಲ. ಅವರು ಅಲ್ಪಸಂಖ್ಯಾಕರೆಂದು ತಿಳಿದುಕೊಳ್ಳುವದನ್ನು ಬಿಟ್ಟುಗೊಟ್ಟದ್ದಾದರೆ ಅವರು ಹಿಂದೀಯರ ಇಲ್ಲವೆ ಹಿಂದೂ ಮಾನವ್ಯದ ಮಹಾಸಾಗರದ ವೈಭವದಲ್ಲಿ ಪಾಲುಗಾರರಾದುದರ ಅಭಿಮಾನವನ್ನೆ ತಾಳಬಹುದು. ಅಲ್ಲದೆ ಆ ಮಹಾಸಾಗರದಲ್ಲಿಯ ಒಂದು ಬಿಂದುವಿನಂತೆ ಭಾವಿಸಬಹುದು. ಸಾವಿರಾರು ಪ್ರಚಂಡ ಉಗಿಹಡಗಗಳನ್ನು ತನ್ನ ವಿಶಾಲ ವಕ್ಷಃಸ್ಥಳದಲ್ಲಿರಿಸಿಕೊಂಡ ಆ ಮಹಾಸಾಗರದ ಶ್ರೇಷ್ಠತೆಯ ಬಗ್ಗೆ ಅಭಿಮಾನವೆನಿಸಬಹುದು. ಹಿಂದುಸ್ತಾನದಲ್ಲಿಯ ೭ ಲಕ್ಷ ಹಳ್ಳಿಗಳಲ್ಲಿರುವ ಕೋಟ್ಯವಧಿ ಜನತೆಯ ದೃಷ್ಟಿಯಿಂದ ಈ ಕಾಲೇಜುಗಳು ಮತ್ತು ನೌಕರಿಗಳೆಂದರೇನು? ಸರಕಾರದ ಅಧೀನದಲ್ಲಿರುವ ಕಾಲೇಜುಗಳಿಗೆ ಮತ್ತು ನೌಕರಿಗಳಿಗೆ ಹೋಗುವ ಅವಿಷ ತಪ್ಪಿ ಹೋದುದಕ್ಕಾಗಿ ಬ್ರಾಹ್ಮಣ ಮಿತ್ರರು ಸಂತೋಷಪಡಬೇಕೆಂದು ತಮ್ಮ ಸೂಚನೆ. ಇಂಥ ಜನರು ಬಹಳ ಕಡಮೆ ಮತ್ತು ಅಲ್ಲೊಬ್ಬರು ಇಲ್ಲೊಬ್ಬರು. ಕಾಲೇಜ ಪ್ರವೇಶ ಮತ್ತು ನೌಕರಿಗಳನ್ನು ಪಡೆಯುವ ಸ್ಪರ್ಧೆಯಲ್ಲಿ ಭಾಗ ವಹಿಸುವದನ್ನು ನಿರಾಕರಿಸಿದವರೆ ಹಿಂದುಸ್ತಾನದ ನಿಜ ಸೇವಕರು. ಜ್ಞಾನವು ಶಾಲೆ ಮತ್ತು ಕಾಲೇಜಗಳ ಚತುರ್ಭಿತ್ತಿಗಳಿಗೆ ಮಾತ್ರ ಪರಿಮಿತವಾಗಿಲ್ಲ. ಶಾಲೆ ಕಾಲೇಜುಗಳ ಹೊರಗೆ ಪರಿಶ್ರಮಿಗಳಾದ ಹುಡುಗ ಹುಡಿಗೆಯರು ಜ್ಞಾನವನ್ನು ಸಂಪಾದಿಸಬಲ್ಲರು. ಈ ಸಂದರ್ಭದಲ್ಲಿ ನಯೀ ತಾಲೀಮ ಮತ್ತು ಅದರ ರಹಸ್ಯವನ್ನು ತಿಳಿದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ. ಚೊಕ್ಕಾದ ಕರ್ತವ್ಯವನ್ನು ಮಾಡುವುದರಿಂದ ನೇರವಾಗಿ ಪ್ರಾಪ್ತವಾಗುವ ಹಕ್ಕುಗಳ ಪ್ರಾಮಾಣ್ಯದ ಬಗ್ಗೆ ಹೇಳಿದುದನ್ನು ಮತ್ತೊಮ್ಮೆ ನೆನಪಿಗೆ ತರಬಯಸುತ್ತೇವೆ.

ಸರಕಾರಿ ಕಾಲೇಜ ಪ್ರವೇಶಕ್ಕೆ ವಂಶಪರಂಪರಾಗತ ಹಕ್ಕು ಇಲ್ಲ ಎಂಬುದು ಅನಂತರ ಹೊಳೆಯಬಹುದು. ಯಾರಿಗಾದರೂ ಹಕ್ಕು ಪ್ರಾಪ್ತವಾಗುವದಾದರೆ ಈ ವರೆಗೆ ಯಾರಬಗ್ಗೆ ದಕ್ಷತೆ ವಹಿಸಿರಲಿಲ್ಲವೊ ಅಂಥ ಹುಡುಗ ಹುಡಿಗೆಯರಿಗೆ ಅದು ಪ್ರಾಪ್ತವಾಗಬಲ್ಲದು.

ಪರಮಾತ್ಮನ ಜ್ಞಾನ ಮಾಡಿಕೊಳ್ಳುವದೆ ಬ್ರಾಹ್ಮಣರ ಕರ್ತವ್ಯ. ಎರಡನೆಯವರಿಗೆ ಅವನ ಜ್ಞಾನ ಮಾಡಿ ಕೊಡುವದೂ ಅವರ ಧರ್ಮ. ಈ ಕರ್ತವ್ಯವನ್ನು ಮಾಡಿದ್ದಕ್ಕಾಗಿ ಬ್ರಾಹ್ಮಣರಿಗೆ ಅನ್ನ ವಸ್ತ್ರಗಳನ್ನು ಪೂರೈಸುವದು ಆಯಾ ಜನಾಂಗಕ್ಕೆ ಸೇರಿದ್ದಾಗಿದೆ.

ರಾಮರಾಜ್ಯ ಮತ್ತು ಅಹಿಂಸೆ

ಹೊಸದಿಲ್ಲಿ ೪—೭—೧೯೪೭

ಬಹಳ ದೂರವೆಂದರೆ ಆಗಸ್ಟ ೧೫ಕ್ಕೆ ಸಂಪೂರ್ಣ ಸಾಮಂತ ಸ್ವರಾಜ್ಯದಲ್ಲಿ ಪರಿವರ್ತನ ಹೊಂದುತ್ತಿರುವ ಸದ್ಯದ ಆಡಳಿತದಿಂದ ತಮ್ಮ ಕನಸಿನ ಸ್ವರಾಜ್ಯ ಉದಯವಾಗುವುದೆಂದು ಎಂದಾದರೂ ತಮ್ಮ ತಲೆಯಲ್ಲಿ ಬಂದಿದೆಯೆ ಎಂಬ ಸ್ವಾಭಾವಿಕವಾದ ಪ್ರಶ್ನೆಯನ್ನು ತಮಗೆ ಹಾಕಲಾಗುತ್ತದೆ. ಇಡೀ ದೇಶವನ್ನು ಹುರುಪಳಿಸುತಿರುವ ಹಿಂಸೆಯಲ್ಲಿ ಪರಿಣಮಿಸಿರುವ ಕಳೆದ ೩೦ ವರುಷಗಳ ಹಳೆಯ ತಮ್ಮ ಅಹಿಂಸೆಯ ಬಗ್ಗೆ ನಾಚಿಕೆಯೆನಿಸುವದಿಲ್ಲವೆ? ಬರಲಿರುವ ಸಾಮಂತ ಸ್ವರಾಜ್ಯದಿಂದ ರಾಮರಾಜ್ಯಸ್ಥಾಪನೆಯಾಗುವ ಲಕ್ಷಣವಿಲ್ಲವೆಂದು ಒಪ್ಪಲು ನಮಗೆ ವಿಷಾದವಾಗುತಿವೆ. ಬ್ರಿಟಿಶರ ಅಧಿಕಾರ ತ್ಯಾಗದ ಕೊನೆಯ ತಾರೀಖನ್ನು ನಿರ್ದಿಷ್ಟಪಡಿಸುವದಕ್ಕಾಗಿ ಸಾಮಂತ ಸ್ವರಾಜ್ಯದ ಕೊಡುಗೆಯನ್ನು ಮುಂದೆ ಮಾಡಲಾಯಿತೆಂದು ತಮಗನಿಸುತ್ತದೆ. ಹಾಗೆ ಮಾಡಿರದಿದ್ದರೆ ಜೂನ ೩೦ಕ್ಕೆ ಹಿಂದುಸ್ತಾನದಿಂದ ಹೋದಬೇಕೆಂಬ ಯೋಜನೆಯ ದಿನವನ್ನು ಹಿಂದಕ್ಕೆಳೆಯುವದು ತಪ್ಪುವಿಲ್ಲವೆಂದು ಅವರಿಗನಿಸಿತು. ಅದೇನೇ ಇರಲಿ, ಎರಡು ಹೊಸ ಸರಕಾರಗಳು ತಮ್ಮ ಘಟಗಳನ್ನು ಸಿದ್ಧಪಡಿಸಿಕೊಂಡ ಕೂಡಲೆ ಬ್ರಿಟಿಶ ಸಾಮಂತ ರಾಷ್ಟ್ರಗಳಿಂದ ಹೊರಬಿದ್ದು ಸಂಪೂರ್ಣ ಸ್ವರಾಜ್ಯವನ್ನು ಸಾರುವುದು ಅವುಗಳ ಹಕ್ಕಾಗಿದೆ. ಅದೇ ಕಾಲಕ್ಕೆ ಸ್ವತಂತ್ರ ಜಾಗತಿಕ ರಾಷ್ಟ್ರಕುಟುಂಬದಲ್ಲಿ ಸೇರಲು ಹೆಣಗತಕ್ಕದ್ದು. ಈ ಸ್ವತಂತ್ರ ಜಾಗತಿಕ ರಾಷ್ಟ್ರಕುಟುಂಬದಲ್ಲಿ ಎಲ್ಲ ಬಗೆಯ ಅಂತರಿಕ ಸೈನ್ಯಗಳ ಅವಶ್ಯಕತೆಯುಳ್ಳಯದು ಪ್ರಜಾಪ್ರಭುತ್ವ ರಾಷ್ಟ್ರವೆಂದು ನಿರರ್ಥಕವಾಗಿ ಕರೆದುಕೊಳ್ಳುವ ಮತ್ತೊಂದು ಜಪಾನ ಇಲ್ಲವೆ ಜರ್ಮನಿಯಂತೆ ಜಾಗತಿಕ ಶಾಂತಿಗೆ ಕಂಟಕವಾಗಿ ಪರಿಣಮಿಸುವಂಥ ಹೊಟ್ಟೆಕಿಚ್ಚಿನ ಧೋರಣಕ್ಕೆ ಹಿಂದುಸ್ತಾನದಲ್ಲಿ ಸ್ಥಾನವಿಲ್ಲ. ಪ್ರಜಾಪ್ರಭುತ್ವ ಮತ್ತು ಸೈನಿಕ ಧೋರಣ ಪರಸ್ಪರ ವಿರುದ್ಧ ಶಬ್ದಗಳಾಗಿವೆ. ಪ್ರಜಾಪ್ರಭುತ್ವವು ಜಗತ್ತಿನಲ್ಲಿ ತನ್ನ ಶಸ್ತ್ರಾಸ್ತ್ರಗಳ ಆಡಂಬರ ಪ್ರದರ್ಶನವನ್ನವಲಂಬಿಸಲಾಗದು, ತನ್ನ ನೈತಿಕ ಶಕ್ತಿಯ ಉಪಯೋಗ ಇಡೀ ಜಗತ್ತಿಗೆ ಆಗುವಂತೆ ಅದು ನೋಡಿಕೊಳ್ಳತಕ್ಕದ್ದು. ಹಿಂದುಸ್ತಾನದ ಪ್ರಯತ್ನದಿಂದ ಸ್ವತಂತ್ರ ಮತ್ತು ಸ್ವಾಯತ್ತ ರಾಷ್ಟ್ರಗಳ ಜಾಗತಿಕ ಸಂಘದ ಸ್ಥಾಪನೆಯಾದರೆ ರಾಮರಾಜ್ಯವೆಂದು ಕರೆಯಲ್ಪಡುವ ಪರಮಾತ್ಮನ ರಾಜ್ಯದ ಪ್ರಸ್ಥಾಪನೆಯ ನ್ಯಾಯ್ಯವಾದ ಆಸೆ ಫಲಿಸಿದಂತಾಗುವದು. ಆ ಬಗೆಯ ಸಂತೋಷದ ಸಂಗತಿ ಸಂಭವಿಸುವ ಮೊದಲು, ಈಗ ಪರಸ್ಪರ ಶತ್ರುಗಳಾಗಿರುವ ಹೊಸ ಎರಡು ರಾಷ್ಟ್ರಗಳು ಮಿತ್ರ ಮತ್ತು ಸಹಕಾರಿಗಳಾಗಬೇಕಾಗಿದೆ. ಆದರೆ ಲಕ್ಷಣಗಳು ಮಾತ್ರ ತದ್ವಿರುದ್ಧವಾಗಿವೆಂದು ಒಪ್ಪಲು ತಮಗೆ ವಿಷಾದವಾಗುತ್ತದೆ.

ಎರಡನೆಯ ಚುಚ್ಚು ಮಾತು ಮೊದಲನೆಯದರ ಉಪಸಿದ್ಧಾಂತವಾಗಿದ್ದು ಮೊದಲನೆಯದೇ ಎರಡನೆಯದರ ಉಪಸಿದ್ಧಾಂತ. ಕಳೆದ ೩೦ ವರುಷಗಳಿಗಿಂತ ಹಳೆಯದಾದ ಅಹಿಂಸೆಯೆಂದೆನಿಸಿಕೊಳ್ಳುತಿರುವುದರ ಪರಿಣಾಮ ಇಂತು ಆದುದಕ್ಕಾಗಿ ನಾಚಿಕೆ ಪಡಲು ಬೇಕಾದಷ್ಟು ಕಾರಣಗಳಿವೆ. ನಮ್ಮ ಅಹಿಂಸೆ ಅಶಕ್ತರ ಅಹಿಂಸೆಯಾಗಿತ್ತೆಂದು ತಾವು ಈ ಮೊದಲೆ ಒಪ್ಪಿದ್ದಾಗಿದೆ. ಆದರೆ ಹೃದಯದ ಅಶಕ್ತತೆ ಯಾವದೇ ಬಗೆಯ ಅಹಿಂಸೆಯನ್ನು ಪ್ರತಿನಿಧಿಸಲಾರದು. ಅದಕ್ಕೆ ತಕ್ಕ ಶಬ್ದವೆಂದರೆ ನಿಷ್ಕ್ರಿಯ ಪ್ರತೀಕಾರ. ಈ ಪ್ರತೀಕಾರವೆಂದರೆ ಶಸ್ತ್ರಾಸ್ತ್ರಗಳ ಪ್ರತ್ಯಕ್ಷ ವಿರೋಧದ ಸಿದ್ಧತೆ. ಸಶಕ್ತರ ಅಹಿಂಸೆ ಆದಾಗಿದ್ದರೆ ಅದರ ಆಚರಣೆಯಿಂದ ಸದ್ಯದಲ್ಲಿ ನಡೆದ ಜೀವಿತ ಆಸ್ತಿಗಳ ನಾಶ ಶಕ್ಯವಾಗುತಿರಲಿಲ್ಲ. ಆಗ ಬಟ್ಟೆ ಮತ್ತು ಆಹಾರದ ಸೀದಾದ ಅವಶ್ಯಕತೆಯೇ ಬೀಳುತಿರಲಿಲ್ಲ. ಸತ್ಯ ಮತ್ತು ಅಹಿಂಸಾಚರಣೆಯ ವಿಧಿ ವಿಧಾನಗಳು ಜನರಿಗೆ ಗೊತ್ತಿದ್ದರೆ ಅವರೇ ಕೊರತೆಯ ವಿಷಯವನ್ನು ಸರಿಪಡಿಸಿಕೊಳ್ಳುತಿದ್ದರು. ಈ ಕೊರತೆಯನ್ನು ಸ್ಥಳೀಯ ವಸ್ತುಗಳಿಂದಲೆ ಹೋಗಲಾಡಿಸಲಾಗದೆಂಬಲ್ಲಿ ತಮಗೆಂದೂ ವಿಶ್ವಾಸವಿಲ್ಲ. ಭೀಕರ ಯುದ್ಧದಿಂದ ವಿಪರೀತ ಹಾನಿಗೊಳಗಾಗಿ ಕೊರತೆಯಿಂದ ಇಡೀ ಜಗತ್ತು ಕೊರಗುತಿರುವಾಗ ಹಿಂದುಸ್ತಾನದಂಥ ವಿಶಾಲ ರಾಷ್ಟ್ರವು ಜಗತ್ತಿನ ಅನ್ನ ಮತ್ತು ವಸ್ತ್ರಗಳ ಉತ್ಪಾದನೆಯಲ್ಲಿ ಪಾಲು ಬೇಡುವದನ್ನು ತಿರಸ್ಕರಿಸತಕ್ಕದ್ದು. ಹಿಂದುಸ್ತಾನದಲ್ಲಿಯ ಕೋಟ್ಯವಧಿ ಜನರು ಜಾಣತನದಿಂದ ಸಂಘಟಿತ ಪರಿಶ್ರಮ ಮಾಡುವದು ಮಾತ್ರ ಅತ್ಯವಶ್ಯವಾಗಿದೆ. ದೇಶದಲ್ಲಿ ಜಾಣತನ ಮತ್ತು ಕೌಶಲಕ್ಕೇನು ಕೊರತೆಯಿಲ್ಲ. ಕೊನೆಯದಾಗಿ ಅಹಿಂಸೆ ಮತ್ತು ಸತ್ಯದ ನಿಜವಾದ ಹಿಡಿತ ಸಿಕ್ಕಿದ್ದರೆ ಸಿವಿಲ್ ಸರ್ವಿಸಕ್ಕೆ ಮೊರೆ ಹೋಗಬೇಕಿರಲಿಲ್ಲ. ಕ್ರಿಸ್ತವಾಸಿ ಮಾಂಟೇಗರು ಈ ಸಿವಿಲ್ ಸರ್ವಿಸ್ಸೆಂದರೆ ಕಟ್ಟಿಗೆಯ ಯಂತ್ರವೆಂದು ಕರೆದಿದ್ದರೆಂದು ನೆನಪಿದೆ. ಈ ಸಿವಿಲ್ ಸರ್ವಂಟರು ಒಂದು ತರಹದ ತಜ್ಞರು. ರಾಷ್ಟ್ರದ ಕಲ್ಯಾಣಕ್ಕಾಗಿ ಅವರನ್ನೆಂದಿಗೂ ನೇಮಿಸಿಕೊಂಡಿರಲಿಲ್ಲ. ಹೇಗಾದರೂ ಮಾಡಿ ಪರದೇಶೀ ಆಡಳಿತವನ್ನು ಊರ್ಜಿತದಲ್ಲಿಡುವುದಷ್ಟೆ ಅವರ ಕೆಲಸವಾಗಿತ್ತು.

ಅನ್ನಾಭಾವದಿಂದ ಬಳಲುವ ಮತ್ತು ನಗ್ನರಾದ ಕೋಟ್ಯವಧಿ ಜನರುಳ್ಳ ರಾಷ್ಟ್ರದ ಕುಗ್ಗುತಿರುವ ಮನೋಭಾವನೆಗಳನ್ನು ಪುನರುಜ್ಜೀವಿಸುವ ಸದ್ಯದ ಕಾರ್ಯವನ್ನು ಯಶಸ್ವಿಯಾಗಿ ಮಾಡಲು ಅವರು ಬಹಳ ಕಡಮೆ ಇದ್ದರು. ವ್ಯವಹಾರಸ್ಥರು, ಉತ್ಪಾದಕರು ಮತ್ತು ರಾಷ್ಟ್ರೀಯರು ರಾಷ್ಟ್ರಕ್ಕಾಗಿ ಇಂಥ ಅತಿ ಕಠಿಣ ಪರಿಸ್ಥಿತಿಯಲ್ಲಿ ಸ್ವಯಂ ಮುಂದೆ ಬಂದು ಕೆಲಸ ಮಾಡುವದರ ಅಗತ್ಯವನ್ನು ಅವರಿಗೆ ಬಿಂಬಿಸತಕ್ಕದ್ದು. ನೌಕರರು ಈ ಪ್ರಸಂಗದಲ್ಲಿ ಮುಂದೆ ಬರುವರೋ?

—೯ನೇ ಪುಟಕ್ಕೆ

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣ

(೮ ನೇ ಪುಟದಿಂದ)

ಸರಕಾರದ ಅಧಿಕಾರಿಗಳು ತಮ್ಮ ದ್ರಾವಿಡೀ ಪ್ರಾಣಾಯಾಮ ವೃತ್ತಿಯನ್ನು ಬಿಟ್ಟುಕೊಟ್ಟು ಸ್ವಾವಲಂಬಿಗಳಾಗುವಂತೆ ಸಾರ್ವಜನಿಕರ ಮನವೊಲಿಸಲು ಧಾವಿಸುವರೋ? ಇದೆಲ್ಲ ಹೇಗೆ ಮತ್ತು ಏಕೆ ಆದವು?

ಹೊಸದಿಲ್ಲಿ ೫—೭—೧೯೪೭

ವ್ಹಾಯಿಸರಾಯ ಪತ್ನಿಯ ಸಂದರ್ಶನ

ವ್ಹಾಯಿಸರಾಯರ ಪತ್ನಿಯು ಭಂಗಿ ವಸತಿಗೆ ಬಂದುದರ ಬಗ್ಗೆ ಹೇಳಬೇಕೆಂದು ಸಭಿಕರು ತಮ್ಮನ್ನು ಕೇಳುತ್ತಿರುವರು. ಈ ಸಂದರ್ಶನದಿಂದ ಪರಾವೃತ್ತ ಮಾಡಲು ಪ್ರಯತ್ನಿಸಿದ್ದಾಯಿತು. ಉಪಚಾರ ಮುಂತಾದವುಗಳು ತಮಗೇನು ಗೊತ್ತಿಲ್ಲ. ಅವರು ಬರಲಿಕ್ಕಿಲ್ಲೆಂದು ಭಾವಿಸಲಾಗಿತ್ತು. ವ್ಹಾಯಿಸರಾಯರ ಭೆಟ್ಟಿಗೆ ತಾವು ಹೋದುದೆಲ್ಲ ಕೆಲಸಕ್ಕಾಗಿ; ಪ್ರತಿ ಭೆಟ್ಟಿ ಅವಶ್ಯವಿರಲಿಲ್ಲ. ಆದರೆ ವ್ಹಾಯಿಸರಾಯರ ಪತ್ನಿ ವಸತಿಯನ್ನು ಸಂದರ್ಶಿಸಿದರು. ಅವರು ಯಾವಾಗಿನಂತೆ ಅನೌಪಚಾರವಾಗಿಯೆ ವರ್ತಿಸಿದರು, ಎಲ್ಲವನ್ನೂ ತಿಳಿದುಕೊಳ್ಳಲು ಅವರು ಬಯಸಿದರು. ಎದುರಿಗಿನ ಬಸ್ತಿಯನ್ನೂ ಅವರು ಸಂದರ್ಶಿಸಿದರು. ಜನಸಮ್ಮರ್ದ ಕೂಡಬಹುದೆಂಬ ಅಂಜಿಕೆಯಿಂದ ಅವರಗೂಡ ತಾವು ಹೋಗಲಿಲ್ಲ. ಹಳೆ ದಿಲ್ಲಿ ಕಿಂಗ್ಸವೇದಲ್ಲಿರುವ ಹರಿಜನ ನಿವಾಸವನ್ನು ಅವರು ಸಂದರ್ಶಿಸಿದರು. ಹರಿಜನ ಸೇವಕ ಸಂಘದ ನೇತೃತ್ವದಲ್ಲಿ ಇಲ್ಲಿ ಹರಿಜನ ತರುಣರಿಗೆ ಶಿಕ್ಷಣವನ್ನು ಕೊಡಲಾಗುತ್ತದೆ.

ಸೀಖರು

ಸೀಖರ ಪರವಾಗಿ ಬಂದ ಪತ್ರವೊಂದನ್ನು ಗಾಂಧೀಜಿ ಉಲ್ಲೇಖಿಸಿದರು. ಪಾಕಿಸ್ತಾನದಲ್ಲಿ ತೀರ ದುರ್ಘಟನೆ ಸಂಭವಿಸಿದರೆ ತಮ್ಮ ಮತ್ತು ಕಾಂಗ್ರೆಸ್ಸಿನ ಸಹಾಯವನ್ನವಲಂಬಿಸಬಹುದಲ್ಲವೇ ಎಂದು ಆ ಪತ್ರದಲ್ಲಿ ಕೇಳಲಾಗಿತ್ತು. ಆ ಪತ್ರಕ್ಕೆ ಉತ್ತರಕೊಡುತ್ತ ಸೀಖರಂಥ ಶೂರ ಪುರುಷರಿಂದ ಈ ಬಗೆಯ ಪ್ರಶ್ನೆ ಕೇಳಲ್ಪಡಬಹುದೆಂದು ತಾವು ಎಣಿಸಿರಲಿಲ್ಲ. ಮನುಷ್ಯರ ಸಹಾಯವನ್ನವಲಂಬಿಸದೆ ಪರಮಾತ್ಮನ ಸಹಾಯವನ್ನೆ ಅವಲಂಬಿಸಬೇಕು. ಪಾಕಿಸ್ತಾನದ ಹೊಸ ರಾಷ್ಟ್ರದಲ್ಲಿ ತಮಗೆ ನ್ಯಾಯ ಸಿಕ್ಕಲಿಕ್ಕಿಲ್ಲ ಎಂಬ ಸಂಶಯವನ್ನು ತಾಳಬೇಡಿರೆಂದೂ ಅವರು ಕೇಳಿಕೊಂಡರು. ಇದೀಗ ಪ್ರಸಿದ್ಧವಾದ ಮಸೂದೆಗೆ ಸಂಬಂಧಿಸಿದ ತಮ್ಮ ಅಭಿಪ್ರಾಯದಂತೆ ಆ ಬಗೆಯ ಸಂಶಯಕ್ಕೆ ಅವಕಾಶವಿಲ್ಲೆಂದು ಅವರು ಹೇಳಿದರು.

ಸ್ವಾತಂತ್ರ್ಯ ಮಸೂದೆ

ಹಿಂದಿನ ಪ್ರಾರ್ಥನಾನಂತರದ ಸಭೆಯಲ್ಲಿ ವ್ಯಕ್ತಪಡಿಸಿದ ವಿಚಾರವನ್ನು ಮುಂದರಿಸಬೇಕೆಂಬ ಮನೀಷೆಯಿದ್ದಿತು, ಆದರೆ ಹಿಂದೀ ಸ್ವಾತಂತ್ರ್ಯ ಮಸೂದೆಯೆಂದು ಕರೆಯಲಾಗುತ್ತಿರುವ ಮಸೂದೆ ಪ್ರಸಿದ್ಧವಾದ್ದರಿಂದ ಉಳಿದೆಲ್ಲ ವಿಷಯಗಳನ್ನು ಮುಂದಕ್ಕೆ ಹಾಕಬೇಕಾಗಿದೆ. ಇಪ್ಪತ್ತು ವಿಭಾಗಗಳಷ್ಟು ವಿಸ್ತೃತವಾದ ಮಸೂದೆಯನ್ನು ವಿವರವಾಗಿ ವಿಮರ್ಶಿಸುವ ಇಚ್ಛೆ ಇಲ್ಲ. ಅದರಲ್ಲಿ ದುರುದ್ದೇಶವಿದೆಂಬ ಅನೇಕ ಟೀಕಾಕರ್ತರ ಅಭಿಪ್ರಾಯಕ್ಕೆ ತಾವು ಒಪ್ಪುವದಿಲ್ಲ. ಒಂದು ಹಿಂದುಸ್ತಾನದಲ್ಲಿ ಎರಡು ಹಿಂದುಸ್ತಾನಗಳಾದವೆಂಬ ಸಂಗತಿ ಸಾಕಷ್ಟು ಕೆಡಕಿನದಾಗಿದೆ. ಎರಡೂ ಹಿಂದುಸ್ತಾನಕ್ಕೂ ಅಷ್ಟೇ ಸ್ಥಾನಮಾನ. ಮೊನ್ನೆ ಮೊನ್ನೆಯ ವರೆಗೆ ಅಶಕ್ಯವೆಂದು ತೋರುತ್ತಿರುವದನ್ನು ಸತ್ಯಸೃಷ್ಟಿಯಲ್ಲಿ ತಂದುದರ ಶ್ರೇಯಸ್ಸೆಲ್ಲ ಕಾಯದೆಆಜಂ ಜಿನ್ನಾ ಮತ್ತು ಮುಸ್ಲಿಂಲೀಗಿಗೆ ಸಲ್ಲುತ್ತಿದೆ. ಮಂತ್ರಿಶಿಷ್ಟಾಯಿಯ ಗಂಭೀರ ಘೋಷಣೆಯನ್ನು ಅವರು ವಿಪರ್ಯಾಸಗೊಳಿಸಿದರು. ವಿಭಜನೆಗೆ ಕಾಂಗ್ರೆಸ್ ಮತ್ತು ಸೀಖರು ಒಪ್ಪಿಗೆ ಕೊಡುವಂತೆ ಒತ್ತಾಯ ತರುವದುವದರಲ್ಲಿಯೂ ಅವರು ಯಶಸ್ವಿಗಳಾದರು. ಸಂಬಂಧಿಸಿದ ಪಕ್ಷಗಳು ಒಪ್ಪಿಗೆ ಕೊಟ್ಟವೆಂದ ಕೂಡಲೆ ಕೆಟ್ಟ ಮಾತು ಒಳ್ಳೆಯದಾಗಿ ಪರಿಣಮಿಸದು. ಆಯಾ ಪಕ್ಷದವರ ಒಪ್ಪಿಗೆಗೆ ಭಿನ್ನಭಿನ್ನ ಕಾರಣಗಳಿದ್ದರೂ ಪರಿಸ್ಥಿತಿಯಲ್ಲಿ ಬದಲಾವಣೆಯೇನಿಲ್ಲ. ಕಾಯದೇ ಅಝಮರಿಗೆ ಬೇಕಾದುದೆಲ್ಲ ಸಿಕ್ಕಲಿಲ್ಲೆಂಬುದೇನು ಸಮಾಧಾನದ ಸಂಗತಿಯಲ್ಲ. ಸ್ವರೂಪದಲ್ಲೇನು ಸ್ವಲ್ಪೂ ಅಂತರವಿಲ್ಲ. ಅವರಿಗೆ ಸಾರ್ವಭೌಮ ರಾಜ್ಯ ದೇಕಿತ್ತು. ಪರಿಪೂರ್ಣ ರೀತಿಯಲ್ಲಿ ಅದು ಅವರಿಗೆ ಸಿಕ್ಕಿತು. ಪಾಕಿಸ್ತಾನಕ್ಕೆ ಹಿಂದುಸ್ತಾನದಷ್ಟೆ ಸ್ಥಾನಮಾನಗಳಿವೆ.

ಮಸೂದೆಯನ್ನು ಪುನಃ ಪುನಃ ಓದಿದರೂ ನೂರೂ ಪಕ್ಷಗಳು ತಿಳಿದೋ ತಿಳಿಯದೆಯೊ ಈ ಮಸೂದೆಯನ್ನೆಯ ಮಸಗಣನೆಯ ನಿರ್ಣಯಕ್ಕೆ ಅಧೀನರಾದರು. ಬ್ರಿಟಿಶರು ಸಂಪೂರ್ಣ ಅಧಿಕಾರಕ್ಕಾಗ ಮಾಡುವರೆಂಬುದು ನಿಜ. ಆದರೆ ಅವರು ಈ ವಿಭಜನೆಗೆ ತಾವು ಪಾಲಗಾರರಾಗಿರುವರು. ಪರಸ್ಪರ ಭಿನ್ನಧ್ಯೇಯ ಮತ್ತು ಹಿತಸಂಬಂಧಗಳುಳ್ಳ ಎರಡು ಹೊಸ ಸದಸ್ಯರನ್ನು ಕಾಮನ್‌ವೆಲ್ಥ ಕುಟುಂಬದಲ್ಲಿ ಬರಮಾಡಿಕೊಂಡರು. ಎಲ್ಲಿಯ ವರೆಗೆ ಗ್ರೇಟ ಬ್ರಿಟನ್‌ದ ಗೂಡ ಅವುಗಳ ಸಂಬಂಧ ಮೇಳಯುವದೊ ಅಲ್ಲಿಯ ವರೆಗೆ ಬ್ರಿಟನ್‌ದ ಕೃತ್ಯಗಳಿಂದಲೆ ಎಲ್ಲವನ್ನು ನಿರ್ಣಯಿಸಬೇಕಾಗುವದಲ್ಲದೆ ಮಸೂದೆಯಲ್ಲಿಯ ಉದಾರಭಾಷೆಯಿಂದಲ್ಲ. ಪರಸ್ಪರ ವಿರುದ್ಧ ಹಿತಸಂಬಂಧಗಳುಳ್ಳವರನ್ನು ಸಮಾನವಾಗಿ ನಡೆಸಿಕೊಂಡು ಎಲ್ಲವನ್ನು ಸಂಪಾದಿಸಿಕೊಂಡು ಹೋಗುವದಕ್ಕೆ ದೈವೀ ಪ್ರಯತ್ನ ಅವಶ್ಯವೆಂಬುದು ಗೊತ್ತಿದೆ. ಆದರೆ ಘಟನಾ ಸಮಿತಿಯು ಘಟನೆಯ ಕಾಯದೆಯನ್ನು ಸ್ವೀಕರಿಸಿದ ಕೂಡಲೆ ಯಾವದೊಂದು ಭಾಗ ಸಂಪೂರ್ಣ ಸ್ವಾತಂತ್ರ್ಯವನ್ನು ಸಾರಿದರೆ ಮುಂದೇನು?

ಸಂಸ್ಥಾನಿಕರ ಸಂಬಂಧ ತೀರ ಅಸಮಾಧಾನಕರ ಪರಿಸ್ಥಿತಿಯಲ್ಲಿಯೆ ಉಳಿದಿದೆ, ಮಂತ್ರಿಶಿಷ್ಟಾಯಿಯ ಪ್ರಯತ್ನ ಪ್ರಾರಂಭದಿಂದಲೂ ಬ್ರಿಟಿಶ್ ಸರಕಾರದಲ್ಲಿ ಎಷ್ಟೇ ಅಡಚಣೆಗಳು ಬಂದರೂ ನ್ಯಾಯ್ಯವಾದುದನ್ನು ಮಾಡಬೇಕೆಂಬ ಧೈರ್ಯವೇ ಇರಲಿಲ್ಲೆಂದು ಸಾರಲು ಯಾವ ಪ್ರತ್ಯವಾಯವೂ ಇಲ್ಲ. ಈ ಪರಿಸ್ಥಿತಿಯಲ್ಲಿ ಬ್ರಿಟಿಶರ ಸತ್ವಪರೀಕ್ಷೆಯ ಕಾಲಬಂದಿದೆ. ಏನೇ ಅನಿಷ್ಟ ಸಂಭವಿಸಿದರೂ ಬ್ರಿಟಿಶರೆ ನಿಂದೆಗೆ ಪಾತ್ರರಾಗುವರು. ಮಸೂದೆಯಿಂದ ಗಂಡಾಂತರದ ಪರಿಸ್ಥಿತಿಯೇನೂ ಮಾಯವಾಗಿಲ್ಲ. ಸಂಸ್ಥಾನ ಪ್ರಜೆಗಳ ಹಿತಸಂಬಂಧಗಳ ಇಚ್ಛೆ ಮನಸ್ಸಿನಲ್ಲಿದ್ದರೆ ಎರಡೂ ಹೊಸ ಸಾಮಂತ ಸರಕಾರಗಳಿಗೆ ಪರಂಪರಾಗತ ನಿರ್ಮತ್ಸರ ಸೊತ್ತು ಪ್ರಾಪ್ತವಾದಂತಾಗಿದೆ; ಹಾಗಿದ್ದರೆ ಪ್ರಜೆಗಳೇ ನಿಜವಾದ ಒಡೆಯರಾಗಿದ್ದು ಸಂಸ್ಥಾನಿಕರು ಅವರ ವಿಶ್ವಸ್ತರು, ಕೇವಲ ಹೆಸರಿಗಲ್ಲ ಆದರೆ ಕಾಯದೆ ಮತ್ತು ವಸ್ತುಸ್ಥಿತಿಗನುಸಾರವಾಗಿ. ಕಾಯದೇ ಅಝಮರು ಮತ್ತು ಮುಸ್ಲಿಂ ಲೀಗಿನವರು ತಮ್ಮ ವಾರಸಾದ ಕೃತ್ಯದಿಂದ ಮತ್ತು ಪ್ರತ್ಯೇಕೀಕರಣದಿಂದ, ಮುಸ್ಲಿಮರನ್ನು ಅಷ್ಟೇ ಅಲ್ಲ ಮುಸ್ಲಿಮೇತರರನ್ನು ಯಾವ ರೀತಿಯಿಂದ ನಡೆಸಿಕೊಳ್ಳುತ್ತಿರುವರೆಂಬುದನ್ನು ನಿರ್ಣಯಿಸಲು ಜಗತ್ತಿಗೇ ಒಂದು ಬಗೆಯಿಂದ ಆಮಂತ್ರಣ ಕೊಟ್ಟಂತಾಗಿದೆ. ನಿಶ್ಚಯವಾಗಿ ಅವರಲ್ಲಿ ಅನೇಕ ಪಂಥಗಳಿವೆ. ಮುಖ್ಯವಾಗಿ ಸುನ್ನಿಗಳು ಮತ್ತು ಶಿಯಾಗಳು; ರಾಜಕೀಯ ದೃಷ್ಟಿಯಿಂದ ರಾಷ್ಟ್ರೀಯರು ಮತ್ತು ಲೀಗಿನವರು, ಬಲೂಚಿಗಳು ಸಿಂಧಿಗಳು, ಪಠಾಣರು, ಪಂಜಾಬಿಗಳು, ಬಂಗಾಲಿಗಳು ಹಿಂದೀ ಒಕ್ಕೂಟದಲ್ಲಿಯ ಮುಸಲ್ಮಾನರು. ದಿನಾಲು ಅಸಂಖ್ಯ ಹಿಂದು ಮತ್ತು ಸೀಖ ಅಲ್ಪಸಂಖ್ಯಾಕರು ತಮ್ಮನ್ನು ಮುತ್ತುತ್ತಿರುವರು. ಕ್ರಿಶ್ಚನ್ ಮತ್ತು ಪಾರ್ಸಿಗಳೂ ಅನೇಕ ಸಲ ಪೀಡಿಸುತ್ತಿರುವರು. ಅವರ ಹಿಂದೂ ಬಾಂಧವರಿಂದ ಅಸ್ಪೃಶ್ಯವರ್ಗದವರನ್ನು ದೂರೀಕರಿಸುವ ಪ್ರಯತ್ನದ ಅಂಜಿಕೆಗೆ ಏನಾದರೂ ತಳಬುಡವಿದೆಯೇ ಎಂದು ಕೇಳಲಾಗುತ್ತದೆ. ಮುಸಲ್ಮಾನೇತರರಿಗೆ ವಿಶಿಷ್ಟತರದ ಇಸ್ಲಾಮದೀಕ್ಷೆಯನ್ನು ಕೊಡುವುದಕ್ಕೆ ಪಾಕಿಸ್ತಾನದ ಸಾಧನವನ್ನು ಉಪಯೋಗಿಸಲಾಗುತ್ತಿದೆಯೇ? ಒಬ್ಬನೇ ಒಬ್ಬ ಪರಮಾತ್ಮನಲ್ಲಿ ಅಚಲ ಶ್ರದ್ಧೆಯಿಡುವದೆ ನಿಜವಾದ ಧರ್ಮ. ಅಂಥ ಪರಂಪರೆಗಳಿಗೆ ಜಗತ್ತು ಬೇಸತ್ತು ಹೋಗಿದ್ದು ಅವನ್ನೆಲ್ಲ ಬಿಟ್ಟುಗೊಡಬೇಕೆಂಬ ವೃತ್ತಿ ಬಲಿತಿತ್ತು. ಸೃಷ್ಟಿಕರ್ತನ ಅಸ್ತಿತ್ವವನ್ನೆ ಅಲ್ಲಗಳೆಯುವಂಥ ಗೊಂದಲದ ಪರಿಸ್ಥಿತಿಯೂ ಇದರಿಂದ ಉದ್ಭವವಾಗಿತ್ತು. ಆದರೆ ಆ ಪರಿಸ್ಥಿತಿ ಸುದೈವದಿಂದ ಬದಲಾಗುತ್ತಿದ್ದು ಸೃಷ್ಟಿಕರ್ತನಲ್ಲಿ ಅತ್ಯಂತಿಕ ಶ್ರದ್ಧೆ ಜನತೆಯಲ್ಲಿ ಉಂಟಾಗಹತ್ತಿದೆ. ಆ ಸಾರ್ವತ್ರಿಕ ಶ್ರದ್ಧೆಯ ಪುನರುಜ್ಜೀವನದ ಚಳವಳಿಯ ಧುರೀಣತ್ವವನ್ನು ವಹಿಸಲು ಪಾಕಿಸ್ತಾನದ ಇಸ್ಲಾಮು ಮುಂದೆ ಬರುವದೊ? ಇಲ್ಲವೆ ಪರಮಾತ್ಮನ ಹೆಸರಿನಲ್ಲಿಯೆ ಅದು ಅಜ್ಞಾನಕೂಪದಲ್ಲಿ ಬಿದ್ದು ಪರಮಾತ್ಮನ ಅಸ್ತಿತ್ವವನ್ನೆ ಅಲ್ಲಗಳೆಯುವದೆ? ಈ ಸಂದೇಹಗಳೆಲ್ಲ ಬೇಗ ನಿವಾರಿಸಲ್ಪಡುವವಾಗಿ ತಮ್ಮ ಆಸೆ.

ಹಿಂದೂ ಧರ್ಮದ ಸತ್ವಪರೀಕ್ಷೆ

ಬುದ್ಧಿಪೂರ್ವಕವಾಗಿಯಲ್ಲವಿದ್ದರೂ ಕಾಯದೆ ಅಝಮರು ಹಿಂದೂ ಧರ್ಮದ ಸತ್ವಪರೀಕ್ಷೆಯನ್ನು ನಡೆಸಿರುವರು. ಕೊಳೆಯನ್ನೆಲ್ಲ ಕಳಚಿಹಾಕಿ ಹಿಂದೀ ಒಕ್ಕೂಟದಲ್ಲಿಯ ಹಿಂದೂ ಧರ್ಮ ಅತ್ಯಂತ ನ್ಯಾಯ್ಯವಾಗಿದ್ದು ಸಾರ್ವತ್ರಿಕ ಧರ್ಮವಾಗಿದೆಂದು ತೋರಿಸಿ ಕೊಡುವ ಸುವರ್ಣ ಸಂಧಿ ಹಿಂದುಗಳಿಗೆ ದೊರೆತಿದೆ. ಹಿಂದುಸ್ತಾನ ಒಂದು ರಾಷ್ಟ್ರವೆಂದು ಭಾವಿಸುವವರಿಗೆಲ್ಲ ಅಲ್ಪಸಂಖ್ಯಾಕರು ಮತ್ತು ಬಹುಸಂಖ್ಯಾಕರ ಪ್ರಶ್ನೆಯೆ ಉದ್ಭವಿಸುವದಿಲ್ಲವೆಂದು ನಿನ್ನೆ ದಿನವೇ ತಾವು ಹೇಳಿದ್ದು. ಎಲ್ಲರಿಗೂ ಸಮಾನ ಹಕ್ಕುಬಾಧ್ಯತೆಗಳಿದ್ದು ಸಮಾನವಾಗಿ ನಡೆಸಿಕೊಳ್ಳಲು ಎಲ್ಲರೂ ಪಾತ್ರರು. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಹಿಂದೀ ಸ್ವಾತಂತ್ರ್ಯ ಮಸೂದೆಗೆ ಸಂಬಂಧಿಸಿದ ಎಲ್ಲ ಪಕ್ಷಗಳ ಕೊನೆಯ ಪರೀಕ್ಷಾ ಸಮಯ ಈ ಮಸೂದೆಯಿಂದ ಪ್ರಾಪ್ತವಾಗಿದೆಂದು ಹೇಳಬಹುದು. ಎಲ್ಲ ಬಗೆಯ ಅನಿಷ್ಟಗಳನ್ನು ಹೊಡೆದುಹಾಕಿ, ಶತ್ರುಭಾವವನ್ನು ಬಿಟ್ಟುಗೊಟ್ಟು ಮಿತ್ರತ್ವವನ್ನು ವಹಿಸಿದ್ದಾದರೆ ಮತ್ತು ಪರಸ್ಪರರಲ್ಲಿಯ ಅಪನಂಬಿಕೆ ವಿಶ್ವಾಸದಲ್ಲಿ ಪರಿಣಮಿಸಿದ್ದಾದರೆ, ಕೆಡಕೆಂದು ತಾವು ಹೇಳಿದ ಪಾಕಿಸ್ತಾನವೆ ಬಹಳ ಸುಖಪ್ರದವಾಗಿ ಪರಿಣಮಿಸಬಲ್ಲದು.

ಹೊಸದಿಲ್ಲಿ ೬—೭—೧೯೪೭

ಪ್ರಾರಂಭದಲ್ಲಿ ಗಾಂಧೀಜಿ ಸರಹದ್ದದಲ್ಲಿ 'ಮತಗ್ರಹಣವು ಹಿಂಸೆಯಿಲ್ಲದೆ ಸಾಗಬಹುದೆಂದು ಆಶಿಸಿದರು. ಬಾದಶಹಾಖಾನ ಮತ್ತು ಖುದಾಯಿ ಖಿದಮತಗಾರರು ಅಹಿಂಸಾ ದೀಕ್ಷೆ ತೆಗೆದುಕೊಂಡವರು. ತಮ್ಮ ವಿಶ್ವಾಸದಂತೆ ನಡೆದೆವೆಂಬದನ್ನು ಅವರು ತೋರಿಸತಕ್ಕದು. ಮುಸ್ಲಿಂ ಮುಸ್ಲಿಂರಲ್ಲಿಯ ಪ್ರಶ್ನೆಯೇ ಇರುವದರಿಂದ ಮುಸ್ಲಿಂ ಲೀಗಿನವರಿಂದಲಾದರೂ ಇದನ್ನು ಏಕೆ ಅಪೇಕ್ಷಿಸಲಾಗದು.?

ಹಿಂದಿನದೆಲ್ಲ ಅಲ್ಲಗಳೆಯುವದು

ಸಂಪೂರ್ಣಸ್ವಾತಂತ್ರ್ಯ ಬರಲಿರುವ ಶುಭ ಸಮಯದಲ್ಲಿರಬೇಕಾದ ಉತ್ಸಾಹ ಇಲ್ಲದಿರುವದಕ್ಕೆ ಏನಾದರೂ ದೋಷವಿರಲಿಕ್ಕೆ ಬೇಕು. ದೇಶವನ್ನು ಇಬ್ಭಾಗವಾಗಿ ಒಡೆದು ಎರಡು ಸಶಸ್ತ್ರ ಶಿಬಿರಗಳನ್ನಾಗಿ ಪರಿವರ್ತಿಸಿದ್ದಕ್ಕಾಗಿಯೇ ದೇಶದಲ್ಲಿ ಉತ್ಸಾಹ ಕಂಡು ಬರುವದಿಲ್ಲೆಂಬುದು ಖಂಡಿತ ಏಕೆಂದರೆ ಎರಡೂ ಭಾಗಗಳಿಗೆ ಒಂದೇ ಸಾಮಾನ್ಯ ಸಂರಕ್ಷಕ ಸೈನ್ಯದ ಸಂಭವವಿಲ್ಲ. ಸೈನ್ಯವನ್ನೂ ವಿಭಜಿಸಲಾಗುವದು. ಆ ದಿಸೆಯಲ್ಲಿ ಸಿದ್ಧತೆ ಭರದಿಂದ ಸಾಗಿದೆ. ಬ್ರಿಟಿಶ ರಾಜನೀತಿಯನ್ನು ವಿರೋಧಿಸುತ್ತಿದ್ದ ಆ ಸೈನ್ಯದ ಪೂರ್ಣ ಮತ್ತು ಸಾಹಸಪೂರ್ಣ ದಿನಗಳಲ್ಲಿ ಅಂತರಿಕ ಬಡಿದಾಟಗಳು ಇಲ್ಲದ್ದರಿಂದ ಅವನ್ನು ಹತ್ತಿಕ್ಕಲು ಸೈನ್ಯವಿಲ್ಲೆಂದೂ ಪರಕೀಯ ಶತ್ರುವಿನ ವಿರುದ್ಧ ಸಂರಕ್ಷಕ ಸೈನ್ಯದ ಅವಶ್ಯಕತೆಯಿಲ್ಲೆಂದೂ ಒಳ್ಳೆ ಅಭ್ಯತೆಯಿಂದ ಹೇಳಿಕೊಳ್ಳಲಾಗುತ್ತಿದ್ದಿತು. ಆದರೀಗ! ಸೈನ್ಯದ ವೆಚ್ಚ ಮಿತಿಮೀರಿ ಹೆಚ್ಚಿಸಲಾಗಿದೆ. ಬೇಗ ಅದು ಬಹಳ ಮಟ್ಟಿಗೆ ಕಡಮೆಯಾಗುವ ಲಕ್ಷಣಗಳು ತೋರುವದಿಲ್ಲ; ಇಷ್ಟೇ ಅಲ್ಲ ಈ ಸೈನ್ಯ ಖಾತೆಯ ವೆಚ್ಚ ಮತ್ತಷ್ಟು ಹೆಚ್ಚುವದೆಂದು ತಮಗೆ ಎನಿಸುತ್ತದೆ. ಇಷ್ಟೆಲ್ಲ ಏತಕ್ಕೆ ನಮ್ಮ ನಮ್ಮಲ್ಲಿಯೆ ಹೊಡೆದಾಡಲಿಕ್ಕೆ! ಶಸ್ತ್ರಾಸ್ತ್ರಗಳನ್ನು ಹೆಚ್ಚಿಸಿಕೊಳ್ಳುವದರಲ್ಲಿ ನಗೆಗೇಡಾದ ಸ್ಪರ್ಧೆಯೆ ನಡೆದಿದೆ. ರಾಷ್ಟ್ರರಚನೆಗೆ ವೆಚ್ಚವಿಲ್ಲ, ಶಿಕ್ಷಣಕ್ಕಿಲ್ಲ ಬೇರೆ ಅಂಥ ಕೆಲಸಗಳಿಗೂ ವೆಚ್ಚ ಮಾಡುವದಿಲ್ಲ. ವೆಚ್ಚವೆಲ್ಲ ಪರಸ್ಪರರ ಹತ್ಯೆಗಾಗಿ! ಇದರಲ್ಲಿ ಸಂತೋಷದ ಇಲ್ಲವೆ ಗೌರವದ ಕಾರಣವೇನೂ ತೋರುವದಿಲ್ಲ. ಮನಸ್ಸೋಟವೆಲ್ಲ. ವಿಷಾದಕರವಿದೆ. ಹಿಂದುಸ್ತಾನದ ಸ್ವಾತಂತ್ರ್ಯವೆಂದರೆ, ಅತ್ಯಂತ ಪ್ರಿಯವಾದುದೆಂದು ಈ ವರೆಗೆ ಕಲಿತುದನ್ನೆಲ್ಲ ಬಿಟ್ಟುಕೊಡುವದರ ಸಿದ್ಧತೆಯೇ? ಆತ್ಮಶ್ಲಾಘನೆ ಮಾಡಿಕೊಳ್ಳುವದರ ಬದಲು ಆಳವಾಗಿ ಆತ್ಮಪರೀಕ್ಷೆ, ಆತ್ಮನಿರೀಕ್ಷಣೆ ಮತ್ತು ಆತ್ಮಶೋಧನೆ ಮಾಡಿಕೊಳ್ಳುವ ಸಮಯವೀಗ ಪ್ರಾಪ್ತವಾಗಿದೆ ಕಳೆದ ಮೂವತ್ತು ವರುಷಗಳ ಸ್ವಾತಂತ್ರ್ಯ ಸಮರದ ಮುಖ್ಯ ನಾಯಕರೆಂದು ತಾವು ಈ ಎಲ್ಲ ಪ್ರಶ್ನೆಗಳನ್ನು ಮನಸ್ಸಿನಲ್ಲಿಯೆ ಕೇಳಿಕೊಳ್ಳುತ್ತೇವೆ. ಅಷ್ಟೊಂದು ಪ್ರಶಂಸೆಗೆ ಪಾತ್ರವಾಗಿದ್ದ ಹೋರಾಟ ಈ ರೀತಿ ಅಕೀರ್ತಿಕರ ಕೊನೆಯಲ್ಲಿ ಪರಿಣಮಿಸುವದೊ?

ಅನಂತರ ಅವರು ಭಗವನ್ 'ತಮಸೋಮಾ ಜ್ಯೋತಿರ್ಗಮಯ' ಎಂಬ ಋಷಿ ವಾಕ್ಯವನ್ನು ಉದ್ಘೋಷಿಸಿದರು.

ಕೆಲವು ಯುಕ್ತವಾದ ಸೂಚನೆಗಳು

ಒಮ್ಮೊಮ್ಮೆ ಸ್ವಾತಂತ್ರ್ಯವನ್ನು ಗಳಿಸುವುದಕ್ಕಿಂತ ಉಳಿಸಿಕೊಳ್ಳುವದು ಕಷ್ಟ. ಕಾಂಗ್ರೆಸ್ಸು ಭಾರತಕ್ಕೆ ಸ್ವಾತಂತ್ರ್ಯವನ್ನು ಗೆದ್ದುಕೊಟ್ಟಿದೆ. ದೇಶಕ್ಕಾಗಿ ಗೆದ್ದುಕೊಟ್ಟ ಈ ಅಮೂಲ್ಯ ಸ್ವಾತಂತ್ರ್ಯವನ್ನು ಕಾಯ್ದಿಡಲು ಕಾಂಗ್ರೆಸ್ಸು ಶಕ್ತವಾಗುವುದೋ ಇಲ್ಲವೋ ಎಂಬುದು ಇನ್ನು ಮೂರು ವರ್ಷಗಳಲ್ಲಿ ತಿಳಿಯಬಹುದಾಗಿದೆ. ಈ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಕಾಂಗ್ರೆಸ್ಸು ತನ್ನ ತಂತ್ರವನ್ನು ಬದಲಿಸಬೇಕು. ಇಲ್ಲಿಯ ವರೆಗೆ ಹೇಳಿಕೆ ಕೊಡುವುದು, ಭಾಷಣ ಮಾಡುವುದು, ಗದ್ದಲವೆಬ್ಬಿಸುವದು ಎಲ್ಲವೂ ಅಗತ್ಯವಾಗಿದ್ದವು. ಹೊಸ ಪರಿಸ್ಥಿತಿಯಲ್ಲಿ ಮೌನವಾಗಿ ಕುಳಿತು ಯೋಜನೆಗಳನ್ನು ರಚಿಸಬೇಕಾಗಿದೆ, ಶಿಸ್ತನ್ನು ಇಟ್ಟುಕೊಳ್ಳಬೇಕಾಗಿದೆ ಮತ್ತು ವಾಕ್ಸಂಯಮವನ್ನು ಪಾಲಿಸಬೇಕಾಗಿದೆ. ಮೊದಲಿನಂತೆಯೇ ಕಾರ್ಯಾಲಯಗಳಲ್ಲಿಯೂ ಕಾಂಗ್ರೆಸ್ಸಿಗರು ಬಹಳ ಮಾತಾಡುತ್ತಾರೆಂದು ಸಾಮಾನ್ಯರ ಅಭಿಪ್ರಾಯ. ಗತಿಸಿಹೋದ ಲಾರ್ಡ ವಿಲ್ಲಿಂಗ್ಡನ್ನರು ಹೇಳುತ್ತಿದ್ದರು.—

"ಸಮರ್ಥ ರಾಜತಂತ್ರಜ್ಞನು ತನ್ನ ಬಾಯಿಯನ್ನು ಮುಚ್ಚಿಕೊಂಡಿರಬೇಕು, ಭಿಕ್ಷಾಪಾತ್ರೆಯನ್ನು ತೆರೆದಿಟ್ಟುಕೊಂಡಿರಬೇಕು" ಎಂದು. ನಮ್ಮ ರಾಜಕಾರಣಿಗಳು-ಅದರಲ್ಲೂ ವಿಶೇಷವಾಗಿ ಸರಕಾರೀ ಕೆಲಸದಲ್ಲಿ ನಿರತರಾದವರು—ತಮ್ಮ ಬಾಯಿ ಮತ್ತು ಭಿಕ್ಷಾಪಾತ್ರೆಗಳೆರಡನ್ನೂ ಮುಚ್ಚಿಕೊಂಡಿರಬೇಕು. ಹಿಂದೆ ಬರಿಯ ಹೊಣೆಯಿಲ್ಲದ ಹರಟೆ ಹೊಡೆಯುವದರಿಂದ ಯಾವ ಯೋಜನೆಯೂ ಸಾಧಿಸದು; ಕಾಂಗ್ರೆಸ್ಸೇತರ ತಜ್ಞರೊಡನೆ ಸೇರುವುದಿಲ್ಲ, ಅವರ ಆಲೋಚನೆಯನ್ನು ತೆಗೆದುಕೊಳ್ಳುವುದಿಲ್ಲ. ಈಗಲಾದರೂ ಸ್ವಗೃಹವನ್ನು ಸರಿಪಡಿಸಲು ತಡವಾಗಿಲ್ಲ, ಹಾಗೆ ಮಾಡಿ ಆದದ್ದಾಗಲೆಂದು ಎಲ್ಲವನ್ನೂ ಎದುರಿಸಿ ನಿಲ್ಲಬೇಕು. ಕಾಂಗ್ರೆಸ್ಸೇತರ ತಜ್ಞರ ಸಾಮರ್ಥ್ಯವನ್ನೂ ಬಳಕೊಳ್ಳಬೇಕು.

ಅಧಿಕಾರ ಬದಲಾವಣೆಯು ಕಾಂಗ್ರೆಸ್ಸಿನ ಮುಖ್ಯ ಗುರಿಯಾಗಿತ್ತು. ಅಗಸ್ಟ ೧೫ ರೊಳಗೆ ಆ ಧ್ಯೇಯವು ಸಾಧಿಸುತ್ತದೆ. ಅದುದರಿಂದ ಕಾಂಗ್ರೆಸ್ಸು ತಾನು ಗೆದ್ದುದನ್ನು ತಹಬಂದಿಗೆ ತರಬೇಕಾಗಿದೆ, ದೇಶದಲ್ಲಿ ಅತಿತ್ವರಿತ ಗತಿಯಿಂದ ಆಗುತ್ತಿರುವ ಆರ್ಥಿಕ ಅಧಃಪತನವನ್ನು ತಡೆಯಬೇಕಾಗಿದೆ, ಮತ್ತು ತನ್ನ ರಕ್ಷಣಾಬಲವನ್ನು ಕಟ್ಟಬೇಕಾಗಿದೆ. ಘಟನಾ ರಚನೆಯು ಎಡೆಯೊಡೆವ ವೇಗವನ್ನು ಇಳಿಸಬೇಕಾಗಿದೆ. ಭಾರತದ ರಕ್ಷಣೆಯ ಬಗ್ಗೆ, ಆರ್ಥಿಕ ಯೋಜನೆಗಳಿಗಾಗಿ, ಕೈಗಾರಿಕೆಯ ಯೋಜನೆಗಳ ತಯಾರಿಕೆಗೆಂದು ಮತ್ತು ಸರಕಾರದ ಕಾರ್ಯಾಲಯದ ರಚನೆಗೋಸ್ಕರ ಬೇರೆ ಬೇರೆ ತಜ್ಞ ಸಮಿತಿಗಳನ್ನು ಏರ್ಪಡಿಸಬೇಕಾಗಿದೆ. ಉತ್ಪನ್ನವನ್ನು ಹೆಚ್ಚಿಸಲು ಶಕ್ತಿಮೀರಿ ಪ್ರಯತ್ನಿಸಬೇಕು. "ಔದ್ಯೋಗೀಕರಣ ಮಾಡು, ಇಲ್ಲವೆ ಮಡಿ" ಎಂಬ ಕೂಗಿನ ಬದಲು "ಉತ್ಪಾದನೆಮಾಡು ಇಲ್ಲವೆ ಮಡಿ" ಎಂಬ ಕೂಗು ಇಂದು ಅವಶ್ಯ. ಈಗಿನ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ಎಲ್ಲ ವಿಧದ ಉತ್ಪಾದನೆಯೂ ಇಳಿದು ಹೋಗಿದೆ. ಆ ಮೇಲೆ ಈ ದೇಶದ ಸಂಬಳದ ರೀತಿಯನ್ನು ಕೂಡಲೆ ಸರಿಪಡಿಸಬೇಕು. ಅದೊಂದೇ ಔದ್ಯೋಗಿಕ ಶಾಂತಿಯನ್ನೂ ಉತ್ಪಾದನದ ವೇಗವನ್ನು ಹೆಚ್ಚಿಸಬಲ್ಲದು. ವಾಣಿಜ್ಯ ಮತ್ತು ಹಣಕಾಸಿನ ಖಾತೆಗಳು ಭಾರತಕ್ಕೆ ಹೊಸ ಆಯಾತ ಧೋರಣವನ್ನು ಯೋಜಿಸಿವೆ. ಆ ಧೋರಣವು ಅತಿ ಪ್ರಸರಣಕ್ಕೂ ಅದರಿಂದುಂಟಾಗುವ ಪರಿಣಾಮಗಳಿಗೂ ದೇಶವನ್ನು ಗುರಿಮಾಡುವುದು. ಆರ್ಥಿಕ ಯೋಜನೆಯು ಈ ದೇಶದ ಆಯಾತ ನಿರ್ಯಾತಗಳ ಧೋರಣವನ್ನು ಎಚ್ಚರಿಕೆಯಿಂದ ಸಿದ್ಧಪಡಿಸಬೇಕು.

ಔದ್ಯೋಗೀಕರಣದ ಬಗ್ಗೆ ಬಹಳ ಮಾತು ಕೇಳಿಬರುತ್ತದೆ. ವಾಚಾಳಿಗಳು ತಮ್ಮನ್ನೂ ದೇಶವನ್ನೂ ಮೋಸಗೊಳಿಸುತ್ತಿದ್ದಾರೆ. ಮೊದಲನೆಯದಾಗಿ ಔದ್ಯೋಗೀಕರಣವನ್ನು ಸಾಧ್ಯವಾಗಿ ಮಾಡಲವಶ್ಯವಾದ ದೊಡ್ಡ ದೊಡ್ಡ ಸಾಮುಗ್ರಿಗಳು ಯುರೋಪು ಅಮೇರಿಕೆಗಳಲ್ಲಿ ದೊರೆಯದಾಗಿವೆ. ಎರಡನೆಯದಾಗಿ ಈ ದೇಶದಲ್ಲಿ ಸಿಮೆಂಟು, ಇಟ್ಟಿಗೆ, ಕಬ್ಬಿಣ, ಉಕ್ಕು ಮತ್ತು ಕಟ್ಟಿಗೆಗಳು ಬೇಕಾದಷ್ಟಿಲ್ಲ. ದೊಡ್ಡ ದೊಡ್ಡ ಯಂತ್ರಸಾಮುಗ್ರಿಗಳು ದೊರೆತರೂ ಬೇಕಾದಷ್ಟು ಕಟ್ಟಡದ ಸಾಮಾನುಗಳು ಇಲ್ಲವಾಗಿ ಕಾರಖಾನೆಗಳನ್ನು ಕಟ್ಟಲು ಅಸಾಧ್ಯವಾಗಿದೆ; ಯಂತ್ರನಿರ್ಮಿತಿಗವಶ್ಯವಾದ ಮೌಲಿಕ ಸಾಮುಗ್ರಿಗಳೂ ಉಪಕರಣಗಳೂ ಇಲ್ಲ. ಕಡೆಯದಾಗಿ ದೈನಿಕ ಮೂಲಕವಾಗಿ ವಸ್ತುಗಳ ಸಾರಿಗೆ ಕೂಡ ಕ್ರಮವಾಗಿ ಇಳಿದುಹೋಗಿದೆ. ಎಲ್ಲವೂ ಸ್ತಬ್ಧವಾಗುತ್ತಿದೆ.

ಭಾರತ ಸರಕಾರದ ಕಾರ್ಯಭವನವು ಗೊಂದಲ ತುಂಬಿದ್ದಾಗಿ ಯಾವ ಕೆಲಸವನ್ನೂ ಬೇಗ ಪೂರೈಸಲು ಅನುಗೊಡುತ್ತಿಲ್ಲ. ತವರಿ... ಪುನಃರ್ರಚನೆಯನ್ನು ಮಾಡಲೇಬೇ... ವಾದ ಕೆಲಸಗಾರರನ್ನು ಹೆಗೆ... ವನ್ನು ಕಾಂಗ್ರೆಸ್ಸು ತೋರಿ...

ನಡುಗಾಲ ಸರಕಾರದ ಲೀಗ ಮಂತ್ರಿಗಳ ರಾಜೀನಾಮೆ

ಹಿಂದೀ ಸ್ವಾತಂತ್ರ್ಯ ಮಸೂದೆಯ ಲೋಪದೋಷಗಳು— ಸಂಸ್ಥಾನಿಕರಿಗೆ ಸರದಾರ ಪಟೇಲರ ಬಿನ್ನಹ—ತ್ರಿಶಂಕು ಸ್ವರ್ಗ—ಗಡಿನಾಡಿನ ವಿವಾದ

ನಡುಗಾಲ ಸರಕಾರದ ಲೀಗ್ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ. ಅವರು ಹೀಗೆ ಮಾಡಲು ವಾಯಿಸರಾಯರು ಒತ್ತಾಯಗೊಳಿಸಿದರೆಂದೂ ರಾಜೀನಾಮೆ ಕೊಡದಿದ್ದರೆ ಕಿತ್ತು ಹಾಕುವದಾಗಿ ಬೆದರಿಕೆ ಹಾಕಲಾಯಿತೆಂದೂ ತಿಳಿಯುತ್ತದೆ. ಆಗಸ್ಟ್ ೧೫ ರ ವರೆಗೆ ಕಾಂಗ್ರೆಸ್ಸಿಗರೇ ಸರಕಾರವನ್ನು ನಿರ್ವಹಿಸಬಹುದೆಂದೂ ಪಾಕಿಸ್ತಾನ ಪ್ರಾಂತಗಳ ಬಗ್ಗೆ ಸಲಹೆ ಕೊಡಲು ಬಂಗಾಲದಲ್ಲಿ ಮಾಡಿದಂತೆ ಲೀಗಿನವರ ಛಾಯಾ ಮಂತ್ರಿಮಂಡಲ ರಚಿಸಬಹುದೆಂದೂ ಊಹಿಸಲಾಗಿದೆ.

ಬ್ರಿಟಾನಿಯೊಳ ವಾನಪ್ರಸ್ಥ

ಹಿಂದುಸ್ತಾನವನ್ನು ಎರಡು ಸ್ವತಂತ್ರ ರಾಜ್ಯಗಳಾಗಿ ಅಂಗೀಕರಿಸುವ ಮಸೂದೆ ಬ್ರಿಟಿಶ ಪಾರ್ಲಮೆಂಟಿನ ಮುಂದೆ ಮಂಡಿಸಲ್ಪಟ್ಟ ದಿನವೆಂದರೆ ಆ ಸಭೆಯ ಇತಿಹಾಸದಲ್ಲಿ ಅಪೂರ್ವ ಸಂಧಿ. ಬ್ರಿಟಿಶರು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಸ್ವಾತಂತ್ರ್ಯವನ್ನು ೧೫೦ ವರ್ಷಗಳ ಹಿಂದೆ ಅಂಗೀಕರಿಸಿದಾಗ ಅವರು ಅಮೇರಿಕನ್ ಸ್ವಾತಂತ್ರ್ಯವಾದಿಗಳ ಕೈಲಿ ಯುದ್ಧದಲ್ಲಿ ಸೋತು ವಿಧಿಯಿಲ್ಲದೆ ಒಪ್ಪಿಕೊಂಡರು. ಆದರೆ ಹಿಂದೀ ಸ್ವಾತಂತ್ರ್ಯಕ್ಕೆ ಅವರು ಕೊಟ್ಟ ಮನ್ನಣೆ ಅಂಥ ಮಿಲಿಟರಿ ಅಪಜಯದ ಫಲವಲ್ಲ. ಅದು ಈ ದೇಶದ ಸಾತ್ವಿಕ ತೇಜಕ್ಕೆ ದೊರೆತ ಮನ್ನಣೆಯನ್ನಬೇಕು. ಅದರಿಂದಲೇ ರಾಷ್ಟ್ರೀಯ ಸ್ವಾತಂತ್ರ್ಯವಾದಿಗಳಾದ ಸರದಾರ ಪಟೇಲರು ಕೂಡ ಈ ಸಂಧಿಯ ಅಪೂರ್ವತೆಗೆ ಕಪ್ಪ ಕೊಟ್ಟರು. ಚರ್ಚಿಲ್ಲರ "ಬ್ರಿಟಿಶ ಚಕ್ರವರ್ತಿಯ ಕಿರೀಟದ ಅತ್ಯುಜ್ವಲ ರತ್ನವೆನಿಸಿದ ಹಿಂದುಸ್ತಾನ" ಕೈಬಿಟ್ಟು ಹೋಗುವದರ ಜತೆಗೆ ಬ್ರಿಟಿಶ ಅರಸನ ಚಕ್ರವರ್ತಿ ಬಿರುದಿನ ಅನ್ವರ್ಥಕತೆಯೂ ನಾಶವಾಯಿತೆಂಬದನ್ನು ಲಕ್ಷಿಸಿ, ಬರಿ "ಅರಸ"ನೆಂದು ಅವನು ಉಲ್ಲೇಖಿಸಲ್ಪಡತಕ್ಕದ್ದೆಂದು ಸರಕಾರ ಮಾಡಿದ ಸೂಚನೆಗೆ ಅರಸನು ಸಮ್ಮತಿ ಕೊಟ್ಟಿದ್ದಾರೆ. ಸಾಮ್ರಾಜ್ಯ ವೈಭವದ ದ್ಯೋತಕವಾದ ಇನ್ನೊಂದು ಶಬ್ದವಾದ "ಡೋಮಿನಿಯನ್" (ಅಧಿರಾಜ್ಯ) ಎಂಬದನ್ನು ಕಿತ್ತೊಗೆದು "ಕಾಮನವೆಲ್ತ" (ರಾಜ್ಯಮಂಡಲ) ಎಂಬ ಸಮಾನತ್ವದ್ಯೋತಕ ಶಬ್ದವನ್ನು ಬ್ರಿಟಿಶ ಸಾಮ್ರಾಜ್ಯವೆಂಬರ್ಥದಲ್ಲಿ ಉಪಯೋಗಿಸಬೇಕೆಂದು ಗೊತ್ತುಪಡಿಸಿದ್ದೂ ಈ ಬದಲಿಕೆಯನ್ನು ಮನಗಂಡದ್ದರ ಪರಿಣಾಮವೇ ಆಗಿದೆ. ಕಡಲುಗಳ ರಾಣಿಯೆನಿಸಿದ ಬ್ರಿಟಾನಿಯಾ ಇಂದು ವಾರ್ಧಕ್ಯದಿಯುಟ್ಟು ವಾನಪ್ರಸ್ಥಾಶ್ರಮ ಗ್ರಹಣ ಮಾಡಿದ್ದಾಳೆಂದರೆ ಅಷ್ಟು ಅತಿಶಯೋಕ್ತಿಯಾಗಲಿಕ್ಕಿಲ್ಲ. ಕಾನ್ಸರ್ವೇಟಿವ ಪಕ್ಷದ ಮುಂಗಡಮುಪ್ಪಿಗಳುಕೂಡ ಈ ಮಹಾಪರಿವರ್ತನೆಯ ಅನಿವಾರ್ಯತೆಯನ್ನು ಕಂಡುಕೊಂಡಿದ್ದಾರೆ. ಪಾರ್ಲಮೆಂಟಿನಲ್ಲಿ ಬ್ರಿಟಿಶ ಸಾಮ್ರಾಜ್ಯದ "ದಿವಾಳಿ" ಎಬ್ಬಿಸುವ ಈ ಮಸೂದೆಗಳು ಬಂದಾಗ ವಿರೋಧಿ ಪಕ್ಷದ ಕಾನ್ಸರ್ವೇಟಿವರು ಏನೊಂದು ತಂಟೆಯನ್ನೂ ಎಬ್ಬಿಸಲಿಲ್ಲ. ಲಾರ್ಡ ಬೀವರಬ್ರೂಕರ ಗುಂಪಿನವರು ಪ್ರತಿಭಟಿಸುವರೆಂಬ ಸುದ್ದಿ ಮೊದಲು ಇದ್ದರೂ ಅವರು ಕೂಡ ತೆಪ್ಪಗಾದಂತೆ ಕಾಣುತ್ತದೆ. ಹೀಗಾಗಿ, ತಾ. ೧೬ ರೊಳಗೆ ಅದರ ಎರಡೂ ವಾಚನಗಳು ಮುಗಿದು, ಲಾರ್ಡ್ಸ ಸಭೆಯಲ್ಲಿ ಅನಿರೀಕ್ಷಿತ ತೊಡಕುಗಳೇಳದೆ ಹೋದರೆ ತಾ. ೨೦ ರೊಳಗೆ ಈ ಮಸೂದೆಗೆ ಅರಸನ ಮುದ್ರೆಬಿದ್ದು ಅದು ಕಾಯಿದೆಯಾಗಬಹುದು. ಅದರೊಡನೆ ಹಿಂದುಸ್ತಾನದ ಮೇಲೆ ಬ್ರಿಟಿಶ ಪಾರ್ಲಿಮೆಂಟಿನ ಅಧಿಕಾರ ಮುಕ್ತಾಯಗೊಳ್ಳುವದು. ಭಾರತ ಕಚೇರಿ ರದ್ದಾಗುವದು. ಮತ್ತು "ರಾಜ್ಯಮಂಡಲ" ಶಾಖೆಯಲ್ಲಿ ಹಿಂದೀ ವಿಭಾಗವನ್ನು ನೋಡಿಕೊಳ್ಳಲು ಒಬ್ಬ ವಿಶೇಷ ಮಂತ್ರಿ ನೇಮಿಸಲ್ಪಡಬಹುದೆಂದು ತಿಳಿಯುತ್ತದೆ.

ಅಮೇರಿಕೆಯ ವಾಗ್ದಾನ

ಹಿಂದುಸ್ತಾನಕ್ಕೆ ಸ್ವಾತಂತ್ರ್ಯದಾನವಾಗುವದನ್ನು ಸ್ವಾಗತಿಸಿ ಹೊಸದಿಲ್ಲಿಯಲ್ಲಿ ಅಮೇರಿಕೆಯ ರಾಯಭಾರಿಯಾಗಿರುವ ಡಾ. ಹೆನ್ರಿ ಗ್ರೇಡಿಯವರು ಯೋಗ್ಯ ಸಹಾಯ ನೀಡುವ ಅಮೇರಿಕೆಯ ಇಚ್ಛೆಯನ್ನು ವ್ಯಕ್ತಗೊಳಿಸಿದರು. ಹಿಂದುಸ್ತಾನ ಪಾಕಿಸ್ತಾನಗಳ ಹೊಸ ಸ್ಥಾನಮಾನಗಳನ್ನು ಅಮೇರಿಕೆ ಒಪ್ಪಲು ಯಾವ ಅಭ್ಯಂತರವಿಲ್ಲವೆಂದೂ ಅವರು ಹೇಳಿದರು. "ಸ್ವಾತಂತ್ರ್ಯ ಪ್ರಾಪ್ತಿಯಾದ ನಂತರ ಈ ವಿಶಾಲ ರಾಷ್ಟ್ರದ ಪ್ರಗತಿಗಾಗಿ ಪ್ರಯತ್ನಿಸಿ ಎಲ್ಲ ವರ್ಗದ ಜನರ ಜೀವನದ ಮಟ್ಟವನ್ನು ಸುಧಾರಿಸುವಿರೆಂದಾಶಿಸುತ್ತೇನೆ" ಎಂದು ಹಾರೈಸಿದ್ದಲ್ಲದೆ ಅವರು ಹಿಂದೀಯರಲ್ಲಿ ಕುಶಾಗ್ರಬುದ್ಧಿಯ ಮುಂದಾಳುಗಳೂ ಔದ್ಯೋಗಿಕ ಪ್ರಗತಿಗೆ ಅವಶ್ಯವಿರುವ ಪ್ರಾಕೃತಿಕ ಸಂಪತ್ತಿಯೂ ಹೇರಳವಾಗಿರುವದ ಉಲ್ಲೇಖಿಸಿ "ನಿಮಗೆ ಅಮೇರಿಕೆಯ ತಜ್ಞರ ಸಹಾಯಬೇಕಿದ್ದರೆ... ಅಂಥ ಸಹಾಯವನ್ನು ದೊರಕಿಸಿಕೊಡಲು ಪ್ರಯತ್ನಿಸುವೆ" ದಾಗಿ ಮಾತುಕೊಟ್ಟರು. ಆದರೆ "ನಿಮಗೆ ನಮ್ಮ ನೆರವುಬೇಕಾದರೆ ಮಾತ್ರ ನಾವು ಸಂತೋಷದಿಂದ ನೆರವಾಗುವೆವು. ನಾವಾಗಿಯೆ ಅತುರದಿಂದ ಮುಂದೆಬಿದ್ದು ನೆರವಾಗಲಾರೆವು... ನಮಗೆ ನಿಮ್ಮ ರಾಷ್ಟ್ರದ ಮೇಲೆ ಆರ್ಥಿಕ ಇಲ್ಲವೆ ರಾಜಕೀಯ ವರ್ಚಸ್ಸು ಹೇರುವ ಇಚ್ಛೆಯಿಲ್ಲ" ಎಂಬ ಅಭಯವೂ ಅವರಿಂದ ದೊರಕಿದೆ. ಆದರೆ ಸಮಕಾಲೀನ ಇತಿಹಾಸದಿಂದ ಪಾಠಕಲಿತು ಈ ವಾಗ್ದಾನವನ್ನು ನಾವು ಸತರ್ಕರಾಗಿಯೆ ಸ್ವೀಕರಿಸಬೇಕಾಗುವದು.

ಸಂಸ್ಥಾನಗಳ ಪ್ರಶ್ನೆ

ಹಿಂದೀ ಸ್ವಾತಂತ್ರ್ಯ ಮಸೂದೆಯೇನು ದೋಷರಹಿತವಾದುದಲ್ಲ. ಹಲವು ಲೋಪಗಳು ತೊಡಕುಗಳು ಅದರಲ್ಲಿ ಇದ್ದೇ ಇವೆಯೆಂದು ಸರದಾರರು ಒಪ್ಪಿದ್ದಾರೆ. ಆದರೂ ಹಿಂದುಸ್ತಾನದ ವಿಚ್ಛೇದವಾದುದೊಂದಲ್ಲದೆ . ಅದರಲ್ಲಿರುವ ಇನ್ನೊಂದು ದೊಡ್ಡ ದೋಷವೆಂದರೆ ಸಂಸ್ಥಾನಗಳ ಪ್ರತಿಗಾಮಿ ಅಧಿಪತಿಗಳಿಗೆ ಪಾಯಸದಲ್ಲಿನ ಪಾಪೋಸುಗಳಾಗುವ ಅವಕಾಶ ಕೊಟ್ಟದ್ದು. ಸಂಸ್ಥಾನಗಳ ಮೇಲಿನ ವರಿಷ್ಠಾಧಿಕಾರವನ್ನು ಭಾವೀ ಹಿಂದುಸ್ತಾನ ಸರಕಾರಕ್ಕೆ ವರ್ಗಾಯಿಸದೆ ಅದು "ಅದೃಶ್ಯ"ವಾಗುವದೆಂದು ಸಾರಿ ಬ್ರಿಟಿಶ ಸರಕಾರ ಸ್ವತಂತ್ರ ಹಿಂದುಸ್ಥಾನದ ದಾರಿಯಲ್ಲಿ ಮುಳ್ಳುಗಳನ್ನು ನಟ್ಟಿದೆ. ಡಾ. ಅಂಬೇಡಕರರಂಥ ಬ್ರಿಟಿಶ ಪಕ್ಷಪಾತಿಗಳೆನಿಸಿಕೊಂಡವರು ಕೂಡ ಈ ವಿಷಯದಲ್ಲಿ ಕ್ಷೇಷಗೊಂಡು "ಭಾರತವನ್ನು ತುಂಡರಿಸಿ ಎರಡು ಸಾಮಂತ ರಾಜ್ಯಗಳನ್ನು ನಿರ್ಮಿಸಿದ್ದಕ್ಕೆ ಕಾರಣಗಳಿವೆಯೆಂದು ಬೇಕಾದರೆ ನಮ ಹೇಳಬಹುದು. ಆದರೆ ಪ್ರಾಂತಗಳಿಗೂ ಸಂಸ್ಥಾನಗಳಿಗೂ ನಡುವೆ ಭೇದೋಪಾಯದಿಂದ ಜಗಳದ ಬೀಜ ಬಿತ್ತಲು ಎಳ್ಳಷ್ಟು ಕಾರಣವಿದ್ದಿಲ್ಲ. ಇಂಥ ಅಧಿಕಪ್ರಸಂಗತನಕ್ಕೆ ಬ್ರಿಟಿಶರು ಜಾಗತಿಕ ನ್ಯಾಯಮಂಡಲದೆದುರು ಉತ್ತರ ಕೊಡಬೇಕಾದೀತು" ಎಂದು ನುಡಿದಿದ್ದಾರೆ. ಹಿಂದುಸ್ತಾನದಲ್ಲಿ ಆಡಳಿತದ ಐಕ್ಯವನ್ನು ಸಾಧಿಸಿ ಮಹಾಕಾರ್ಯ ಮಾಡಿದೆವೆಂದು ಹೆಮ್ಮೆಪಡುತಿದ್ದ ಬ್ರಿಟಿಶರೇ ಈಗ ಅದಕ್ಕೆ ಸ್ವಾತಂತ್ರ್ಯ ಕೊಡುವ ಮೊದಲು ಅದನ್ನು ತುಂಡು ತುಂಡು ಮಾಡಿ ತಾವು ಬರುವದಕ್ಕೆ ಮೊದಲಿನ ಅನರ್ಥಕಾರಿ ಪರಿಸ್ಥಿತಿಯನ್ನುಂಟು ಮಾಡಿದ್ದಾರೆಂದು ಅವರು ಹೇಳಿದ್ದು ನಿಜವಾಗಿದೆ. ಭಾರತ ಮಂತ್ರಿ ಲಾರ್ಡ ಲಿಸ್ಟೋವೆಲ್ಲರು, ಸಂಸ್ಥಾನಗಳಿಗೆ ಸರ್ವತಂತ್ರ ಸ್ವತಂತ್ರವಾಗಲು ಉತ್ತೇಜನ ಕೊಡುವದಿಲ್ಲವೆಂದು ನುಡಿದದ್ದೇನೋ ನಿಜ. ಅವರು ತಿರುವಾಂಕೂರು, ಹೈದರಾಬಾದುಗಳನ್ನು ಹೆಸರುಗೊಂಡು ಹೇಳಿ, ಅವೂ ಯಾವದೊಂದು ಘಟನಾ ಸಮಿತಿಯನ್ನು ಸೇರಬೇಕೆಂದು ಹಾರೈಸಿದರು. ಆದರೆ ಸರ್ ಸಿ. ಪಿ. ಯವರಂಥ ಈ ವರೆಗೆ ಸ್ವಾಮಿಭಕ್ತರಾಗಿದ್ದು ಈಗ ಒಮ್ಮಿಂದೊಮ್ಮೆ ಸ್ವಾತಂತ್ರ್ಯ ಪಿಪಾಸುಗಳಾದ ಸಂಸ್ಥಾನ ದಿವಾಣರು ಲಿಸ್ಟೋವೆಲ್ಲರಿಗೇ ಬುದ್ಧಿ ಹೇಳಹೊರಟಿದ್ದಾರೆ. ಹೈದರಾಬಾದ ನಿಝಾಮರು ಮಾತಿನಲ್ಲಿ ಕಾಲಹರಣ ಮಾಡದೆ ಒಳಗಿಂದೊಳಗೇ ಸನ್ನಾಹ ಮಾಡುತಿರುವಂತೆ ತೋರುತ್ತದೆ. ನೂರಕ್ಕೆ ೧೩ ರಷ್ಟಿರುವ ಮುಸ್ಲಿಂ ಅಲ್ಪಸಂಖ್ಯಾಕರ ತಲೆಯಲ್ಲಿ "ತಾವು ಆಳುವ ವರ್ಗವೆಂಬ ಭ್ರಾಂತಿಯನ್ನು ತುಂಬಿ, ಕೆಲ ಪ್ರತಿಗಾಮಿ ಹಿಂದೂ ಜಮೀನದಾರ ಮತ್ತು ಸ್ವಾರ್ಥಸಾಧಕರ ಬೆಂಬಲ ಪಡೆದು ಅವರು ಜನ ಸಾಮಾನ್ಯದ ಇಚ್ಛೆಯನ್ನು ತುಳಿಯ ಹೊರಟಂತಿದೆ. ವರಂಗಲ್ಲಿನಲ್ಲಿ ನಡೆದ ಜಾತೀಯ ಗಲಭೆಗಳು ಹೆಚ್ಚುಕಡಿಮೆ ಹೀಗೆ ಮಾಡಿಸಿದಂತಿವೆ. ಅದರಿಂದ ಸಾವಿರಾರು ನಿರಾಶ್ರಿತರು ಮನೆ ಮಾರು ಬಿಟ್ಟು ಪಲಾಯನ ಮಾಡಬೇಕಾಯಿತು. ಈಗ ಪಠಾಣ ಸೈನಿಕರನ್ನು ನಿಜಾಮ ಸರಕಾರದವರು ಭರ್ತಿಮಾಡಿಕೊಳ್ಳುತಿದ್ದಾರೆಂದು ವದಂತಿಯಿದ್ದೆ. ಇತ್ತ ಹಿಂದುಸ್ತಾನ ಪಾಕಿಸ್ತಾನ ಸರಕಾರಗಳೊಡನೆ ಸಂಧಾನ ಮಾಡಿಕೊಳ್ಳಲಿಕ್ಕಾಗಿ ಅವರು ದಿವಾಣ ಛತ್ತಾರಿ ನವಾಬ ಮತ್ತು ಘಟನಾತ್ಮಕ ಸಲಹೆಗಾರ ಸರ್ ವಾಲ್ಟರ ಮೊಂಕಟನ್ನರೇ ಮೊದಲಾದವರಿಂದೊಡಗೂಡಿದ ಸಮಿತಿಗಳನ್ನೂ ಕಳಿಸಿರುವರು. ಈ ಸಮಿತಿ ವರ್‍ಹಾಡವನ್ನು ನಿಜಾಮರಿಗಾಗಿ ತಿರುಗಿ ಗಳಿಸಲು ಶಕ್ತಿಮೀರಿ ಹೋಡೆದಾಡಬಹುದು. ಅಲ್ಲದೆ ಮಚ್ಛಲೀಪಟ್ಟಣ ಬಂದರವನ್ನು ದೊರಕಿಸಿಕೊಳ್ಳುವದು ಸುಂಕದಿಂದ ಮುಕ್ತತೆಯನ್ನು ಬೇಡುವದು ಮೊದಲಾದ ಪ್ರಯತ್ನಗಳೂ ನಡೆಯಬಹುದು. ಆದರೆ ಸರದಾರ ಪಟೇಲರು ವರ್‍ಹಾಡವನ್ನು ಒಕ್ಕೂಟಕ್ಕೆ ಉಳಿಸಿಕೊಳ್ಳಲು ಶತಪ್ರಯತ್ನ ಮಾಡದಿರರು.

ವರ್‍ಹಾಡದ ಭವಿತವ್ಯ

ಈ ವರ್‍ಹಾಡ ಪ್ರಶ್ನೆಯೂ ರಾಜಕೀಯ ರಂಗದಲ್ಲಿ ಸಾಕಷ್ಟು ಗಡಿಬಿಡಿಯನ್ನೆಬ್ಬಿಸಿದೆ. ಆಗಸ್ಟ್ ೧೫ ಕ್ಕೆ ವರಿಷ್ಠಾಧಿಕಾರ ಮಾಯವಾಗಿ ಸಂಸ್ಥಾನಿಕರೊಡನೆ ಬ್ರಿಟಿಶರು ಮಾಡಿಕೊಂಡ ಒಪ್ಪಂದ ಇಲ್ಲದಂತಾದೊಡನೆ ಈ ೮೦ ಲಕ್ಷ ಜನರಿಂದೊಡಗೂಡಿದ ಭೂಭಾಗದ ರಾಜಕೀಯ ಸ್ಥಾನಮಾನ ತ್ರಿಶಂಕುವಿನಂತಾಗುವದು. ವರ್‍ಹಾಡ ಪ್ರಾಂತ ಈ ಸ್ವಾತಂತ್ರ್ಯ ಮಸೂದೆಯಲ್ಲಿ ಹಿಂದೀ ಸಾಮಂತ ಸರಕಾರದೊಳಗೆ ಸೇರಿಸಲ್ಪಟ್ಟಿಲ್ಲ. ಆದರೆ ಅದು ಈಗ ಮಧ್ಯಪ್ರಾಂತದ ಭಾಗವಾಗಿರುವದರಿಂದ ಅದು ನಿಜಾಮರ ಸ್ವಾಧೀನಕ್ಕೆ ತಂತಾನೆ ಹೋಗಲಾರದು. ಘಟನಾ ಸಮಿತಿಯಲ್ಲೇನೋ ಅದರ ನಾಲ್ವರು ಪ್ರತಿನಿಧಿಗಳಿರುವರು. ಆದರೆ ಪ್ರತ್ಯಕ್ಷ ಪರಿಸ್ಥಿತಿ ಬೇರೆ ಇರುವದರಿಂದ ಅದರ ಬಗ್ಗೆ ನಿಜಾಮರೊಡನೆ ಆಗಸ್ಟ್ ೧೫ ರೊಳಗೆ ಒಪ್ಪಂದ ಮಾಡಿಕೊಳ್ಳಬೇಕಾಗುವದೆಂದೂ ಅದು ಸಾಧ್ಯವಾಗದಿದ್ದರೆ ಅದು ನಡುವೆ ನೇತಾಡಬೇಕಾಗುವದೆಂದೂ ಸುಧಾರಣ ಕಮೀಶನರರಾದ ವಿ. ಪಿ. ಮೆನೋನರು ಹೇಳಿದರು. (ಶ್ರೀ ಮೆನೋನರು ಈ ಮಸೂದೆಯ ಸಂಬಂಧದಲ್ಲಿ ಹಿಂದುಸ್ತಾನ ಸರಕಾರದ ಪರವಾಗಿ ಬಹಳ ಕೆಲಸ ಮಾಡಿದವರು). ಆಗಸ್ಟ ೧೫ ರ ನಂತರ ವರ್‍ಹಾಡದ ಜನರೇ ತಮ್ಮ ಭವಿತವ್ಯ ನಿರ್ಣಯಿಸುವರೆಂದು ಸರದಾರ ಪಟೇಲರು ಹೇಳಿದರೂ ನಿಜಾಮರೊಡನೆ ಒಪ್ಪಂದ ಬೇಕೆಂಬದನ್ನು ಅಲ್ಲಗಳೆಯಲಿಲ್ಲ. ಡಾ. ಅಂಬೇಡಕರರಾದರೋ ಅದಕ್ಕಿಂತಲೂ ಮುಂದೆ ಹೋಗಿ ಹಿಂದೀ ಸ್ವಾತಂತ್ರ್ಯ ಮಸೂದೆಯ ಕಲಮುಗಳನ್ವಯ ಆಗಸ್ಟ ೧೫ ರ ನಂತರ ಹೊಸ ಒಪ್ಪಂದವಾಗುವ ವರೆಗೆ ವರ್‍ಹಾಡ ಹೀಗೆಯೆ ಉಳಿಯುವದೆಂದು ಹೇಳಬರುವದಿಲ್ಲೆಂದೂ (ಅರ್ಥಾತ್ ನಿಜಾಮರೇ ಅದಕ್ಕೆ ತಂತಾನೆ ಹಕ್ಕುದಾರರಾಗುವರೆಂದು) ಭಯಪಟ್ಟಿದ್ದಾರೆ. ಮದ್ರಾಸಿನ ಅಡ್ವೊಕೇಟ ಜನರಲ್ಲರಾಗಿದ್ದ ಸರ್ ಅಲ್ಲಾದಿ ಕೃಷ್ಣಸ್ವಾಮಿಯವರೂ ವರ್‍ಹಾಡವನ್ನು ಸ್ಪಷ್ಟವಾಗಿ ಹಿಂದೀ ಒಕ್ಕೂಟದಲ್ಲಿ ಸೇರಿಸುವ ಕಲಮುಗಳನ್ನು ಸ್ವಾತಂತ್ರ್ಯ ಮಸೂದೆಯಲ್ಲಿ ಸೇರಿಸುವಂತೆ ಬ್ರಿಟಿಶ ಸರಕಾರಕ್ಕೆ ಒತ್ತಾಯ ಮಾಡಬೇಕೆಂದು ಸೂಚಿಸಿದ್ದಾರೆ. ಆದರೆ ಶ್ರೀ ಎಂ. ಎಸ್. ಅಣೆಯವರು ಡಾ. ಅಂಬೇಡಕರ ಹಾಗು ಸರ್ ಅಲ್ಲಾದಿಯವರ ಅಭಿಪ್ರಾಯವನ್ನು ಅಲ್ಲಗಳೆದು ಆಗಸ್ಟ್ ೧೫ ರ ನಂತರ ವರ್‍ಹಾಡ ನಿಜಾಮರ ಅಧೀನಕ್ಕೆ ತಂತಾನೇ ಹೋಗಲಾರದೆಂದು ಹೇಳಿ ಒಂದು ವೇಳೆ ನಿಜಾಮರು ಬಲಪ್ರಯೋಗದಿಂದ ಅದನ್ನು ಆಕ್ರಮಿಸಲೆಳಸಿದರೆ ಹಿಂದುಸ್ತಾನ ಸರಕಾರ ಅದನ್ನು ನೋಡುತ್ತ ತೆಪ್ಪಗೆ ಕುಳ್ಳಿರಲಾರದೆಂದಿದ್ದಾರೆ.

ಸರದಾರರ ಕರೆ

ಕೆಲ ಸಂಸ್ಥಾನಗಳು ಹೀಗೆ ಅತಂತ್ರ ಧೋರಣ ವಹಿಸಿದ್ದರೂ ಬಹುಸಂಖ್ಯಾಕ ಸಂಸ್ಥಾನಗಳು ಘಟನಾ ಸಮಿತಿಯಲ್ಲಿ ಭಾಗವಹಿಸಲು ಮುಂದೆ ಬಂದಿವೆ. ನಾಳೆ ಸೇರಲಿರುವ ಘಟನಾ ಸಮಿತಿಯ ಅಧಿವೇಶನದಲ್ಲಿ ಒಟ್ಟು ಸಂಸ್ಥಾನಗಳಿಗೆ ದೊರೆತ ೯೩ ಸ್ಥಾನಗಳಲ್ಲಿ ೬೦ ಸ್ಥಾನಗಳ ಸದಸ್ಯರು ಭಾಗವಹಿಸುವರು. ಈಗ ಹೊರಗುಳಿದಿರುವ ಸಂಸ್ಥಾನಗಳಲ್ಲಿ ಪ್ರಮುಖವೆಂದರೆ ಕಾಶ್ಮೀರ (೪ ಸ್ಥಾನ), ಹೈದರಾಬಾದ (೧೬ ಸ್ಥಾನ), ತಿರುವಾಂಕೂರು (೬ ಸ್ಥಾನ) ಇವು ಪ್ರಧಾನ. ಇವಲ್ಲದೆ ಭೋಪಾಳ, ಇಂದೂರ, ಭವಾಲಪುರ ಮೊದಲಾದ ಕೆಲ ಸಂಸ್ಥಾನಗಳು ಡೋಲಾಯಮಾನ ಚಿತ್ತದಿಂದಿವೆ. ತಿರುವಾಂಕೂರಿನ ಸರ್ ಸಿ. ಪಿ. ಯವರು ತಮ್ಮ ಸ್ವಾತಂತ್ರ್ಯಕ್ಕೆ ಬ್ರಿಟಿಶ, ಅಮೇರಿಕನ್ ಮನ್ನಣೆ ದೊರಕಿಸಿಕೊಳ್ಳಲಿಕ್ಕೋ ಏನೋ ರಶಿಯಾದೊಡನೆ ರಾಯಭಾರ ಒಪ್ಪಂದ ಮಾಡಿಕೊಂಡ ಒಕ್ಕೂಟದಲ್ಲಿ ತಾವು ಸೇರಲಾರೆವೆಂದು ರಶಿಯನ್ ಭೂತವನ್ನು ಮುಂದೆ ಮಾಡಿದ್ದಾರೆ! ಇರಲಿ. ಬಹುಸಂಖ್ಯಾಕ ಸಂಸ್ಥಾನಗಳು ಒಕ್ಕೂಟ ಸೇರಲು ನಿರ್ಧರಿಸಿದ್ದರಿಂದ ಕಾಂಗ್ರೆಸ್ ಮುಂದಾಳುಗಳು ಸಂಸ್ಥಾನಗಳ ಬಗ್ಗೆ ಹೆಚ್ಚು ನಯದಿಂದ ಮಾತಾಡತೊಡಗಿದ್ದಾರೆ. ಸರದಾರ ಪಟೇಲರು ಈಚೆಗೆ ಹೊರಡಿಸಿದ ಹೇಳಿಕೆಯೊಂದರಲ್ಲಿ ಮನವೊಲಿಸುವ ಮಾತುಗಳಲ್ಲಿ ಪರಸ್ಪರ ಹಿತಕ್ಕಾಗಿಯೂ ಸಾಮೂಹಿಕ ಶಕ್ತಿವೃದ್ಧಿಗಾಗಿಯೂ ಸಂಸ್ಥಾನಗಳು ಒಕ್ಕೂಟವನ್ನು ಸೇರಬೇಕೆಂದು ಬಿನ್ನವಿಸಿದ್ದಾರೆ. ಹರಿಹಂಚಾಗಿದ್ದುದರಿಂದಲೇ ಹಿಂದುಸ್ತಾನ ಪರದಾಸ್ಯಕ್ಕೊಳಗಾಗಬೇಕಾಯಿತು. ಇನ್ನೊಮ್ಮೆ ಅದೇ ತಪ್ಪನ್ನು ಮಾಡೋಣ ಬೇಡ. ಸಂಸ್ಥಾನಗಳಿಗೆ ಸ್ವತಂತ್ರ ಹಿಂದುಸ್ತಾನದಲ್ಲಿ ಸ್ವಾಯತ್ತತೆಯನ್ನು ಕೊಡಲಾಗುವದೆಂದು ಅವರು ಆಶ್ವಾಸನ ಕೊಟ್ಟರು. ಡಾ. ಪಟ್ಟಾಭಿಯವರೂ ತಿರುವಾಂಕೂರಿಗೆ ಇದೇ ಬಗೆಯ ಬಿನ್ನಹ ಮಾಡಿಕೊಂಡಿದ್ದಾರೆ. ಇದರ ಪರಿಣಾಮ ಏನಾಗುವದೋ ನೋಡಬೇಕು.

ಗಡಿನಾಡ ವಿವಾದ

ಜನಮತಗ್ರಹಣ ಪ್ರದೇಶಗಳಲ್ಲೊಂದಾದ ಆಸಾಮದ ಸಿಲ್ಹಟ ಜಿಲ್ಹೆಯಲ್ಲಿ ಅಂಥಿಂಥ ಅನಾಹುತವಿಲ್ಲದೆ ಮತಗ್ರಹಣ ಮುಗಿದಿದೆ. ಅಲ್ಲಿಯ ಜನರಲ್ಲಿ ಬಹುಸಂಖ್ಯಾಕರು ಆಸಾಮದಲ್ಲಿ ಉಳಿಯಲು ಮತಕೊಟ್ಟಿದ್ದಾರೆಂದೂಹಿಸಲಾಗಿದೆ. ಇನ್ನೊಂದು ಪ್ರದೇಶವಾದ ವಾಯವ್ಯ ಗಡಿನಾಡಿನ ಪ್ರಾಂತದಲ್ಲಿಯೂ ಮತಗ್ರಹಣ ಪ್ರಾರಂಭವಾಗಿದೆ. ಅಲ್ಲಿ ಶಾಂತಿ ರಕ್ಷಣೆಗಾಗಿ ಬಿಗಿಯಾದ ಸೈನ್ಯವ್ಯವಸ್ಥೆಯಿರುವದರಿಂದ ಉಲ್ಲೇಖಾರ್ಹವಾದ ರಕ್ತಪಾತವಾಗಿಲ್ಲ. ಆದರೆ ಕಾಂಗ್ರೆಸ್ಸು ಮತಗ್ರಹಣವನ್ನು ಬಹಿಷ್ಕರಿಸಿದ್ದರ ಫಲವಾಗಿ ಹಿಂದುಗಳಾಗಲಿ ಸೀಖರಾಗಲಿ ಮತಹಾಕಲು ಹೋಗಲೇ ಇಲ್ಲ. ಇದರಿಂದ ಹಲಕೆಲವು ಮತಗಟ್ಟೆಗಳು ಸರ್ವಥಾ ಶೂನ್ಯವಾಗಿದ್ದವು. ಇದಲ್ಲದೆ ಮುಸ್ಲಿಂ ಲೀಗ್ ಪಕ್ಷದವರು ಪಾಕಿಸ್ತಾನಕ್ಕೆ ವಿರುದ್ಧ ಮತಹಾಕುವವರನ್ನು ಜೀವಸಹಿತ ಬಿಡಕೂಡದೆಂದು ಮುಸ್ಲಿಮರಿಗೆ ಬೋಧಿಸುತಿದ್ದಾರೆಂದು ಸುದ್ದಿ ಬಂದಿದೆ. ಕಾಂಗ್ರೆಸ್ಸಿನ ಬಹಿಷ್ಕಾರವನ್ನು ವಿವರಿಸುತ್ತ, ಈ ಮೂಲಕ ಕಾಂಗ್ರೆಸ್ಸು ಒಪ್ಪಂದ ಮುರಿದಂತಾಗಿಲ್ಲವೆಂದೂ ಅದು ಗಡಿನಾಡಿನಲ್ಲಿ ಜಾತೀಯ ತಳಹದಿಯ ಮೇಲೆ ಮತಗ್ರಹಣ ಮಾಡಲು ಎಂದೂ ಒಪ್ಪಿದ್ದಿಲ್ಲವೆಂದೂ ಸಾರಿದ್ದಾರೆ. ಪಠಾಣಿಸ್ತಾನದ ಬೇಡಿಕೆಯೇನೂ ಹೊಸದಲ್ಲವೆಂದು ಅವರು ಹೇಳಿದರು. ೧೯೩೦ರಿಂದಲೇ ಅದು ಇತ್ತು. ಸ್ವಾಯತ್ತ ಗಡಿನಾಡಿನ ಪ್ರಾಂತಕ್ಕೆ ಸಿಡಿದು ಹೋಗುವ ಅಧಿಕಾರವಿತ್ತರೆ ತಾವು ಪಾಕಿಸ್ತಾನದಲ್ಲಿ ಸೇರಲು ಸಿದ್ಧರಿದ್ದುದಾಗಿಯೂ ಜಿನ್ನಾರು ಅದಕ್ಕೊಪ್ಪಿಗಿಲ್ಲವಾಗಿಯೂ ಅವರು ಹೇಳಿದರು. ಪಂ. ಜವಾಹರಲಾಲರು "ಮ್ಯಾಂಚೆಸ್ಟರ ಗಾರ್ಡಿಯನ್" ಪತ್ರಿಕೆಗೆ ಒಂದು ಪತ್ರ ಬರೆದು ಪಠಾಣಿಸ್ತಾನದ ಬೇಡಿಕೆ ಸಾರ್ವಭೌಮ ರಾಜ್ಯದ ಬೇಡಿಕೆಯಲ್ಲವೆಂದು ಸ್ಪಷ್ಟಗೊಳಿಸಿದ್ದಾರೆ. ಈ ಮತಗಣನೆಯಲ್ಲಿ ತಾವು ಭಾಗವಹಿಸಿದ್ದರೆ ತಾವು ಖಂಡಿತವಾಗಿ ಯಶಸ್ವಿಯಾಗುತಿದ್ದೆವು. ಆದರೆ ಅದರಿಂದ ರಕ್ತಪಾತ ಸಂಭವಿಸಿ ಅಲ್ಪಸಂಖ್ಯಾಕರ ಜೀವಿತ ವಿತ್ತಗಳು ನಾಶವಾಗುತಿದ್ದವು, ಎಂದು ಹೇಳಿ ಗಡಿನಾಡ ಮುಖ್ಯಮಂತ್ರಿ ಡಾ. ಖಾನಸಾಹೇಬರು ಮತಗಣನೆಯಲ್ಲಿ ಒಟ್ಟು ಮತದಾರ ಸಂಖ್ಯೆಯಲ್ಲಿ ೫೦ ರಷ್ಟು ಜನರು ಪಾಕಿಸ್ತಾನದ ಪರವಾಗಿ ಮತವಿತ್ತರೆ ತಾವು ರಾಜೀನಾಮೆ ಕೊಡುವದು ವಿಹಿತವಾಗುವದೆಂದು ಅಭಿಪ್ರಾಯಪಟ್ಟರು. ಹಾಗಾದರೆ ತಿರುಗಿ ಶಾಸನ ಸಭೆಗಳಿಗೆ ಚುನಾವಣೆಗಳಾಗಬೇಕಾಗುವದು. ಆಗ ಮತ್ತೆ ಬಹುಮತ ಗಳಿಸುವ ಧೈರ್ಯ ಖಾನಬಂಧುಗಳಿಗಿದೆ. ಅಂಥ ಪ್ರಸಂಗದಲ್ಲಿ ಮತ್ತೆ ಗಡಿನಾಡು ಖಾನಸಾಹೇಬರ ಪಕ್ಷದಲ್ಲಿನ ಮುಳ್ಳಾಗದಿರದು.

(೧೩ ನೇ ಪುಟಕ್ಕೆ)

ಹಿಂದುಸ್ಥಾನ

... ಸ್ವಾ ಪಕ
... ಕ್ಯಕ್ಸವೂ ... ಹೈಸ್ಕೂಲಿನ ... ಜೂನ ೨೯ರಲ್ಲಿ ... ಂಜೀನ ಸದಸ್ಯ ... ಕೃಷ್ಣ ಎಂ. ಎ. ಅವರ ... ತವಾಸ್ಸಿ ಜಹಾಂಗೀರ ಸಭಾಭವನದಲ್ಲಾಗ ಮುಂಬಯಿ ಪ್ರಾಂತಿಕ ಕಾಂ. ಕಮೀಟಿಯೇ ಮೊದಲಾದ ಮಾನ್ಯರು ಹಾಜರಿದ್ದು ವೇ... ವಾಟಿಕಾಭಿನಯಾದಿಗಳು ನಡೆದುದಲ್ಲದೆ ಸಭಾಧ್ಯಕ್ಷರು ೭೫೦ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿದ್ಯಾಭ್ಯಾಸ ಮಾಡಿಸುವ ನಾಯಿಟ ಹೈಸ್ಕೂಲಿನ ಕಾರ್ಯವನ್ನು ಪ್ರಶಂಸಿಸಿ ಮುಂಡಳಿಯ ವಿದ್ಯಾನಿಧಿಗೆ ೧೦೦೧ ರೂಪಾಯಿಗಳನ್ನು ದಾನಮಾಡಿದರು.

ಮುಂಬಯಿಯಲ್ಲಿ ಪ್ರಾರಂಭವಾಗಿದ್ದ, ೯ ದಿನಗಳಿಂದ ನಡೆದ ೨೫೦೦೦ ರೈಲಿನ ಕೆಲಸಗಾರರ ಸಂಪು ಇಂದು ಹಿಂತೆಗೆದುಕೊಳ್ಳಲ್ಪಟ್ಟಿತು. ಜೂನ ೩೦ರಿಂದ ಬೀಗ ಹಾಕಿದ್ದ ನಾಲ್ಕೂ ರೇಲ್ವೆ ವರ್ಕಶಾಪುಗಳು ಪುನಃ ಪ್ರಾರಂಭವಾಗುವವು. ರೈಲಿನ ಅಧಿಕಾರಿಗಳು ವರ್ಕಶಾಪುಗಳನ್ನು ಬಂದುಮಾಡಿದ ಅಜ್ಞೆಯನ್ನು ಹಿಂತೆಗೆದುಕೊಳ್ಳಲು ಒಪ್ಪಿದ್ದಾರೆ. ಕೆಲಸಗಾರರು ಸೋಮವಾರದಿಂದ ಕೆಲಸ ಪ್ರಾರಂಭಿಸಿದ್ದಾರೆ.

ಮುಂಬಯಿಯ ರಾಮನಾರಾಯಣ ರೂಯಿಯಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಪಿ. ಕೆ. ಭಾಗವತರು ಜುಲೈ ೫ರಲ್ಲಿ ಪುಣೆಯ ಸರ್ ಪರಶುರಾಮಭಾವು ಕಾಲೇಜಿನಲ್ಲಿ ಕೂಡಿದ ಶಿಕ್ಷಣ ಪ್ರಸಾರಕ ಮಂಡಳಿಯ ಅಜೀವ ಸಭಾಸದರ ಸಭೆಗೆ ಬಂದಾಗ ಹೃದಯ ವಿಕಾರದಿಂದ ಒಮ್ಮಿಂದೊಮ್ಮೆ ನಿಧನ ಹೊಂದಿದರು.

ಪುಣೆಯ ಹಿಂದೂ ಮಹಾಸಭೆಯ ಮುಖಂಡರೂ 'ಅಗ್ರಣಿ' ಎಂಬ ಮರಾಠಿ ದೈನಿಕ ಪತ್ರಿಕೆಯ ನಿರ್ದೇಶಕರೂ ಆದ ಶ್ರೀ ಎನ್. ಡಿ. ಆಪ್ಟೆಯವರನ್ನು ಜುಲೈ ನಾಲ್ಕರ ರಾತ್ರಿ ಬಂಧಿಸಿದರು. ಕೆಲವು ದಿನಗಳ ಹಿಂದೆ ನಗರದಲ್ಲಿ ಬಾಂಬು ಸಿಡಿದು ೧೧ ವರ್ಷದ ಹುಡುಗನೊಬ್ಬನು ಮೃತನಾಗಿದ್ದನು. ಆ ಬಾಂಬಿನ ಸಿಡಿತಕ್ಕೆ ಶ್ರೀ ಆಪ್ಟೆಯವರ ಸಂಬಂಧವಿದೆಯೆಂಬ ಸಂಶಯವೇ ಅವರ ಬಂಧನದ ಕಾರಣ. ಅವರ ಮನೆ ಝಡತಿಯಾದಾಗ ಸಂಶಯಾಸ್ಪದ ವಸ್ತುವೊಂದೂ ಸಿಗಲಿಲ್ಲ.

ವನ್ಯ ಮೃಗಗಳಿಂದ ಬೆಳೆಗಳನ್ನು ರಕ್ಷಿಸಲು ಮುಂಬಯಿ ಸರಕಾರದವರು ಅಹಮ್ಮದಾಬಾದಿನ ವಿರಮಗಾಂವ ತಾಲೂಕಿನಲ್ಲಿ 'ಶಿಕಾರಿ' ಅಧಿಕಾರಿಯನ್ನು ನಿಯಮಿಸಿದ್ದು ಅವನು ಹಳ್ಳಿಗಳಲ್ಲಿ ಬಂದೂಕು ಹೊಡೆಯಲು ಕಲಿಸುವ ಶಾಲೆಗಳನ್ನು ತೆರೆಯುವನೆಂದು ಸುದ್ದಿ.

ಹಿಂದುಸ್ತಾನದ ವಿಚ್ಛೇದನೆಯನ್ನೊಳಗೊಂಡ ಚಕ್ರವರ್ತಿ ಸರಕಾರದ ಜೂನ ೩ನೆಯ ತಾರೀಕಿನ ಯೋಜನೆಯನ್ನು ನಿಷೇಧಿಸಲು ಮಹಾಸಭೆಯ ಅಪ್ಪಣೆಯ ಪ್ರಕಾರ ಜುಲೈ ೪ರಲ್ಲಿ ಸರಕಾರಿ ಅಪ್ಪಣೆಯನ್ನುಲ್ಲಂಘಿಸಿ ಮೆರವಣಿಗೆ ಹೊರಡಿಸಿದ್ದಕ್ಕಾಗಿ ಪೋಲೀಸರು ಮುಂಬಯಿ ಪ್ರಾಂತಿಕ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಪಿ. ಎಚ್ ಗದ್ರೆ ಹಾಗೂ ಮಹಾಸಭೆಯ ೧೮ ಸ್ವಯಂ ಸೇವಕರನ್ನು ಬಂಧಿಸಿದರು.

ಯರವಡಾ ಕಾರಾಗೃಹದಲ್ಲಿ ಸ್ಥಾನಬದ್ಧರಾಗಿರುವ ಪುರೋಗಾಮಿ ಪಕ್ಷದ ೬ ಕೈದಿಗಳು ತಮ್ಮ ಸಂಕಷ್ಟಗಳನ್ನು ಕೂಡಲೆ ನಿವಾರಿಸದಿದ್ದಲ್ಲಿ ಅನ್ನತ್ಯಾಗ ಕೈಕೊಳ್ಳುವೆವೆಂದು ಮುಂಬಯಿ ಸರಕಾರದ ಗೃಹಮಂತ್ರಿಗಳಿಗೆ ತಿಳಿಸಿದರೆಂದು ಗೊತ್ತಾಗಿದೆ.

ಸಿಂಧ

ಪಂಜಾಬ ಬಂಗಾಲಗಳ ಗಡಿನಿರ್ಣಯ ಸಮಿತಿಯ ಅಧ್ಯಕ್ಷರಾದ ಸರ್ ಸಿರಿಲ್ ರ್‍ಯಾಡಕ್ಲಿಫರು ಜುಲೈ ೮ರಲ್ಲಿ ವಿಮಾನದಿಂದ ಕರಾಚಿಗೆ ಬಂದು ದಿಲ್ಲಿಗೆ ತೆರಳಿದರು; ಮತ್ತು ಗಡಿನಿರ್ಣಯ ಸಮಿತಿಯ ಕೆಲಸವು ಎರಡು ತಿಂಗಳಲ್ಲಿ ಮುಗಿಯಬಹುದೆಂದು ಅಭಿಪ್ರಾಯಪಟ್ಟರು.

ಪಾಕಿಸ್ತಾನದ ರಾಜಧಾನಿಯಾದ ಕರಾಚಿಯಲ್ಲಿ ಆಕಾಶವಾಣಿಯ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಸಿಂಧ ಸರಕಾರದವರು ಸಿದ್ಧತೆ ನಡೆಸುತ್ತಿದ್ದಾರೆ.

ಸಿಂಧ ಬ್ಯಾಂಕುಗಳಿಂದ ಕಳೆದ ಕೆಲವು ದಿನಗಳಲ್ಲಿ ೬ ಕೋಟಿ ರೂಪಾಯಿಗಳನ್ನು ಹೊರಗೆ ಕಳುಹಲಾಗಿದೆಯೆಂದೂ ಕೆಲವೊಂದು ಜನರು ಪಾಕಿಸ್ತಾನ ಸರಕಾರವು ಬ್ಯಾಂಕುಗಳಲ್ಲಿದ್ದ ಹಣವನ್ನು ಜಪ್ತಮಾಡಬಹುದೆಂದು ಹೇಳಿದ ಹೆದರಿಕೆಯೇ ಇದಕ್ಕೆ ಕಾರಣವೆಂದೂ ಈ ಹೆದರಿಕೆಯು ಸಂಪೂರ್ಣ ನಿರಾಧಾರವಾದುದೆಂದೂ ಜೂನ ೨ರಲ್ಲಿ ಸಿಂಧದ ಸರಕಾರೀ ವಕ್ತಾರನು ಹೇಳಿದನು.

ಹೊಸದಿಲ್ಲಿ

ಈಗ ಹೊಸದಿಲ್ಲಿಯಲ್ಲಿರುವ ...ಡೋನೇ...ಯ ...ಶಿಯ ವ್ಯಾಪಾರಿ ಶಿಷ್ಟಮಂಡಲದ ಬಿನ್ನಹದ ಮೇರೆಗೆ ಇಂಡೋನೇಶಿಯದ ಸದ್ಯದ ವಿದೇಶ ಮಂತ್ರಿಗಳಾದ ಡಾ. ಹಾ ಜಿ ಸಲೀಮರು ಭಾರತಕ್ಕೆ ಬರಲಿದ್ದಾರೆಂದು ಗೊತ್ತಾಗಿದೆ.

ಮುಸ್ಲಿಂಲೀಗ ಕಾರ್ಯದರ್ಶಿಗಳಾದ ಲಿಯಾಖತ ಅಲ್ಲಿಖಾನರು ಒಂದು ಪ್ರಕಟನೆ ಹೊರಡಿಸಿ ಮುಸ್ಲಿಮರಿಗೆ ಬ್ಯಾ. ಜಿನ್ನಾರವರ ಜೂನ ೧೬ ರ ಪ್ರಕಟನೆಯನ್ನು ಗಮನಕ್ಕೆ ತಂದುಕೊಟ್ಟು ಪಾಕಿಸ್ತಾನ ಸ್ಥಾಪನೆಗೆ ಬೇಕಾದ ಹಣವನ್ನು ಕೊಡಲು ಬಿನ್ನವಿಸಿದ್ದಾರೆ.

ಜುಲೈ ೮ ರಲ್ಲಿ ಹೊಸದಿಲ್ಲಿಯ ಕೌನ್ಸಿಲ ಭವನದೆದುರು ಮತಪ್ರದರ್ಶನ ನಡೆಸಿದ ಸ್ವಾಮಿ ಕರಪಾತ್ರಿಜಿ ಮತ್ತು ಬೇರೆ ೧೬ ಸಾಧುಗಳನ್ನು ಬಂಧಿಸಲಾಗಿದೆ.

ಸರ್ವ ಹಿಂದೀಯರು ಹಾಗೂ ಅವರೊಡನೆ ಸ್ವಾತಂತ್ರ್ಯದ ಹೋರಾಟದಲ್ಲಿ ದುಡಿದವರು ಅನರ್ಥದ ನಿಜವಾದ ಚಿತ್ರವನ್ನು ಅರಿತುಕೊಂಡು ತಮಗೆ ಸೈನ್ಯವೇ ಬೇಡವೆಂದಾಗಲಿ ಇಲ್ಲವೆ ಕಾನಿಷ್ಠಪಕ್ಷ ಒಕ್ಕೂಟದಲ್ಲಿಯ ಅಥವಾ ಪಾಕಿಸ್ತಾನದಲ್ಲಿಯ ಮುಸಲ್ಮಾನ ಬಾಂಧವರ ವಿರುದ್ಧ ಸೈನ್ಯವನ್ನು ಉಪಯೋಗಿಸಲಾರೆವೆಂದಾಗಲಿ ಹೇಳಲಾರರೇ? ಎಂದು ಮಹಾತ್ಮರು ಪ್ರಾರ್ಥನೋತ್ತರ ಭಾಷಣದಲ್ಲಿ ಸೈನ್ಯದ ವಿಭಜನೆಯನ್ನು ಕುರಿತು ಪ್ರಶ್ನಿಸಿದರು.

ಕಾಂಗ್ರೆಸ ಮತ್ತು ಮುಸ್ಲಿಂಲೀಗುಗಳ ನಡುವೆ ನಡೆದ ತಾತ್ಪೂರ್ತಿಕ ಒಡಂಬಡಿಕೆಯ ಮಾತುಕತೆಗಳ ಮೇಲಿಂದ ಉಕ್ಕು, ಕಲ್ಲಿದ್ದಲು, ಕಬ್ಬಿಣ ಮೊದಲಾದ ಅವಶ್ಯಕ ಸರಕುಗಳ ಮೇಲಿನ ನಿಯಂತ್ರಣವನ್ನು ಮಾರ್ಚ ೩೧ರ ವರೆಗೆ ಹಾಗೆಯೇ ಇರಿಸಲಾಗುವುದೆಂದು ತಿಳಿದು ಬರುತ್ತದೆ.

ಸ್ಟರ್ಲಿಂಗ ಸಂಗ್ರಹಕ್ಕೆ ಸಂಬಂಧಪಟ್ಟ ದೇಶಗಳಿಗೆ ಹಿಂದುಸ್ತಾನದಿಂದ ದೊಡ್ಡ ಪ್ರಮಾಣದಲ್ಲಿ ಹಣಹೋಗಬಾರದೆಂದು ಹಿಂದುಸ್ತಾನ ಸರಕಾರವು ಆ ದೇಶಗಳಿಗೆ ಮೂಲಧನವನ್ನು ವರ್ಗಾಯಿಸಬಾರದು ಮತ್ತು ಖಾಸಗಿ ವ್ಯವಹಾರದ ನಿಮಿತ್ತ ಕೂಡ ಸರತಿಗೆ ೩೫೦ ಪೌಂಡಿಗಿಂತ (೪೩೦೦ ರೂ) ಹೆಚ್ಚು ಹಣ ಕಳಿಸಬಾರದೆಂದು ಬ್ಯಾಂಕುಗಳಿಗೆ ಅಜ್ಞೆ ವಿಧಿಸಲಾಗಿದೆ.

ಹಿಂದುಸ್ತಾನ ಸರಕಾರದ ಹೊಸ ಆಯಾತ ನಿಯಂತ್ರಣದ ಧೋರಣದ ಮೇರೆಗೆ ಪರದೇಶಗಳಿಂದ ಹಿಂದುಸ್ತಾನಕ್ಕೆ ಮೋಟಾರು, ಮೋಟಾರ ಸಾಯಕಲ್ಲು, ಸಾಯಕಲ್ಲು, ಚಹ, ಮದ್ಯ ಮೊದಲಾದವು ಬರುವುದು ಬಂದಾಗುವದು.

ಮುಸ್ಲಿಂ ಲೀಗಿನವರು ಪಾಕಿಸ್ತಾನ ಘಟನಾ ಸಮಿತಿಯ ಮೊದಲನೆಯ ಅಧಿವೇಶನವನ್ನು ಅಗಸ್ಟ ಮೊದಲನೆಯ ವಾರದಲ್ಲಿ ಹೊಸದಿಲ್ಲಿಯಲ್ಲಿ ಸೇರಿಸಲು ತೊಡಗಿದರೆ ಸಾಮ್ಯವಾದೀ ಪಕ್ಷದವರು ಅದನ್ನು ಪ್ರತ್ಯಕ್ಷವಾಗಿ ತಡೆಯಲು ನಿರ್ಧರಿಸಿದ್ದಾರೆಂದು ತಿಳಿದುಬರುತ್ತದೆ.

ಕರಾಚಿಯು ಇನ್ನು ಮೇಲೆ ಹಿಂದುಸ್ತಾನ ಸರಕಾರಕ್ಕೆ ಹಡಗುಗಳ ಹಾಗೂ ವಿಮಾನಗಳ ಅಭಿವೃದ್ಧಿಗೆ ಸಿಗುವ ಸಂಭವವಿಲ್ಲವಾದುದರಿಂದ ಹಿಂದುಸ್ತಾನ ಸರಕಾರದವರು ನವನಗರವನ್ನು ಬಂದರು ಹಾಗೂ ವಿಮಾನ ಠಾಣೆಯಾಗಿ ಅಭಿವೃದ್ಧಿಗೊಳಿಸುವ ಯೋಜನೆ ನಡೆಸಿರುವರೆಂದು ತಿಳಿಯುತ್ತದೆ. ತಜ್ಞರು ಅದೇ ಯೋಗ್ಯ ಸ್ಥಳವಾಗುವುದೆಂದು ಸೂಚಿಸಿರುವರು.

ಬ್ರಾಹ್ಮಣರ ಸಂಖ್ಯೆ ಅತ್ಯಲ್ಪವಿರುವುದರಿಂದ ತಮ್ಮ ಮಕ್ಕಳಿಗೆ ಶಾಲೆ ಕಾಲೇಜುಗಳಲ್ಲಿ ಇಲ್ಲವೆ ನೌಕರಿಯ ವಿಷಯದಲ್ಲಿ ಅನ್ಯಾಯವಾಗಬಹುದೆಂದು ಅವರು ಹೆದರಿದ್ದಾರೆಂದು ತಮಗೆ ಒಂದು ಪತ್ರಬಂದಿದೆಯೆಂದು ಹೇಳಿ ಅದಕ್ಕೆ ಉತ್ತರವಾಗಿ ಮಹಾತ್ಮರು ಹೊಸದಿಲ್ಲಿಯಲ್ಲಿ ಜುಲೈ ೩ ರ ಪ್ರಾರ್ಥನೋತ್ತರ ಭಾಷಣದಲ್ಲಿ ಶಾಲೆ ಕಾಲೇಜುಗಳಲ್ಲಿಯೇ ಜ್ಞಾನದೊರಕಿಸಿಕೊಳ್ಳಬಹುದೆಂಬುದು ತಪ್ಪೆಂದೂ ದೇವರ ಜ್ಞಾನಮಾಡಿಕೊಂಡು ಅದನ್ನು ಜನರಿಗರುಹುವುದೇ ಬ್ರಾಹ್ಮಣನ ಕರ್ತವ್ಯವೆಂದೂ ತಿಳಿಸಿದರು.

ಪಂಜಾಬ

ಪಂಜಾಬ ಸರಕಾರದವರು ಸಾರ್ವಜನಿಕ ರಕ್ಷಣಾ ಕಾನೂನಿನ ೨೧ ನೆಯ ವಿಭಾಗದನ್ವಯ "ಟ್ರಿಬ್ಯೂನ" ಪತ್ರಿಕೆಯ ಸಂಪಾದಕರಾದ ರಾಜಾ ಜಂಗ ಬಹಾದ್ದೂರರನ್ನು ... ಲಾಹೋರಿನ ... ಉಪಯೋಗಕ್ಕೆ ... ಜೂನ ೨೪ ನೆಯ ತಾರೀಕಿನಲ್ಲಿ 'ಹಿಂದುಸ್ತಾನ—ಪಾಕಿಸ್ತಾನ ಯೋಜನೆ'ಯೆಂಬ ಅಗ್ರಲೇಖ ಬರೆದುದಕ್ಕಾಗಿ ಮುದ್ರಕರೂ ಪ್ರಕಾಶಕರೂ ಆದ ಪಂ. ಭೋಲಾನಾಥರೊಡನೆ ಜುಲೈ ೮ ರಲ್ಲಿ ಬಂಧಿಸಿದರು.

ಲಾಹೋರಿನ 'ಅಜಿತ'ವೆಂಬ ದಿನಪತ್ರಿಕೆಯ ಸಂಪಾದಕರ ಪ್ರಶ್ನೆಗೆ ಉತ್ತರವಾಗಿ ಮಹಾತ್ಮರು ಶೀಖರೂ ಹಿಂದುಗಳೂ ಯಾವಾಗಲೂ ದೇವರ ಸಹಾಯದಲ್ಲಿ ವಿಶ್ವಾಸವಿಡಬೇಕೆಂದೂ ಪಾಕಿಸ್ತಾನದಲ್ಲಿ ನ್ಯಾಯ ಸಿಗುವುದಿಲ್ಲೆಂದು ಅವರು ಸಂಶಯ ಪಡಬಾರದೆಂದೂ ತಮ್ಮ ಸ್ವಂತ ಶಕ್ತಿಯನ್ನೇ ಅವರು ಅವಲಂಬಿಸಬೇಕೆಂದೂ ಹೇಳಿದರು.

ಗುರ್ಜನವಾಲಾದಲ್ಲಿ ಜುಲೈ ೫ ರಲ್ಲಿ ಲಾಹೋರಿನ ದಂಗೆಗಾರರ ಮೇಲೆ ಪೋಲೀಸರು ಗೋಳೀಬಾರು ಮಾಡಿದುದರಿಂದ ೫ ಜನರು ಮಡಿದರು, ೪೦ ಜನರು ಗಾಯಗೊಂಡರು. ದಂಗೆಯಲ್ಲಿ ೨೦ ಮನೆಗಳು ಸುಟ್ಟುಹೋಗಿದ್ದವು.

ಪೂರ್ವ ಪಂಜಾಬ ಮತ್ತು ಪಶ್ಚಿಮ ಪಂಜಾಬಗಳ ಗಡಿಗಳನ್ನು ನಿರ್ಣಯಿಸದೆ ಅಧಿಕಾರದಾನ ಮಾಡುವುದರಿಂದ ಶೀಖರಿಗೆ ಹಾನಿಯಿದೆಯೆಂದೂ ಆದುದರಿಂದ ಅವರು ಅದನ್ನು ಪ್ರತಿಭಟಿಸದಿರರೆಂದೂ ಸರದಾರ ಸ್ವರ್ಣಸಿಂಗರು ಹೇಳಿದರು.

ಪಾಕಿಸ್ತಾನ ಘಟನಾಸಮಿತಿಗೆ ಪಶ್ಚಿಮ ಪಂಜಾಬದ ೩ಸಾಮಾನ್ಯ ಸ್ಥಳಗಳಿಗೆ ಶ್ರೀಗಳಾದ ಲಾಲಾ ಭೀಮಸೇನ ಸಾಚಾರ, ಅವತಾರ ನಾರಾಯಣ ಹಾಗೂ ರಾಯಬಹಾದ್ದೂರ ಗಂಗಾಶರಣರು ಆರಿಸಿ ಬಂದಿದ್ದಾರೆ.

ಪಶ್ಚಿಮ ಪಂಜಾಬದ ಮುಸ್ಲಿಂ ಲೀಗ ಪಕ್ಷಕ್ಕೆ ಮಲ್ಲಿಕಫಿರೋಜಖಾನನೂನರು ಧುರೀಣರಾಗಿ ಆರಿಸಲ್ಪಟ್ಟದ್ದರಿಂದ ಉಂಟಾದ ಪರಿಸ್ಥಿತಿಯನ್ನು ವಿಚಾರಿಸಲು ಜುಲೈ ನಾಲ್ಕರಲ್ಲಿ ಲಾಹೋರಿನಲ್ಲಿ ಆ ಪಕ್ಷದ ಸಭೆ ಸೇರಿ ಪಕ್ಷದ ಸಂಪೂರ್ಣ ಸಭೆಯನ್ನು ಬೇಗನೆ ಕರೆಯಬೇಕೆಂದು ಪಂಜಾಬ ಶಾಸನ ಸಭೆಯ ಮುಸ್ಲಿಂ ಲೀಗ ಧುರೀಣರಾದ ಮಮದೋತಖಾನರಿಗೆ ವಿನಂತಿ ಮಾಡುವ ನಿರ್ಣಯಕ್ಕೆ ಬಂದಿತು.

ಮುಂಬರುವ ಪ್ರವಾಸದಲ್ಲಿ ಮಹಾತ್ಮರು ಲಾಹೋರಿಗೆ ಭೆಟ್ಟಿಕೊಟ್ಟಾಗ ಅವರು ಭಂಗೀ ವಸತಿಯಲ್ಲಿಯೇ ಇಳಿದುಕೊಳ್ಳಬೇಕೆಂದು ಲಾಹೋರ ನಗರ ಸಭೆಯ ಸದಸ್ಯರಾದ ಶ್ರೀ ಸೋಹನಲಾಲರು ಆಮಂತ್ರಿಸಿದ್ದಾರೆ. ಮಹಾತ್ಮರ ಸನ್ಮಾನಕ್ಕಾಗಿ ಹರಿಜನರ ಸ್ವಾಗತ ಸಮಿತಿಯೊಂದು ನಿಯಮಿಸಲ್ಪಟ್ಟಿದೆ.

ಮದ್ರಾಸ

ಶ್ರೀ ಟಿ. ಪ್ರಕಾಶಂರವರು ಜುಲೈ ೧೪ ಕ್ಕೆ ಪ್ರಾರಂಭವಾಗುವ ಘಟನಾಸಮಿತಿಯ ಅಧಿವೇಶನದಲ್ಲಿ ಆಂಧ್ರ ಪ್ರಾಂತಕ್ಕೆ ಕೂಡಲೆ ಪ್ರತ್ಯೇಕ ಅಧಿಕಾರ ಬೇಕೆಂಬ ಠರಾವನ್ನು ಮುಂಡಿಸಲಿರುವರೆಂದು ತಿಳಿಯುತ್ತದೆ.

ಅಕ್ಕಿಯ ಪೂರೈಕೆಯು ಕಡಿಮೆಯಾದುದರಿಂದ ಜುಲೈ ೧೩ ರಿಂದ ಪ್ರತಿಯೊಬ್ಬನಿಗೆ ಪ್ರತಿದಿನಕ್ಕೆ ಹತ್ತು ಔನ್ಸಿನಿಂದ ಎಂಟು ಔನ್ಸಿಗೆ ಇಳಿಸಲಾಗುವುದೆಂದು ಸರಕಾರಿ ಪ್ರಕಟನೆ ಹೊರಟಿದೆ.

ಜೂನ ೨೮ ರ ಹೈದರಾಬಾದ ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಸಂಭವಿಸಿದ ಗಲಭೆಯ ಪರಿಣಾಮವಾಗಿ ವರಂಗಲ್ಲಿನಿಂದ ಸುಮಾರು ೨೫೦೦ ನಿರಾಶ್ರಿತರು ಬಿಝುವಾಡಕ್ಕೆ ಬಂದಿರುವರೆಂದೂ ಗಲಭೆಯಲ್ಲಿ ೨೫ ಜನರು ಸತ್ತಿದ್ದು ೧೨೫ ಜನರಿಗೆ ಗಾಯಗಳಾಗಿವೆಯೆಂದೂ ವರಂಗಲ್ಲಿನ ಡಾಕ್ಟರರೊಬ್ಬರು ಇರಿತದಿಂದ ಸತ್ತಿದ್ದು ಅವರ ತಾಯಿ ಮತ್ತು ಹೆಂಡತಿಯರು ಮಾನಭಂಗದ ಹೆದರಿಕೆಯಿಂದ ವಿಷತಿಂದು ಮೃತಪಟ್ಟರೆಂದೂ ತಿಳಿದುಬಂದಿದೆ.

ಮದ್ರಾಸಿನ ಕೂಲಿಕಾರ ಯೂನಿಯನ್ನಿನ ಮೇಲೂ ಬಕಿಂಗಹ್ಯಾಮ ಮತ್ತು ಕರ್ನಾಟಕ ಮಿಲ್ಲಿನ ಕೂಲಿಕಾರರ ಮುಖಂಡರಾದ ಶ್ರೀ ಕಲ್ಯಾಣ ಸುಂದರ ಮುದಲಿಯಾರ ಮತ್ತು ಅಂಥನಿ ಪಿಳ್ಳೆಯವರ ಮೇಲೂ ಹಾಕಲಾದ ಪ್ರತಿಬಂಧಾಜ್ಞೆಯನ್ನು ಹಿಂತೆಗೆದುಕೊಳ್ಳಲಿರುವರು.

ಬಂಗಾಲ

... ... ಜುಲೈ ... ... ಸತ್ತರೆಂದೂ ... ಜನರು ... ಕರೆಯ ... ತಿಳಿದುಬಂದಿದೆ.

ಡಾ. ಪಿ. ಸಿ. ಘೋಷ ಮೊದಲಾದ ... ಮಂತ್ರಿಗಳಲ್ಲಿ ಜುಲೈ ೭ ರಲ್ಲಿ ... ... ಮುಗಿದು ಸರಕಾರೀ ಭವನದಲ್ಲಿ ... ... ಮಾಡಿಕೊಟ್ಟಿತು.

೬೫೦ ಬಂಗಾಲ ಶಿಕ್ಷಕ ಸಂಘದವರು ಶಿಕ್ಷಣ ಮತ್ತು ಶಿಕ್ಷಕರ ಪಕ್ಕ್ಯ ಬಾಧ್ಯತೆಗಳ ... ಪಟದ ಕರಡನ್ನು ... ... ಈ ಸಂಘವು ಬಂಗಾಲದ ೩೦,೦೦೦ ... ಶಿಕ್ಷಕರು ಸದಸ್ಯರಾಗಿದ್ದಾರೆ. ಶಿಕ್ಷಣದ ... ... ಈ ... ದೊರೆಯಬೇಕೆಂದು ... ಕರಡಿನಲ್ಲಿ ಹೇಳಲಾಗಿದೆ.

ಜುಲೈ ೭ ರ ಮಧ್ಯಾಹ್ನದಿಂದ ... ಕತ್ತೆಯಲ್ಲಿ ೨೧೫ ಜನರು ... ೪೦ ಜನರು ಸತ್ತರೆಂದೂ ವರದಿ ಬಂದಿದೆ. ... ದೆಸೆಯಿಂದ ಕಲಕತ್ತಾ ನಗರ ಸಭೆ ... ದಿತು.

ಪಶ್ಚಿಮ ಬಂಗಾಲದಲ್ಲಿಯ ಅಲ್ಪಸಂಖ್ಯಾಕ ಮುಸ್ಲಿಮರು ಯಾವ ರೀತಿಯಿಂದಲೂ ... ಬೇಕಾದ ಕಾರಣವಿಲ್ಲೆಂದೂ ಅವರಿಗೆ ಎಲ್ಲ ವಿಧದ ನ್ಯಾಯವಾದ ಸೌಕರ್ಯಗಳು ದೊರೆಯುವುವೆಂದೂ ಪಶ್ಚಿಮ ಬಂಗಾಲದ ಮಂತ್ರಿಮಂಡಲದ ಧುರೀಣರಾದ ಡಾ. ಪ್ರಫುಲ್ಲಚಂದ್ರ ... ಜುಲೈ ೪ ರ ಸತ್ಕಾರಕೂಟದಲ್ಲಿ ಹೇಳಿದರು.

ಜಾತೀಯ ತಳಹದಿಯ ಮೇಲೆ ಬಂಗಾಲದ ವಿಭಜನೆಯಾಗಿದ್ದರೂ ಪ್ರಾಂತದಲ್ಲಿ ಶಾಂತ ವಾತಾವರಣವು ಬೇಗನೆ ಸ್ಥಾಪಿಸಲ್ಪಡುವ ಆಸೆಯಿಲ್ಲವಾದುದರಿಂದ ಪಶ್ಚಿಮ ಬಂಗಾಲದ ಹಿಂದುಗಳಿಗೆ ಎಲ್ಲರೂ ಬೆಂಬಲಿಗರಾಗಿ ನಿಲ್ಲಬೇಕೆಂದು ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಕಲಕತ್ತೆಯ ಸಭೆಯೊಂದರಲ್ಲಿ ಹೇಳಿದರು.

ಪೂರ್ವ ಬಂಗಾಲದಿಂದ ಪಾಕಿಸ್ತಾನ ಘಟನಾ ಸಮಿತಿಯ ಸಾಮಾನ್ಯ ಹಾಗೂ ಮುಸಲ್ಮಾನ ಸ್ಥಳಗಳಿಗೆ ಹುರಿಯಾಳಾಗಿ ನಿಂತು ವಿಜಯ ಹೊಂದಿದವರಲ್ಲಿ ನಡುಗಾಲ ಸರಕಾರದ ಅರ್ಥ ಮಂತ್ರಿಗಳಾದ ಲಿಯಾಖತ ಅಲಿಖಾನ, ಕಾಯದೆ ಮಂತ್ರಿಗಳಾದ ಜೆ. ಎಚ್. ಮಂಡಲ ಹಾಗೂ ಇತ್ತೀಚಿನ ವರೆಗೆ ಬಂಗಾಲ ಶಾಸನ ಸಭೆಯ ವಿರುದ್ಧ ಪಕ್ಷದ ಧುರೀಣರಾಗಿದ್ದ ಕಿರಣ ಶಂಕರ ರಾಯರು ಪ್ರಮುಖರಿರುವರು.

ಕಲಕತ್ತೆಯ ಪೋಲೀಸರು ಸೈನ್ಯದವರೊಂದಿಗೆ ಜುಲೈ ೨ ರಲ್ಲಿ ಮುಚಿಪಾರಾ ಬೌಬಜಾರ ಹಾಗೂ ಅಮರ್ಸ್ಟ ಬೀದಿಯ ಪೋಲೀಸ ಠಾಣೆಗಳಲ್ಲಿ ೩೦ ಸ್ಥಳಗಳನ್ನು ಝಡತಿಮಾಡಿ ೧೮ ಜನರನ್ನು ಬಂಧಿಸಿದರು.

ಬಿಹಾರ

ಮೊಂಘೀರ ಜಿಲ್ಲೆಯ ಬರ್ಮಿಯ ಎಂಬ ಹಳ್ಳಿಯಲ್ಲಿ ಜಮೀನದಾರ ಒಕ್ಕಲಿಗರಲ್ಲಿ ಕಲವೊಂದು "ಬಕಶತ" ಭೂಮಿಯ ಸಂಬಂಧದಲ್ಲಿ ಹೊಡೆದಾಟವಾಗಿ ೬ ಜನರು ಮರಣಹೊಂದಿದ್ದು ಬಹಳ ಜನರಿಗೆ ಗಾಯವಾಗಿದೆ.

ಗಡಿನಾಡು

ಜನ ಮತಗಣನೆಯಲ್ಲಿ ಒಟ್ಟು ಮತದಾರರ ಸಂಖ್ಯೆಯಲ್ಲಿ ನೂರಕ್ಕೆ ೩೦ ರಷ್ಟು ಮುಸ್ಲಿಂ ಲೀಗಿಗೆ ಮತಗಳು ಬಿದ್ದರೆ ತಾವು ರಾಜೀನಾಮೆ ಕೊಡಬೇಕೆಂದಿರುವುದಾಗಿಯೂ ಅದರ ಕೊನೆಯ ನಿರ್ಣಯ ತೆಗೆದುಕೊಳ್ಳುವುದು ಗಡಿನಾಡು ಕಾಂಗ್ರೆಸ್ಸಿನ ಕೈಯಲ್ಲಿರುವುದಾಗಿಯೂ ಒಂದು ವೇಳೆ ತಾವು ರಾಜೀನಾಮೆ ಸಲ್ಲಿಸಿದರೆ ಸ್ವಾಭಾವಿಕವಾಗಿಯೇ ಹೊಸ ಚುನಾವಣೆ ನಡೆಯಬೇಕಾಗುವುದಾಗಿಯೂ ಡಾ. ಖಾನಸಾಹೇಬರು ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು.

ಮುಂದ್ರಿಗಾರರ ಆಹ್ವಾನವನ್ನು ಸ್ವೀಕರಿಸಿ 'ಪಾಕಿಸ್ತಾನ ವಿರುದ್ಧ ಪಠಾಣಸ್ತಾನ'ವೆಂಬ ತಳಹದಿಯ ಮೇಲೆ ಸಾರ್ವತ್ರಿಕ ಮತಗಣನೆಯನ್ನು ಎದುರಿಸಲು ನಾವು ಸಿದ್ಧರಿದ್ದೇವೆಂದು ಜುಲೈ ೬ರ ರಾತ್ರಿ ಪೇಶಾವರದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಖಾನಅಬ್ದುಲ್ ಗಫಾರಖಾನರು ಹೇಳಿದರು.

ಖುದಾಯಿ ಖಿದಮತಗಾರ ಮತ್ತು ಝಲ್ಮೆ ಪಖ್ತೂನ ಸಂಸ್ಥೆಗಳ ಸುಮಾರು ೩೦೦೦ ಸ್ವಯಂಸೇವಕರ ಮೆರವಣಿಗೆಯು 'ಪಠಾಣಿಸ್ತಾನ ಝಿಂದಾಬಾದ,' 'ಬಾದಶಹಾಖಾನ ಝಿಂದಾಬಾದ' ಎಂದು ಜಯಘೋಷ ಮಾಡುತ್ತ ಜುಲೈ ೬ರಲ್ಲಿ ಕಿಸ್ಸಾ ಖಾನಿ ಬಝಾರದಲ್ಲಿಂದ ಹಾಯ್ದು ಹೋಯಿತು. ಡಾ. ಖಾನಸಾಹೇಬರ ಆದೇಶದಂತೆ ಝಲ್ಮೆ ಪಖ್ತೂನದವರು ಆಯುಧ ಹಿಡಿದಿರಲಿಲ್ಲ. ಅವರಂತೆ ಕೈಖಾಲಿ ಮೆರವಣಿಗೆಯನ್ನು ಬಹಿಷ್ಕರಿಸಿದರು.

ಧಾರವಾಡ

—ಹುಬ್ಬಳ್ಳಿ ಲೋಂಡಾ ನಡುವಿರುವ ಶಾವರ ಗಟ್ಟ ಸ್ಟೇಶನದ ಹತ್ತರ ೬ ನೇ ತಾರೀಕು ರಾತ್ರಿ ಮಾಲುಗಾಡಿಯು ಡಬ್ಬಿಯೊಂದು ಉರುಳಿದ್ದರಿಂದ ಇತರ ಗಾಡಿಗಳ ಓಡಾಟಕ್ಕೆ ಮುಂದೆ ಎಂಟು ಗಂಟೆ ವರೆಗೆ ಅಡಚಣೆಯಾಗಿತ್ತು.

ಶ್ರೀ ಹುಕ್ಕೇರಿ ರಾಮರಾಯರ ಷಷ್ಟ್ಯಬ್ದವನ್ನು ನೆರವೇರಿಸಬೇಕೆಂದು ಅವರ ಸ್ನೇಹಿತರು ಧಾರವಾಡದಲ್ಲಿ ಸಭೆ ಸೇರಿ ನಿರ್ಧರಿಸಿದ್ದಾರೆ. ಬರುವ ಅಕ್ಟೋಬರ ೨೧ಕ್ಕೆ ಅವರಿಗೆ ೬೦ ವರ್ಷ ತುಂಬುವುದರಿಂದ ಅಂದು ಈ ಮಹೋತ್ಸವ ನಡೆಯಲಿದೆ. ಹುಕ್ಕೇರಿಕರ ರಾಮರಾಯರ ಸತ್ಕಾರ ಸಮಿತಿಯೊಂದು ಸ್ಥಾಪಿತವಾಗಿದ್ದು ಸಹಾಯ ಮಾಡುವವರು ಆ ಸಮಿತಿಗೆ ವಿನಾ ತಕ್ಕ ಹಣ ಕಳಿಸಬೇಕಾಗಿ ಕೇಳಿಕೊಳ್ಳಲಾಗಿದೆ.

ಕರ್ನಾಟಕ ಪದವೀಧರ ಸಂಘದ ಸಭೆ ಧಾರವಾಡದಲ್ಲಿ ೬ ನೇ ತಾರೀಕು ರಾ. ಬ. ಸಾವಕಾರರ [illegible] ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯವರು ಹೊರಡಿಸಿದ ಪ್ರಶ್ನಾವಲಿಗೆ ವರದಿಯನ್ನೊಪ್ಪಿಸಲು ಹತ್ತು ಜನರ ಶಿಷ್ಟಮಂಡಳವೊಂದನ್ನು ನೇಮಿಸಲಾಯಿತು.

ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ಸ್ಕೂಲ ಬೋರ್ಡ ಚುನಾವಣೆ ನಡೆದು ಎಂ. ವಾಯ. ಸವಣೂರ ಮತ್ತು ಬಿ. ವಿ. ಪಾಟೀಲರು ವಿದ್ಯೆಯಲ್ಲಿ ತಜ್ಞರೆಂದು, ಎ ಎಚ್. ಹಾನಗಲ್ಲರು ಮುಸಲ್ಮಾನರ ಪ್ರತಿನಿಧಿಗಳೆಂದು ಎಚ್. ಕೆ. ರಾಠೋಡರು ಹಿಂದುಳಿದ ವರ್ಗಗಳ ಪ್ರತಿನಿಧಿಯೆಂದು, ಅವ್ವಕ್ಕ ಅಂಗಡಿಯವರು ಸ್ತ್ರೀಯರ ಪ್ರತಿನಿಧಿಗಳೆಂದು, ದ್ಯಾವಪ್ಪ ಹೇರದಾಳ ಇವರು ಪರಿಶಿಷ್ಟ ವರ್ಗದ ಪ್ರತಿನಿಧಿಯೆಂದು ಆರಿಸಲ್ಪಟ್ಟರು.

ರೇಲ್ವೆ ಅನಿಯಮಿತತನದ ಬಗ್ಗೆ ಮಾಡಲಾಗುವ ಟೀಕೆಗೆ ಎಂ. ಎಸ್. ಎಂ. ರೇಲ್ವೆಯ ಹುಬ್ಬಳ್ಳಿ ವಿಭಾಗದ ಟ್ರಾಫಿಕ್ ಇನಸ್ಪೆಕ್ಟರರು ಉತ್ತರ ಕೊಡುತ್ತ ಎಂಜಿನುಗಳು ಚಲೋ ಇಲ್ಲದೆ ಇರುವದರಿಂದಲೂ ಕಾಲಕಾಲಕ್ಕೆ ಅವುಗಳ ರಿಪೇರಿ ಆಗದಿರುವದರಿಂದಲೂ ಅವು ಒಮ್ಮೆಲೆ ನಿಂತು ಹೋಗುತ್ತವೆ. ಕಲ್ಲಿದ್ದಲಿಯಲ್ಲಿ ದೋಷವಿರುವುದರಿಂದಲೂ ಓಡಾಟದಲ್ಲಿ ವ್ಯತ್ಯಯ. ಗಾರ್ಡ ಮತ್ತು ಡ್ರಾಯವರರ ದೋಷವೇನೂ ಇದರಲ್ಲಿ ಇಲ್ಲೆಂದು ಮುಂತಾಗಿ ಅವರ ಅಭಿಪ್ರಾಯ.

ಈ ವರೆಗೆ ಗದುಗಿನಲ್ಲಿದ್ದ ಬಿ. ವಿ. ಭೂಮರೆಡ್ಡಿ ಪೋಲಿಟೆಕ್ನಿಕಲ್ ಶಾಲೆಯನ್ನು ಹುಬ್ಬಳ್ಳಿಗೆ ತರಲಾಗಿದೆ. ಜುಲೈ ೧೦ ನೇ ತಾರೀಕಿನಿಂದ ಹೊಸ ಕಟ್ಟಡದಲ್ಲಿ ವರ್ಗಗಳು ಪ್ರಾರಂಭವಾಗಿವೆ.

ಗದಗಬೆಟಗೇರಿ ನಗರ ಸಭೆಯು ಭಂಗೀ ಜನರ ಬೇಡಿಕೆಗಳು ಮಾನ್ಯವಾದ್ದರಿಂದ ಅವರು ಸಂಪನ್ನು ನಿಲ್ಲಿಸಿರುವರು.

ಕರ್ನಾಟಕ ವಿದ್ಯಾವರ್ಧಕ ಸಂಘದ ೫೩ ನೆಯ ಸಂಸ್ಥಾಪನದಿನೋತ್ಸವ ೨೦—೭—೪೭ನೇ ದಿನ ಸಾಯಂಕಾಲ ೬ ಗಂಟೆಗೆ ಜರಗುವದು. ನಿವೃತ್ತ ನ್ಯಾಯಾಧೀಶರಾದ ಲೋಕೂರ ನಾರಾಯಣರಾಯರು ಅಧ್ಯಕ್ಷರಾಗಲು ಒಪ್ಪಿರುವರು. ಈ ಉತ್ಸವದ ಅಂಗವಾಗಿ ಸಾಹಿತ್ಯ ಸ್ಪರ್ಧೆಗಳು ನಡೆಯುವವು.

ಧಾರವಾಡ ನಗರ ಸಭೆಯ ಕೆಳ ದರ್ಜೆಯ ನೌಕರರ ಸಭೆ ೬ ಕ್ಕೆ ಸೇರಿ ನಗರ ಸಭೆಯವರು ಬೋನಸ್ಸು ಮುಂತಾದ್ದನ್ನು ಜುಲೈ ೨೨ ರೊಳಗಾಗಿ ಕೊಡದಿದ್ದರೆ ಅಂದಿನಿಂದ ಸಂಪು ಹೂಡುವದಾಗಿ ನಿರ್ಧರಿಸಿದ್ದಾರೆ.

ಶಿಗ್ಗಾವಿ ತಾಲೂಕಿನ ಹುಲುಗೂರಿನ ನಾಗನಗೌಡರ ಆಸ್ತಿಯ ಸಂಬಂಧದ ಖಟ್ಲೆ ಹುಬ್ಬಳ್ಳಿಯ ಸಿವಿಲ ಕೋರ್ಟಿನಲ್ಲಿ ನಡೆದು ಬಸನಗೌಡರು ದಾಸೀಪುತ್ರನಾಕೆಯಿಂದ ಅರ್ಧ ಆಸ್ತಿಗೆ ಪಾಲುಗಾರರೆಂದು ತೀರ್ಪು ಕೊಡಲಾಯಿತು.

ಹುಬ್ಬಳ್ಳಿಯಲ್ಲಿ ಶ್ರೀ ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯಲ್ಲಿ ವೇದಶಾಸ್ತ್ರಾಭ್ಯಾಸದ ಜೊತೆಯಲ್ಲಿ ಇಂಗ್ಲಿಶ್ ಅಭ್ಯಾಸ ಮಾಡುವವರಿಗೆ ಧರ್ಮಾರ್ಥ ಸಂಸ್ಕೃತ ಶಿಕ್ಷಣ ಕೊಡುವದನ್ನು ಗೊತ್ತುಪಡಿಸಿದ್ದು ವಿದ್ಯಾರ್ಥಿಗಳು ಇದರ ಲಾಭ ಪಡೆಯಬೇಕೆಂದು ಕೋರಲಾಗಿದೆ.

ಧಾರವಾಡ ಜಿಲ್ಹೆಯಲ್ಲಿ ಜಿಲ್ಹಾ ಮ್ಯಾಜಿಸ್ಟ್ರೇಟರ ಅಪ್ಪಣೆ ಇಲ್ಲದೆ ಯಾರಿಗೂ ಮದ್ದು ಗುಂಡು ಪೂರೈಸಕೂಡದೆಂದು ಎಲ್ಲ ಮದ್ದಿನ ಅಂಗಡಿಯ ಲಾಯಸೆನ್ಸದಾರರಿಗೆ ವಿಧಿಸಿದ ಆಜ್ಞೆಯನ್ನು ಜುಲೈ ೮ ರಿಂದ ಮುತ್ತೆ ೨ ತಿಂಗಳು ಬೆಳೆಸಿದ್ದಾರೆ.

ಹುಬ್ಬಳ್ಳಿಯ ಎ. ಆರ್. ಡಿ ಸಂ. ೩೧ ರ ಒಡೆಯರಾದ ಶ್ರೀ ಎಚ್. ಬಿ. ದೇಸಾಯಿ ಇವರು ರೇಶನಿಂಗ ನಿಯಮಗಳನ್ನುಲ್ಲಂಘಿಸಿದ್ದರಿಂದ ಅವರ ಠೇವಿನ ಹಣ ೨೫೦ ರೂಪಾಯಿಗಳಲ್ಲಿ ೨೫ ರೂಪಾಯಿಗಳನ್ನು ರದ್ದುಗೊಳಿಸಲಾಗಿದೆ. ಅವರ ಅಂಗಡಿಯನ್ನು ರದ್ದು ಪಡಿಸಲಾಗಿದೆ.

ಹರಿಹರದ ಕೃಷ್ಣಮೂರ್ತಿ ತೇಲಕರ ಎಂಬವರು ಕಳ್ಳತನದಿಂದ ಬಟ್ಟೆಯನ್ನು ಮೈಸೂರ ಸೀಮೆಗೆ ಸಾಗಿಸುತಿದ್ದರೆಂಬ ಅಪಾದನೆಯ ಮೇಲೆ ರಾಣೆಬೆನ್ನೂರ ಮ್ಯಾಜಿಸ್ಟ್ರೇಟರಲ್ಲಿ ಖಟ್ಲೆ ನಡೆದಿತ್ತು. ಆರೋಪಿಗೆ ೧ ತಿಂಗಳ ಕಠಿನ ಶಿಕ್ಷೆ ೫೦ ರೂಪಾಯಿ ದಂಡ ವಿಧಿಸಲಾಯಿತು.

ಕರ್ನಾಟಕ

ವಿಜಾಪುರ

ವಿಜಾಪುರದ ವಿ. ಬ. ದರಬಾರ ಪ್ರಾಥಮಿಕ ಅಧ್ಯಾಪಕ ವಿದ್ಯಾಲಯದ ಧಾರ್ಮಿಕ ನೈತಿಕಶಿಕ್ಷಣ ವಿಭಾಗದ ಅಂಗವಾಗಿ ಕಳೆದ ತಿಂಗಳ ಕೊನೆಯ ದಿನ ಪ್ರಾರ್ಥನೆ ರಾ. ಬ. ಹಳಕಟ್ಟಿಯವರ ನೇತೃತ್ವದಲ್ಲಿ ಜರುಗಿತು. ಬಸವ ವಚನಗಳಲ್ಲಿಯ ಕೆಲ ಭಾಗಗಳನ್ನು ಓದಿ ಅವುಗಳ ಅರ್ಥವನ್ನು ವಿವರಿಸಿ ಧರ್ಮ ಹಾಗು ಶಿಕ್ಷಣದ ವಿಷಯವಾಗಿ ಉಪನ್ಯಾಸವಿತ್ತರು. ಹಳ್ಳಿಗಳಲ್ಲಿಯ ಧಾರ್ಮಿಕ ಜೀವನವನ್ನು ಎಂತು ಮಾರ್ಪಡಿಸಬೇಕೆಂಬದನ್ನು ಅವರು ವಿವರಿಸಿದರು.

ವಿಜಾಪುರ ಜಿಲ್ಹೆಯಲ್ಲಿಯ ಗುಳೇದಗುಡ್ಡ ಮುನಿಸಿಪಾಲಿಟಿಯು ತನ್ನ ಕರ್ತವ್ಯದಲ್ಲಿ ತಪ್ಪಿದ್ದರಿಂದ ೭ನೇ ತಾರೀಕಿನಿಂದ ೨ ವರ್ಷಗಳ ವರೆಗೆ ರದ್ದು ಗೊಳಿಸಲಾಗಿದೆಂದು ಮುಂಬಯಿ ಸರಕಾರದ ವಿಶೇಷ ಗ್ಯಾಜೆಟನಲ್ಲಿ ಪ್ರಸಿದ್ಧಿಸಲಾಗಿದೆ.

ವಿಜಾಪುರದ ತೂಕ ಅಳತೆಯ ಅಧಿಕಾರಿಗಳಾದ ಶ್ರೀ ಕಸಬೇಕರ ಎಂಬವರಿಗೆ ಲಂಚದ ಆರೋಪದ ಮೇಲೆ ೩ ತಿಂಗಳ ಶಿಕ್ಷೆ ಮತ್ತು ೨೦೦ ರೂಪಾಯಿ ದಂಡ ವಿಧಿಸಲಾಗಿದೆಂದು ತಿಳಿಯುತ್ತದೆ.

ವಿಜಾಪುರದ ಹರಿಜನ ಕಾರ್ಯಕರ್ತರಾದ ಶಾಶಾ ಕಾರಖಾನೀಸರು ಬೆಳಗಾವಿ ಜಿಲ್ಹೆಯ ಕಲ್ಲಪ್ಪಾ ವಾನೆ ಸಿರಗಾವ ಮತ್ತು ಅವನ ಒಬ್ಬ ಮಗ ಮೂರು ಜನ ಹೆಣ್ಣುಮಕ್ಕಳ ಸಹಿತವಾಗಿ ವಿಧಿ ಪೂರ್ವಕ ೩ ನೇ ತಾರೀಕು ಶುದ್ಧೀಕರಣ ಮಾಡಿಕೊಂಡರು. ಅವರಿಗೆ ರಾಮರಾವ ಜಪ ಯಜ್ಞೋಪವೀತ ಧಾರಣ ಮಾಡಿಸಿದರು.

ಬಾಗಲಕೋಟೆಯಲ್ಲಿ ಕಳೆದವಾರ ಮೋಟರ ಕಾಮಗಾರಸಂಘ ಎಂಬ ಸಂಘ ಸ್ಥಾಪಿತವಾಗಿ ಅದರ ಮೊದಲನೆ ಸಭೆ ಶ್ರೀ ಜೋರಾಪೂರೆ ಗುರುರಾಯರ ಅಧ್ಯಕ್ಷತೆಯಲ್ಲಿ ಕೂಡಿ ಕಾರ್ಯಕಾರಿ ಮಂಡಲವನ್ನೂ ಘಟನಾಸಮಿತಿಯನ್ನೂ ನೇಮಿಸಲಾಯಿತು.

ಬೆಳಗಾವಿ

ಬೆಳಗಾವಿ ಜಿಲ್ಲಾ ಸಹಕಾರಿ ಸಂಘಗಳ ಸೆಕ್ರೆಟರಿಗಳ ಪರಿಷತ್ತು ಕಳೆದ ತಿಂಗಳ ಕೊನೆಯಲ್ಲಿ ಮುಂಬಯಿ ಶಾಸನ ಸಭೆಯ ಉಪಾಧ್ಯಕ್ಷರಾದ ಶ್ರೀ ಅಂಗಡಿ ಹಣ್ಣುಖುಷ್ಪನವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಕಲ್ಲಯ್ಯಸ್ವಾಮಿ ಕವಟಗಿಮಠ ಇವರು ಅದರ ಪ್ರಾರಂಭಮಹೋತ್ಸವವನ್ನು ನೆರವೇರಿಸಿದರು. ಸೆಕ್ರೆಟರಿಗಳನ್ನು ನೇಮಿಸುವ ಅಧಿಕಾರವನ್ನು ಸರಕಾರದವರು ತಮ್ಮ ಕಡೆಗೇ ತೆಗೆದುಕೊಳ್ಳಬೇಕೆಂದು ಮುಂತಾದ ೧೧ ಗೊತ್ತುವಳಿ ಸ್ವೀಕೃತವಾದವು.

೧೯೪೨ ರಲ್ಲಿ ಇನಾಮದಾರ ಪಾಟೀಲರ ಪ್ರಕರಣದ ವಿಚಾರಣೆ ಪೋಲೀಸ ಖಾತೆಯ ಮುಖಾಂತರ ಇಷ್ಟರಲ್ಲಿ ಪ್ರಾರಂಭವಾಗಲಿದೆಂದು ತಿಳಿಯುತ್ತದೆ. ಮಧ್ಯಂತರದಲ್ಲಿ ಇನಸ್ಪೆಕ್ಟರರಾಗಿದ್ದ ಶ್ರೀ ಇನಾಮದಾರರನ್ನು ಮತ್ತೆ ಫೌಜದಾರರನ್ನಾಗಿ ಮಾಡಿ ಬೆಳಗಾವಿಗೆ ಹಾಕಿದ್ದಾರೆ. ನಿಪ್ಪಾಣಿಯಲ್ಲಿ ಲಂಚತೆಗೆದುಕೊಂಡರೆಂದು ಆಪಾದಿತರಾದ ಶ್ರೀ ಜಾಫರ ಫೌಜದಾರರ ವಿಚಾರಣೆಯು ಆಗತಕ್ಕದ್ದಿದೆ.

ಬಳ್ಳಾರಿ

ಹೂವಿನಹಡಗಲಿಯ ವಿದ್ಯಾರ್ಥಿ ಕಾಂಗ್ರೆಸ್ ಸಮಿತಿಯ ಮಹಾಜನ ಸಭೆ ೨—೭—೪೭ ಕ್ಕೆ ಕೂಡಿ ಕೆ. ಎ. ಜಂಬಯ್ಯನವರು ಅಧ್ಯಕ್ಷರಾಗಿಯೂ ಬಿ. ಅನಂತಪ್ಪನವರು ಉಪಾಧ್ಯಕ್ಷರಾಗಿಯೂ ಪಾಟೀಲ ಚಂದ್ರಶೇಖರಗೌಡರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಬಳ್ಳಾರಿ ಜಿಲ್ಲಾ ಕಾಂಗ್ರೆಸ ಸಮಿತಿಯ ಸಾಧಾರಣ ಸಭೆಯು ೫ನೇ ತಾರೀಕು ನಾರಾಯಣ ದೇವರ ಕೇರಿಯಲ್ಲಿ ಸೇರಿ ಹೊಸಪೇಟೆ ಮುನಿಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ಸು ಭಾಗವಹಿಸಬಾರದೆಂದು ನಿರ್ಣಯಿಸಲಾಯಿತು.

ಕನ್ನಡ ಸಂಸ್ಥಾನ

ಕಲಬುರ್ಗಿಯಲ್ಲಿ ಪ್ರತಿವರುಷದಂತೆ ಈ ಸಲವೂ ಶ್ರೀರಾಮ ಪಾಂಡು[illegible] ಮುಖರ್ಜಿ ಶ್ರೀ ಪಾಂಡುರಂಗ ದೇವರ ಉತ್ಸವವನ್ನು ವಿಜೃಂಭಣೆಯಿಂದ ಜರುಗಿಸಿದರು. ಸರ್ವಮೂಲ ಪಾರಾಯಣ, ಕೀರ್ತನ, ಭಜನೆ ವಾಹನೋತ್ಸವ ನಡೆದು ಹುಣ್ಣಿವೆಯ ದಿನ ರಥೋತ್ಸವವಾಗಿ ಪಂಡಿತರಿಗೆಲ್ಲ ಬಹುಮಾನ ವಿನಿಯೋಗಿಸಲಾಯಿತು. ಧೂಯಾರದ ಆದ್ಯರಾಮಾಚಾರ್ಯರು ಇಲ್ಲಿ ಗೀತಾಪ್ರವಚನ ಮೂಲಭಾರತದೊಂದಿಗೆ ಕುಮಾರವ್ಯಾಸ ಭಾರತ ವಿರಾಟಪರ್ವ ಸಹಿತ ಪ್ರಾರಂಭಿಸಿರುವರು.

ಸಾಂಗಲಿಯಲ್ಲಿಯ ಮರಾಠರು ಸಭೆ ಸೇರಿ ಕೊಲ್ಹಾಪುರ ಸಂಸ್ಥಾನದಲ್ಲಿ ಹೊಣೆಗಾರಿಕೆ ರಾಜ್ಯ ಸ್ಥಾಪಿಸಲು ಮಹಾರಾಜರಿಗೆ ಬಿನ್ನವಿಸುವ ಮತ್ತು ಸಿಂಹಾಸನಾರೋಹಣದ ಬಗ್ಗೆ ಅವರನ್ನು ಅಭಿನಂದಿಸುವ ನಿರ್ಣಯ ಸ್ವೀಕರಿಸಲಾಯಿತು.

ಕೊಲ್ಹಾಪುರದಲ್ಲಿರುವ ದಕ್ಷಿಣ ಸಂಸ್ಥಾನಗಳ ರೆಸಿಡೆಂಟರ ಕಚೇರಿ ಅಗಸ್ಟ ೧೫ರಿಂದ ರದ್ದಾಗುವದು.

ಮಿರಜಿ ಪ್ರಜಾಪರಿಷತ್ತು ಲಕ್ಕೆಶ್ರೀ ಎಸ್. ಬಿ. ಜೋಶಿಯವರ ಅಧ್ಯಕ್ಷತೆಯಲ್ಲಿ ಸೇರಿ ದಕ್ಷಿಣ ಸಂಸ್ಥಾನಗಳ ಒಕ್ಕೂಟ ಯೋಜನೆಗೆ ಒಪ್ಪಿಗೆ ಕೊಟ್ಟಿತು.

ಜಮಖಂಡಿ ಸಂಸ್ಥಾನದಲ್ಲಿ ಕೊಡಮಾಡಿದ ಅಪಾಂತ್ಯ ಸುಧಾರಣೆಗಳನ್ವಯ ಮಂತ್ರಿಗಳಾಗಿ ಆರಿಸಲ್ಪಟ್ಟ ಶ್ರೀ ಜತ್ತಿ ಮತ್ತು ಬಿ. ಜಿ. ಹೊರ್ತಿ ಇವರು ಪ್ರತಿಜ್ಞೆಯನ್ನು ಕೈಕೊಂಡು ಅಧಿಕಾರ ಸ್ವೀಕರಿಸಿದರು. ಮೂರನೆ ಮಂತ್ರಿಗಳ ಹೆಸರು ತಿಳಿಸಲು ಮತ್ತು ಸಾಬಡೆಯವರ ಸ್ಥಳಕ್ಕೆ ಒಬ್ಬ ಉಮೇದವಾರರನ್ನು ಗೊತ್ತುಪಡಿಸುವದಕ್ಕಾಗಿ ಪ್ರಜಾಪರಿಷತ್ತಿನ ಸಭೆ ಕೂಡಲಿದೆ.

ಜಮಖಂಡಿಯ ಸಾಬಡೆಯವರ ಕೊಲೆಯ ಸಂಬಂಧದಲ್ಲಿ ಪುಸಾಳಕರ ಇನಸ್ಪೆಕ್ಟರರಿಗೆ ಒಂದು ತಿಂಗಳ ರಜೆಕೊಡಲಾಗಿದೆ. ಅವರನ್ನು ಸಸ್ಪೆಂಡ ಮಾಡಬೇಕೆಂದು ಜನ ಕೇಳುತ್ತ ಕೊಲೆಯ ಸಂಬಂಧದಲ್ಲಿ ವಿಚಾರಣೆ ನಡೆಸಲು ನೇಮಕವಾಗಿದ್ದು ಕುಲಕರ್ಣಿಯವರು ಕೆಲಸವನ್ನು ಪ್ರಾರಂಭಿಸಿದ್ದಾರೆ.

ರಾಮದುರ್ಗ ಸಂಸ್ಥಾನದಲ್ಲಿ ಹೊಸದಾಗಿ ನೇಮಿಸಲ್ಪಟ್ಟ ಮಂತ್ರಿವರ್ಯ ಎಸ್. ಜಿ. ಗದಗ ಇವರಿಗೆ ಹಣಕಾಸು, ಶಿಕ್ಷಣ, ಸ್ಥಾನಿಕ ಸ್ವರಾಜ್ಯ, ಉದ್ಯೋಗ, ವಾಣಿಜ್ಯ, ಗ್ರಾಮೋದ್ಧಾರ ಮತ್ತು ಆಹಾರ ಖಾತೆಗಳನ್ನು ಕೊಡಲಾಗಿದೆ. ಪಿ. ಜಿ. ಜೋಗ ಇವರಿಗೆ ಕಾಯದೆ ಸುವ್ಯವಸ್ಥೆ, ಕಂದಾಯ, ಪಿ. ಡಬ್ಲ್ಯು. ಡಿ ಅರಣ್ಯ, ಆರೋಗ್ಯ, ಸಹಕಾರ ನಿಯಂತ್ರಣ ಖಾತೆಗಳನ್ನು ಕೊಡಲಾಗಿದೆಂದು ಪ್ರಸಿದ್ಧಿಸಲಾಗಿದೆ.

ಉತ್ತರ ಕರ್ನಾಟಕದಲ್ಲಿಯ ಸಂಸ್ಥಾನಗಳನ್ನೊಳಗೊಂಡ ದಕ್ಷಿಣ ಸಂಸ್ಥಾನಾಧೀಶರರು ತಮ್ಮದೊಂದು ಕೂಟ ನಿರ್ಮಿಸಿಕೊಂಡು ಅನಿಯಂತ್ರಿತ ತಮ್ಮ ಅರಸೊತ್ತಿಗೆಯನ್ನು ಅಬಾಧಿತವಾಗಿ ಕಾಯ್ದುಕೊಳ್ಳುವ ಪ್ರಯತ್ನವನ್ನು ಉತ್ತರ ಕರ್ನಾಟಕ ಸಂಸ್ಥಾನಗಳ ಪ್ರಾದೇಶಿಕ ಸಮಿತಿಯವರು ನಿಷೇಧಿಸಿದ್ದಾರೆ. ಸಂಸ್ಥಾನಗಳ ಭವಿತವ್ಯ ನಿರ್ಣಯದ ಅಧಿಕಾರ ಜನತೆಗೇ ಸೇರಿದ್ದು, ಸಂಸ್ಥಾನಿಕರು ಅದರಲ್ಲಿ ಕೈವಾಡ ನಡೆಸುವದು ನಿಷೇಧಾರ್ಹವಾಗಿದೆ.

ಚಂದಾದಾರರಲ್ಲಿ ವಿನಂತಿ

ಯಾವದೇ ಪತ್ರವ್ಯವಹಾರ[illegible]ಗೆ ಹೊರಗು[illegible] ವಾಗ್ಗೆ ನಿಮ್ಮ ಚಂದಾ ನಂಬರ[illegible] ಮುಖವೆಂದರೆ ನಾವು ನಿಮ್ಮ ವಿಳಾಸದ ಪಾ[illegible] ಸಿದ ನಂಬರನ್ನು ಬರೆದರೆ [illegible] ಪತ್ರಕ್ಕೆ ಲಕ್ಷಗೊಡಲಾ[illegible] ಅವಧಿ ಮುಗಿಯುವ ಮು[illegible]ಯೇ ೧೫ ದಿನ ಪೂರ್ವದ[illegible] ವ್ಹಿ. ಪಿ. ಮಾಡಲಾಗುವದು.

ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ತಿರಸ್ಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆ ವೆಚ್ಚ ಸಹಿತ ಚಂದಾ ಹಣ ಮುಂಗಡ

೧ ವರ್ಷಕ್ಕೆ	೬—೪—೦
೬ ತಿಂಗಳಿಗೆ	೩—೪—೦
೩ ,,	೧—೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.

ವ್ಯವಸ್ಥಾಪಕ.

ಸಾಂಗಲಿ ಮುನಿಸಿಪಾಲಿಟಿಯ ಮೇಲೆ ರಾಷ್ಟ್ರಧ್ವಜವನ್ನು ಹಚ್ಚಬೇಕೆಂದು ಮುನಿಸಿಪಾಲಿಟಿಯವರು ನಿರ್ಣಯಿಸಿದ್ದರು. ಆದರೆ ಅದಕ್ಕೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಪ್ರತಿಬಂಧಕ ಆಜ್ಞೆಯನ್ನು ಹೊರಡಿಸಿದ್ದರು. ಅದರ ವಿರುದ್ಧ ಅಪೀಲ ಮಾಡಲಾಗಿ ಧ್ವಜವನ್ನು ಹಾರಿಸಲು ಸ್ಥಾನಿಕ ಮಂತ್ರಿಗಳು ಅಪ್ಪಣೆ ಕೊಟ್ಟಿರುವರು.

ಉತ್ತರ ಕನ್ನಡ

ಜಿಲ್ಹೆಯಲ್ಲಿ ಅಡಿಕೆ ಬೆಳೆ ಈಗ ನೆಟ್ಟಗಿದೆ. ಇದೇ ಪರಿಸ್ಥಿತಿ ಇನ್ನೂ ಎರಡು ತಿಂಗಳು ಉಳಿದು ಕೊಳೆ ರೋಗ ಹಾಯಲಿಲ್ಲವಾದರೆ ಕಳೆದ ವರುಷಕ್ಕಿಂತ ೧೦೦ ಕ್ಕೆ ೪೦ ರಷ್ಟು ಹೆಚ್ಚು ಬೆಳೆ ಬರುವದೆಂದು ಅಂದಾಜು ಮಾಡಲಾಗಿದೆ. ಈ ಜಿಲ್ಹೆಯಿಂದ ಪ್ರತಿ ವರುಷ ೫ ಲಕ್ಷ ಚೀಲ ಅಡಿಕೆ ಮುಂಬಯಿಗೆ ನಿರ್ಯಾತವಾಗುತಿತ್ತು.

ನೀರಿನ ಕೊರತೆ ಇದ್ದ ಜಿಲ್ಹೆಯ ಹಳ್ಳಿಗಳಲ್ಲಿ ಪುನರ್ಯೋಜನೆಯ ಮೊದಲನೆ ೫ ವರುಷಗಳಲ್ಲಿ ೨೦೯ ಬಾವಿಗಳನ್ನು ತೆಗಿಸಬೇಕೆಂದು ಜಿಲ್ಲಾ ಲೋಕಲ್ ಬೋರ್ಡಿನವರು ಗೊತ್ತುಪಡಿಸಿದ್ದಾರೆ. ಇದಕ್ಕೆ ೯ ಲಕ್ಷ ರೂಪಾಯಿ ವೆಚ್ಚ ಹತ್ತುವದು. ಮುಂಬಯಿ ಸರಕಾರದ ಲೋಕೋಪಯೋಗಿ ಖಾತೆಯವರು ಈಗ ಇದನ್ನು ಪರಿಶೀಲಿಸುತಿದ್ದಾರೆ.

ಜಿಲ್ಹೆಯ ಕಾಂಗ್ರೆಸ ಕಾರ್ಯಕರ್ತರಾಗಿದ್ದ ಶ್ರೀ ಗೋಪಾಲ ಕಿಣಿಯವರು ಮುಂಬಯಿ ಆಸ್ಪತ್ರೆಯಲ್ಲಿ ೨೦ ನೇ ತಾರೀಕು ನಿಧನ ಹೊಂದಿದರು. ಇವರು ಗರಗದಲ್ಲಿ ಐದು ವರುಷ ವಿಧಾಯಕ ಕಾರ್ಯ ಮಾಡಿದ್ದರು.

ಯಲ್ಲಾಪುರದಲ್ಲೊಂದು ದನಗಳ ಚಿಕಿತ್ಸಾಲಯ ತೆರೆಯಬೇಕೆಂದು ೫ ವರ್ಷಗಳ ಹಿಂದೆಯೇ ನಿರ್ಣಯವಾಗಿತ್ತು. ಆದರೆ ಜಿಲ್ಲಾ ಬೋರ್ಡಿನವರು ಒಂದಿಲ್ಲೊಂದು ಕಾರಣದಿಂದ ಅದನ್ನು ಮುಂದೂಡುತ್ತ ಬಂದರು. ಪ್ರಾಂತಿಕ ಸರಕಾರದ ಕೃಪೆಯಿಂದ ಈಗ ಆ ಚಿಕಿತ್ಸಾಲಯ ತೆರೆಯಲ್ಪಟ್ಟಿದೆ.

ಉಪ್ಪಿನ ತೆರಿಗೆ ರದ್ದಾದುದರಿಂದ ಅದರ ಬೆಲೆಯೀಗ ಕಾರವಾರಪೇಟೆಯಲ್ಲಿ ಅರ್ಧಕ್ಕಾದರೂ ಇಳಿಯಬೇಕಿತ್ತು; ಆದರೆ ಅದು ಇನ್ನೂ ಇಳಿದಿಲ್ಲವೆಂದು ತಿಳಿದುಬಂದಿದೆ.

ಕರ್ಮವೀರ ಹರಿಜನ ಪುರವಣಿ

ಸಾಮ್ಯವಾದಿಯೆಂದರೆ ಯಾರು?

(ಮೋ. ಕ. ಗಾಂಧಿಯವರಿಂದ)

ಸಾಮ್ಯವಾದವೆಂಬುದು ಸುಂದರ ಶಬ್ದ. ನನಗೆ ತಿಳಿದಮಟ್ಟಿಗೆ ಸಾಮ್ಯವಾದದಲ್ಲಿ ಸಮಾಜದ ಸದಸ್ಯರೆಲ್ಲರೂ ಸಮಾನರು-ಮೇಲು, ಕೀಳೆಂಬವರಿಲ್ಲ. ಒಂದು ದೇಹದ ಮೇಲ್ಭಾಗದಲ್ಲಿದ್ದಾಕ್ಷಣ ಅದು ಮೇಲಲ್ಲ; ಅಂಗಾಲು ನೆಲವನ್ನು ಮುಟ್ಟುವದೆಂದು ಅದು ಕೀಳೂ ಅಲ್ಲ. ದೇಹದ ಅಂಗೋಪಾಂಗಗಳು ಸಮಾನವಾಗಿರುವಂತೆಯೆ ಸಮಾಜದಲ್ಲಿಯೂ ಸದಸ್ಯರೆಲ್ಲರೂ ಸಮಾನರು. ಇದೀಗ ಸಾಮ್ಯವಾದ.

ಅದರಲ್ಲಿ ರಾಜನೂ ರೈತನೂ ಬಡವನೂ ಬಲ್ಲಿದನೂ ಒಡೆಯನೂ ಆಳೂ ಎಲ್ಲರೂ ಒಂದೇ ಮಟ್ಟದವರು. ಧಾರ್ಮಿಕ ಪರಿಭಾಷೆಯಲ್ಲಿ ಹೇಳಬೇಕಾದರೆ ಸಾಮ್ಯವಾದದಲ್ಲಿ ದ್ವೈತವಿಲ್ಲ. ಎಲ್ಲವೂ ಅದ್ವೈತ, ಐಕ್ಯ. ಆದರೆ ಜಗತ್ತಿನಲ್ಲಿ ಎಲ್ಲಿ ನೋಡಿದರೂ ಸಮಾಜದಲ್ಲಿ ದ್ವೈತವೂ ಭೇದವೂ ಕಾಣುತ್ತವೆ. ಐಕ್ಯವೆಂಬುದು ಇಲ್ಲವೇ ಇಲ್ಲ. ಇವನೊಬ್ಬ ಉಚ್ಚ, ಅವನೊಬ್ಬ ನೀಚ, ಈತ ಹಿಂದೂ, ಆತ ಮುಸ್ಲಿಂ, ಇನ್ನೊಬ್ಬ ಕ್ರೈಸ್ತ, ಮತ್ತೊಬ್ಬ ಪಾರ್ಸಿ, ಮಗದೊಬ್ಬ ಸೀಖ, ಮೂರೊಬ್ಬ ಯಹೂದ್ಯ. ಇವರೊಳಗೇ ಮತ್ತೆ ಒಳಪಂಗಡಗಳು ಬೇರೆ. ನನ್ನ ಕಲ್ಪನೆಯ ಐಕ್ಯವೆಂದರೆ, ಬಹುರೂಪದಲ್ಲಿ ರೂಪ ಸಾಮರಸ್ಯ, ಏಕರೂಪತೆ ಉಳ್ಳದ್ದು.

ಈ ಅವಸ್ಥೆಯನ್ನು ಮುಟ್ಟಬೇಕಾದರೆ, ದಾರ್ಶನಿಕನ ವಿರಕ್ತ ದೃಷ್ಟಿಯನ್ನಿಟ್ಟುಕೊಂಡು, ಎಲ್ಲರೂಸಾಮ್ಯವಾದಕ್ಕೆ ಒಲಿಯುವವರೆಗೆ ನಾವು ಮಾಡಬೇಕಾದುದೇನೂ ಇಲ್ಲವೆಂದು ತೆಪ್ಪಗೆ ಕೂತರೆ ಸಾಗದು. ನಮ್ಮ ಜೀವನವನ್ನು ಪರಿವರ್ತಿಸದೆಯೇ, ಬೇಕಾದಷ್ಟು ಭಾಷಣಗಳನ್ನು ಕೊಟ್ಟು, ಪಕ್ಷಗಳನ್ನು ಕಟ್ಟಿ ಬೇಟೆ ಹತ್ತಿರಬಂದೊಡನೆ ಹದ್ದಿನಂತೆ ಅದನ್ನು ಹಿಡಿದುಕೊಳ್ಳಬಹುದು. ಇದುಸಾಮ್ಯವಾದವಲ್ಲ. ಅದೊಂದು ಹಿಡಿಯಬೇಕಾದ ಬೇಟೆಯೆಂದು ನಾವು ತಿಳಿದಷ್ಟು ಕಾಲ ಅದು ನಮ್ಮಿಂದ ದೂರವಾಗುತ್ತ ಹೋಗುವದು.

ಸಾಮ್ಯವಾದಕ್ಕೆ ಒಲಿಯುವ ಮೊದಲನೆ ಅನುಯಾಯಿಯೊಡನೆ ಅದು ಮೊದಲಾಗುತ್ತದೆ. ಅಂಥ ನಿಜ ಅನುಯಾಯಿಯೊಬ್ಬನಿದ್ದರೆ ಮುಂದೆ ಸೊನ್ನೆಗಳನ್ನು ಸೇರಿಸುತ್ತ ಹೋಗಬಹುದು. ಆ ಒಂದಕ್ಕೆ ಸೇರಿದ ಪ್ರತಿ ಸೊನ್ನೆಯೂ ಸಾಮ್ಯವಾದಿಗಳ ಸಂಖ್ಯೆಯನ್ನು ಹತ್ತುಮಡಿ ಬೆಳೆಸುತ್ತ ಹೋಗುವದು. ಆದರೆ, ಮೊದಲನೆಯವನೇ ಸೊನ್ನೆಯಾದರೆ, ಅರ್ಥಾತ್ ಯಾರೂ ಪ್ರಾರಂಭವನ್ನೇ ಮಾಡದಿದ್ದರೆ, ಮುಂದೆ ಎಷ್ಟೇ ಸೊನ್ನೆಗಳು ಸೇರಿದರೂ ಅದರ ಬೆಲೆ ಸೊನ್ನೆಯೇ ಆದೀತಲ್ಲದೆ ಬೇರೆಯಲ್ಲ. ಅಂಥ ಸೊನ್ನೆಗಳನ್ನು ಬರೆಯಲು ಉಪಯೋಗಿಸಿದ ಕಾಗದವೂ ವೆಚ್ಚ ಮಾಡಿದ ಸಮಯವೂ ದೊಡ್ಡ ಅಪವ್ಯಯವೇ ಸರಿ.

ಈ ಸಾಮ್ಯವಾದ ಸ್ಫಟಿಕದಂತೆ ಪರಿಶುದ್ಧವಾದುದು. ಆದುದರಿಂದ ಅದನ್ನು ಸಾಧಿಸಲು ಸ್ಫಟಿಕದಂಥ ಸಾಧನಗಳೇ ಬೇಕು ಅಶುದ್ಧ ಸಾಧನಗಳಿಂದ ಸಾಧ್ಯಗಳೂ ಅಶುದ್ಧವಾಗುತ್ತವೆ. ಆದುದರಿಂದ ರಾಜನನ್ನೂ ರೈತನನ್ನೂ ಸಮಾನರಾಗಿ ಮಾಡುವ ಕೆಲಸ ರಾಜನ ತಲೆಯನ್ನು ಕಡಿದೊಗೆಯುವದರಿಂದ ಕೈಗೂಡುವದಿಲ್ಲ. ಒಡೆಯ ಆಳುಗಳನ್ನು ಸಮಾನರಾಗಿ ಮಾಡುವದಕ್ಕೂ ಈ ಕಡಿಯುವ ನೀತಿ ಉಪಯೋಗಕ್ಕೆ ಬಾರದು. ಅಸತ್ಯದ ಮೂಲಕ ಸತ್ಯವನ್ನು ಯಾರೂ ಮುಟ್ಟಲಾರರು. ಸತ್ಯಸಂಧತೆಯೊಂದೇ ಸತ್ಯವನ್ನು ಸಾಧಿಸುವ ಉಪಾಯ. ಅಹಿಂಸೆಯೂ ಸತ್ಯವೂ ಅವಳಿ ಜವಳಿಯಲ್ಲವೆ? ಇದಕ್ಕೆ "ಇಲ್ಲ" ಎಂಬುದೇ ಖಂಡಿತ ಉತ್ತರ. ಅಹಿಂಸೆಯಲ್ಲಿಯೇ ಸತ್ಯ ಅಡಕವಾಗಿದೆ, ಸತ್ಯದಲ್ಲಿಯೇ ಅಹಿಂಸೆಯುಂಟು! ಅದರಿಂದಲೇ ಅವು ಒಂದೇ ನಾಣ್ಯದ ಎರಡು ಮುಖಗಳೆಂದು ಹೇಳಲಾಗಿದೆ. ಒಂದರಿಂದ ಇನ್ನೊಂದನ್ನು ಬೇರ್ಪಡಿಸುವದು ಸಾಧ್ಯವಿಲ್ಲ. ಎರಡೂ ಬದಿಯ ಲಿಖಿತಗಳನ್ನೋದಿರಿ. ಅವುಗಳಲ್ಲಿ ಅಕ್ಷರಭೇದವಿದ್ದೀತೇ ಹೊರತು ಅರ್ಥಭೇದವಿರದು. ಈ ಪುಣ್ಯಾವಸ್ಥೆಯನ್ನು ನಿರ್ದೋಷ ಪಾರಿಶುದ್ಧ್ಯವಿಲ್ಲದೆ ಮುಟ್ಟಲಾಗವಲ್ಲ. ಮನಸ್ಸಿನಲ್ಲಾಗಲಿ ಕಾಯದಲ್ಲಾಗಲಿ ಕಲ್ಮಷಕ್ಕೆ ಎಡೆಕೊಟ್ಟರೆ ಅಸತ್ಯ ಹಿಂಸೆಗಳು ನಿಮ್ಮಲ್ಲಿ ಮನೆಮಾಡಿದಂತೆಯೆ.

ಆದುದರಿಂದ ಸತ್ಯಸಂಧರೂ ಪುಣ್ಯಾತ್ಮರೂ ಆದ ಸಾಮ್ಯವಾದಿಗಳು ಮಾತ್ರ ಹಿಂದುಸ್ತಾನದಲ್ಲಾಗಿ ಜಗತ್ತಿನಲ್ಲೂ ಸಾಮ್ಯವಾದಿ ಸಮಾಜವನ್ನು ಸ್ಥಾಪಿಸಬಲ್ಲರು. ನನಗೆ ತಿಳಿದ ಮಟ್ಟಿಗೆ ಶುದ್ಧ ಸಾಮ್ಯವಾದಿಯಾದ ದೇಶ ಜಗತ್ತಿನಲ್ಲಿ ಎಲ್ಲಿಯೂ ಇದ್ದಂತಿಲ್ಲ. ಮೇಲೆ ವಿವರಿಸಿದ ಸಾಧನಗಳಿಲ್ಲದೆ ಅಂಥ ಸಮಾಜ ಅಸ್ತಿತ್ವದಲ್ಲಿ ಬರುವದು ಅಸಾಧ್ಯ.

ಹೊಸದಿಲ್ಲಿ (ಗುಜರಾತಿಯಿಂದ)
೬—೭—೪೭

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

ಹೊಸದಿಲ್ಲಿ ೩೦-೬-೧೯೪೭

ಗಡಿನಾಡಿನ ಮತಗಣನೆ

ಗಡಿನಾಡಿನಲ್ಲಿ ಜರಗಲಿರುವ ಸಾರ್ವತ್ರಿಕ ಮತಗಣನೆಯು ಪ್ರಶ್ನೆಗೆ ಸಾರ್ವಜನಿಕ ದೃಷ್ಟಿಯಲ್ಲಿ ಬಹಳ ಮಹತ್ವ ಬರತೊಡಗಿದೆ. ಅದು ಈವರೆಗೆ ಮತ್ತು ಅಧಿಕೃತವಾಗಿ ಈಗಲೂ ಕಾಂಗ್ರೆಸ್ ಪ್ರಾಂತವಾಗಿರುವದೇ ಇದಕ್ಕೆ ಕಾರಣ. ಹಿಂದು ಇಲ್ಲವೆ ಮುಸ್ಲಿಂ ಎಂಬ ಅನ್ಯಾಯದ ಧ್ವನಿಯುಳ್ಳ ಹಿಂದುಸ್ತಾನ ಅಥವಾ ಪಾಕಿಸ್ತಾನ ಇವುಗಳಲ್ಲೊಂದನ್ನು ಆರಿಸಿಕೊಳ್ಳಿರೆಂಬದು ಬಾದಶಹಾಖಾನರಿಗೂ ಅವರ ಅನುಯಾಯಿಗಳಿಗೂ ಸೊಗಸುವದಿಲ್ಲ. ಬಾದಶಹಾ ಅವರು ಈ ತೊಡಕಿನಿಂದ ಹೇಗೆ ಪಾರಾಗಬೇಕು? ಡಾ. ಖಾನಸಾಹೇಬರೊಡನೆ ವಿಚಾರಿಸಿ, ವಾಯಿಸರಾಯರ ನೇರವಾದ ಮೇಲ್ವಿಚಾರಣೆಯಲ್ಲಿ ಜನಮತಗಣನೆಯಾಗಬೇಕೆಂಬದಕ್ಕೆ ಕಾಂಗ್ರೆಸ್ಸು ವಚನ ಬದ್ಧವಾಗಿದೆ. ಅದೇ ಪ್ರಕಾರ ಗೊತ್ತುಮಾಡಿದ ವೇಳೆಗೆ ಮತಗಣನೆ ನಡೆದೂ ನಡೆಯುವದು. ಖುದಾಯಿಖಿದಮತಗಾರರು ಮಾತ್ರ ತಮ್ಮ ಮತಾಧಿಕಾರವನ್ನು ಉಪಯೋಗಿಸುವದಿಲ್ಲ. ಆ ಮೂಲಕ ಮುಸ್ಲಿಂ ಲೀಗಿಗೆ ಮುಕ್ತರಂಗವನ್ನು ಕೊಟ್ಟಂತಾಗುವದು, ತಮ್ಮ ಮನಸ್ಸಾಕ್ಷಿಗೆ ವಿರುದ್ಧವಾಗಿ ಆಚರಿಸದೆ ಪ್ರಾಮಾಣಿಕತೆಯನ್ನು ಕಾಯ್ದುಕೊಂಡಂತೆಯೂ ಆಗುವದು ಎಂದು ಅವರು ಬಗೆಯುತ್ತಾರೆ. ಇದರಿಂದ ಜನ ಮತಗಣನೆಯ ಸಂಬಂಧದಲ್ಲಿ ಮಾಡಿಕೊಂಡ ಒಪ್ಪಂದದ ಕಲಮುಗಳನ್ನು ಮುರಿದಂತಾಗುವದೆ? ಬ್ರಿಟಿಶರೊಡನೆ ನಿರ್ಭಯವಾಗಿ ಹೋರಾಡಿದ ಖುದಾಯಿ ಖಿದ್ಮತಗಾರರು ಮತಗಣನೆಯಲ್ಲಿ ಸೋಲಿಗೆ ಬೆದರುವವರಲ್ಲ. ಸೋಲು ಕಟ್ಟಿಟ್ಟದ್ದೆಂದು ಗೊತ್ತಿದ್ದೂ ಚುನಾವಣೆಗಳನ್ನು ಹೋರಾಡುವದು ರಾಜಕೀಯ ಪಕ್ಷಗಳ ಇತಿಹಾಸದಲ್ಲಿ ನಿತ್ಯವೆಂಬಂತೆ ನಡೆಯುವ ಘಟನೆ. ಬಹಿಷ್ಕಾರ ಹಾಕಿದ ಪಕ್ಷಕ್ಕೆ ಸೋಲು ಒದಗುವ ಸಂಭವ ಅದರಿಂದ ದೂರವಾದಂತಾಗುವದಿಲ್ಲ.

ಪಠಾಣಿಸ್ಥಾನವೇಕೆ

ಈ ಪಠಾಣಿಸ್ತಾನದ ಕೂಗು ಹೊಸದೆಂಬ ಆರೋಪವನ್ನು ಬಾದಶಹಾ ಖಾನರ ಮೇಲೆ ಹೊರಿಸಲಾಗುತ್ತಿದೆ. ನನಗೆ ತಿಳಿದ ಮಟ್ಟಿಗೆ, ಕಾಂಗ್ರೆಸ ಮಂತ್ರಿಮಂಡಲ ಅಧಿಕಾರಕ್ಕೆ ಬರುವ ಮೊದಲೇ ಆಂತರಿಕ ವಿಚಾರಗಳಲ್ಲಿ ಪಠಾಣರಿಗೆ ಸ್ವಾತಂತ್ರ್ಯ ಬೇಕೆಂದು ಬಾದಶಹಾ ಖಾನರು ಬಯಸುತಿದ್ದರು. ಹೊಸದೊಂದು ರಾಜ್ಯವನ್ನುಂಟುಮಾಡುವದು ಅವರ ಇಚ್ಛೆಯಲ್ಲ. ಪ್ರಾಂತದ ರಾಜ್ಯಘಟನೆಯನ್ನು ತಮಗೆ ಬೇಕಾದಂತೆ ರಚಿಸಿಕೊಳ್ಳಲು ಅನುವುಗೊಟ್ಟರೆ ಒಂದಲ್ಲ ಒಂದು ರಾಜ್ಯದಲ್ಲಿ ಸೇರಲು ಅವರು ಸಿದ್ಧರಾಗಿಯೆ ಇದ್ದಾರೆ. ಪಠಾಣರ ಈ ಸ್ವಾಯತ್ತತೆಯ ಉತ್ಕಟೇಚ್ಛೆಗೆ, ಅವರನ್ನು ಅವಮಾನಗೊಳಿಸಿ ಶರಣಾಗತರಾಗುವಂತೆ ಪಳಗಿಸುವದೇ ಉದ್ದೇಶವಾಗಿರದಿದ್ದರೆ, ಯಾರಾದರೂ ಏಕೆ ಅಡ್ಡಿ ಎತ್ತಬೇಕೋ ನನಗೆ ತಿಳಿಯದಾಗಿದೆ.

ಬಾದಶಹಾಖಾನರ ಮೇಲೆ ಇದಕ್ಕಿಂತಲೂ ಕೆಟ್ಟ ಇನ್ನೊಂದು ಅಪವಾದನೆಯುಂಟು: ಅವರು ಅಫಗಾಣಿಸ್ತಾನದ ಕೈವಾಡಕ್ಕೊಳಗಾಗಿದ್ದಾರಂತೆ. ಅವರಿಂದ ಇಂಥ ಕೃತ್ಯ ಎಂದೆಂದೂ ಆಗದೆಂದು ನನ್ನ ನಂಬಿಕೆ. ಗಡಿನಾಡ ಪ್ರಾಂತವನ್ನು ಅಫಗಾಣಿಸ್ತಾನದವರು ಸೆಳೆದುಕೊಳ್ಳುವದನ್ನು ಅವರು ಸೈರಿಸಲಾರರು.

ನಾನು ಅವರ ಗೆಳೆಯನಾಗಿರುವದರಿಂದ ಅವರಲ್ಲಿರುವ ಒಂದು ದೋಷವನ್ನು ನಾನು ಒಪ್ಪಿಕೊಳ್ಳುತ್ತೇನೆ. ಬ್ರಿಟಿಶರ ಉದ್ದೇಶಗಳನ್ನೂ ವಚನಗಳನ್ನೂ ಅವರು ಅತ್ಯಂತ ಸಂಶಯ ಚಿತ್ತದಿಂದ ಕಾಣುತ್ತಾರೆ. ಈ ದೋಷ ಅವರೊಬ್ಬರ ವೈಶಿಷ್ಟ್ಯವೇನೂ ಅಲ್ಲ. ಆದುದರಿಂದ ಅದನ್ನು ಗಮನಿಸಬಾರದೆಂದು ನಾನು ಒತ್ತಾಯಪಡಿಸುತ್ತೇನೆ. ಅವರಂಥ ವರ್ಚಸ್ವಿ ಮುಂದಾಳುಗಳಿಗೆ ಅದು ಶೋಭಿಸುವದಿಲ್ಲೆಂದಿಷ್ಟೇ ಹೇಳಬಹುದು. ಒಂದು ದೃಷ್ಟಿಯಿಂದ ಅದನ್ನು ನಾನು ದೋಷವೆಂದು ಕರೆದಿದ್ದರೂ-ಅದು ದೋಷವೇ ಅಹುದು--ಇನ್ನೊಂದರಿಂದ ಅದೊಂದು ಗುಣವೆಂದೇ ನಾನು ಸಾಧಿಸುತ್ತೇನೆ. ಏಕೆಂದರೆ ಪ್ರಯತ್ನ ಪಟ್ಟರೂ ತಮ್ಮ ವಿಚಾರಗಳನ್ನು ಬಚ್ಚಿಡುವದು ಅವರಿಂದಾಗುವದಿಲ್ಲ, ಮುಚ್ಚುಮರೆ ಮಾಡಲು ಶಕ್ತಿಯೇ ಇಲ್ಲದಷ್ಟು ಪ್ರಾಮಾಣಿಕರವರು.

ಮಂದಿರಪ್ರವೇಶ

ವಾಯವ್ಯ ಗಡಿನಾಡಿನಿಂದ ನಿಮ್ಮನ್ನು ರಾಮೇಶ್ವರಕ್ಕೆ ಕರೆದೊಯ್ಯಬಯಸುವೆ. ಅಲ್ಲಿ ಶ್ರೀರಾಮನು ಕಲ್ಲು ಹರಳುಗಳಿಂದ ಕೇಲುವ ಸೇತುವೆ ಕಟ್ಟಿ ಲಂಕೆಗೆ ತನ್ನ ಸೈನ್ಯವನ್ನು ಸಾಗಿಸಿ ಅದನ್ನು ಗೆದ್ದನಂತೆ—ಆದರೆ ಅದನ್ನು ತಾನು ಇಟ್ಟುಕೊಳ್ಳದೆ ರಾವಣನ ತಮ್ಮನಿಗೆ ಕೊಟ್ಟನಂತೆ. ಅಲ್ಲಿಯ ಪ್ರಸಿದ್ಧ ದೇವಾಲಯವಿಂದು ಹರಿಜನರಿಗೆ ತೆರೆದು ಹಾಕಲ್ಪಟ್ಟಿತು. ಅಲ್ಲಿಗೆ ದಕ್ಷಿಣಾಪಥದ ಪ್ರಸಿದ್ಧ ದೇವಾಲಯಗಳೆಲ್ಲವೂ— ಕೊಚ್ಚಿ ಸಂಸ್ಥಾನದಲ್ಲಿರುವವನ್ನು ಬಿಟ್ಟು—ಹರಿಜನರಿಗೆ ಮುಕ್ತವಾದಂತಾಯಿತು. ಅವುಗಳಲ್ಲಿ ಅತಿ ಪ್ರಸಿದ್ಧವಾದವುಗಳ ಯಾದಿಯನ್ನು ರಾಜಾಜಿ ನನಗೊದಗಿಸಿದ್ದು ಹೀಗಿದೆ: ಮದುರೆ, ತಿನ್ನವೆಲ್ಲಿ, ಚಿದಂಬರಂ, ಶ್ರೀರಂಗಂ, ಪಳನಿ, ತಿರುವಲ್ಲಿಕೇಣಿ, ತಿರುಪತಿ, ಕಂಚಿ, ಮತ್ತು ಗುರುವಾಯೂರು. ಈ ಯಾದಿ ಇಲ್ಲಿಗೇ ಪೂರ್ತಿಯಾಗಿಲ್ಲ. ಮದ್ರಾಸ ಶಾಸನ ಸಭೆಯ ಹರಿಜನ ಅಧ್ಯಕ್ಷರು ಈ ದೇವಸ್ಥಾನಗಳಲ್ಲಿ ಪ್ರವೇಶ ಪಡೆದ ಹರಿಜನ ಮತ್ತು ಇತರ ಭಕ್ತರ ಮುಂದಾಳಾಗಿದ್ದರು. ಉಚ್ಚ ಶಿಕ್ಷಣ ಹೊಂದಿದ ಹರಿಜನರೂ ಬೇರೆ ಕೆಲವರೂ ಈ ಎಂದೋ ಆಗಬೇಕಾಗಿದ್ದ ಸುಧಾರಣೆಯನ್ನು ಕಂಡು ನಗಬಹುದು. ಆದರೂ ಅದರ ಸೂಚ್ಯಾರ್ಥವನ್ನು ಯಾರೂ ಮರೆಯುವಂತಿಲ್ಲ. ಏಕೆಂದರೆ ಈ ಸುಧಾರಣೆ ಒಂದು ತೊಟ್ಟು ರಕ್ತ ಚೆಲ್ಲದೆ ಸಾಧಿಸಲ್ಪಟ್ಟಿದೆ. ಕೊಚ್ಚಿ ಸಂಸ್ಥಾನವೂ ತಿರ್ವಾಂಕೂರು, ತಮಿಳುನಾಡು ಮತ್ತು ಬ್ರಿಟಿಶ ಕೇರಳಗಳ ಹೆಜ್ಜೆಯನ್ನು ಬೇಗನೆ ಅನುಸರಿಸಲೆಂದು ಹಾರೈಸೋಣ. ಆದರೆ ಆವಶ್ಯಕ ಅಂತರಿಕ ಸುಧಾರಣೆಗಳು ದೇವಸ್ಥಾನಗಳಲ್ಲಿ ಆಗುವವರೆಗೂ ಮಂದಿರ ಪ್ರವೇಶ ಸುಧಾರಣೆ ಪೂರ್ಣವಾದಂತಾಗದು.

ಹೊಸದಿಲ್ಲಿ ೧—೭—೪೭

ಭಜನೆಯ ಅರ್ಥ

ಇಂದು ಪ್ರಾರ್ಥನಾ ಕಾಲದಲ್ಲಿ ಹಾಡಿದ ಭಜನೆಯನ್ನು ಕುರಿತು ಗಾಂಧೀಜಿ ಮಾತಾಡಿದರು. ಅದನ್ನು ಮಧ್ಯಪ್ರಾಂತದ ತುಕೋಜಿ ಮಹಾರಾಜರು ರಚಿಸಿದರು. ಅದು ಸರಳ ಹಿಂದುಸ್ತಾನಿಯಲ್ಲಿ ಬರೆಯಲ್ಪಟ್ಟಿರುವದರಿಂದ ಯಾರೂ ಸುಲಭವಾಗಿ ಅರ್ಥ ಮಾಡಿಕೊಳ್ಳಬಲ್ಲರು. [illegible]

ಹೃದಯಗಳ [illegible]

[illegible] ನಾನು [illegible] ಬಯಲಾಗಿ [illegible] ಬಹಳ [illegible] ಅರ್ಹರಲ್ಲ. ವ್ಯರ್ಥವಾಗಿ [illegible] ನಾನು [illegible] ಹಿರಿಯ ಜಾತಿ [illegible] ಲ್ಬೇಕೆಂದು ನಾನು [illegible] ಸೇರಿದ ಭರದಲ್ಲಿ [illegible] ಬಲಿಗೆ ಬೀಳುವ ಗಂಡಾಂತರವುಂಟೆಂದು [illegible] ಜನರನ್ನು ಎಚ್ಚರಿಸಿದ್ದೇನೆ. [illegible] ಆಗದಿರುವದೂ [illegible] ಕ್ಯದಲ್ಲಿದೆ. ಸಂಖ್ಯಾಬಲದ ಗರ್ವದಲ್ಲಿ [illegible] ಗಿದರೆ ನಾವೆಂದೂ ಸರಿಯಾದ [illegible] ಲಾರೆವು. ಸಂಖ್ಯಾಬಲದಲ್ಲಿ [illegible] ವುಂಟೆಂದು ಹೇಳುವದರಲ್ಲಿಯೂ [illegible] ದಲ್ಲಿ ಸುರಕ್ಷಿತತೆಯುಂಟೆಂಬ [illegible] ಸತ್ಯವುಂಟು. ಅಹಂಕಾರ, [illegible] ಳನ್ನು ಬದಿಗಿಟ್ಟು ವಿನಯ, ವಿವೇಕಗಳನ್ನು ಆಶ್ರಯಿಸುವ ಕಾಲ ಬಂದಿದೆ. ಹಿಂದೂಗಳೇ ಬಹಳ ಜನರಿರುವಲ್ಲಿ ಮುಸ್ಲಿಮ [illegible] ಗಳನ್ನು ಕೆಟ್ಟರೀತಿಯಲ್ಲಿ [illegible] ಯೆಂದು ದೂರಿದುವ [illegible] ನನಗೆ ಮುಸ್ಲಿಮ ಲೀಗ್ ಕಾರ್ಯದರ್ಶಿಯೊಬ್ಬರಿಂದ ಬಂದಿದೆ. ಈ ದೂರಿನಲ್ಲಿ ಎಷ್ಟು [illegible] ನಾನರಿಯೆ. ಇಂಥ ಎಷ್ಟೋ ದೂರುಗಳು ವಿಚಾರಿಸಿದಾಗ ಹುರುಳಿಲ್ಲದವುಗಳಾಗಿ ಕಂಡು [illegible] ಆದರೂ ಉದಾಹರಣೆಗೆ ಈ ಒಂದಿಯೆ ನನಗೆ ಸಾಕು. ಈ ಸುದ್ದಿಯಲ್ಲಿ ಸತ್ಯಾಂಶವಿಲ್ಲದಿರಲೆಂದು ಹಾರೈಸುತ್ತೇನೆ. ಇದ್ದರೆ ಮಾತ್ರ ಅದು ಹಿಂದುಗಳಲ್ಲಿಯದ ಗರ್ವ, ಉದ್ಧಟತನಗಳ ಲಕ್ಷಣ. ಅದು ಯಾರಿಗಾದರೂ [illegible] ಸಂಗತಿ.

ಸೀಖರು

ಆ ಮೇಲೆ ಗಾಂಧೀಜಿ ಕೆಲ ಸೀಖ ಗೆಳೆಯರು ಬಂದು ತಮಗೆ ಭೆಟ್ಟಿಯಾದ ಸಮಾಚಾರವನ್ನಿತ್ತರು. [illegible] ತಮ್ಮ ಗೆಳೆಯರೆಂದು [illegible] ಕರೆಯುತಿದ್ದರೋ ಅವರನ್ನು [illegible] ತಿದ್ದಾರೆಂಬ ಆರೋಪವನ್ನು ಹೊರಿಸಿ ಯುವಕನೊಬ್ಬನು ಬರೆದ ಪತ್ರವನ್ನು ಅವರು [illegible] ಸಿದರು. "ಸೀಖರನ್ನು ನನ್ನ ಗೆಳೆಯರೆಂದು ಕರೆಯಲು ನನಗೆ ಹೆಮ್ಮೆಯೆನಿಸುತ್ತದೆ" ಎಂದರು ಗಾಂಧೀಜಿ. "ಸೀಖರು ನನ್ನ ಸತ್ಯಾಹಿಂಸೆಗಳ ಉಪದೇಶವನ್ನು ಅನುಸರಿಸಲು ಒಪ್ಪಿಕೊಂಡದ್ದು [illegible] ಸಂಘಟಿಸಿದಾಗ. ಅದರಿಂದ ಅವರಿಗೆ ಯಾವ ಹಾನಿಯೂ [illegible] ಸ್ವತಃ ನನಗೆ ಸೀಖ ಧರ್ಮಕ್ಕೂ ಹಿಂದೂ ಧರ್ಮಕ್ಕೂ ಏನೂ ಭೇದ ಕಾಣುವದಿಲ್ಲ. ಅವೆರಡೂ ಒಂದೇ ಧರ್ಮದ ಎರಡು [illegible] ದೇವನಾಗರೀ ಲಿಪಿಯಲ್ಲಿ ಬರೆದ ಗ್ರಂಥ [illegible] ವನ್ನೋದಿದಾಗ ನನಗೆ ಅದರ ಭಾಷೆಯನ್ನು ಅರ್ಥ ಮಾಡಿಕೊಳ್ಳುವದು ಅಷ್ಟೇನೂ ಕಷ್ಟವಾಗಲಿಲ್ಲ. ನಾನಕ ಸಾಹೇಬರೂ ಇತರ ಗುರುಗಳೂ ರಚಿಸಿದ ಬೇರೆ ಬೇರೆ ಭಜನೆಗಳಲ್ಲದೆ ವೇದಗಳಿಂದಲೂ ಪುರಾಣಗಳಿಂದಲೂ ಸಂಗ್ರಹಿಸಲ್ಪಟ್ಟವುಗಳೆಂದು ನನ್ನ ಭಾವನೆ. ಅವರೂ [illegible] ತಾವು ಹಿಂದುಗಳಿಗಿಂತ ಭಿನ್ನರೆಂದು ತಿಳಿದುಕೊಂಡರೆ ಅದಕ್ಕೆ ನನ್ನ ಆಕ್ಷೇಪವಿಲ್ಲ. ಈ ಭಾವನೆಯನ್ನು ಕಟ್ಟಿಕೊಂಡರೆ ಆಗ ಅವರ ಸ್ಥಿತಿ [illegible] ವಾಗಿದೆಯೆಂದು ನಾನೊಪ್ಪುವೆ. [illegible] ರೋಪಾಯ ಅವರ ಕೈಯಲ್ಲಿ [illegible] ಸಂದೇಹವಿಲ್ಲ. ಖಡ್ಗ ಧಾರಣ [illegible]

—ಪನೇ ಪ್ರತಿಳ್ಳ

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣ

(೬ನೇ ಪುಟದಿಂದ)

...ಉತ್ಕಟತರ ಅಹಿಂಸಾ ಶೌರ್ಯವನ್ನು ... ತೋರಿಸಲು ಸಮರ್ಥರಾಗಿದ್ದಾರೆ. ... ಉದ್ಯಮಶೀಲರು. ... ಕಾಣಬಹುದು. ಪೈರೋದಿಗೆ ... ಕಟ್ಟಲು ಅವರೇ ಬಹಳ ಮುಟ್ಟಿಗೆ ... ಅವರ ಇತರ ಸಾಹಸಗಳನ್ನೂ ... ಅವರು ಕುಡಿಯುವ ಚಟ ... ಬಿಟ್ಟುಬಿಡಬೇಕೆಂದು ಕೇಳಿಕೊ... ಸೀಮಾಪ್ರಾಂತಗಳ ಪಠಾಣರು ಎಷ್ಟು ಅರಾಮದ ಬಾಳಿ ... ಕೇಳಿದ್ದೇನೆ. ಅದನ್ನೂ ತ್ಯಜಿಸಬೇಕು. ಉಳಿದ ... ಸೀಮಾಪ್ರಾಂತ ಸಂಭಾವಿತರೇ ಎಂದು ... ಮಾಡುವದರಿಂದ ಫಲವಿಲ್ಲ. ಸೀಮೆಯ ... ಕೀರ್ತಿಯನ್ನು ಕಾಪಾಡಿಕೊಳ್ಳಬೇಕಾದರೆ ... ದೌರ್ಬಲ್ಯವನ್ನು ಭರ್ತಿ ಮಾಡಿಕೊಳ್ಳಲು ಅಸಾಮಾನ್ಯ ಶೌರ್ಯವನ್ನೂ ಸರಳ ಜೀವನದಿಂದ ಹುಟ್ಟುವ ವಿಚಾರಶೀಲತೆಯನ್ನು ಸಾಧಿಸಬೇಕು. ಖಡ್ಗವೆಂಬುದು ತುಕ್ಕು ಹಿಡಿವ ಆಯುಧ. ಅದಕ್ಕಿಂತ ಪರಿಣಾಮಕಾರಿಯಾದ ಸಾಧನವೆಂದರೆ ಸಾತ್ವಿಕ ತೇಜ. ಅದಕ್ಕೆ ಏನೂ ಬೆಲೆ ತೆರಬೇಕಾದುದಿಲ್ಲ ಅದಲ್ಲದೆ ಅದು ಅವಿನಾಶಿಯಾದುದು.”

ವಾಯಿಸರಾಯ ಭವನ

ವಾಯಿಸರಾಯ ಭವನಕ್ಕೆ ತಾನಿಂದು ಹೋಗಲು ಕಾರಣವೇನಿದ್ದಿರಬಹುದೆಂದು ಕೆಲ ... ಜನರು ಅತುರ ಪಡುತಿರಬಹುದು, ಎಂದು ಗಾಂಧೀಜಿ ಹೇಳಿದರು. ವಾಯಿಸರಾಯರನ್ನು ಕಾಣಲೆಂದು ತಾವು ಹೋಗಿದ್ದಿಲ್ಲ. ಪಂ. ನೆಹರೂ ಹಾಗು ಇತರ ಮಿತ್ರರ ಸಂಗಡ ಕಾಲ ಕಳೆಯಲು ಹೋಗಿದ್ದೆವು. ಅವರ ಭೆಟ್ಟಿಯಾಯಿತೆಂಬುದಕ್ಕಿಂತ ಹೆಚ್ಚು ಜನರ ಕುತೂಹಲವನ್ನು ಸಮಾಧಾನಗೊಳಿಸಲು ... ದೆಂದು ಅವರು ಹೇಳಿದರು. ಈ ಸಂಬಂಧದಲ್ಲಿ ಸುದ್ದಿಗಾರರೂ ಊಹಾಪೋಹ ನಡೆಸಬಾರದೆಂದು ಅವರು ಬಯಸಿದರು. ಸಂಧಿಕಾಲದಲ್ಲೂ ಸೂಕ್ಷ್ಮ ಪ್ರಸಂಗಗಳಲ್ಲೂ ಬರಲಿರುವ ಘಟನೆಗಳನ್ನು ಊಹಿಸಹೋಗುವದರಿಂದ ದೇಶಕ್ಕೆ ನಿಶ್ಚಯವಾಗಿಯೂ ಹಾನಿಯೊದಗುವದು.

ನಂಬುವದು ಕರ್ತವ್ಯ

ಕೊನೆಯಲ್ಲಿ ಗಾಂಧೀಜಿ ನಿನ್ನೆ ಸಭಾಂತ್ಯದಲ್ಲಿ ತಮಗೆ ಬಂದ ಒಂದು ಪತ್ರದ ಪ್ರಸ್ತಾಪವನ್ನೆತ್ತಿದರು. ಆ ಪತ್ರ ಬರೆದವನು ಇಂಗ್ಲೀಷ ಜನರು ವಿಶ್ವಾಸಕ್ಕೆ ಅಯೋಗ್ಯರೆಂದೂ ಎಂದೆಂದೂ ... ನ್ಯಾಯವಾದ ಕೆಲಸ ಮಾಡುವವರಲ್ಲೆಂದೂ ತೆಗಳಿದ್ದಲ್ಲದೆ, ವೈಸರಾಯರು ಸರಕಾರದ ಪರವಾಗಿ ಹೇಳುವ ಮಾತನ್ನು ನಂಬುವಷ್ಟು ಧೈರ್ಯ ತೋರಿದ ಗಾಂಧೀಜಿಯೂ ಅಯೋಗ್ಯರೆಂದು ಆರೋಪಿಸಿದ್ದನು. ಯಾವನೊಬ್ಬನನ್ನು ವಿಶ್ವಾಸಘಾತಕನೆಂದು ಸಿದ್ಧವಾಗುವ ವರೆಗೆ ಅವನಲ್ಲಿ ಅವಿಶ್ವಾಸ ತೋರಕೂಡದೆಂಬ ಶ್ರೇಷ್ಠ ನಿಯಮವನ್ನು ಅನುಸರಿಸಬೇಕೆಂದು ಗಾಂಧೀಜಿ ಅದಕ್ಕೆ ಉತ್ತರಕೊಟ್ಟರು. ಅವನು ವಿಶ್ವಾಸಕ್ಕೆ ಅನರ್ಹನೆಂದು ಸಿದ್ಧವಾದೊಡನೆ ಅವನೂ ಅವನ ಧೂರ್ತತೆಯೂ ಕುಸಿದು ಬೀಳುವದು. ... ಗಾದರೂ ಅದೇ ನಿಯಮ ಅನ್ವಯಿಸುತ್ತದೆ. ತಾವು ನಿಜವಾಗಿ ಅಯೋಗ್ಯರಾಗಿದ್ದರೆ ಬಹುಕಾಲದ ಅಧಿಕಾರಕ್ಕೇ ಎರವಾಗುವದು ...

ಹೊಸದಿಲ್ಲಿ ೨—೭—೧೯೪೭

ಗತಿಗೇಡಿ ಧ್ಯೇಯಗಳು ಹಿಂದುಸ್ತಾನಿ

ಗತಿಗೆಟ್ಟ ಧ್ಯೇಯಗಳನ್ನು ಪ್ರಚುರಪಡಿಸುವದರಲ್ಲಿ ಜೀವನವನ್ನು ವ್ಯರ್ಥವಾಗಿ ಹಾಳು ಮಾಡುವರೆಂದು ತಮ್ಮನ್ನು ನಿಂದಿಸುವವರಿದ್ದಾರೆ ಎಂದು ಗಾಂಧೀಜಿ ಇಂದು ಪ್ರಾರ್ಥನೋತ್ತರ ಭಾಷಣದಲ್ಲಿ ಹೇಳಿದರು. “ಜೀವನದ ಸಂಧ್ಯಾಕಾಲದಲ್ಲಿ ನಾನು ನಿವೃತ್ತನಾಗಬೇಕು. ಇಲ್ಲವೆ ಹೆಚ್ಚು ಜನಪ್ರಿಯ ಧ್ಯೇಯಗಳನ್ನು ಪ್ರತಿಪಾದಿಸಬೇಕಂತೆ. ಗತಿಗೆಟ್ಟ ಧ್ಯೇಯಗಳನ್ನು ಹಿಡಿಯುವವನು ನಾನೆಂಬ ಆರೋಪವನ್ನು ನಾನು ಸಂತೋಷದಿಂದ ಒಪ್ಪಿಕೊಳ್ಳುವೆ. ಆದರೆ ಅದರಿಂದ ನಾನು ನನ್ನ ಜೀವನವನ್ನು ವ್ಯರ್ಥ ಕಳೆಯುತ್ತಿದ್ದೇನೆಂಬುದು ಮಾತ್ರ ಸರಿಯಲ್ಲ. ಉದಾಹರಣೆಗಾಗಿ ನಾಗರಿ, ಉರ್ದು ಇವೆರಡೂ ಲಿಪಿಗಳಲ್ಲಿ ಹಿಂದುಸ್ತಾನಿಯನ್ನು ಜನಪ್ರಿಯಗೊಳಿಸುವ ನನ್ನ ಪ್ರಯತ್ನಗಳು-ಅದೂ ಪಾಕಿಸ್ತಾನವೀಗ ಸ್ಥಾಪಿತವಾದಂತೆಯೇ ಆಗಿರುವಾಗ— ಮುಳಿರಿಂದ ಹಗ್ಗ ಹೊಸೆದಂತೆಂದು ಹೇಳಲಾಗಿದೆ. ಈ ಅಭಿಪ್ರಾಯಕ್ಕೆ ನಾನೆಂದೂ ಒಪ್ಪಲಾರೆ. ಪಾಕಿಸ್ತಾನದಿಂದ ರೂಪಿತವಾಗುವದೆಂದು ಹೇಳಲಾದ ಸಿದ್ಧಾಂತಕ್ಕೆ ಮನ್ನಣೆ ಕೊಡದಿರುವಷ್ಟು ಬುದ್ಧಿ ನನಗಿನ್ನೂ ಇದೆ. ಎರಡೂ ಲಿಪಿಗಳನ್ನು ಮನಸ್ಸುಗೊಟ್ಟು ಅಭ್ಯಸಿಸಿ ಎರಡರ ಸಮರಸ ಸಮ್ಮಿಶ್ರಣವುಳ್ಳ ಭಾಷೆಯಲ್ಲಿ ಮಾತಾಡುವದನ್ನು ಕಲಿಯಲು ಇದೀಗ ಎಲ್ಲಕ್ಕಿಂತ ಮಹತ್ವದ್ದೆಂದೇ ನನ್ನ ಹೇಳಿಕೆ. ಉತ್ತರದಲ್ಲಿ ಉರ್ದು ಲಿಪಿಯಲ್ಲಿ ಬರೆದ ಉರ್ದು ಭಾಷೆಯನ್ನಷ್ಟೆ ಬಲ್ಲ ಅನೇಕ ಹಿಂದುಗಳಿರುವರೆಂಬುದನ್ನು ನಾವು ಮರೆಯಬಾರದು. ಈ ಹಿಂದುಗಳು ಉರ್ದು ಭಾಷೆಯನ್ನೂ ಲಿಪಿಯನ್ನೂ ಮರೆತು ನಾಗರೀ ಲಿಪಿಯಲ್ಲಿ ಬರೆದ ಹಿಂದಿಯನ್ನು ಕಲಿಯಬೇಕೆ? ನನಗೆ ಹುಚ್ಚು ಹಿಡಿದಿದೆಯೆಂದು ಹೇಳಿದರೂ ಆ ಹುಚ್ಚಿನಲ್ಲೊಂದು ಓರಣವುಂಟು. ಯಾವುದೊಂದು ಕಾರ್ಯ ಯೋಗ್ಯತೆಯನ್ನು ನಿರ್ಣಯಿಸಬೇಕಾದರೆ ಬೇರೆಯವರೂ ಆ ಮಾರ್ಗವನ್ನು ಹಿಡಿಯದಿದ್ದರೆ, ಮಳಲಿನಿಂದ ಹಗ್ಗ ಹೊಸೆಯುವ ಪ್ರಯತ್ನದಂತೆ, ಅದನ್ನು ಪ್ರಾರಂಭಿಸಿದವನಿಗೂ ಅದು ನಿರುಪಯೋಗಿಯಾಗಬಹುದೇ ಎಂದು ನೋಡಬೇಕು. ನನ್ನ ಹಿಂದುಸ್ತಾನೀ ವಿಚಾರವನ್ನು ಈ ಪರೀಕ್ಷೆಗೊಳಪಡಿಸೋಣ. ಇಡಿ ಹಿಂದುಸ್ತಾನದಲ್ಲಿ ಎರಡೂ ಲಿಪಿಗಳನ್ನರಿತವನೂ ಹಿಂದೀ ಉರ್ದು ಇವೆರಡರಲ್ಲಿಯೂ ಪ್ರಭುತ್ವಗಳಿಸಿದವನೂ ನಾನೊಬ್ಬನೇ ಇದ್ದರೆ ಆಗ ಪಾಕಿಸ್ತಾನದಲ್ಲಿಯೂ ಹಿಂದೀ ಒಕ್ಕೂಟದಲ್ಲಿಯೂ ಬಹಳ ಅವಶ್ಯ ಬೀಳುವ ಪ್ರಸಿದ್ಧ ವಿದ್ವಾಂಸನೆಂದು ಪರಿಗಣಿಸಲ್ಪಟ್ಟೇನು. ದುರ್ದೈವದಿಂದ ನಾನು ವಿದ್ವಾಂಸನಲ್ಲ. ನನ್ನ ಹಿಂದುಸ್ತಾನಿಯೂ ಮನವೋಹಕವಾಗುವಷ್ಟು ಮಧುರವಾಗಿಲ್ಲ. ಇದಲ್ಲದೆ ಜೀವನದ ಅವಸಾನ ಕಾಲದಲ್ಲಿ ಮನುಷ್ಯನು ಜನಮೆಚ್ಚುವ ಧ್ಯೇಯಗಳಿಗೇ ಬೆಂಬಲ ಕೊಡಬೇಕೆನ್ನುವದು ದುಷ್ಟ ಸೂಚನೆ. ಜನಪ್ರಿಯ ಧ್ಯೇಯಗಳಿಗೆ ಬೆಂಬಲವೇ ಬೇಕಾಗುವದಿಲ್ಲ. ಬದಲಿಗೆ ಜನಪ್ರಚುರವಾದ ಅಂಧಶ್ರದ್ಧೆಗಳಂತೆ ಅವುಗಳನ್ನೂ ಸರ್ವಸಾಮರ್ಥ್ಯದಿಂದ ಪ್ರತಿಭಟಿಸುವದು ಒಮ್ಮೊಮ್ಮೆ ಅವಶ್ಯವೆನಿಸುತ್ತದೆ. ಅದರಿಂದ ದೇಶವನ್ನು ವ್ಯಾಪಿಸಿರುವ ಹುಚ್ಚುತನದ ಲಹರಿಯನ್ನು ಎದುರಿಸಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಮೂಲತಃ ನ್ಯಾಯವಾದ ಯಾವ ಧ್ಯೇಯವನ್ನೂ ಗತಿಗೆಟ್ಟ ಧ್ಯೇಯವೆಂದು ಕರೆಯಬರುವದಿಲ್ಲ.”

ಹಳ್ಳಿಗಳು ಅಲಿಪ್ತ

ಹೊಸದಿಲ್ಲಿ ೩-೭-೪೭

ನೀರಿನಲ್ಲಿದ್ದ ಮೀನು ನೀರಡಿಸಿದಂತೆ ವರ್ತಿಸುತಿರುವದನ್ನು ನೋಡಿ ಜನ ನಗುತಿರುವದು ಎಂಬ ಸಾಯಂಕಾಲ ಭಜನೆಯ ಮೊದಲನೆಯ ಪಂಕ್ತಿಯನ್ನು ಗಾಂಧೀಜಿ ಉಲ್ಲೇಖಿಸಿದರು. ಪರಮಾತ್ಮನ ಲೋಕದಲ್ಲಿದ್ದುಕೊಂಡು ಅವನನ್ನು ತಿಳಿಯದ ಮನುಷ್ಯನ ಪರಿಸ್ಥಿತಿ ಆ ಕಲ್ಪನಾ ಸೃಷ್ಟಿಯಲ್ಲಿನ ಮೀನಿನಂತೆ ಇದೆ. ಮನುಷ್ಯ ತನ್ನನು ತಾ ತಿಳಿದುಕೊಂಡದ್ದಾದರೆ ಇಾದಿನ್ನ! ದುಃಸ್ಥಿತಿಯಲ್ಲಿ! ಅವನೆಂದಿಗೂ ಉಳಿಯಲಾರ. ಆ ಪರಿಸ್ಥಿತಿಯನ್ನು ನಿರೀಕ್ಷಿಸುವದು ಅದೆಷ್ಟು ಸಂತೋಷಪ್ರದ? ಹಿಂದುಸ್ತಾನದ ಸುದೈವದಿಂದ ಪಾಶವೀ ಹತ್ಯಾಕಾಂಡ ಕೇವಲ ನಗರಗಳಿಗೆ ಮತ್ತು ಅವುಗಳ ಸುತ್ತಲಿರುವ ಹಳ್ಳಿಗಳಿಗೆ ಪರಿಮಿತವಾಗಿತ್ತು. ೧೯೦೦ ಮೈಲು ಉದ್ದ ಮತ್ತು ೧೫೦೦ ಮೈಲು ಅಗಲಿದ್ದ ಹಿಂದುಸ್ತಾನದಂಥ ವಿಶಾಲ ದೇಶದಲ್ಲಿ ಇಂಥ ಹಳ್ಳಿಗಳು ಸಾವಿರಗಟ್ಟಲೆ ಎಣಿಸುವಷ್ಟು ಇರುವದಿಲ್ಲ. ನಗರಗಳಲ್ಲಿ ಮತ್ತು ಸುತ್ತಲಿನ ಹಳ್ಳಿಗಳಲ್ಲಿ ನಡೆದ ಹುಚ್ಚುಚ್ಚಾರಗಳಿಂದ ಈ ಸಾವಿರಗಟ್ಲೆ ಹಳ್ಳಿಗಳು ಅಲಿಪ್ತವಾಗಿದ್ದುವೆಂಬುದು ಸುದೈವದ ಸಂಗತಿ.

ಬ್ರಾಹ್ಮಣ ಅಲ್ಪಸಂಖ್ಯಾಕರು

ತಾವು ವಿವರಿಸಬಯಸಿದ ವಿಷಯವನ್ನು ಮುಂದರಿಸುತ್ತ ಗಾಂಧೀಜಿ ತಮಗೆ ಬಂದ ಒಂದು ಪತ್ರವನ್ನು ಉಲ್ಲೇಖಿಸಿದರು, ಬ್ರಾಹ್ಮಣೇತರರ ಚಳವಳಿಯಿಂದ, ಅತ್ಯಲ್ಪ ಸಂಖ್ಯಾಕರಾಗಿರುವ ಬ್ರಾಹ್ಮಣ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕಾಲೇಜುಗಳಲ್ಲಿ ಮತ್ತು ನೌಕರಿಗಳಲ್ಲಿ ಪ್ರವೇಶ ಸಿಕ್ಕುವುದು ಬಹಳ ದುರ್ಲಭವಾಗಹತ್ತಿದ್ದರಿಂದ ಬ್ರಾಹ್ಮಣರ ಪರಿಸ್ಥಿತಿ ಬಹಳ ಕೆಡಹತ್ತಿದೆಂದು ಆ ಪತ್ರದಲ್ಲಿ ಬರೆಯಲಾಗಿದ್ದನ್ನು ಅವರು ತಿಳಿಸಿದರು. ಬ್ರಾಹ್ಮಣರು ಈ ವರೆಗೆ ಹೆಚ್ಚು ಗ್ರಾಹಕಶಕ್ತಿಯವರು, ಪರಿಶ್ರಮಿಗಳು ಮತ್ತು ಜ್ಞಾನಾರ್ಜನೆಗಾಗಿ ಹೆಚ್ಚು ಆತುರರಾಗಿದ್ದುದರಿಂದ ಅವರು ಪಾಶವೀ ಶಕ್ತಿಯಿಂದಲ್ಲದಿದ್ದರೂ ತಮ್ಮ ಶ್ರೇಷ್ಠ ಸದ್ಗುಣಗಳಿಗಾಗಿ ಎಲ್ಲದರಲ್ಲಿಯೂ ಗುತ್ತಿಗೆ ಹಿಡಿದಂತಾಗಿದ್ದುದರಿಂದ ಮೇಲಿನಂತೆ ತಕರಾರು ಮಾಡಿದವನ ಬಗ್ಗೆ ಸಹಾನುಭೂತಿಯೆನಿಸುತ್ತದೆ. ಈ ಬಗ್ಗೆ ತಾವು ಸಹಾನುಭೂತಿಯನ್ನು ಪ್ರದರ್ಶಿಸಿದರೂ ಅವರ ದುಃಖ ಅಥವಾ ಅಸಮಾಧಾನದಲ್ಲಿ ತಾವೇನು ಪಾಲು ವಹಿಸುವದಿಲ್ಲ, ಮೊದಲನೆಯದಾಗಿ ಬ್ರಾಹ್ಮಣರು ಅಲ್ಪಸಂಖ್ಯಾಕರೆಂಬುದನ್ನು ತಾವು ಒಪ್ಪುವದಿಲ್ಲ. ಒಂದೇ ರಾಷ್ಟ್ರದವರು ನಾವೆಲ್ಲ ಆಗಿದ್ದರೆ ಅಲ್ಪಸಂಖ್ಯಾಕರು ಮತ್ತು ಬಹುಸಂಖ್ಯಾಕರೆಂಬ ಪ್ರಶ್ನೆಯು ಉದ್ಭವಿಸುವದಿಲ್ಲ. ಮೊದಲು ತಾವು ಅಲ್ಪಸಂಖ್ಯಾಕರಾಗಿದ್ದುದಕ್ಕೆ ದೂರಿಕೊಂಡು ಅನಂತರ ಬಯಸಿದ ಎಲ್ಲ ಬಗೆಯ ಹಕ್ಕುಗಳು ಸಿಕ್ಕದಿರುವದಕ್ಕೆ ವಿಷಾದಪಟ್ಟುಕೊಳ್ಳಬೇಕಾಗುತ್ತದೆ. ಹಿಂದುಸ್ತಾನದ ಪ್ರಚಂಡ ಜನತೆಯನ್ನು ಬಿಟ್ಟು ತಾವೊಬ್ಬ ಬೇರೆ ವರ್ಗ ಇಲ್ಲವೆ ಗುಂಪಿನವರೆಂಬುದನ್ನು ಮರೆಯತಕ್ಕದ್ದೆಂದು ಬ್ರಾಹ್ಮಣ ಮಿತ್ರರಿಗೆ ತಾವು ಉಪದೇಶಿಸಬಯಸುತ್ತೇವೆ. ಒಂದೇ ಮಾತೃಭೂಮಿಯ ಮಕ್ಕಳು ಭಾರತೀಯರು ಎಂದು ಭಾವಿಸದೆ ಹಿಂದುಗಳೆಂದು ತಿಳಿದುಕೊಂಡರೂ ಹಿಂದೂ ಧರ್ಮದಲ್ಲಿ ಉಚ್ಚ ನೀಚವೆಂಬ ಭೇದಭಾವಗಳಿಲ್ಲ. ಅವರು ಅಲ್ಪಸಂಖ್ಯಾಕರೆಂದು ತಿಳಿದುಕೊಳ್ಳುವದನ್ನು ಬಿಟ್ಟುಗೊಟ್ಟದ್ದಾದರೆ ಅವರು ಹಿಂದೀಯರ ಇಲ್ಲವೆ ಹಿಂದೂ ಮಾನವ್ಯದ ಮಹಾಸಾಗರದ ವೈಭವದಲ್ಲಿ ಪಾಲುಗಾರರಾದುದರ ಅಭಿಮಾನವನ್ನೆ ತಾಳಬಹುದು. ಅಲ್ಲದೆ ಆ ಮಹಾಸಾಗರದಲ್ಲಿಯ ಒಂದು ಬಿಂದುವಿನಂತೆ ಭಾವಿಸಬಹುದು. ಸಾವಿರಾರು ಪ್ರಚಂಡ ಉಗಿಹಡಗಗಳನ್ನು ತನ್ನ ವಿಶಾಲ ವಕ್ಷಃಸ್ಥಳದಲ್ಲಿರಿಸಿಕೊಂಡ ಆ ಮಹಾಸಾಗರದ ಶ್ರೇಷ್ಠತೆಯ ಬಗ್ಗೆ ಅಭಿಮಾನವೆನಿಸಬಹುದು. ಹಿಂದುಸ್ತಾನದಲ್ಲಿಯ ೭ ಲಕ್ಷ ಹಳ್ಳಿಗಳಲ್ಲಿರುವ ಕೋಟ್ಯವಧಿ ಜನತೆಯ ದೃಷ್ಟಿಯಿಂದ ಈ ಕಾಲೇಜುಗಳು ಮತ್ತು ನೌಕರಿಗಳೆಂದರೇನು? ಸರಕಾರದ ಅಧೀನದಲ್ಲಿರುವ ಕಾಲೇಜುಗಳಿಗೆ ಮತ್ತು ನೌಕರಿಗಳಿಗೆ ಹೋಗುವ ಅಮಿಷ ತಪ್ಪಿ ಹೋದುದಕ್ಕಾಗಿ ಬ್ರಾಹ್ಮಣ ಮಿತ್ರರು ಸಂತೋಷಪಡಬೇಕೆಂದು ತಮ್ಮ ಸೂಚನೆ. ಇಂಥ ಜನರು ಬಹಳ ಕಡಮೆ ಮತ್ತು ಅಲ್ಲೊಬ್ಬರು ಇಲ್ಲೊಬ್ಬರು. ಕಾಲೇಜ ಪ್ರವೇಶ ಮತ್ತು ನೌಕರಿಗಳನ್ನು ಪಡೆಯುವ ಸ್ಪರ್ಧೆಯಲ್ಲಿ ಭಾಗ ವಹಿಸುವದನ್ನು ನಿರಾಕರಿಸಿದವರೆ ಹಿಂದುಸ್ತಾನದ ನಿಜ ಸೇವಕರು. ಜ್ಞಾನವು ಸಾಲೆ ಮತ್ತು ಕಾಲೇಜಗಳ ಚತುರ್ಭಿತ್ತಿಗಳಿಗೆ ಮಾತ್ರ ಪರಿಮಿತವಾಗಿಲ್ಲ. ಸಾಲೆ ಕಾಲೇಜುಗಳ ಹೊರಗೆ ಪರಿಶ್ರಮಿಗಳಾದ ಹುಡುಗ ಹುಡಿಗೆಯರು ಜ್ಞಾನವನ್ನು ಸಂಪಾದಿಸಬಲ್ಲರು. ಈ ಸಂದರ್ಭದಲ್ಲಿ ನಯೀ ತಾಲೀಮ ಮತ್ತು ಅದರ ರಹಸ್ಯವನ್ನು ತಿಳಿದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ. ಚೊಕ್ಕಾದ ಕರ್ತವ್ಯವನ್ನು ಮಾಡುವುದರಿಂದ ನೇರವಾಗಿ ಪ್ರಾಪ್ತವಾಗುವ ಹಕ್ಕುಗಳ ಪ್ರಾಮಾಣ್ಯದ ಬಗ್ಗೆ ಹೇಳಿದುದನ್ನು ಮತ್ತೊಮ್ಮೆ ನೆನಪಿಗೆ ತರಬಯಸುತ್ತೇವೆ.

ಸರಕಾರಿ ಕಾಲೇಜ ಪ್ರವೇಶಕ್ಕೆ ವಂಶಪರಂಪರಾಗತ ಹಕ್ಕು ಇಲ್ಲ ಎಂಬುದು ಅನಂತರ ಹೊಳೆಯಬಹುದು. ಯಾರಿಗಾದರೂ ಹಕ್ಕು ಪ್ರಾಪ್ತವಾಗುವದಾದರೆ ಈ ವರೆಗೆ ಯಾರಬಗ್ಗೆ ದಕ್ಷತೆ ವಹಿಸಿರಲಿಲ್ಲವೊ ಅಂಥ ಹುಡುಗ ಹುಡಿಗೆಯರಿಗೆ ಅದು ಪ್ರಾಪ್ತವಾಗಬಲ್ಲದು.

ಪರಮಾತ್ಮನ ಜ್ಞಾನ ಮಾಡಿಕೊಳ್ಳುವದೆ ಬ್ರಾಹ್ಮಣರ ಕರ್ತವ್ಯ. ಎರಡನೆಯವರಿಗೆ ಅವನ ಜ್ಞಾನಮಾಡಿ ಕೊಡುವದೂ ಅವರ ಧರ್ಮ. ಈ ಕರ್ತವ್ಯವನ್ನು ಮಾಡಿದ್ದಕ್ಕಾಗಿ ಬ್ರಾಹ್ಮಣರಿಗೆ ಅನ್ನ ವಸ್ತ್ರಗಳನ್ನು ಪೂರೈಸುವದು ಆಯಾ ಜನಾಂಗಕ್ಕೆ ಸೇರಿದ್ದಾಗಿದೆ.

ರಾಮರಾಜ್ಯ ಮತ್ತು ಅಹಿಂಸೆ

ಹೊಸದಿಲ್ಲಿ ೪—೭—೧೯೪೭

ಬಹಳ ದೂರವೆಂದರೆ ಆಗಸ್ಟ ೧೫ಕ್ಕೆ ಸಂಪೂರ್ಣ ಸಾಮಂತಸ್ವರಾಜ್ಯದಲ್ಲಿ ಪರಿವರ್ತನ ಹೊಂದುತ್ತಿರುವ ಸದ್ಯದ ಆಡಳಿತದಿಂದ ತಮ್ಮ ಕನಸಿನ ಸ್ವರಾಜ್ಯ ಉದಯವಾಗುವದೆಂದು ಎಂದಾದರೂ ತಮ್ಮ ತಲೆಯಲ್ಲಿ ಬಂದಿದೆಯೆ ಎಂಬ ಸ್ವಾಭಾವಿಕವಾದ ಪ್ರಶ್ನೆಯನ್ನು ತಮಗೆ ಹಾಕಲಾಗುತ್ತದೆ. ಇಡೀ ದೇಶವನ್ನು ಹುರುಪಳಿಸುತಿರುವ ಹಿಂಸೆಯಲ್ಲಿ ಪರಿಣಮಿಸಿರುವ ಕಳೆದ ೩೦ ವರುಷಗಳ ಹಳೆಯ ತಮ್ಮ ಅಹಿಂಸೆಯ ಬಗ್ಗೆ ನಾಚಿಕೆಯೆನಿಸುವದಿಲ್ಲವೆ? ಬರಲಿರುವ ಸಾಮಂತ ಸ್ವರಾಜ್ಯದಿಂದ ರಾಮರಾಜ್ಯಸ್ಥಾಪನೆಯಾಗುವ ಲಕ್ಷಣವಿಲ್ಲವೆಂದು ಒಪ್ಪಲು ನಮಗೆ ವಿಷಾದವಾಗುತಿವೆ. ಬ್ರಿಟಿಶರ ಅಧಿಕಾರ ತ್ಯಾಗದ ಕೊನೆಯ ತಾರೀಖನ್ನು ನಿರ್ದಿಷ್ಟಪಡಿಸುವದಕ್ಕಾಗಿ ಸಾಮಂತ ಸ್ವರಾಜ್ಯದ ಕೊಡುಗೆಯನ್ನು ಮುಂದೆ ಮಾಡಲಾಯಿತೆಂದು ತಮಗನಿಸುತ್ತದೆ. ಹಾಗೆ ಮಾಡಿರದಿದ್ದರೆ ಜೂನ ೩೦ಕ್ಕೆ ಹಿಂದುಸ್ತಾನದಿಂದ ಹೋಗಬೇಕೆಂಬ ಯೋಜನೆಯ ದಿನವನ್ನು ಹಿಂದಕ್ಕೆಳೆಯುವದು ಶಕ್ಯವಿಲ್ಲವೆಂದು ಅವರಿಗೆನಿಸಿತು. ಅದೇನೇ ಇರಲಿ, ಎರಡು ಹೊಸ ಸರಕಾರಗಳು ತಮ್ಮ ಘಟನೆಗಳನ್ನು ಸಿದ್ಧಪಡಿಸಿಕೊಂಡ ಕೂಡಲೆ ಬ್ರಿಟಿಶ ಸಾಮಂತ ರಾಷ್ಟ್ರಗಳಿಂದ ಹೊರಬಿದ್ದು ಸಂಪೂರ್ಣ ಸ್ವರಾಜ್ಯವನ್ನು ಸಾರುವುದು ಅವುಗಳ ಹೊಣೆಯಾಗಿದೆ. ಅದೇ ಕಾಲಕ್ಕೆ ಸ್ವತಂತ್ರ ಜಾಗತಿಕ ರಾಷ್ಟ್ರಕುಟುಂಬದಲ್ಲಿ ಸೇರಲು ಹೆಣಗತಕ್ಕದ್ದು. ಈ ಸ್ವತಂತ್ರ ಜಾಗತಿಕ ರಾಷ್ಟ್ರಕುಟುಂಬದಲ್ಲಿ ಎಲ್ಲ ಬಗೆಯ ಅಂತರಿಕ ಸೈನ್ಯಗಳ ಅವಶ್ಯಕತೆಯುಳ್ಳಯದು ಪ್ರಜಾಪ್ರಭುತ್ತ ರಾಷ್ಟ್ರವೆಂದು ನಿರರ್ಥಕವಾಗಿ ಕರೆದುಕೊಳ್ಳುವ ಮತ್ತೊಂದು ಜಪಾನ ಇಲ್ಲವೆ ಜರ್ಮನಿಯಂತೆ ಜಾಗತಿಕ ಶಾಂತಿಗೆ ಕಂಟಕವಾಗಿ ಪರಿಣಮಿಸುವಂಥ ಹೊಟ್ಟೆಕಿಚ್ಚಿನ ಧೋರಣಕ್ಕೆ ಹಿಂದುಸ್ತಾನದಲ್ಲಿ ಸ್ಥಾನವಿಲ್ಲ. ಪ್ರಜಾಪ್ರಭುತ್ವ ಮತ್ತು ಸೈನಿಕ ಧೋರಣ ಪರಸ್ಪರ ವಿರುದ್ಧ ಶಬ್ದಗಳಾಗಿವೆ. ಪ್ರಜಾಪ್ರಭುತ್ವವು ಜಗತ್ತಿನಲ್ಲಿ ತನ್ನ ಶಸ್ತ್ರಾಸ್ತ್ರಗಳ ಆಡಂಬರ ಪ್ರದರ್ಶನವನ್ನವಲಂಬಿಸಲಾಗದು, ತನ್ನ ನೈತಿಕ ಶಕ್ತಿಯ ಉಪಯೋಗ ಇಡೀ ಜಗತ್ತಿಗೆ ಆಗುವಂತೆ ಅದು ನೋಡಿಕೊಳ್ಳತಕ್ಕದ್ದು. ಹಿಂದುಸ್ತಾನದ ಪ್ರಯತ್ನದಿಂದ ಸ್ವತಂತ್ರ ಮತ್ತು ಸ್ವಾಯತ್ತ ರಾಷ್ಟ್ರಗಳ ಜಾಗತಿಕ ಸಂಘದ ಸ್ಥಾಪನೆಯಾದರೆ ರಾಮರಾಜ್ಯವೆಂದು ಕರೆಯಲ್ಪಡುವ ಪರಮಾತ್ಮನ ರಾಜ್ಯದ ಪ್ರಸ್ಥಾಪನೆಯ ನ್ಯಾಯ್ಯವಾದ ಆಸೆ ಫಲಿಸಿದಂತಾಗುವದು. ಈ ಬಗೆಯ ಸಂತೋಷದ ಸಂಗತಿ ಸಂಭವಿಸುವ ಮೊದಲು, ಈಗ ಪರಸ್ಪರ ಶತ್ರುಗಳಾಗಿರುವ ಹೊಸ ಎರಡು ರಾಷ್ಟ್ರಗಳು ಮಿತ್ರ ಮತ್ತು ಸಹಕಾರಿಗಳಾಗಬೇಕಾಗಿದೆ. ಆದರೆ ಲಕ್ಷಣಗಳು ಮಾತ್ರ ತದ್ವಿರುದ್ಧವಾಗಿವೆಂದು ಒಪ್ಪಲು ತಮಗೆ ವಿಷಾದವಾಗುತ್ತದೆ.

ಎರಡನೆಯ ಚುಚ್ಚು ಮಾತು ಮೊದಲನೆಯದರ ಉಪಸಿದ್ಧಾಂತವಾಗಿದ್ದು ಮೊದಲನೆಯದೇ ಎರಡನೆಯದರ ಉಪಸಿದ್ಧಾಂತ. ಕಳೆದ ೩೦ ವರುಷಗಳಿಗಿಂತ ಹಳೆಯದಾದ ಅಹಿಂಸೆಯೆಂದೆನಿಸಿಕೊಳ್ಳುತಿರುವುದರ ಪರಿಣಾಮ ಇಂತು ಆದುದಕ್ಕಾಗಿ ನಾಚಿಕೆ ಪಡಲು ಬೇಕಾದಷ್ಟು ಕಾರಣಗಳಿವೆ. ನಮ್ಮ ಅಹಿಂಸೆ ಅಶಕ್ತರ ಅಹಿಂಸೆಯಾಗಿತ್ತೆಂದು ತಾವು ಈ ಮೊದಲೆ ಒಪ್ಪಿದ್ದಾಗಿದೆ. ಆದರೆ ಹೃದಯದ ಅಶಕ್ತತೆ ಯಾವದೇ ಬಗೆಯ ಅಹಿಂಸೆಯನ್ನು ಪ್ರತಿನಿಧಿಸಲಾರದು. ಅದಕ್ಕೆ ತಕ್ಕ ಶಬ್ದವೆಂದರೆ ನಿಷ್ಕ್ರಿಯ ಪ್ರತೀಕಾರ. ಈ ಪ್ರತೀಕಾರವೆಂದರೆ ಶಸ್ತ್ರಾಸ್ತ್ರಗಳ ಪ್ರತ್ಯಕ್ಷ ವಿರೋಧದ ಸಿದ್ಧತೆ. ಸಶಕ್ತರ ಅಹಿಂಸೆ ಅದಾಗಿದ್ದರೆ ಅದರ ಆಚರಣೆಯಿಂದ ಸದ್ಯದಲ್ಲಿ ನಡೆದ ಜೀವಿತ ಆಸ್ತಿಗಳ ನಾಶ ಶಕ್ಯವಾಗುತಿರಲಿಲ್ಲ. ಆಗ ಬಟ್ಟೆ ಮತ್ತು ಆಹಾರದ ಸೀದಾದ ಅವಶ್ಯಕತೆಯೇ ಬೀಳುತಿರಲಿಲ್ಲ. ಸತ್ಯ ಮತ್ತು ಅಹಿಂಸಾಚರಣೆಯ ವಿಧಿ ವಿಧಾನಗಳು ಜನರಿಗೆ ಗೊತ್ತಿದ್ದರೆ ಅವರೇ ಕೊರತೆಯ ವಿಷಯವನ್ನು ಸರಿಪಡಿಸಿಕೊಳ್ಳುತಿದ್ದರು, ಈ ಕೊರತೆಯನ್ನು ಸ್ಥಳೀಯ ವಸ್ತುಗಳಿಂದಲೆ ಹೋಗಲಾಡಿಸಲಾಗದೆಂಬಲ್ಲಿ ತಮಗೆಂದೂ ವಿಶ್ವಾಸವಿಲ್ಲ. ಭೀಕರ ಯುದ್ಧದಿಂದ ವಿಪರೀತ ಹಾನಿಗೊಳಗಾಗಿ ಕೊರತೆಯಿಂದ ಇಡೀ ಜಗತ್ತು ಕೊರಗುತಿರುವಾಗ ಹಿಂದುಸ್ತಾನದಂಥ ವಿಶಾಲ ರಾಷ್ಟ್ರವು ಜಗತ್ತಿನ ಅನ್ನ ಮತ್ತು ವಸ್ತ್ರಗಳ ಉತ್ಪಾದನೆಯಲ್ಲಿ ಪಾಲು ಬೇಡುವದನ್ನು ತಿರಸ್ಕರಿಸತಕ್ಕದ್ದು. ಹಿಂದುಸ್ತಾನದಲ್ಲಿಯ ಕೋಟ್ಯವಧಿ ಜನರು ಜಾಣತನದಿಂದ ಸಂಘಟಿತ ಪರಿಶ್ರಮ ಮಾಡುವದು ಮಾತ್ರ ಅತ್ಯವಶ್ಯವಾಗಿದೆ. ದೇಶದಲ್ಲಿ ಜಾಣತನ ಮತ್ತು ಕೌಶಲಕ್ಕೇನು ಕೊರತೆಯಿಲ್ಲ. ಕೊನೆಯದಾಗಿ ಅಹಿಂಸೆ ಮತ್ತು ಸತ್ಯದ ನಿಜವಾದ ಹಿಡಿತ ಸಿಕ್ಕಿದ್ದರೆ ಸಿವಿಲ್ ಸರ್ವಿಸಕ್ಕೆ ಮೊರೆ ಹೋಗಬೇಕಿರಲಿಲ್ಲ. ಕ್ರಿಸ್ತವಾಸಿ ಮಾಂಟೇಗರು ಈ ಸಿವಿಲ್ ಸರ್ವಿಸ್ಸೆಂದರೆ ಕಟ್ಟಿಗೆಯ ಯಂತ್ರವೆಂದು ಕರೆದಿದ್ದರೆಂದು ನೆನಪಿದೆ. ಈ ಸಿವಿಲ್ ಸರ್ವಂಟರು ಒಂದುತರಹದ ತಜ್ಞರು. ರಾಷ್ಟ್ರದ ಕಲ್ಯಾಣಕ್ಕಾಗಿ ಅವರನ್ನೆಂದಿಗೂ ನೇಮಿಸಿಕೊಂಡಿರಲಿಲ್ಲ. ಹೇಗಾದರೂ ಮಾಡಿ ಪರದೇಶೀ ಆಡಳಿತವನ್ನು ಊರ್ಜಿತದಲ್ಲಿಡುವುದಷ್ಟೆ ಅವರ ಕೆಲಸವಾಗಿತ್ತು.

ಅನ್ನಾಭಾವದಿಂದ ಬಳಲುವ ಮತ್ತು ನಗ್ನರಾದ ಕೋಟ್ಯವಧಿ ಜನರುಳ್ಳ ರಾಷ್ಟ್ರದ ಕುಗ್ಗುತಿರುವ ಮನೋಭಾವನೆಗಳನ್ನು ಪುನರುಜ್ಜೀವಿಸುವ ಸದ್ಯದ ಕಾರ್ಯವನ್ನು ಯಶಸ್ವಿಯಾಗಿ ಮಾಡಲು ಅವರು ಬಹಳ ಕಡಮೆ ಇದ್ದರು. ವ್ಯವಹಾರಸ್ಥರು, ಉತ್ಪಾದಕರು ಮತ್ತು ರಾಷ್ಟ್ರೀಯರು ರಾಷ್ಟ್ರಕ್ಕಾಗಿ ಇಂಥ ಅತಿ ಕಠಿನ ಪರಿಸ್ಥಿತಿಯಲ್ಲಿ ಸ್ವಯಂ ಮುಂದೆ ಬಂದು ಕೆಲಸ ಮಾಡುವದರ ಅಗತ್ಯವನ್ನು ಅವರಿಗೆ ಬಿಂಬಿಸತಕ್ಕದ್ದು. ನೌಕರರು ಈ ಪ್ರಸಂಗದಲ್ಲಿ ಮುಂದೆ ಬರುವರೊ?

—೯ನೇ ಪುಟಕ್ಕೆ

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣ

(೮ ನೇ ಪುಟದಿಂದ)

ಸರಕಾರದ ಅಧಿಕಾರಿಗಳು ತಮ್ಮ ದ್ರಾವಿಡೀ ಪ್ರಾಣಾಯಾಮ ವೃತ್ತಿಯನ್ನು ಬಿಟ್ಟುಗೊಟ್ಟು ಸ್ವಾವಲಂಬಿಗಳಾಗುವಂತೆ ಸಾರ್ವಜನಿಕರ ಮನ ವೊಲಿಸಲು ಧಾವಿಸುವರೊ? ಇದೆಲ್ಲ ಹೇಗೆ ಮತ್ತು ಏಕೆ ಆದವು ?

ಹೊಸದಿಲ್ಲಿ ೫—೭—೧೯೪೭

ವ್ಹಾಯಿಸರಾಯ ಪತ್ನಿಯ ಸಂದರ್ಶನ

ವ್ಹಾಯಿಸರಾಯರ ಪತ್ನಿಯು ಭಂಗಿ ವಸತಿಗೆ ಬಂದುದರ ಬಗ್ಗೆ ಹೇಳಬೇಕೆಂದು ಸಭಿಕರು ತಮ್ಮನ್ನು ಕೇಳುತಿರುವರು. ಈ ಸಂದರ್ಶನ ದಿಂದ ಪರಾವೃತ್ತ ಮಾಡಲು ಪ್ರಯತ್ನಿಸಿದ್ದಾಯಿತು. ಉಪಚಾರ ಮುಂತಾದವುಗಳು ತಮಗೇನು ಗೊತ್ತಿಲ್ಲ. ಅವರು ಬರಲಿಕ್ಕಿಲ್ಲೆಂದು ಭಾವಿಸಲಾಗಿತ್ತು. ವ್ಹಾಯಿಸರಾಯರ ಭೆಟ್ಟಿಗೆ ತಾವು ಹೋದುದೆಲ್ಲ ಕೆಲಸಕ್ಕಾಗಿ; ಪ್ರತಿ ಭೆಟ್ಟಿ ಅವಶ್ಯವಿರಲಿಲ್ಲ. ಆದರೆ ವ್ಹಾಯಿಸರಾಯರ ಪತ್ನಿ ವಸತಿಯನ್ನು ಸಂದರ್ಶಿಸಿದರು. ಅವರು ಯಾವಾಗಿನಂತೆ ಅನೌಪಚಾರವಾಗಿಯೆ ವರ್ತಿಸಿದರು, ಎಲ್ಲವನ್ನೂ ತಿಳಿದುಕೊಳ್ಳಲು ಅವರು ಬಯಸಿದರು. ಎದುರಿಗಿನ ಬಸ್ತಿಯನ್ನೂ ಅವರು ಸಂದರ್ಶಿಸಿದರು. ಜನಸಮ್ಮರ್ದ ಕೂಡಬಹುದೆಂಬ ಅಂಜಿಕೆಯಿಂದ ಅವರಗೂಡ ತಾವು ಹೋಗಲಿಲ್ಲ. ಹಳೆ ದಿಲ್ಲಿ ಕಿಂಗ್ಸವೇದಲ್ಲಿರುವ ಹರಿಜನ ನಿವಾಸವನ್ನು ಅವರು ಸಂದರ್ಶಿಸಿದರು. ಹರಿಜನ ಸೇವಕ ಸಂಘದ ನೇತೃತ್ವದಲ್ಲಿ ಇಲ್ಲಿ, ಹರಿಜನ ತರುಣರಿಗೆ ಶಿಕ್ಷಣವನ್ನು ಕೊಡಲಾಗುತ್ತದೆ.

ಸೀಖರು

ಸೀಖರ ಪರವಾಗಿ ಬಂದ ಪತ್ರವೊಂದನ್ನು ಗಾಂಧೀಜಿ ಉಲ್ಲೇಖಿಸಿದರು. ಪಾಕಿಸ್ತಾನದಲ್ಲಿ ತೀರ ದುರ್ಘಟನೆ ಸಂಭವಿಸಿದರೆ ತಮ್ಮ ಮತ್ತು ಕಾಂಗ್ರೆಸ್ಸಿನ ಸಹಾಯವನ್ನವಲಂಬಿಸಬಹುದಲ್ಲವೇ ಎಂದು ಆ ಪತ್ರದಲ್ಲಿ ಕೇಳಲಾಗಿತ್ತು. ಆ ಪತ್ರಕ್ಕೆ ಉತ್ತರಕೊಡುತ್ತ ಸೀಖರಂಥ ಶೂರ ಪುರುಷರಿಂದ ಈ ಬಗೆಯ ಪ್ರಶ್ನೆ ಕೇಳಲ್ಪಡಬಹುದೆಂದು ತಾವು ಎಣಿಸಿರಲಿಲ್ಲ. ಮನುಷ್ಯರ ಸಹಾಯವನ್ನವಲಂಬಿಸದೆ ಪರಮಾತ್ಮನ ಸಹಾಯವನ್ನೆ ಅವಲಂಬಿಸಬೇಕು. ಪಾಕಿಸ್ತಾನದ ಹೊಸ ರಾಷ್ಟ್ರದಲ್ಲಿ ತಮಗೆ ನ್ಯಾಯ ಸಿಕ್ಕಲಿಕ್ಕಿಲ್ಲ ಎಂಬ ಸಂಶಯವನ್ನು ತಾಳಬೇಡಿರೆಂದೂ ಅವರು ಕೇಳಿಕೊಂಡರು. ಇದೀಗ ಪ್ರಸಿದ್ಧವಾದ ಮಸೂದೆಗೆ ಸಂಬಂಧಿಸಿದ ತಮ್ಮ ಅಭಿಪ್ರಾಯದಂತೆ ಆ ಬಗೆಯ ಸಂಶಯಕ್ಕೆ ಅವಕಾಶವಿಲ್ಲೆಂದು ಅವರು ಹೇಳಿದರು.

ಸ್ವಾತಂತ್ರ್ಯ ಮಸೂದೆ

ಹಿಂದಿನ ಪ್ರಾರ್ಥನಾನಂತರದ ಸಭೆಯಲ್ಲಿ ವ್ಯಕ್ತಪಡಿಸಿದ ವಿಚಾರವನ್ನು ಮುಂದರಿಸಬೇಕೆಂಬ ಮನೀಷೆಯಿದ್ದಿತು, ಆದರೆ ಹಿಂದೀ ಸ್ವಾತಂತ್ರ್ಯ ಮಸೂದೆಯೆಂದು ಕರೆಯಲಾಗುತಿರುವ ಮಸೂದೆ ಪ್ರಸಿದ್ಧವಾದ್ದರಿಂದ ಉಳಿದೆಲ್ಲ ವಿಷಯಗಳನ್ನು ಮುಂದಕ್ಕೆ ಹಾಕಬೇಕಾಗಿದೆ. ಇಪ್ಪತ್ತು ವಿಭಾಗಗಳಷ್ಟು ವಿಸ್ತೃತವಾದ ಮಸೂದೆಯನ್ನು ವಿವರವಾಗಿ ವಿಮರ್ಶಿಸುವ ಇಚ್ಛೆ ಇಲ್ಲ. ಅದರಲ್ಲಿ ದುರುದ್ದೇಶವಿದೆಂಬ ಅನೇಕ ಟೀಕಾಕರ್ತರ ಅಭಿಪ್ರಾಯಕ್ಕೆ ತಾವು ಒಪ್ಪುವದಿಲ್ಲ. ಒಂದು ಹಿಂದುಸ್ತಾನದಲ್ಲಿ ಎರಡು ಹಿಂದುಸ್ತಾನಗಳಾದವೆಂಬ ಸಂಗತಿ ಸಾಕಷ್ಟು ಕೆಡಕಿನದಾಗಿದೆ. ಎರಡೂ ಹಿಂದುಸ್ತಾನಕ್ಕೂ ಅಷ್ಟೇ ಸ್ಥಾನಮಾನ. ಮೊನ್ನೆ ಮೊನ್ನೆಯ ವರೆಗೆ ಅಶಕ್ಯವೆಂದು ತೋರುತಿರುವದನ್ನು ಸತ್ಯಸೃಷ್ಟಿಯಲ್ಲಿ ತಂದುದರ ಶ್ರೇಯಸ್ಸೆಲ್ಲ ಕಾಯದೆಆಜಂ ಜಿನ್ನಾ ಮತ್ತು ಮುಸ್ಲಿಂಲೀಗಿಗೆ ಸಲ್ಲುತಿದೆ. ಮಂತ್ರಿಶಿಷ್ಟಾಯಿಯ ಗಂಭೀರ ಘೋಷಣೆಯನ್ನು ಅವರು ನಿರರ್ಥಕಗೊಳಿಸಿದರು. ವಿಭಜನೆಗೆ ಕಾಂಗ್ರೆಸ್ ಮತ್ತು ಸೀಖರು ಒಪ್ಪಿಗೆ ಕೊಡುವಂತೆ ಒತ್ತಾಯ ತರುವದುವದರಲ್ಲಿಯೂ ಅವರು ಯಶಸ್ವಿಗಳಾದರು. ಸಂಬಂಧಿಸಿದ ಪಕ್ಷಗಳು ಒಪ್ಪಿಗೆ ಕೊಟ್ಟವೆಂದ ಕೂಡಲೆ ಕೆಟ್ಟ ಮಾತು ಒಳ್ಳೆಯದಾಗಿ ಪರಿಣಮಿಸದು. ಆಯಾ ಪಕ್ಷದವರ ಒಪ್ಪಿಗೆಗೆ ಭಿನ್ನಭಿನ್ನ ಕಾರಣಗಳಿದ್ದರೂ ಪರಿಸ್ಥಿತಿಯಲ್ಲಿ ಬದಲಾವಣೆಯೇನಿಲ್ಲ. ಕಾಯದೇ ಅಝಮರಿಗೆ ಬೇಕಾದುದೆಲ್ಲ ಸಿಕ್ಕಲಿಲ್ಲೆಂಬುದೇನು ಸಮಾಧಾನದ ಸಂಗತಿಯಲ್ಲ. ಸ್ವರೂಪದಲ್ಲೇನು ಸ್ವಲ್ಪೂ ಅಂತರವಿಲ್ಲ. ಅವರಿಗೆ ಸಾರ್ವಭೌಮ ರಾಜ್ಯಬೇಕಿತ್ತು. ಪರಿಪೂರ್ಣ ರೀತಿಯಲ್ಲಿ ಅದು ಅವರಿಗೆ ಸಿಕ್ಕಿತು. ಪಾಕಿಸ್ತಾನಕ್ಕೆ ಹಿಂದುಸ್ತಾನದಷ್ಟೆ ಸ್ಥಾನಮಾನಗಳಿವೆ.

ಮಸೂದೆಯನ್ನು ಪುನಃ ಪುನಃ ಓದಿದರೂ ಮೂರೂ ಪಕ್ಷಗಳು ತಿಳಿದೋ ತಿಳಿಯದೆಯೊ ಈ ಮಸೂದೆಯನ್ನವು ಮತಗಣನೆಯ ನಿರ್ಣಯಕ್ಕೆ ಅಧೀನರಾದರು. ಬ್ರಿಟಿಶರು ಸಂಪೂರ್ಣ ಅಧಿಕಾರತ್ಯಾಗ ಮಾಡುವರೆಂಬುದು ನಿಜ. ಆದರೆ ಅವರು ಈ ವಿಭಜನೆಗೆ ತಾವು ಪಾಲಗಾರರಾಗಿರುವರು. ಪರಸ್ಪರ ಭಿನ್ನಧ್ಯೇಯ ಮತ್ತು ಹಿತಸಂಬಂಧಗಳುಳ್ಳ ಎರಡು ಹೊಸ ಸದಸ್ಯರನ್ನು ಕಾಮನ್‌ವೆಲ್ಥ ಕುಟುಂಬದಲ್ಲಿ ಬರ ಮಾಡಿಕೊಂಡರು. ಎಲ್ಲಿಯ ವರೆಗೆ ಗ್ರೇಟ ಬ್ರಿಟನ್‌ದ ಗೂಡ ಅವುಗಳ ಸಂಬಂಧ ವುಳಿಯುವದೊ ಅಲ್ಲಿಯ ವರೆಗೆ ಬ್ರಿಟನ್‌ದ ಕೃತ್ಯಗಳಿಂದಲೆ ಎಲ್ಲವನ್ನು ನಿರ್ಣಯಿಸಬೇಕಾಗುವದಲ್ಲದೆ ಮಸೂದೆಯಲ್ಲಿಯ ಉದಾರಭಾಷೆಯಿಂದಲ್ಲ. ಪರಸ್ಪರ ವಿರುದ್ಧ ಹಿತಸಂಬಂಧಗಳುಳ್ಳವರನ್ನು ಸಮಾನವಾಗಿ ನಡೆಸಿಕೊಂಡು ಎಲ್ಲವನ್ನು ಸರಿಪಡಿಸಿಕೊಂಡು ಹೋಗುವದಕ್ಕೆ ದೈವೀ ಪ್ರಯತ್ನ ಅವಶ್ಯವೆಂಬುದು ಗೊತ್ತಿದೆ. ಆದರೆ ಘಟನಾ ಸಮಿತಿಯು ಘಟನೆಯ ಕಾಯದೆಯನ್ನು ಸ್ವೀಕರಿಸಿದ ಕೂಡಲೆ ಯಾವದೊಂದು ಭಾಗ ಸಂಪೂರ್ಣ ಸ್ವಾತಂತ್ರ್ಯವನ್ನು ಸಾರಿದರೆ ಮುಂದೇನು ?

ಸಂಸ್ಥಾನಿಕರ ಸಂಬಂಧ ತೀರ ಅಸಮಾಧಾನಕರ ಪರಿಸ್ಥಿತಿಯಲ್ಲಿಯೆ ಉಳಿದಿದೆ, ಮಂತ್ರಿಶಿಷ್ಟಾಯಿಯ ಪ್ರಯತ್ನ ಪ್ರಾರಂಭದಿಂದಲೂ ಬ್ರಿಟಿಶ್ ಸರಕಾರದಲ್ಲಿ ಎಷ್ಟೇ ಅಡಚಣಿಗಳು ಬಂದರೂ ನ್ಯಾಯ್ಯವಾದುದನ್ನು ಮಾಡಬೇಕೆಂಬ ಧೈರ್ಯವೇ ಇರಲಿಲ್ಲೆಂದು ಸಾರಲು ಯಾವ ಪ್ರತ್ಯವಾಯವೂ ಇಲ್ಲ. ಈ ಪರಿಸ್ಥಿತಿಯಲ್ಲಿ ಬ್ರಿಟಿಶರ ಸತ್ವಪರೀಕ್ಷೆಯ ಕಾಲಬಂದಿದೆ. ಏನೇ ಅನಿಷ್ಟ ಸಂಭವಿಸಿದರೂ ಬ್ರಿಟಿಶರೆ ನಿಂದೆಗೆ ಪಾತ್ರರಾಗುವರು. ಮಸೂದೆಯಿಂದ ಗಂಡಾಂತರದ ಪರಿಸ್ಥಿತಿಯೇನು ಮಾಯವಾಗಿಲ್ಲ. ಸಂಸ್ಥಾನ ಪ್ರಜೆಗಳ ಹಿತಸಂಬಂಧಗಳ ಇಚ್ಛೆ ಮನಸ್ಸಿನಲ್ಲಿದ್ದರೆ ಎರಡೂ ಹೊಸ ಸಾಮಂತ ಸರಕಾರಗಳಿಗೆ ಪರಂಪರಾಗತ ನಿರಂಕುಶ ಸೊತ್ತು ಪ್ರಾಪ್ತವಾದಂತಾಗಿದೆ; ಹಾಗಿದ್ದರೆ ಪ್ರಜೆಗಳೇ ನಿಜವಾದ ಒಡೆಯರಾಗಿದ್ದು ಸಂಸ್ಥಾನಿಕರು ಅವರ ವಿಶ್ವಸ್ತರು, ಕೇವಲ ಹೆಸರಿಗಲ್ಲ ಆದರೆ ಕಾಯದೆ ಮತ್ತು ವಸ್ತುಸ್ಥಿತಿಗನುಸಾರವಾಗಿ. ಕಾಯದೇ ಅಝಮರು ಮತ್ತು ಮುಸ್ಲಿಂ ಲೀಗಿನವರು ತಮ್ಮ ವಾರಸಾದ ಕೃತ್ಯದಿಂದ ಮತ್ತು ಪ್ರತ್ಯೇಕೀಕರಣದಿಂದ, ಮುಸ್ಲಿಮರನ್ನು ಅಷ್ಟೇ ಅಲ್ಲ ಮುಸ್ಲೀಮೇತರರನ್ನು ಯಾವ ರೀತಿಯಿಂದ ನಡೆಸಿಕೊಳ್ಳುತಿರುವರೆಂಬುದನ್ನು ನಿರ್ಣಯಿಸಲು ಜಗತ್ತಿಗೇ ಒಂದು ಬಗೆಯಿಂದ ಆಮಂತ್ರಣ ಕೊಟ್ಟಂತಾಗಿದೆ. ನಿಶ್ಚಯವಾಗಿ ಅವರಲ್ಲಿ ಅನೇಕ ಪಂಥಗಳಿವೆ. ಮುಖ್ಯವಾಗಿ ಸುನ್ನಿಗಳು ಮತ್ತು ಶಿಯಾಗಳು; ರಾಜಕೀಯ ದೃಷ್ಟಿಯಿಂದ ರಾಷ್ಟ್ರೀಯರು ಮತ್ತು ಲೀಗಿನವರು, ಬಲೂಚಿಗಳು ಸಿಂಧಿಗಳು, ಪಠಾಣರು, ಪಂಜಾಬಿಗಳು, ಬಂಗಾಲಿಗಳು ಹಿಂದೀ ಒಕ್ಕೂಟದಲ್ಲಿಯ ಮುಸಲ್ಮಾನರು. ದಿನಾಲು ಅಸಂಖ್ಯ ಹಿಂದು ಮತ್ತು ಸೀಖ ಅಲ್ಪಸಂಖ್ಯಾಕರು ತಮ್ಮನ್ನು ಮುತ್ತುತಿರುವರು. ಕ್ರಿಶ್ಚನ್ ಮತ್ತು ಪಾರ್ಸಿಗಳೂ ಅನೇಕ ಸಲ ಪೀಡಿಸುತಿರುವರು. ಅವರ ಹಿಂದೂ ಬಾಂಧವರಿಂದ ಅಸ್ಪೃಶ್ಯವರ್ಗದವರನ್ನು ದೂರೀಕರಿಸುವ ಪ್ರಯತ್ನದ ಅಂಜಿಕೆಗೆ ಏನಾದರೂ ತಳಬುಡವಿದೆಯೇ ಎಂದು ಕೇಳಲಾಗುತ್ತದೆ. ಮುಸಲ್ಮಾನೇತರರಿಗೆ ವಿಶಿಷ್ಟತರದ ಇಸ್ಲಾಮದೀಕ್ಷೆಯನ್ನು ಕೊಡುವುದಕ್ಕೆ ಪಾಕಿಸ್ತಾನದ ಸಾಧನವನ್ನು ಉಪಯೋಗಿಸಲಾಗುತಿದೆಯೇ? ಒಬ್ಬನೇ ಒಬ್ಬ ಪರಮಾತ್ಮನಲ್ಲಿ ಅಚಲ ಶ್ರದ್ಧೆಯಿಡುವದೆ ನಿಜವಾದ ಧರ್ಮ. ಅಂಥ ಪರಂಪರೆಗಳಿಗೆ ಜಗತ್ತು ಬೇಸತ್ತು ಹೋಗಿದ್ದು ಅವನ್ನೆಲ್ಲ ಬಿಟ್ಟುಗೊಡಬೇಕೆಂಬ ವೃತ್ತಿ ಬಲಿತಿತ್ತು. ಸೃಷ್ಟಿಕರ್ತನ ಅಸ್ತಿತ್ವವನ್ನು ಅಲ್ಲಗಳೆಯುವಂಥ ಗೊಂದಲದ ಪರಿಸ್ಥಿತಿಯೂ ಇದರಿಂದ ಉದ್ಭವವಾಗಿತ್ತು. ಆದರೆ ಆ ಪರಿಸ್ಥಿತಿ ಸುದೈವದಿಂದ ಬದಲಾಗುತಿದ್ದು ಸೃಷ್ಟಿಕರ್ತನಲ್ಲಿ ಅತ್ಯಂತಿಕ ಶ್ರದ್ಧೆ ಜನತೆಯಲ್ಲಿ ಉಂಟಾಗಹತ್ತಿದೆ. ಆ ಸಾರ್ವತ್ರಿಕ ಶ್ರದ್ಧೆಯ ಪುನರುಜ್ಜೀವನದ ಚಳವಳಿಯ ಧುರೀಣತ್ವವನ್ನು ವಹಿಸಲು ಪಾಕಿಸ್ತಾನದ ಇಸ್ಲಾಮ ಮುಂದೆ ಬರುವದೊ? ಇಲ್ಲವೆ ಪರಮಾತ್ಮನ ಹೆಸರಿನಲ್ಲಿಯೆ ಅದು ಅಜ್ಞಾನಕೂಪದಲ್ಲಿ ಬಿದ್ದು ಪರಮಾತ್ಮನ ಅಸ್ತಿತ್ವವನ್ನೆ ಅಲ್ಲಗಳೆಯುವದೆ? ಈ ಸಂದೇಹಗಳೆಲ್ಲ ಬೇಗ ನಿವಾರಿಸಲ್ಪಡುವವಾಗಿ ತಮ್ಮ ಆಸೆ.

ಹಿಂದೂ ಧರ್ಮದ ಸತ್ವಪರೀಕ್ಷೆ

ಬುದ್ಧಿಪೂರ್ವಕವಾಗಿಯಲ್ಲವಿದ್ದರೂ ಕಾಯದೆ ಅಝಮರು ಹಿಂದೂ ಧರ್ಮದ ಸತ್ವಪರೀಕ್ಷೆಯನ್ನು ನಡೆಸಿರುವರು. ಕೊಳೆಯನ್ನೆಲ್ಲ ಕಳಚಿಹಾಕಿ ಹಿಂದೀ ಒಕ್ಕೂಟದಲ್ಲಿಯ ಹಿಂದೂ ಧರ್ಮ ಅತ್ಯಂತ ನ್ಯಾಯ್ಯವಾಗಿದ್ದು ಸಾರ್ವತ್ರಿಕ ಧರ್ಮವಾಗಿದೆಂದು ತೋರಿಸಿ ಕೊಡುವ ಸುವರ್ಣ ಸಂಧಿ ಹಿಂದುಗಳಿಗೆ ದೊರೆತಿದೆ. ಹಿಂದುಸ್ತಾನ ಒಂದು ರಾಷ್ಟ್ರವೆಂದು ಭಾವಿಸುವವರಿಗೆಲ್ಲ ಅಲ್ಪಸಂಖ್ಯಾಕರು ಮತ್ತು ಬಹುಸಂಖ್ಯಾಕರ ಪ್ರಶ್ನೆಯೆ ಉದ್ಭವಿಸುವದಿಲ್ಲವೆಂದು ನಿನ್ನೆ ದಿನವೇ ತಾವು ಹೇಳಿದ್ದು. ಎಲ್ಲರಿಗೂ ಸಮಾನ ಹಕ್ಕುಬಾಧ್ಯತೆಗಳಿದ್ದು ಸಮಾನವಾಗಿ ನಡೆಸಿಕೊಳ್ಳಲು ಎಲ್ಲರೂ ಪಾತ್ರರು. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಹಿಂದೀ ಸ್ವಾತಂತ್ರ್ಯ ಮಸೂದೆಗೆ ಸಂಬಂಧಿಸಿದ ಎಲ್ಲ ಪಕ್ಷಗಳ ಕೊನೆಯ ಪರೀಕ್ಷಾ ಸಮಯ ಈ ಮಸೂದೆಯಿಂದ ಪ್ರಾಪ್ತವಾಗಿದೆಂದು ಹೇಳಬಹುದು. ಎಲ್ಲ ಬಗೆಯ ಅನಿಷ್ಟಗಳನ್ನು ಹೊಡೆದುಹಾಕಿ, ಶತ್ರುಭಾವವನ್ನು ಬಿಟ್ಟುಗೊಟ್ಟು ಮಿತ್ರತ್ವವನ್ನು ವಹಿಸಿದ್ದಾದರೆ ಮತ್ತು ಪರಸ್ಪರರಲ್ಲಿಯ ಅಪನಂಬಿಕೆ ವಿಶ್ವಾಸದಲ್ಲಿ ಪರಿಣಮಿಸಿದ್ದಾದರೆ, ಕೆಡಕೆಂದು ತಾವು ಹೇಳಿದ ಪಾಕಿಸ್ತಾನವೆ ಬಹಳ ಸುಖಪ್ರದವಾಗಿ ಪರಿಣಮಿಸಬಲ್ಲದು.

ಹೊಸದಿಲ್ಲಿ ೭—೭—೧೯೪೭

ಪ್ರಾರಂಭದಲ್ಲಿ ಗಾಂಧೀಜಿ ಸರಹದ್ದದಲ್ಲಿ ಮತಗ್ರಹಣವು ಹಿಂಸೆಯಿಲ್ಲದೆ ಸಾಗಬಹುದೆಂದು ಆಶಿಸಿದರು. ಬಾದಶಹಾಖಾನ ಮತ್ತು ಖುದಾಯಿ ಖಿದಮತಗಾರರು ಅಹಿಂಸಾ ದೀಕ್ಷೆ ತೆಗೆದುಕೊಂಡವರು. ತಮ್ಮ ವಿಶ್ವಾಸದಂತೆ ನಡೆದೆವೆಂಬದನ್ನು ಅವರು ತೋರಿಸತಕ್ಕದು. ಮುಸ್ಲಿಂ ಮುಸ್ಲಿಂರಲ್ಲಿಯ ಪ್ರಶ್ನೆಯೇ ಇರುವದರಿಂದ ಮುಸ್ಲಿಂ ಲೀಗಿನವರಿಂದಲಾದರೂ ಇದನ್ನು ಏಕೆ ಅಪೇಕ್ಷಿಸಲಾಗದು.?

ಹಿಂದಿನದೆಲ್ಲ ಅಲ್ಲಗಳೆಯುವದು

ಸಂಪೂರ್ಣ ಸ್ವಾತಂತ್ರ್ಯ ಬರಲಿರುವ ಶುಭ ಸಮಯದಲ್ಲಿರಬೇಕಾದ ಉತ್ಸಾಹ ಇಲ್ಲದಿರುವದಕ್ಕೆ ಏನಾದರೂ ದೋಷವಿರಲಿಕ್ಕೆ ಬೇಕು. ದೇಶವನ್ನು ಇಬ್ಭಾಗವಾಗಿ ಒಡೆದು ಎರಡು ಸಶಸ್ತ್ರ ಶಿಬಿರಗಳನ್ನಾಗಿ ಪರಿವರ್ತಿಸಿದ್ದಕ್ಕಾಗಿಯೇ ದೇಶದಲ್ಲಿ ಉತ್ಸಾಹ ಕಂಡು ಬರುವದಿಲ್ಲೆಂಬುದು ಖಂಡಿತ ಏಕೆಂದರೆ ಎರಡೂ ಭಾಗಗಳಿಗೆ ಒಂದೇ ಸಾಮಾನ್ಯ ಸಂರಕ್ಷಕ ಸೈನ್ಯದ ಸಂಭವವಿಲ್ಲ. ಸೈನ್ಯವನ್ನು ವಿಭಜಿಸಲಾಗುವದು. [illegible] ಆಂತರಿಕ ಬಡಿದಾಟಗಳು ಇಲ್ಲ[illegible] ಅವನ್ನು ಹತ್ತಿಕ್ಕಲು ಸೈನ್ಯವಿಲ್ಲೆಂದೂ [illegible] ವಿನ ವಿರುದ್ಧ ಸಂರಕ್ಷಕ ಸೈನ್ಯ [illegible] ಯಿಲ್ಲೆಂದೂ ಒಳ್ಳೆ ಅಧಿಕೃತವಾಗಿ ಹೇಳಲಾಗುತಿದ್ದಿತು. ಆದರೀಗ! ಸೈನ್ಯದ ಬೆಳ[illegible] ಮೀರಿ ಹೆಚ್ಚಿಸಲಾಗಿದೆ. ಬೇಗ [illegible] ಮಟ್ಟಿಗೆ ಕಡಿಮೆಯಾಗುವ ಲಕ್ಷಣಗಳು ತೋರುವದಿಲ್ಲ; ಇಷ್ಟೇ ಅಲ್ಲ ಈ ಸೈನ್ಯ ಪಾಕಿಯ [illegible] ಮತ್ತಷ್ಟು ಹೆಚ್ಚುವದೆಂದು ತಮಗೆ ಎನಿಸುತ್ತದೆ. ಇಷ್ಟೆಲ್ಲ ಏತಕ್ಕೆ ಪಮ್ಮ ಪಮ್ಮಲ್ಲಿಯೆ [illegible] ದಲಿಕ್ಕೆ! ಶಸ್ತ್ರಾಸ್ತ್ರಗಳನ್ನು ಹೆಚ್ಚಿಸಿಕೊಳ್ಳುವಲ್ಲಿ ನಗೆಗೇಡಾದ ಸ್ಪರ್ಧೆಯೆ ನಡೆಯುತಿದೆ. ರಾಷ್ಟ್ರ ರಚನೆಗೆ ವೆಚ್ಚವಿಲ್ಲ, ಶಿಕ್ಷಣಕ್ಕಿಲ್ಲ ಬೇರೆ ಅಂಥ ಕೆಲಸಗಳಿಗೂ ವೆಚ್ಚ ಮಾಡುವದಿಲ್ಲ. ಎಲ್ಲವೆಲ್ಲ ಪರಸ್ಪರರ ಹತ್ಯೆಗಾಗಿ! ಇದರಲ್ಲಿ [illegible] ಇಲ್ಲವೆ ಗೌರವದ ಕಾರಣವೇನೂ ಕ[illegible]ಲ್ಲ. ಮುನ್ನೋಟವೆಲ್ಲ ವಿಷಾದಕರವಿದೆ. ಹಿಂದುಸ್ತಾನದ ಸ್ವಾತಂತ್ರ್ಯವೆಂದರೆ, ಅತ್ಯಂತ [illegible] ದುದೆಂದು ಈ ವರೆಗೆ ಕಲಿತುದನ್ನೆಲ್ಲ [illegible] ದುವದರ ಸಿದ್ಧತೆಯೇ? ಅತ್ಮಶ್ಲಾಘನೆ ಮಾಡಿಕೊಳ್ಳುವದರ ಬದಲು ಆಳವಾಗಿ ಆತ್ಮಪರೀಕ್ಷಣೆ, ಆತ್ಮನಿರೀಕ್ಷಣೆ ಮತ್ತು ಆತ್ಮಶೋಧನೆ ಮಾಡಿಕೊಳ್ಳುವ ಸಮಯವೀಗ ಪ್ರಾಪ್ತವಾಗಿದೆ. ಕಳೆದ ಮೂವತ್ತು ವರ್ಷಗಳ ಸ್ವಾತಂತ್ರ್ಯ ಸಮರದ ಮುಖ್ಯ ನಾಯಕರೆಂದು ತಾವು ಈ ಎಲ್ಲ ಪ್ರಶ್ನೆಗಳನ್ನು ಮನಸ್ಸಿನಲ್ಲಿಯೆ ಕೇಳಿಕೊಳ್ಳುತ್ತೇವೆ. ಅಷ್ಟೊಂದು ಪ್ರಶಂಸೆಗೆ ಪಾತ್ರವಾಗಿದ್ದ ಹೋರಾಟ ಈ ರೀತಿ ಅಕೀರ್ತಿಕರ ಕೊನೆಯಲ್ಲಿ ಪರಿಣಮಿಸುವದೊ?

ಅನಂತರ ಅವರು ಭಗವನ್ 'ತಮಸೋಮಾ ಜ್ಯೋತಿರ್ಗಮಯ' ಎಂಬ ಋಷಿ ವಾಕ್ಯವನ್ನು ಉದ್ಘೋಷಿಸಿದರು.

ಕೆಲವು ಯುಕ್ತವಾದ ಸೂಚನೆಗಳು

ಒಮ್ಮೊಮ್ಮೆ ಸ್ವಾತಂತ್ರ್ಯವನ್ನು ಗಳಿಸುವುದಕ್ಕಿಂತ ಉಳಿಸಿಕೊಳ್ಳುವದು ಕಷ್ಟ. ಕಾಂಗ್ರೆಸ್ಸು ಭಾರತಕ್ಕೆ ಸ್ವಾತಂತ್ರ್ಯವನ್ನು ಗೆದ್ದುಕೊಟ್ಟಿದೆ. ದೇಶಕ್ಕಾಗಿ ಗೆದ್ದುಕೊಟ್ಟ ಈ ಅಮೂಲ್ಯ ಸ್ವಾತಂತ್ರ್ಯವನ್ನು ಕಾಯ್ದುಡಲು ಕಾಂಗ್ರೆಸ್ಸು ಶಕ್ತವಾಗುವುದೋ ಇಲ್ಲವೋ ಎಂಬುದು ಇನ್ನು ಮೂರು ವರ್ಷಗಳಲ್ಲಿ ತಿಳಿಯಬಹುದಾಗಿದೆ. ಈ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಕಾಂಗ್ರೆಸ್ಸು ತನ್ನ ತಂತ್ರವನ್ನು ಬದಲಿಸಬೇಕು. ಇಲ್ಲಿಯ ವರೆಗೆ ಹೇಳಿಕೆ ಕೊಡುವುದು, ಭಾಷಣ ಮಾಡುವುದು, ಗದ್ದಲವೆಬ್ಬಿಸುವದು ಎಲ್ಲವೂ ಅಗತ್ಯವಾಗಿದ್ದವು. ಹೊಸ ಪರಿಸ್ಥಿತಿಯಲ್ಲಿ ಮೌನವಾಗಿ ಕುಳಿತು ಯೋಜನೆಗಳನ್ನು ರಚಿಸಬೇಕಾಗಿದೆ, ಶಿಸ್ತನ್ನೆ ಇಟ್ಟುಕೊಳ್ಳಬೇಕಾಗಿದೆ ಮತ್ತು ವಾಕ್ಸಂಯಮವನ್ನು ಪಾಲಿಸಬೇಕಾಗಿದೆ. ಮೊದಲಿನಂತೆಯೇ ಕಾರ್ಯಾಲಯಗಳಲ್ಲಿಯೂ ಕಾಂಗ್ರೆಸ್ಸಿಗರು ಬಹಳ ಮಾತಾಡುತ್ತಾರೆಂದು ಸಾಮಾನ್ಯರ ಅಭಿಪ್ರಾಯ. ಗತಿಸಿಹೋದ ಲಾರ್ಡ್ ವಿಲ್ಲಿಂಗ್ಡನ್ನರು ಹೇಳುತ್ತಿದ್ದರು.—

"ಸಮರ್ಥ ರಾಜತಂತ್ರಜ್ಞನು ತನ್ನ ಬಾಯಿಯನ್ನು ಮುಚ್ಚಿಕೊಂಡಿರಬೇಕು, ಭಿಕ್ಷಾಪಾತ್ರೆಯನ್ನು ತೆರೆದಿಟ್ಟುಕೊಂಡಿರಬೇಕು" ಎಂದು. ನಮ್ಮ ರಾಜಕಾರಣಿಗಳು-ಅದರಲ್ಲೂ ವಿಶೇಷವಾಗಿ ಸರಕಾರೀ ಕೆಲಸದಲ್ಲಿ ನಿರತರಾದವರು--ತಮ್ಮ ಬಾಯಿ ಮತ್ತು ಭಿಕ್ಷಾಪಾತ್ರೆಗಳೆರಡನ್ನೂ ಮುಚ್ಚಿಕೊಂಡಿರಬೇಕು. ಹಿಂದೆ ಬರಿಯ ಹೊಣೆಯಿಲ್ಲದ ಹರಟೆ ಹೊಡೆಯುವದರಿಂದ ಯಾವ ಯೋಜನೆಯೂ ಸಾಧಿಸದು; ಕಾಂಗ್ರೆಸ್ಸೇತರ ತಜ್ಞರೊಡನೆ ಸೇರುವುದಿಲ್ಲ, ಅವರ ಆಲೋಚನೆಯನ್ನು ತೆಗೆದುಕೊಳ್ಳುವುದಿಲ್ಲ. ಈಗಲಾದರೂ ಸ್ವಗೃಹವನ್ನು ಸರಿಪಡಿಸಲು ತಡವಾಗಿಲ್ಲ, ಹಾಗೆ ಮಾಡಿ ಆದದ್ದಾಗಲೆಂದು ಎಲ್ಲವನ್ನೂ ಎದುರಿಸಿ ನಿಲ್ಲಬೇಕು. ಕಾಂಗ್ರೆಸ್ಸೇತರ ತಜ್ಞರ ಸಾಮರ್ಥ್ಯವನ್ನೂ ಒಳಕೊಳ್ಳಬೇಕು.

ಅಧಿಕಾರ ಬದಲಾವಣೆಯು ಕಾಂಗ್ರೆಸ್ಸಿನ ಮುಖ್ಯ ಗುರಿಯಾಗಿತ್ತು. ಅಗಸ್ಟ ೧೫ ರೊಳಗೆ ಆ ಧ್ಯೇಯವು ಸಾಧಿಸುತ್ತದೆ. ಅದುದರಿಂದ ಕಾಂಗ್ರೆಸ್ಸು ತಾನು ಗೆದ್ದುದನ್ನು ತಹಬಂದಿಗೆ ತರಬೇಕಾಗಿದೆ, ದೇಶದಲ್ಲಿ ಅತಿತ್ವರಿತ ಗತಿಯಿಂದ ಆಗುತ್ತಿರುವ ಆರ್ಥಿಕ ಅಧಃಪತನವನ್ನು ತಡೆಯಬೇಕಾಗಿದೆ, ಮತ್ತು ತನ್ನ ರಕ್ಷಣಾಬಲವನ್ನು ಕಟ್ಟಬೇಕಾಗಿದೆ. ಘಟನಾ ರಚನೆಯ ಎಡೆಯೊಡೆವ ವೇಗವನ್ನು ಇಳಿಸಬೇಕಾಗಿದೆ. ಭಾರತದ ರಕ್ಷಣೆಯ ಬಗ್ಗೆ, ಆರ್ಥಿಕ ಯೋಜನೆಗಳಿಗಾಗಿ, ಕೈಗಾರಿಕೆಯ ಯೋಜನೆಗಳ ತಯಾರಿಕೆಗೆಂದು ಮತ್ತು ಸರಕಾರದ ಕಾರ್ಯಾಲಯದ ರಚನೆಗೋಸ್ಕರ ಬೇರೆ ಬೇರೆ ತಜ್ಞ ಸಮಿತಿಗಳನ್ನು ಏರ್ಪಡಿಸಬೇಕಾಗಿದೆ. ಉತ್ಪನ್ನವನ್ನು ಹೆಚ್ಚಿಸಲು ಶಕ್ತಿಮೀರಿ ಪ್ರಯತ್ನಿಸಬೇಕು. "ಔದ್ಯೋಗೀಕರಣ ಮಾಡು, ಇಲ್ಲವೆ ಮಡಿ" ಎಂಬ ಕೂಗಿನ ಬದಲು "ಉತ್ಪಾದನೆಮಾಡು ಇಲ್ಲವೆ ಮಡಿ" ಎಂಬ ಕೂಗು ಇಂದು ಅವಶ್ಯ. ಈಗಿನ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ಎಲ್ಲ ವಿಧದ ಉತ್ಪಾದನೆಯೂ ಇಳಿದು ಹೋಗಿದೆ. ಆ ಮೇಲೆ ಈ ದೇಶದ ಸಂಬಳದ ರೀತಿಯನ್ನು ಕೂಡಲೆ ಸರಿಪಡಿಸಬೇಕು. ಇದೊಂದೇ ಔದ್ಯೋಗಿಕ ಶಾಂತಿಯನ್ನೂ ಉತ್ಪಾದನದ ವೇಗವನ್ನು ಹೆಚ್ಚಿಸಬಲ್ಲದು. ವಾಣಿಜ್ಯ ಮತ್ತು ಹಣಕಾಸಿನ ಖಾತೆಗಳು ಭಾರತಕ್ಕೆ ಹೊಸ ಆಯಾತ ಧೋರಣವನ್ನು ಯೋಜಿಸಿವೆ. ಆ ಧೋರಣವು ಅತಿ ಪ್ರಸರಣಕ್ಕೂ ಅದರಿಂದುಂಟಾಗುವ ಪರಿಣಾಮಗಳಿಗೂ ದೇಶವನ್ನು ಗುರಿಮಾಡುವುದು. ಆರ್ಥಿಕ ಯೋಜನೆಯು ಈ ದೇಶದ ಆಯಾತ ನಿರ್ಯಾತಗಳ ಧೋರಣವನ್ನು ಎಚ್ಚರಿಕೆಯಿಂದ ಸಿದ್ಧಪಡಿಸಬೇಕು.

ಔದ್ಯೋಗೀಕರಣದ ಬಗ್ಗೆ ಬಹಳ ಮಾತು ಕೇಳಿಬರುತ್ತದೆ. ವಾಚಾಳಿಗಳು ತಮ್ಮನ್ನೂ ದೇಶವನ್ನೂ ಮೋಸಗೊಳಿಸುತ್ತಿದ್ದಾರೆ. ಮೊದಲನೆಯದಾಗಿ ಔದ್ಯೋಗೀಕರಣವನ್ನು ಸಾಧ್ಯವಾಗಿ ಮಾಡಲವಶ್ಯವಾದ ದೊಡ್ಡ ದೊಡ್ಡ ಸಾಮುಗ್ರಿಗಳು ಯುರೋಪ ಅಮೇರಿಕೆಗಳಲ್ಲಿ ದೊರೆಯದಾಗಿವೆ. ಎರಡನೆಯದಾಗಿ ಈ ದೇಶದಲ್ಲಿ ಸಿಮೆಂಟು, ಇಟ್ಟಿಗೆ, ಕಬ್ಬಿಣ, ಉಕ್ಕು ಮತ್ತು ಕಟ್ಟಿಗೆಗಳು ಬೇಕಾದಷ್ಟಿಲ್ಲ. ದೊಡ್ಡ ದೊಡ್ಡ ಯಂತ್ರ ಸಾಮುಗ್ರಿಗಳು ದೊರೆತರೂ ಬೇಕಾದಷ್ಟು ಕಟ್ಟಡದ ಸಾಮಾನುಗಳು ಇಲ್ಲವಾಗಿ ಕಾರಖಾನೆಗಳನ್ನು ಕಟ್ಟಲು ಅಸಾಧ್ಯವಾಗಿದೆ; ಯಂತ್ರ ನಿರ್ಮಿತಿಗವಶ್ಯವಾದ ಮೌಲಿಕ ಸಾಮುಗ್ರಿಗಳೂ ಉಪಕರಣಗಳೂ ಇಲ್ಲ. ಕಡೆಯದಾಗಿ ರೈಲಿನ ಮೂಲಕವಾಗಿ ವಸ್ತುಗಳ ಸಾಗಿಗೆ ಕೂಡ ಕ್ರಮವಾಳಿ ಇಳಿದುಹೋಗಿದೆ. ಎಲ್ಲವೂ ಸ್ತಬ್ಧವಾದಂತಿದೆ.

ಭಾರತ ಸರಕಾರದ ಕಾರ್ಯಭವನವು ಗೊಂದಲ ತುಂಬಿದ್ದಾಗಿ ಯಾವ ಕೆಲಸವನ್ನೂ ಬೇಗ ದ[illegible] ಸಲು ಅನುಗೊಡುತ್ತಿಲ್ಲ. ಕಡಿ[illegible] ಪುನಸ್ರಚನೆಯನ್ನು ಮಾಡಲೇಬೇ[illegible] ವಾದ ಕೆಲಸಗಾರರನ್ನು ತೆಗೆ[illegible] ವನ್ನು ಕಾಂಗ್ರೆಸ್ಸು ತೋರಿ[illegible]

ರಾಷ್ಟ್ರಧ್ವಜ

ಗಾಳಿಯಲ್ಲಿ ಅತ್ತಿತ್ತ ಆಡುವ ರಾಷ್ಟ್ರಧ್ವಜವನ್ನು ಕಂಡಾಗ ಯಾರಿಗೆ ಹೆಮ್ಮೆಯು ಹೃದಯದಿಂದ ಸ್ಫುರಿಸುವುದಿಲ್ಲವೋ ತಾವು ಉನ್ನತರೆನಿಸುವುದಿಲ್ಲವೋ ನೆಟ್ಟನೆ ನಿಂತು "ನಾವು ಸ್ವತಂತ್ರ ಜನರು" ಎಂದು ಆಕಾಶದೆತ್ತರ ಘೋಷಿಸಬೇಕೆನಿಸುವುದಿಲ್ಲವೋ ಅವರು ನಿಜವಾಗಿಯೂ ಹೃದಯಹೀನರೇ ಸರಿ. ಬ್ರಿಟಿಶರ "ಯೂನಿಯನ್ ಜಾಕ"ನ ಅರ್ಥವನ್ನು ಹೇಗೆ ಗ್ರಹಿಸಿರುವೆಯೆಂದು ಅಂಗಹೀನನಾದ ಒಬ್ಬ ಬ್ರಿಟಿಶ ರಣಾಗ್ರಣಿಯನ್ನು ಕೇಳಿರಿ, ಕೆಂಪು ನಿಶಾನೆಯ ಅರ್ಥವೇನೆಂದು ಸೋವಿಯಟ್ಟಿನ ಆಹವಮಲ್ಲನೊಬ್ಬನನ್ನು ಕೇಳಿರಿ. ರಣಾಗ್ರಣಿಗಳಿಗೆ ಮತ್ತು ಆಹವಮಲ್ಲರಿಗೆ ಮಾತ್ರವಲ್ಲ; ಸಾಮಾನ್ಯ ಮನುಷ್ಯನಿಗೂ ಕೂಡ ತನ್ನ ರಾಷ್ಟ್ರಧ್ವಜವು ಸ್ವಾತಂತ್ರ್ಯದ ಮಾನ್ಯವೂ ಪ್ರಿಯವೂ ಆದ ಒಂದು ಪ್ರತೀಕ, ತನ್ನ ದೇಶದ ಸಾಮರ್ಥ್ಯ ಮತ್ತು ಮಹತ್ವದ ಒಂದು ಕುರುಹು. ಅವನ ಮನಸ್ಸಿನಲ್ಲಿ ರಾಷ್ಟ್ರಧ್ವಜವನ್ನೆಣಿಸಿದೊಡನೆಯೇ ಮೃದುವಾದ ಆಶೆಗಳು, ಪರಾಕ್ರಮದ ಕಾರ್ಯಗಳು, ದೀರ್ಘವಾದ ಮತ್ತು ಬಹುಶ್ರಮದ ಯುದ್ಧಗಳು, ಖೇದಕರವಾದ ಸೋಲುಗಳು, ವೈಭವಯುಕ್ತವಾದ ವಿಜಯಗಳು— ಇವುಗಳ ಆಲೋಚನೆಗಳು ಉದ್ಭವಿಸುವವು. ಅದನ್ನು ಅಗೌರವದಿಂದ ರಕ್ಷಿಸಲು ಅವನ 'ಪಿತೃಪಿತಾಮಹರು ತಮ್ಮ ಜೀವವನ್ನೇ ಬಲಿಗೊಟ್ಟಿದ್ದಾರೆ. ಅವನು ಅದನ್ನು ಪ್ರೀತಿಸುವನು. ಅದನ್ನು ಅವನು ತನ್ನದೆನ್ನುವನು. ಅದು ಅವನದೇ ಹೌದು. ಮತ್ತು ಅತ್ಯಂತ ಗಂಭೀರವಾಗಿ ನೋಡಿದರೆ ಒಂದು ದೃಷ್ಟಿಯಿಂದ ಅವನು ಅದಕ್ಕೆ ಸೇರಿದವನು. ಆ ಧ್ವಜವು ತನ್ನವರ ಹಿಂದಿನ ರಾಷ್ಟ್ರೀಯ ಆಕಾಂಕ್ಷೆಗಳು, ದುಃಖಾನುಭವಗಳು, ಹೆಣಗಾಟಗಳು ಮತ್ತು ಅಂತ್ಯದ ವಿಜಯ—ಇವುಗಳಲ್ಲಿ ಬೇರು ಬಿಟ್ಟಿದೆಯೆಂಬುದನ್ನವನು ಬಲ್ಲನು. ಅವನ ಪಾಲಿಗೆ ಅದೊಂದು ಬರಿಯ ವಸ್ತ್ರದ ವಸ್ತುವಲ್ಲ; ಅದು ನೆನಪಿನಿಂದ ಹೊಸೆದು ಹುರಿಮಾಡಿದ ಇತಿಹಾಸದ ದಾರಗಳಿಂದ ನೇಯಲಾದುದು.

ಅಮೂಲ್ಯ ವಸ್ತು

ಹಳದಿ-ಬಿಳಿ-ಹಸಿರುಗಳ ತ್ರಿವರ್ಣ ಧ್ವಜವು ನೂರಾರು ಸಾವಿರಾರು ಹಿಂದೀ ರಾಷ್ಟ್ರೀಯರಿಗೆ ಅಂತಹ ಅಮೂಲ್ಯ ವಸ್ತುವಾಗಿದೆ. ಅದು ಬಂಧನದಿಂದ ನಮ್ಮನ್ನು ಬಿಡಿಸಿದೆ. ಶಾಂತವೀರರಾಗಿ ಲಾಠಿ ಪ್ರಯೋಗ, ದೊಡ್ಡ ಬಂದೂಕುಗಳ ಗುಂಡಿನೇಟು—ಇವುಗಳನ್ನು ಎದುರಿಸುವ ಸ್ಫೂರ್ತಿಯನ್ನು ಅದು ನಮಗೆ ಕೊಟ್ಟಿದೆ. ಬಾವುಟವನ್ನೇರಿಸಿದರೆ ಬಂಧನ ಶಿಕ್ಷೆಗಳಿಗೊಳಗಾಗಬೇಕಾಗಿದ್ದ ಕಾಲದಲ್ಲಿ ನಮ್ಮ ನಿರ್ಭೀತ ನಾಯಕರು ಸಾರ್ವಜನಿಕ ಸ್ಥಳಗಳಲ್ಲಿ ಅದನ್ನು ಏರಿಸಿದರು.

ಅದು "ಯೂನಿಯನ್ ಜಾಕಿನ" ಒತ್ತಾಯದ ಹೇರಿಕೆಯ ವಿರುದ್ಧ ಹೂಡಿದ ನಮ್ಮ ಪ್ರತಿಭಟನೆಯಾಗಿತ್ತು. ಅದು ನಮ್ಮ ರಾಷ್ಟ್ರೀಯ ಪುನರುದ್ಧಾರದ ಪ್ರತೀಕವಾಗಿ ಉಳಿದಿದೆ. ಅದು ಹಿಂದುಸ್ಥಾನದ ದೊಡ್ಡ ಸಣ್ಣ ಪಟ್ಟಣ ಹಳ್ಳಿಗಳ ಅಸಂಖ್ಯಾತ ಆಬಾಲವೃದ್ಧರಿಗೆ ಸ್ವಾತಂತ್ರ್ಯ ಸಂದೇಶವನ್ನು ಮುಟ್ಟಿಸಿದೆ. ಎಷ್ಟುಸಲ ನಾವು ತುಂಬಿದ ಕಂಠದ ಉತ್ಸಾಹದಿಂದ— "ಹಳದಿ-ಬಿಳಿಯ-ಹಸಿರುಬಣ್ಣದೆಮ್ಮ ಬಾವುಟ, ತಳೆದ್ಯ ನಿಲಲಿ ವಿಜಯ ಶಕ್ತಿ ಗೌರವಂಗಳ" ಎಂದು ಹಾಡಿಲ್ಲ!

ಸ್ಫೂರ್ತಿದಾಯಕವಾದ "ಊಂಚಾರಹೇ ಝಂಡಾ ಹಮಾರಾ" (ನಮ್ಮ ಧ್ವಜ ಉನ್ನತವಾಗಿರಲಿ) ಎಂಬ ಹಾಡಿನಿಂದಲೇ ನಮ್ಮ ಒಂದು ತಲೆಮಾರಿನ ಹುಡುಗ ಹುಡುಗಿಯರು ಪ್ರಾಥಮಿಕ ಶಾಲೆಯಿಂದ ಹಿಡಿದು ತರಬೇತು ಹೊಂದುತ್ತ ಬಂದಿದ್ದಾರೆ. ಅದನ್ನು ಹಾಡುತ್ತಿದ್ದಾಗ ಹಿಂದುಸ್ಥಾನದ ಎಲ್ಲ ಧ್ವಜಸ್ತಂಭಗಳ ಮೇಲೂ ಹಳದಿ-ಬಿಳಿ-ಹಸಿರುಬಣ್ಣದ ಬಾವುಟ ಹಾರುವ ಚಿತ್ರವೇ ಅವರ ಮನಃ ಪಟಲದ ಮೇಲೆ ಮೂಡಿತ್ತು.

ಧ್ವಜದ ಐತಿಹಾಸಿಕತೆ

ರಾಷ್ಟ್ರಗಳಿಗಿದ್ದಂತೆಯೇ ಬಾವುಟಗಳಿಗೂ ಒಂದು ಇತಿಹಾಸವಿದೆ. ಅಮೇರಿಕೆಯಸಂಯುಕ್ತ ಸಂಸ್ಥಾನವು ಸ್ವಾತಂತ್ರ್ಯವನ್ನು ಸಾರಿದಾಗ ಅದು ನಕ್ಷತ್ರ ಚೆಲ್ಲದ ನಕ್ಷೆಯ ಬಾವುಟವನ್ನು ಅಂಗೀಕರಿಸಿತು. ಅದರಲ್ಲಿಯ ೧೩ ಪಟ್ಟೆಗಳೂ ೧೩ ನಕ್ಷತ್ರಗಳೂ ಮೊದಲಿನ ಸ್ವತಂತ್ರ ಅಮೇರಿಕೆಯ ...ಟಿಶ ೧೩ ರಾಜ್ಯಗಳನ್ನು ಪ್ರತಿನಿಧಿಸುತ್ತಿ ಅದ...ಹೊಸ ರಾಜ್ಯವು ಸೇರಿದ ಹಾಗೆ ...ನಕ್ಷತ್ರ ಚಿಹ್ನವನ್ನು ಸೇರಿಸುತ್ತ ಉದಾಹ...ರ ಸಂತ ಜಾರ್ಜ, ಸ್ಕಾಟರ ...ಪಿಗಳಲ್ಲಿ ...ತ್ತು ಐರಿಶರ ಸಂತ ಪ್ಯಾಟ್ರಿಕ ಸುವನನ್ನ ಪ್ರತೀಕಿಸಿ ಇಂಗ್ಲೆಂಡು, ಸ್ಕಾ...ಪಿಕವಾದಂತೆ ...ನಿಂದ ಹಗ್ಗ ಹೊಸೆದಂತೆ. ಸ್ಕಾಟ್ಲೆಂಡು ಮತ್ತು ಐರ್ಲೆಂಡುಗಳ ಒಕ್ಕೂಟವನ್ನು "ಯೂನಿಯನ್ ಜಾಕ್" ಧ್ವಜವು ಪ್ರತಿನಿಧಿಸುತ್ತದೆ.

ಅಕ್ಟೋಬರಿನ ಕ್ರಾಂತಿಯ ಬಳಿಕ ಸೋವಿಯಟ್ ರಶಿಯವು ಝಾರರ ಬಾವುಟವನ್ನು ಕೆಡಹಿ ಒಕ್ಕಲಿಗರನ್ನೂ ಕೂಲಿಕಾರರನ್ನೂ ಪ್ರತಿನಿಧಿಸುವ ಕುಡುಗೋಲು ಕೊಡತಿಗಳುಳ್ಳ ಕೆಂಪು ನಿಶಾನೆಯನ್ನು ಸ್ವೀಕರಿಸಿತು. ಅದು ಸಾಮ್ಯವಾದಿಗಳ ಗುರುತಾಯಿತು. ಝಾರರ ಉಗ್ರಶಾಸನದ ವಿರುದ್ಧವಾಗಿ ಹೂಡಿದ ಹೆಣಗಾಟದ ಮತ್ತು ಜನರ ಸ್ವಾತಂತ್ರ್ಯೇಚ್ಛೆಯ ಪ್ರತೀಕವಾಗಿ ಸೋವಿಯಟ್ ರಶಿಯವು ಕೆಂಪು ಬಾವುಟವನ್ನು ಸ್ವೀಕರಿಸಿದುದು ಸ್ವಾಭಾವಿಕವಾಗಿದೆ. ಅದು ರಶಿಯದ ಪ್ರತಿಯೊಬ್ಬ ಶ್ರಮಜೀವಿಗೂ ಪ್ರಿಯವಾದ ಸಾಮ್ಯವಾದೀ ಧ್ಯೇಯವನ್ನು ಪ್ರತಿಬಿಂಬಿಸುವ ರಕ್ತಪ್ರತೀಕವಾಗಿದೆ.

ಇಡಿಯ ಜಗತ್ತಿನಲ್ಲಿ ಎಲ್ಲೆಲ್ಲಿ ಒಕ್ಕಲಿಗರನ್ನೂ ಮಜೂರರನ್ನೂ ಸಾಮ್ಯವಾದಿ ಪಕ್ಷ ಹುಟ್ಟಿ ಸಂಘಟಿಸಬಲ್ಲದೋ ಅಲ್ಲಿಯ ಪೀಡಿತ ಶ್ರಮಜೀವಿಗಳೆಲ್ಲರೂ ಅದನ್ನು ಎತ್ತಿಹಿಡಿಯುವುದು ವಿಚಿತ್ರವಾಗಿದೆ.

ನಮ್ಮ ಧ್ವಜ

ಈಗ ನಮ್ಮ ಸಮಸ್ಯೆಯತ್ತ ಗಮನ ಕೊಡೋಣ. ಕೊನೆಯದಾಗಿ ಬ್ರಿಟಿಶರು ಭಾರತವನ್ನು ಬಿಡಲು ನಿಶ್ಚಯಿಸುವಂತೆ ಮಾಡಿದ ಸತ್ಯಾಗ್ರಹದ ಪ್ರಾರಂಭಕಾಲವಾದ ೧೯೨೧ರಿಂದ ನಮ್ಮ ರಾಷ್ಟ್ರಧ್ವಜವು ೩ಬಣ್ಣದ್ದಾಗಿದೆ. ಮೊದಲು ಹಳದಿಯ ಬದಲು ಕೆಂಪು ಬಣ್ಣ ಇತ್ತು— ಅಷ್ಟೆ. ಬಣ್ಣಗಳು ಹಿಂದೀಯರ ಐಕ್ಯದ ಗುರುತಾಗಿದ್ದವು: ಕೆಂಪು ಹಿಂದುಗಳನ್ನೂ ಹಸಿರು ಮುಸಲ್ಮಾನರನ್ನೂ ಬಿಳಿದು ಮಿಕ್ಕವರನ್ನೂ ಚರಕವು ನಮ್ಮ ದೇಶದ ಬಹುಸಂಖ್ಯಾಕ ಹಳ್ಳಿಗಳ ಉದ್ಯಮವಾದ ನೂಲುವ ಮತ್ತು ನೇಯುವ ಕೈಗಾರಿಕೆಗಳ ಮೂಲಕ ಹಿಂದೀಯರ ಆರ್ಥಿಕ ಬಂಧಮೋಚನವನ್ನೂ ಸೂಚಿಸುತ್ತಿದ್ದವು. ಆ ದಿನದಿಂದ ಪ್ರತಿಯೊಬ್ಬ ಹಿಂದೀ ರಾಷ್ಟ್ರೀಯನೂ ಆ ಧ್ವಜವನ್ನು ತನ್ನದೆಂದು ಕೊಳ್ಳಲು ಹೆಮ್ಮೆ ಪಡತೊಡಗಿದನು. ಭಿನ್ನ ಪ್ರಮಾಣದ ಲಕ್ಷ ಗಟ್ಟಲೆ ತ್ರಿವರ್ಣ ಧ್ವಜಗಳು ಮಾರಲ್ಪಟ್ಟವು. ಪ್ರಭಾತಫೇರಿಗಳಿಗಾಗಿ ಮೆರವಣಿಗೆಗಳಲ್ಲಿ ನೂರಾರು ತ್ರಿವರ್ಣ ಧ್ವಜಗಳು ಗಾಳಿಯಲ್ಲಿ ಪಟ ಪಟ ಹಾರಾಡಿದವು.

ಹಿಂದೀಯರ ಎಲ್ಲ ಪಕ್ಷ ಪಂಗಡಗಳಿಗೂ ತೃಪ್ತಿಯಾಗುವಂತೆ "ರಾಷ್ಟ್ರಧ್ವಜ"ವೊಂದನ್ನು ರಚಿಸಲು ಬಹಳ ಪ್ರಯತ್ನ ಮಾಡಲಾಯಿತು, ಬಹಳ ಸಮಿತಿಗಳನ್ನು ನಿಯಮಿಸಲಾಯಿತು. ಆದರೆ ತ್ರಿವರ್ಣವು ಭಾರತೀಯ ರಾಷ್ಟ್ರೀಯರ ಮನಸ್ಸಿಗೆ ಹಿಡಿದು ಹೋಗಿದ್ದುದರಿಂದ ಧ್ವಜವು ಬದಲಿಸಲ್ಪಡದಾಯಿತು. ೧೯೩೧ರಲ್ಲಿ ಅಖಿಲ ಹಿಂದುಸ್ಥಾನದ ಕಾಂ. ಕಮಿಟಿಯು, "ರಾಷ್ಟ್ರಧ್ವಜವು ತ್ರಿವರ್ಣರಂಜಿತ ಇರಬೇಕು, ಮೊದಲಿನಂತೆ ಒಂದರಕೆಳಗೊಂದರಂತೆ ಅಡ್ಡಡ್ಡವಾಗಿರಬೇಕು, ಮೇಲಿಂದ ಕೆಳಗೆ ಹಳದಿ, ಬಿಳಿಯ, ಮತ್ತು ಹಸಿರು ಬಣ್ಣಗಳಿರಬೇಕು, ಬಿಳಿಯ ಪಟ್ಟೆಯ ಮೇಲೆ ಮಧ್ಯದಲ್ಲಿ ಶ್ಯಾಮವರ್ಣದ ಚರಕವಿರಬೇಕು; ಬಣ್ಣಗಳು ಗುಣಗಳನ್ನಲ್ಲದೆ ಜಾತಿಗಳನ್ನು ಸೂಚಿಸುವುದಿಲ್ಲ. ಹಳದಿಯು ಧೈರ್ಯತ್ಯಾಗಗಳನ್ನೂ ಬಿಳಿದು ಶ್ರದ್ಧೆ ಆದ್ರ್ಯಾಂತಃಕರಣಗಳನ್ನೂ ಪ್ರತಿನಿಧಿಸುವುವು. ಮತ್ತು ಚರಖವು ಸಾಮಾನ್ಯ ಜನರ ಆಶಾಲತೆಯನ್ನು ಬಿಂಬಿಸುವುದು" ಎಂಬ ಠರಾವನ್ನು ಮುಂಬಯಿಯಲ್ಲಿ ಸೇರಿದಾಗ ಸ್ವೀಕರಿಸಿತು. ೧೯೩೧ರ ಅಗಸ್ಟ ೩೧ರಲ್ಲಿ ಧ್ವಜ ದಿನವನ್ನು ಆಚರಿಸಲಾಯಿತು. ಆಗ ಜಾತಿಗಳನ್ನು ಪ್ರತಿಬಿಂಬಿಸುವ ಕೆಂಪು—ಬಿಳಿದು—ಹಸಿರು ಬಣ್ಣಗಳನ್ನು ಳಿದು ಧೈರ್ಯ ಮತ್ತು ತ್ಯಾಗ, ಶಾಂತಿ ಮತ್ತು ಸತ್ಯ, ಶ್ರದ್ಧೆ ಮತ್ತು ಆದ್ರ್ಯಾಂತಃಕರಣ—ಇವುಗಳನ್ನು ಪ್ರತಿಫಲಿಸುವ ಸಿಂಧೂರ—ಶ್ವೇತ—ಹರಿತವಾದ ರಾಷ್ಟ್ರಧ್ವಜವು ದೇಶದಲ್ಲೆಲ್ಲ ಜನಜನಿತವಾಗಿ ಹಾರಾಡಿತು.

ಬೇರೆ ದೇಶಗಳ ತ್ರಿವರ್ಣ ಧ್ವಜಗಳು

ಐರ್ಲೆಂಡಿನ ಬಾವುಟವು ಹಸಿರು—ಬಿಳಿಯ—ಕಿತ್ತಳೆ ಬಣ್ಣಗಳದ್ದು; ಇಟಲಿಯದು ಹಸಿರು—ಬಿಳಿಯ—ಕೆಂಪು ಬಣ್ಣಗಳದ್ದು. ನಮ್ಮ ಧ್ವಜದಲ್ಲಿರುವಂತೆ ಪಟ್ಟೆಗಳು ಅಡ್ಡಡ್ಡವಾಗಿರದೆ ಉದ್ದುದ್ದವಾಗಿವೆ ಅಷ್ಟೆ. ಈ ಇಟಲಿಯ ಧ್ವಜವನ್ನು ಕುರಿತೇ ಸ್ವಿನ್‌ಬರ್ನ್ ಕವಿಯು ಹೀಗೆ ಹಾಡಿದ್ದು:

"ನಿನ್ನ ಮೇಲಿರುವ ನನ್ನೊಲವಿನೊಲು ಕೆಂಪು, ನಿನಗಾಗಿ ನಮಗಿರುವ ಆಶೆಯೊಲು ಹಸಿರು, ನಿನ್ನಲ್ಲಿ ನಮಗಿರುವ ನೆಚ್ಚಿನೊಲು ಬಿಳಿದು!" ಬಹಳ ದೇಶಗಳಲ್ಲಿ ಆಗಲೇ ತ್ರಿವರ್ಣ ಧ್ವಜಗಳಿರುವಾಗ, ತ್ರಿವರ್ಣ ಧ್ವಜವನ್ನಿಟ್ಟುಕೊಳ್ಳುವ ಬಗ್ಗೆ ಯಾವ ಬಿರುದರಚನಾತಜ್ಞನ ಅಸಮ್ಮತಿಯೂ ಅಡ್ಡ ಬರಲಾರದು. ಭಾರತ ಸಂಯುಕ್ತ ರಾಜ್ಯದಲ್ಲಿ ಎಲ್ಲ ಜಾತಿಗಳೂ, ಅರಸರೂ, ವರ್ಗಗಳೂ, ಪಕ್ಷಗಳೂ ಒಪ್ಪಬಹುದಾದ ರಾಷ್ಟ್ರಧ್ವಜವನ್ನು ನಿಷ್ಕರ್ಷಿಸುವ ವಿಷಯದಲ್ಲಿ ಬಹಳ ಕಡೆ ಉತ್ಕಂಠೆಯಿರುವಂತೆ ತೋರುತ್ತದೆ. ಈ ಉತ್ಕಂಠೆಗೆ ಕೆಲವು ಮಟ್ಟಿಗೆ ಕಾರಣವಾದುದೆಂದರೆ, ತ್ರಿವರ್ಣ ಧ್ವಜವು ರಾಷ್ಟ್ರಧ್ವಜವಲ್ಲ, ಒಂದು ಪಕ್ಷದ ಧ್ವಜ ಎಂಬ ಅಪಪ್ರಥೆಯನ್ನು ಮುಸ್ಲಿಂ ಲೀಗು ಪ್ರಚಾರ ಮಾಡಲು ಯತ್ನಿಸಿದುದು.

ಲೀಗಿನ ಧ್ವಜದ ಕಲ್ಪನೆ

ಅರ್ಧಚಂದ್ರ ಮತ್ತು ನಕ್ಷತ್ರಗಳುಳ್ಳ ತುರ್ಕಸ್ಥಾನದ ಬಾವುಟದ ಮಾದರಿಯಲ್ಲಿ ಮುಸ್ಲಿಂ ಲೀಗು ಅರ್ಧಚಂದ್ರ ಮತ್ತು ನಕ್ಷತ್ರಗಳುಳ್ಳ ಹಸಿರು ಬಾವುಟವನ್ನು ಬಳಸಲಾರಂಭಿಸಿತು. ಕಮ್ಯುನಿಸ್ಟ ಪಕ್ಷವು ಮುಂದೆ ಬಂದಾಗ ಲೀಗಿನೊಡನೆ ಸೇರಿಕೊಂಡು ಅದೂ ತ್ರಿವರ್ಣ ಧ್ವಜವು ರಾಷ್ಟ್ರಧ್ವಜವಲ್ಲವೆಂದೂ ಪಕ್ಷದ ನಿಶಾನೆಯೆಂದೂ ಒತ್ತಿ ಹೇಳಿತು. ಆದರೆ ಈಗ ಪಾಕಿಸ್ಥಾನದಲ್ಲಿ ಹಸಿರುಬಾವುಟವನ್ನು ಹಾರಿಸಲು ಲೀಗಿಗೆ ಸಾಧ್ಯವಾದುದು ವಿಜಯಶಾಲಿಯಾದ ಸಿಂಧೂರ-ಶುಕ್ಲ-ಹರಿತ ವರ್ಣದ ರಾಷ್ಟ್ರಧ್ವಜದ ಕೆಳಗೆ ನಡೆದ ರಾಷ್ಟ್ರೀಯ ಭಾರತದ ಅದಮ್ಯ ಹೋರಾಟದಿಂದಲೇ ಎಂಬುದನ್ನು ಜನರು ಮರೆಯುತ್ತಾರೆ.

ತ್ರಿವರ್ಣ ಧ್ವಜದ ವಿಜಯ

ತ್ರಿವರ್ಣ ಧ್ವಜವು ವಿಜಯಿಯಾಗದಿದ್ದರೆ ಬ್ರಿಟಿಶರು ಭಾರತ ಬಿಟ್ಟು ಹೋಗುತ್ತಿದ್ದಿಲ್ಲ, ಹೋಗುವಾಗ ಲೀಗಿಗೆ ಪಾಕಿಸ್ಥಾನವನ್ನು ಪಾರಿತೋಷಕವಾಗಿ ಕೊಟ್ಟು ಹೋಗುತ್ತಿದ್ದಿಲ್ಲ ಮತ್ತು ಹಿಂದೀ ಸಂಸ್ಥಾನಗಳು ಬ್ರಿಟಿಶರ ಪರಿಷ್ಕಾಧಿಕಾರದಿಂದ ಮುಕ್ತವಾಗುತ್ತಿದ್ದಿಲ್ಲ. ಕಾರಾಗೃಹ ವಾಸದ ವರುಷಗಳಲ್ಲಿ, ಬೇಜಾರದ ದಿನಗಳಲ್ಲಿ, ಸತ್ಯಾಗ್ರಹದ ಸೆಕೆಯ ದಿನಗಳಲ್ಲಿ ನಮಗೆ ಸ್ಫೂರ್ತಿ ಕೊಟ್ಟ ಸ್ವಾತಂತ್ರ್ಯ ಪ್ರತೀಕವನ್ನು ವಿಜಯ ದೊರೆತ ಬಳಿಕ ನಾವು ತ್ಯಜಿಸಿ ಬಿಡಬೇಕೆ? ಒಮ್ಮೆ ಪ್ರಬಲ ಬ್ರಿಟಿಶ ಸಾಮ್ರಾಜ್ಯದ ವಿರುದ್ಧ ಹೂಡಿದ ಪ್ರತಿಭಟನೆಯ ಪ್ರತೀಕವಾಗಿದ್ದು, ಈಗ ನಮ್ಮ ವಿಜಯದ ಚಿಹ್ನವಾಗಿರುವ ಈ ಧೀರ ತ್ರಿವರ್ಣ ಧ್ವಜದ ಬಗ್ಗೆ ಸಂಸ್ಥಾನ ಮತ್ತು ಪ್ರಾಂತಗಳಿಂದ ಕೂಡಿದ ಹಿಂದುಸ್ಥಾನ ಸಂಯುಕ್ತ ರಾಜ್ಯದ ಯಾವ ಪ್ರಜೆಯು ಹೆಮ್ಮೆ ಪಡುವುದಿಲ್ಲ?

ಸಂಸ್ಥಾನಗಳು ಮತ್ತು ರಾಷ್ಟ್ರಧ್ವಜ

ಶತಮಾನಗಳ ಹಿಂದಿನ ಐತಿಹಾಸಿಕ ಸಂಬಂಧವಿರುವ ತಮ್ಮದೇ ಆದ ಧ್ವಜಗಳನ್ನಿಟ್ಟುಕೊಳ್ಳಲು ಕೆಲವು ಸಂಸ್ಥಾನಗಳು ಹಟತೊಟ್ಟರೆ ಅವುಗಳದ್ದೇನೂ ತಪ್ಪಿಲ್ಲ. ಆದರೆ ಸಂಸ್ಥಾನಗಳ ಗಡಿಯೊಳಗೆ ಈ ಬಾವುಟಗಳಿಗೆ ಅಪ್ರತಿಹತ ಪ್ರಾಮುಖ್ಯವಿದ್ದರೂ ಈಗ ವಿಸ್ತಾರವಾದ ಹೆಚ್ಚಿನ ಹೆಮ್ಮೆಯ ಸ್ವತಂತ್ರ ಹಿಂದುಸ್ಥಾನದ ರಾಷ್ಟ್ರೀಯತೆಯಲ್ಲಿ ಭಾಗವಹಿಸುವ ಸಂಸ್ಥಾನಿಕರಿಗೆ ರಾಷ್ಟ್ರಧ್ವಜದ ಅಗತ್ಯವೆಷ್ಟೆಂಬುದನ್ನು ತಿಳಿಯಲು ಕಷ್ಟವಾಗಲಾರದು. ಹಿಂದುಸ್ಥಾನದ ಅಳರಸರು ಅದು ತಮ್ಮ ಮಾತೃಭೂಮಿಯೆಂದು ತಿಳಿದುದು ನ್ಯಾಯ್ಯವಾಗಿದೆ. ಎರಡು ಭಯಂಕರವಾದ ಜಾಗತಿಕ ಸಮರಗಳಲ್ಲಿ ಹಿಂದುಸ್ಥಾನದ ರಕ್ಷಣೆಗಾಗಿ ಅವರು ಜನ, ಧನ, ಮತ್ತೆ ಕೆಲವೆಡೆ ಸ್ವತಃ ಸೇವೆ—ಇವುಗಳನ್ನು ಸಲ್ಲಿಸಿದ್ದಾರೆ. ಇಲ್ಲಿಯ ವರೆಗೆ ಹಿಂದುಸ್ಥಾನದ ರಕ್ಷಣೆಗೆ ಅವರು "ಯೂನಿಯನ್ ಜಾಕಿ"ನ ಕೆಳಗೆ ನಿಂತರು; ಆದರೆ ಇನ್ನು ಮುಂದೆ ಅವರು ತಮ್ಮದೇ ದೇಶದ ಹೆಗ್ಗುರುತಾದ ತ್ರಿವರ್ಣ ಧ್ವಜದಡಿಯಲ್ಲಿ ನಿಂತು ಹಾಗೆ ಮಾಡುವರು.

ತ್ರಿವರ್ಣಧ್ವಜವು ಪಕ್ಷಧ್ವಜವಲ್ಲ

ತ್ರಿವರ್ಣಧ್ವಜವು ಎಂದೂ ಪಕ್ಷಧ್ವಜವಾಗಿದ್ದಿಲ್ಲ. ಅದೇ ಹಿಂದೆ ಭಾರತದ ರಾಷ್ಟ್ರಧ್ವಜವಾಗಿತ್ತು, ಈಗಲೂ ಅದೇ ಸ್ವತಂತ್ರ ಭಾರತದ ಧ್ವಜವಾಗಬೇಕು. ರಾಷ್ಟ್ರೀಯರು ಎಲ್ಲೆಲ್ಲೂ ವ್ಯಥೆಪಡುವಂತೆ ಭಾರತವು ವಿಭಕ್ತವಾದರೂ ಹಳದಿ-ಬಿಳಿಯ-ಹಸಿರು ಬಾವುಟವು ಹಿಂದುಸ್ಥಾನದ ಪ್ರಜಾರಾಜ್ಯದಲ್ಲಿ ಸ್ವಾತಂತ್ರ್ಯದ ಘೋರ ಸಂಗ್ರಾಮಗಳನ್ನು ನೆನಪುಮಾಡಿಕೊಡುತ್ತ, ಐಕ್ಯದ ಗಂಭೀರ ಪ್ರತಿಜ್ಞೆಯನ್ನು ಮನವರಿಕೆ ಮಾಡಿಕೊಡುತ್ತ, ಭವಿಷ್ಯದ ಆಹ್ವಾನವನ್ನು ಚಿತ್ರಿಸಿಕೊಡುತ್ತ ಹೆಗ್ಗಾಳಿಯಲ್ಲಿ ಹಿಗ್ಗಿ ಹಾರುತ್ತಿರಲಿ. ಏಕೆಂದರೆ ನಮ್ಮ ವಿಜಯವು ಪಾಕ್ಷಿಕವಾಗಿದೆ. ಅದು ಒಮ್ಮುಖದ ವಿಜಯ. ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು, ದಾಸ್ಯವಿರುವೆಡೆಯೆಲ್ಲ ಆ ಸ್ವಾತಂತ್ರ್ಯವನ್ನು ಹರಡಲು ಮತ್ತು ನಮ್ಮ ನಾಡಿಂದ ದ್ವೇಷಾಸುರನನ್ನು ಹೊಡೆದೋಡಿಸಲು ಇನ್ನೂ ನಾವು ಘೋರ ಯುದ್ಧಗಳನ್ನು ಮಾಡಬೇಕಾಗಿದೆ. ಈ ಸ್ಫೂರ್ತಿಯನ್ನು ತ್ರಿವರ್ಣಧ್ವಜವು ತುಂಬಿಸಲಿ; ಮತ್ತು ಸಂಸ್ಥಾನ ಹಾಗೂ ಪ್ರಾಂತಗಳಲ್ಲಿಯ ಮುಂದಿನ ತಲೆಮಾರಿನವರು ಸಂಗರದಲ್ಲಿ ಶೂರರಾಗಿರುವಂತೆಯೂ ವಿಜಯದಲ್ಲಿ ಅಸಹಾಯರಿಗೆ ಸಹಾಯಮಾಡುವಂತೆಯೂ, ಯಾವಾಗಲೂ ತಮ್ಮ ದೇಶಕ್ಕೂ ಧ್ವಜಕ್ಕೂ ಭಕ್ತಿನಮ್ರರಾಗಿರುವಂತೆಯೂ ಈ ಮೂಬಣ್ಣದ ಬಾವುಟವು ಹುರಿದುಂಬಿಸಲಿ!

"ಹಳದಿ ಧೈರ್ಯದ ಪ್ರತೀಕ, ಬಿಳಿದು ದೇಶಭಕ್ತಿಯ ಚಿಹ್ನ, ಹಸಿರು ದೀನಬಂಧುತನದ ಗುರುತು ಕಾಣಿರೋ!"

ಆದುದರಿಂದ ನಾವು ತ್ರಿವರ್ಣಧ್ವಜಕ್ಕೆ ವಂದಿಸೋಣ! ಅದು ಯಾವಾಗಲೂ ನಾವು ಅದರ ಗೌರವವನ್ನು ಕಾಪಾಡಲು ಸಿದ್ಧರಾಗಿರುವುದನ್ನು ಕಾಣಲಿ; ಭಾರತವನ್ನು ವಿಜಯದಿಂದ ವಿಜಯಕ್ಕೆ ಅದು ಒಯ್ಯಲಿ!

—ಘಟನಾ ಸಮಿತಿಯ ಪ್ರಕಟನ ಶಾಖೆಯಿಂದ

ಶ್ಲಾಘ್ಯ ಕಾರ್ಯ

ಬಡೋದೆಯ ಸರಕಾರವು ಹೀಗೊಂದು ಪ್ರಕಟನೆ ಹೊರಡಿಸಿದೆ.

"ಬಡೋದೆಯ ಮಹಾರಾಜರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆ ಮಾಡಲು ಉಗ್ರವಾದ ಕಾಯದೆಗಳನ್ನು ಅಮಲಿನಲ್ಲಿ ತರಬೇಕೆಂದು ಅಪ್ಪಣೆ ಕೊಟ್ಟಿದ್ದಾರೆ; ಸ್ವಂತ ಕಟ್ಟಡದಲ್ಲಿದೆಯೆಂಬ ಕಾರಣದಿಂದಾಗಲಿ, ಧಾರ್ಮಿಕ ಸ್ಥಳದಲ್ಲಿದೆಯೆಂಬ ನೆವದಿಂದಾಗಲಿ ಯಾವ ಪ್ರಾಥಮಿಕ ಶಾಲೆಯಾದರೂ ಹರಿಜನ ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ಕೊಡದಿದ್ದರೆ ಅಂಥ ಶಾಲೆಯನ್ನು ಮುಚ್ಚಿ ಬಿಡುವ ಅಧಿಕಾರವನ್ನು ಶಿಕ್ಷಣ ಶಾಖೆಯ ನಿರ್ದೇಶಕರಿಗೆ ಕೊಡಲಾಗಿದೆ. ಪ್ರತ್ಯೇಕೀಕರಣ ಪ್ರವೃತ್ತಿಯನ್ನು ತಡೆಯಲು ಹರಿಜನರಿಗಾಗಿ ಪ್ರತ್ಯೇಕ ತೆಗೆದ ಶಾಲೆಗಳನ್ನು ಮುಚ್ಚಿಬಿಡಲು ಆಜ್ಞೆಕೊಡಲಾಗಿದೆ. ಹರಿಜನರ ಹಿತರಕ್ಷಣೆಗಾಗಿ ಒಬ್ಬ ವಿಶೇಷಾಧಿಕಾರಿಯನ್ನು ನಿಯಮಿಸಬೇಕೆಂದು ಕೂಡ ಅಪ್ಪಣೆ ಸಿಕ್ಕಿದೆ."

ಮುಂಬಯಿಯ ಕಾಂಗ್ರೆಸ್ ಮಂತ್ರಿಮಂಡಲವೂ ಅಂತಹ ಆಜ್ಞೆಗಳನ್ನೇ ೧೯೩೭ರಲ್ಲಿ ವಿಧಿಸಿ ಗುಜರಾತಿನ ಬಹಳ ಶಾಲೆಗಳಲ್ಲಿ ಹರಿಜನರಿಗೆ ಪ್ರವೇಶ ಸಿಗುವಂತೆ ಮಾಡಿತು. ಈ ಕ್ರಮವನ್ನನುಸರಿಸಿದ ಬಡೋದೆಯ ಸರಕಾರವು ಅಭಿನಂದನಾರ್ಹವಾದುದು. ಬಡೋದಾ ಸಂಸ್ಥಾನದ ಮಹೇಸಾನ ಜಿಲ್ಲೆಯಲ್ಲಿ ಬಹಳ ಶಾಲೆಗಳು ಸ್ವಂತ ಕಟ್ಟಡಗಳಲ್ಲೂ ಧಾರ್ಮಿಕ ಸ್ಥಳಗಳಲ್ಲೂ ಇವೆ. ಆ ಸ್ಥಳಗಳಲ್ಲಿಯ ಎಲ್ಲ ಶಾಲೆಗಳಲ್ಲೂ ಹರಿಜನರಿಗೆ ಪ್ರವೇಶ ಸಿಗುವುದೆಂದು ನಾವು ಆಶಿಸುತ್ತೇವೆ. ಹಳ್ಳಿಗಳನ್ನು ಮುಟ್ಟಲು ಆಜ್ಞೆಗಳಿಗೆ ಸ್ವಲ್ಪ ಕಾಲ ಬೇಕಾದೀತು. ನಡುವೆ ಇದರಲ್ಲಿ ಸಹಾನುಭೂತಿಯುಳ್ಳ ಸ್ಥಳೀಯರೂ ಸಾರ್ವಜನಿಕ ಕೆಲಸಗಾರರೂ ಈ ಕಾಯಿದೆಗಳ ಅನ್ವಯದಿಂದ ಉಂಟಾಗುವ ಸಮಸ್ಯೆಗಳನ್ನು ಬಿಡಿಸಲು ತಲೆ ಹಾಕಬೇಕೆಂದು ವಿನಂತಿ. ಹರಿಜನರ ಹಿತರಕ್ಷಣೆಗಾಗಿ ವಿಶೇಷ ಅಧಿಕಾರಿಯೊಬ್ಬನನ್ನು ನಿಯಮಿಸಲು ಪ್ರವೃತ್ತರಾದುದೂ ಸ್ವಾಗತಾರ್ಹವಾಗಿದೆ. ಇನ್ನೊಂದು ದೆಂದರೆ, ಮುಂಬಯಿ, ಮದ್ರಾಸು ಮತ್ತು ಇತರ ಸಂಸ್ಥಾನಗಳಂತೆ ಈ ಕೆಲಸದಲ್ಲಿ ವಿಶೇಷಾಧಿಕಾರಿಗೆ ಸಲಹೆ ಕೊಡಲು ಹಿಂದುಳಿದ ವರ್ಗದ ಸಲಹೆಗಾರ ಸಮಿತಿಯೊಂದನ್ನು ನಿಯಮಿಸುವುದು.

—ಪಿ. ಎಲ್. ಎಮ್.

ಕೆಲವು ಯುಕ್ತವಾದ ಸೂಚನೆಗಳು

(೯ ನೇ ಪುಟದಿಂದ)

"ಬಹುದೊಡ್ಡ ವಿಶ್ವಾಸ ಘಾತವನ್ನು ಮಾಡಿ ಅತ್ಯಂತ ಅರಾಜಕ ಗೊಂದಲವನ್ನುಂಟು ಮಾಡಲು ಅವರು ವ್ಯವಸ್ಥೆ ಮಾಡುತ್ತಿದ್ದಾರೆ. ಲಂಚ, ಮೋಸ, ವಶೀಲಿ, ಅಧಿಕಾರ ದುರುಪಯೋಗ ಇವು ಬ್ರಾಹ್ಮಣರ ಅರಸೊತ್ತಿಗೆಯ ಪರಿವಾರಗಳಾಗುವವು" ಎಂಬ ಚರ್ಚಿಲ್ಲರ ದುರ್ಭವಿಷ್ಯವನ್ನು ರಾಷ್ಟ್ರವು ಸುಳ್ಳುಮಾಡಬೇಕಾಗಿದೆ.

—ಅಜ್ಞಾತ

(ಬರಹಗಾರರು ದೇಶದ ರಾಜತಂತ್ರದ ಅಭ್ಯಾಸಿಗಳು. ನಾನು ಕಾಂಗ್ರೆಸ್ಸಿನ ಕೆಲಸದ ಮಾಹಿತಿಯುಳ್ಳವನಲ್ಲ. ಆದುದರಿಂದ ಮೇಲಿನ ಸೂಚನೆಗಳ ಮೇಲೆ ನಾನು ಅಭಿಪ್ರಾಯ ಕೊಡಲಾರೆ; ಅವುಗಳ ಬೆಲೆಯನ್ನರಿತು ಸ್ವೀಕರಿಸಬಹುದು.

—ಮೋ. ಕ. ಗಾಂಧಿ

ಅಂತರರಾಷ್ಟ್ರೀಯ

ಮೂವರ ಮೂರಾಬಟ್ಟೆ

ಕಳೆದ ವಾರ ಮುಂಗಂಡಂತೆ, "ಯುರೋಪನ್ನು ಉಳಿಸುವ" ಮಾರ್ಶಲ್ ಯೋಜನೆಯ ಬಗ್ಗೆ ವಿಚಾರಿಸಲು ಪ್ಯಾರೀಸಿನಲ್ಲಿ ಸೇರಿದ ತ್ರಿಮೂರ್ತಿಗಳ ಸಭೆ ಅಯಶಸ್ವಿಯಾಗಿ ವಿಸರ್ಜಿಸಲ್ಪಟ್ಟಿತು. ಎಂದಿನಂತೆ ಆಂಗ್ಲೊ—ಫ್ರೆಂಚರು ರಶಿಯಾವನ್ನೂ ಇವರು ಅವರನ್ನೂ ದೂರುತ್ತಂತಮ್ಮ ಮನೆಗಳನ್ನು ಸೇರಿದರು. ಆದರೆ ಮತಭೇದದ ಮುಖ್ಯ ಕಾರಣ ಎಂದಿನಂತೆ ಜಗತ್ತಿನ ರಾಜಕಾರಣದಲ್ಲಿ ಅಲ್ಪಸಂಖ್ಯಾಕ ಪಕ್ಷವಾದ ರಶಿಯಾದ ಭಯದಲ್ಲೇ ಇತ್ತೆಂದು ಹೇಳಬೇಕು. ಫ್ರೆಂಚ ವಿದೇಶ ಮಂತ್ರಿ ಬಿಡಾಲರು ಮೊಲಟೋವರ ದೃಷ್ಟಿಕೋನಕ್ಕೆ ಕೆಲವುಬಗೆ ಎಡೆಕೊಟ್ಟು ಕೊನೆಯ ಗಳಿಗೆಯಲ್ಲಿ ಮುಂಡಿಸಿದ ಯೋಜನೆಯೂ ಅವರಿಗೆ ಸಮಾಧಾನವನ್ನುಂಟು ಮಾಡಲಿಲ್ಲ.

✲ ಮೊಲಟೋವರ ಸೂಚನೆಯ ತಳಹದಿಯೆಂದರೆ ಯುರೋಪಿನ ಆರ್ಥಿಕ ಪುನರ್ನಿರ್ಮಾಣಕ್ಕೆ ದೊರೆಯುವ ಅಮೇರಿಕನ್ ಸಹಾಯದಿಂದ ಸಹಾಯಾಪೇಕ್ಷಿ ರಾಷ್ಟ್ರಗಳ ಸಾರ್ವಭೌಮತ್ವಕ್ಕೆ ಧಕ್ಕೆ ಬರಬಾರದೆಂಬುದು. ತನ್ನ ಪುನರ್ನಿರ್ಮಾಣ ಯಾವ ಮಾರ್ಗದಲ್ಲಾಗಬೇಕೆಂದು ನಿರ್ಣಯಿಸುವ ಹಕ್ಕು ಆಯಾ ರಾಷ್ಟ್ರಕ್ಕೇ ಇರಬೇಕು, ಎಂದೂ ಅದರಲ್ಲಿ ಹೊರಗಿನ— ಅರ್ಥಾತ್ ಮಹಾ ರಾಷ್ಟ್ರಗಳ— ಇಚ್ಛೆಯನ್ನು ಹೇರುವ ಅವಕಾಶ ಇರಕೂಡದು, ಎಂದೂ ಅವರು ಕೊನೆವರೆಗೆ ಸಾಧಿಸಿದರು.

✲ ಆಂಗ್ಲೋಫ್ರೆಂಚರು,— ಯಾವ ಕಾರಣಕ್ಕೋ ಏನೊ— ಇದಕ್ಕೊಪ್ಪಲಿಲ್ಲ. ಯುರೋಪಿನ ರಾಷ್ಟ್ರಗಳ ಪುನರ್ನಿರ್ಮಾಣ ಪರಸ್ಪರ ಪೂರಕವಾಗಿರಬೇಕೆಂದು ಅವರ ವಿಚಾರ. ಪ್ರತಿ ರಾಷ್ಟ್ರಕ್ಕೆ ದೊರೆಯಬೇಕಾದ ಸಹಾಯದ ನಿರ್ಣಯ "ನಿರ್ದೇಶಕ ಸಮಿತಿ" ಯ ಕೈಯಲ್ಲಿರುವದೇ ಅವರ ಯೋಜನೆಯ ಮುಖ್ಯ ಲಕ್ಷಣ.

ಇದರಿಂದ ರಾಷ್ಟ್ರಗಳ ಅಂತರಿಕ ವಿಚಾರಗಳಲ್ಲಿ ಕೈಹಾಕಿದಂತಾಗುವದೆಂದು ರಶಿಯನ್ನರು ಭಯಪಡುತ್ತಾರೆ. "ನಿರ್ದೇಶಕ ಸಮಿತಿ" ಯವರು ಕೆಲವು ತಮಗೊಲ್ಲದ ರಾಷ್ಟ್ರಗಳನ್ನು ದುರ್ಬಲವಾಗಿಡಲು ಅಮೇರಿಕನ್ ಸಹಾಯವನ್ನು ಪಯೋಗಿಸಬಹುದು. (ಉದಾಹರಣೆಗಾಗಿ ರಶಿಯನ್ ಪ್ರಭಾವಕ್ಕೊಳಗಾದ ಪೂರ್ವ ಯುರೋಪಿನ ರಾಜ್ಯಗಳು ಔದ್ಯೋಗಿಕ ಪ್ರಗತಿಯನ್ನು ಸಾಧಿಸದಂತೆ ಅವನ್ನು "ಕೃಷಿ ಪ್ರಧಾನ" ವೆಂದು ಬದಿಗೊತ್ತಿ ಬಿಡಬಹುದು). ಏಕೆಂದರೆ ನಿರ್ದೇಶಕ ಸಮಿತಿಯಲ್ಲಿ ಬ್ರಿಟನ್, ಫ್ರಾನ್ಸ್, ರಶಿಯಾ ಇವು ಪ್ರಧಾನವಾಗಿಯೂ ಉಳಿದ ಒಂದೆರಡು ಯುರೋಪಿಯನ್ ರಾಷ್ಟ್ರಗಳು ಗೌಣವಾಗಿಯೂ ಇರಬೇಕೆಂದು ಸೂಚಿಸಲ್ಪಟ್ಟಿದೆ. ಹೀಗಾದರೆ ಬ್ರಿಟನ್ ಫ್ರಾನ್ಸುಗಳಿಗೇ ಅದರಲ್ಲಿ ಬಹುಮತ ದೊರೆತು ಅವು ಯುರೋಪನ್ನು ತಮ್ಮ ಆಟದ ಬೊಂಬೆಯಾಗಿ! ಮಾಡಿಕೊಳ್ಳಲು ಹೆಣಗುವವೆಂದು ಮೊಲಟೋವರು ಆರೋಪಿಸಿದರು.

"ಆನೆ ಸಾಗುವದು"

ಹೀಗೆ ತ್ರಿಮೂರ್ತಿಗಳು ಒಮ್ಮತವಿಲ್ಲದೆ ಚದರಿದರು. ಆದರೆ ಆಂಗ್ಲೋ-ಫ್ರೆಂಚರು ರಶಿಯನ್ ಅಸಹಕಾರವನ್ನು ಲೆಕ್ಕಿಸದೆ ಮುಂದುವರಿದು ಮಾರ್ಶಲ್ಲರ ಯುರೋಪವನ್ನುಳಿಸುವ ಯೋಜನೆಯನ್ನು ಚರ್ಚಿಸಲು ಯುರೋಪಿನ ೨೨ ರಾಷ್ಟ್ರಗಳಿಗೆ ಆಮಂತ್ರಣ ಕಳಿಸಿದ್ದಾರೆ. ಪಶ್ಚಿಮ ಯುರೋಪಿನ ಹಲವು ರಾಷ್ಟ್ರಗಳು ಈಗಾಗಲೆ ಆಮಂತ್ರಣವನ್ನು ಸ್ವೀಕರಿಸಿವೆ. ರಶಿಯನ್ ಪ್ರಭಾವಕ್ಕೊಳಗಾದ ಪೂರ್ವ ಯುರೋಪಿನ ರಾಷ್ಟ್ರಗಳು ಸಭೆಯನ್ನು ಬಹಿಷ್ಕರಿಸುವ ಸಂಜ್ಞೆಗಳು ಈಗಾಗಲೆ ಒಡೆದು ಕಾಣುತಿವೆ. ಝೆಕೊಸ್ಲೊವಾಕಿಯವೊಂದು ಭಾಗವಹಿಸಬಹುದು. ಜುಲೈ ೧೨ ಕ್ಕೆ ಈ ಸಭೆ ಸೇರುವದು.

✲ ನಿಜವಾಗಿ ರಶಿಯಾದ ಬಹಿಷ್ಕಾರದಿಂದ ಯೋಜನೆ ಕಾರ್ಯಕಾರಿಯಾಗುವ ಸಂಭವ ಹೆಚ್ಚಾಗಿದೆಯೆಂದು ಅಮೇರಿಕನ್ ವರ್ಗಗಳಲ್ಲಿ ಹೇಳಲಾಗುತಿದೆ. ಆಂಗ್ಲೋ-ಅಮೇರಿಕನ್-ಫ್ರೆಂಚರು ರಶಿಯಾದ ಬಹಿಷ್ಕಾರವನ್ನೆ ಬಯಸುತಿದ್ದರೆಂಬ ರಶಿಯನ್ ಆರೋಪದಲ್ಲಿ ಹುರುಳಿಲ್ಲದಿಲ್ಲ. ರಶಿಯಾ ಹೊರಗುಳಿದದ್ದರಿಂದ, ಕಮ್ಯುನಿಸ್ಟ ವೈರದಿಂದ ಓತಪ್ರೋತವಾದ ಅಮೇರಿಕನ್ ಶಾಸನ ಸಭೆ ಯುರೋಪಿಗೆ ಸಹಾಯ ನೀಡಲು ಹಣ ಮಂಜೂರು ಮಾಡುವ ಸಂಭವ ಹೆಚ್ಚಾಗಿದೆಯೆಂದು ಅಮೇರಿಕನ್ ರಾಜಕಾರಣಿಗಳು ಮುಚ್ಚುಮರೆಯಿಲ್ಲದೆ ಹೇಳುತಿದ್ದಾರೆ.

✲ ರಶಿಯಾವನ್ನು ಬಿಟ್ಟು ಯುರೋಪಿಗೆ ಸಹಾಯ ನೀಡಲು ಮೂರು ವರ್ಷದಲ್ಲಿ ೨೦೦ ಕೋಟಿ ಡಾಲರು ಬೇಕಾದೀತೆಂದು ಅಮೇರಿಕನ್ ಶಾಸನಸಭಾ ಸಮಿತಿಯ ಅಂದಾಜು.

ಪರಿಣಾಮಗಳು

✲ ರಶಿಯಾದ ಬಹಿಷ್ಕಾರದ ಪರಿಣಾಮವಾಗಿ ಯುರೋಪು ಇಬ್ಭಾಗಿಸಲ್ಪಟ್ಟಂತಾಗಿದೆ. ಪಶ್ಚಿಮ ಯುರೋಪಿನ ರಾಷ್ಟ್ರಗಳ ಸಂಯುಕ್ತ ರಾಜ್ಯ ಸ್ಥಾಪಿಸಲು ಇದು ಮೊದಲನೆ ಹೆಜ್ಜೆಯಾಗಬಹುದು. ಈ ಪಶ್ಚಿಮ ಯುರೋಪಿನ ಗುಂಪು ಸ್ವಾಭಾವಿಕವಾಗಿ ರಶಿಯಾ ವಿರೋಧಿಯಾಗುವದು.

✲ ಪೂರ್ವ ಯುರೋಪನ್ನು ಪ್ರತ್ಯೇಕವಾಗಿ ಬಂಡವಲಶಾಹಿ ವಿರೋಧಿ ಗುಂಪಾಗಿ ರಶಿಯಾ ಸಂಘಟಿಸಬಹುದು. "ಯುರೋಪನ್ನು ಈ ಮೂಲಕ ಎರಡು ಬಣಗಳಾಗಿ ವಿಂಗಡಿಸಿದಂತಾಗುವದು. ... ಇದರ ಫಲದ ಬಗ್ಗೆ ಆಂಗ್ಲೊಫ್ರೆಂಚರನ್ನು ಎಚ್ಚರಿಸಬಯಸುವೆ" ಎಂದು ಮೊಲಟೋವರು ಪ್ಯಾರೀಸಿನಲ್ಲಿ ಎಚ್ಚರಿಕೆ ಕೊಟ್ಟದ್ದನ್ನು ಮರೆಯತಕ್ಕದ್ದಲ್ಲ.

✲ ಈ ಮೂಲಕ ಫ್ರಾನ್ಸು ಆಂಗ್ಲೊ-ಅಮೇರಿಕನ್ ಗುಂಪನ್ನು ಸೇರಿ ರಶಿಯಾದ ಪರಲು ಹರಿದುಕೊಂಡಂತಾಯಿತು.

✲ ಕಮ್ಯುನಿಸ್ಟರ ಪ್ರಾಧಾನ್ಯವುಳ್ಳ ಫ್ರೆಂಚ ಮತ್ತು ಇಟಾಲಿಯನ್ ಕೂಲಿಕಾರ ಚಳವಳಿಗಳು ತಮ್ಮ ಸರಕಾರಗಳಿಗೆ ತೊಂದರೆ ಕೊಡಲು ಶತಪ್ರಯತ್ನ ಮಾಡಬಹುದು.

ಸಾಮ್ಯವಾದಕ್ಕೆ ಆತಂಕ

ಸಾಮ್ಯವಾದಿ ಸಮಾಜವನ್ನು ಕ್ರಾಂತಿಯಿಲ್ಲದೆ ಕಟ್ಟುವ ಶಪಥ ತೊಟ್ಟ ಬ್ರಿಟಿಶ ಕೂಲಿಕಾರ ಸರಕಾರಕ್ಕೆ ಲೆಕ್ಕವಿಲ್ಲದಷ್ಟು ಉಪದ್ರವಗಳಿಗಂಟುಬೀಳುತಿವೆ. ಚಳಿಗಾಲಗಳ ಕಾಟದಿಂದ ಕಳೆದ ವರ್ಷ ಅದೆಷ್ಟೋ ತೊಂದರೆ ಪಡಬೇಕಾಯಿತು. ಈಗ ಬಂದಿರುವ ದೊಡ್ಡ ಅಡ್ಡಿಯೆಂದರೆ ಲಾರ್ಡ್ಸ ಭವನದ ವಿರೋಧ. ಈಚೆಗೆ ವಾಹನ ಸೌಕರ್ಯಗಳ ರಾಷ್ಟ್ರೀಕರಣ ಮಸೂದೆ ಕಾಮನ್ಸ ಭವನದಲ್ಲಿ ಪಾಸಾಗಿ ಲಾರ್ಡ್ಸ ಸಭೆಯ ಮುಂದೆ ಬಂದಾಗ ಕನಿಷ್ಠ ೨೦ ಸಲ ಸರಕಾರಕ್ಕೆ ಸೋಲೊದಗಿತು. ಯಾವುದೊಂದು ಕಾಯಿದೆಯಾಗುವದನ್ನು ತಡೆಯಲು ಲಾರ್ಡ್ಸ ಸಭೆಗೆ ಅಧಿಕಾರವಿಲ್ಲ ನಿಜ. ಆದರೆ ಯಾವುದೊಂದು ಕ್ರಮವನ್ನು ವಿಲಂಬಗೊಳಿಸಲು ಅದಕ್ಕೆ ಸಾಧ್ಯವಿದೆ. ಕೂಲಿಕಾರ ಸರಕಾರದ ಇನ್ನು ಮೂರು ವರ್ಷದ ಅಧಿಕಾರಾವಧಿಯಲ್ಲಿ ಅದು ಹಲವು ಯೋಜನೆಗಳನ್ನು ಆಚರಣೆಗೆ ತರಲು ಯೋಚಿಸಿದೆ. ಲಾರ್ಡ್ಸ ಭವನದ ಬಂಡವಲಗಾರರು ಹೀಗೆಯೆ ವರ್ತಿಸಿದರೆ ಆ ಸಭೆಯ ಅಧಿಕಾರಗಳನ್ನೆ ಕಸಿದುಕೊಳ್ಳುವ ಕ್ರಮಗಳನ್ನು ಕೂಲಿಕಾರ ಸರಕಾರ ತೆಗೆದುಕೊಳ್ಳಬೇಕಾದೀತು. ಕಳೆದ ೧೯೧೧ ರಲ್ಲಿ ಒಮ್ಮೆ ಹೀಗೆ ಅದರ ಅಧಿಕಾರಕ್ಕೆ ಕಡಿತ ಬಿದ್ದಿತ್ತು. ಮುಂದಿನ ಚುನಾವಣೆಗಳಲ್ಲಿ ಈ ಪ್ರಶ್ನೆಯನ್ನೆ ಎತ್ತಿಕೊಂಡು ಕೂಲಿಕಾರ ಪಕ್ಷ ಹೋರಾಡಬಹುದು. ಈಗಿನ ಲಾರ್ಡ್ಸ ಸಭೆಯಲ್ಲಿರುವ ೮೦೦ ಕ್ಕೆ ಮಿಕ್ಕಿದಷ್ಟು ಸದಸ್ಯರಲ್ಲಿ ಕೂಲಿಕಾರ ಪಕ್ಷದವರು ಬರಿ ನಲವತ್ತರಷ್ಟಿರುವರು. ಸಭೆಗೆ ತಮ್ಮ ಪಕ್ಷದ ಬೇಕಾದಷ್ಟು ಸದಸ್ಯರನ್ನು ನೇಮಿಸುವಂತೆ ಅರಸನಿಗೆ ಸೂಚಿಸುವ ಅಧಿಕಾರ ಮುಖ್ಯ ಮಂತ್ರಿಗಿದ್ದರೂ ಕೂಲಿಕಾರರ ಬಹುಮತವಾಗುವಷ್ಟು ಸದಸ್ಯರನ್ನು ನೇಮಿಸಿದರೆ ಸಭೆ ಕಾರ್ಯ ಮಾಡಲಾರದಷ್ಟು ಅವಾಢವ್ಯವಾಗುವದು. ಅದರಿಂದ ಆ ಸಭೆಯನ್ನೇ "ನಿಶ್ಯಸ್ತ್ರ" ಮಾಡುವ ಅವಶ್ಯಕತೆ.

✲ ಬ್ರಿಟಿಶ ಗೃಹಿಣಿಯರೂ ಪತ್ರಿಕಾಕರ್ತರೂ ಸರಕಾರದ ಮೇಲೆ ಸಿಟ್ಟಾಗಿದ್ದಾರೆ. ಮಾಂಸದ ಸೀದಾವನ್ನು ಕಡಿದದ್ದಕ್ಕೆ ಗೃಹಿಣಿಯರ ಕೋಪ. ವೃತ್ತಪತ್ರ ಕಾಗದದ ಸೀದಾ ಕಡಿದದ್ದಕ್ಕೆ ಪತ್ರಿಕಾಕರ್ತರ ಸಿಟ್ಟು. ಈಚೆಗೆ ಡಾಲರುಗಳಲ್ಲಿ ವಿತ್ಯಯಮಾಡುವ ಸಲುವಾಗಿ 'ಮಿತ ಭೋಜನ' ಕ್ರಮಗಳನ್ನು ಸರಕಾರ ಕೈಕೊಳ್ಳಬೇಕಾಯಿತು. ಕಳೆದ ವರ್ಷ ಬ್ರಿಟನ್ನು ಅಮೇರಿಕೆಯಿಂದ ಪಡೆದ ಸಾಲ ನಿರೀಕ್ಷಿಸಿದ್ದಕ್ಕಿಂತ ಬೇಗನೆ ಕರಗುತ್ತಿದೆ. ಮಾರ್ಶಲ ಯೋಜನೆಯಂತೆ ಸಹಾಯ ದೊರಕುವ ವರೆಗೆ ಸಾಗಿಸಿಕೊಂಡು ಹೋಗುವದೆ ಹಣಕಾಸಿನಮಂತ್ರಿ ಡಾಲ್ಟನ್ನರಿಗೆ ಪ್ರಾಣಕ್ಕೆ ಬಂದಿದೆ.

✲ ಬ್ರಿಟಿಶ ಕೂಲಿಕಾರ ಸರಕಾರ ಕೈಕೊಂಡ ರಾಷ್ಟ್ರೀಕರಣ ಯೋಜನೆಗಳಿಂದ ಅಲ್ಲಿಯ ಬಂಡವಲಗಾರರು ಧೈರ್ಯಗುಂದಿದ್ದಾರೆ. ಹೊಸ ಉದ್ಯೋಗಗಳನ್ನು ಇಂಗ್ಲಂಡಿನಲ್ಲಿ ಸ್ಥಾಪಿಸುವ ಗೋಜಿಗೆ ಹೋಗದೆ ಅವರು ಪ್ರತಿಗಾಮಿಗಳ ಪಟ್ಟಾದ ದಕ್ಷಿಣ ಆಫ್ರಿಕೆಯ ಕಡೆಗೆ ಹೊರಳಿದ್ದಾರೆ. ಈಗಾಗಲೆ ೭೫೦ ಲಕ್ಷ ಪೌಂಡುಗಳಷ್ಟು ಬ್ರಿಟಿಶ ಬಂಡವಲು ದಕ್ಷಿಣ ಆಫ್ರಿಕೆಗೆ ಸಾಗಿದೆಯೆಂದು ಲೆಕ್ಕ ಹಾಕಲಾಗಿದೆ.

ಫ್ರೆಂಚ ಒಳಸಂಚು

ಫ್ರೆಂಚ ಪ್ರಜಾರಾಜ್ಯವನ್ನು ಬುಡಮೇಲು ಮಾಡಿ ಅಲ್ಲಿ ಫ್ಯಾಸಿಸ್ಟ ಸರ್ವಾಧಿಕಾರವನ್ನು ಸ್ಥಾಪಿಸುವ ಒಳಸಂಚಿನ ಬೇರುಗಳು ಮೊದಲು ಎಣಿಸಿದ್ದಕ್ಕಿಂತ ಹೆಚ್ಚು ಆಳವಾಗಿವೆಯೆಂದು ತೋರುತ್ತದೆ. ಅದರ ಮೂಲ ಸೈನ್ಯ ಖಾತೆಯಲ್ಲಿಯೆ ಇದೆಯೋನೊ. ನಾಲ್ವರು ಸೇನಾಪತಿಗಳನ್ನು ಸೆರೆಹಿಡಿಯಲಾಗಿದೆ. ಫ್ರೆಂಚ ಕೆಮೆರೂನ ದ್ವೀಪಗಳ ಸೇನಾಪತಿಯಾಗಿದ್ದ ಲೆಮೆನಾಟನನ್ನು ಈ ಸಂಬಂಧದಲ್ಲಿ "ಪ್ರಶ್ನಿಸಲು" ಅವಸರದಿಂದ ಕರೆಸಲಾಗಿದೆ. ಪೆಟೇನರ ಕಾಲದ ಪೋಲೀಸ ಅಧಿಕಾರಿಯೊಬ್ಬನೂ ಬಂಧಿಸಲ್ಪಟ್ಟಿದ್ದಾನೆ. ಈ ಒಳಸಂಚಿನಲ್ಲಿ ಪ್ರಮುಖನೆನಿಸಿಕೊಂಡವನೊಬ್ಬನು ಅಮೇರಿಕನ್ ಸುದ್ದಿಗಾರನಿಗೆಕೊಟ್ಟ ಗುಪ್ತ ಹೇಳಿಕೆಯಲ್ಲಿ, ಇನ್ನೂ ಸಾವಿರಾರು ಜನರು ಆಜ್ಞೆಯಾದೊಡನೆ ಪ್ಯಾರೀಸಿನ ಮೇಲೇರಿ ಹೋಗಲು ಸಿದ್ಧರಾಗಿರುವರೆಂದು ಹೇಳಿದನಂತೆ. ಶಾಸನ ಸಭೆಯ ಬಲ ಪಕ್ಷದವರಿಗೆ ಈ ಒಳಸಂಚಿನ ಸಂಬಂಧವುಟೆಂದು ಕಳೆದ ವಾರ ಮುಖ್ಯ ಮಂತ್ರಿ ರಮೇದಿಯರರು ಆರೋಪಿಸಿದರು.

ಫ್ರೆಂಚ ಸರಕಾರದ ಸಾಗರೋತ್ತರ ಚಿಂತೆಗಳೂ ಬೆಳೆಯುತ್ತಲೆ ಇವೆ.

✲ ಭೂಮಧ್ಯಸಮುದ್ರದ ಆಚೆ ದಡದ ಫ್ರೆಂಚ ಮೊರಕೊದಲ್ಲಿ ಜನರ ಸ್ವಾತಂತ್ರ್ಯ ಪಿಪಾಸೆ ಉಗ್ರವಾಗಿದೆ. ಫ್ರೆಂಚರ ವಿರುದ್ಧ ಒಳಸಂಚುಮಾಡಿದ ಆರೋಪಕ್ಕಾಗಿ ೨೧ ವರ್ಷದಿಂದ ದ್ವೀಪಾಂತರದಲ್ಲಿ ಸೆರೆಯಾಳಾಗಿದ್ದ ಮೊರಕನ್ ನಾಯಕ ಅಬ್ದುಲ ಕರೀಮನು ಕಳೆದ ತಿಂಗಳು ಇಜಿಪ್ತಿಗೆ ತಲೆ ತಪ್ಪಿಸಿಕೊಂಡು ಹೋಗಿದ್ದರಿಂದ ಫ್ರೆಂಚರು ನಡುಗಿದ್ದಾರೆ. ಮೊರಕೋದಲ್ಲಿ ಒಬ್ಬ ಸುಲ್ತಾನನಿದ್ದು ಅವನ ಮೇಲೆ ಫ್ರೆಂಚರ 'ಸಂರಕ್ಷಣೆ'ಯಿದೆ. ಅರ್ಥಾತ್ ಫ್ರೆಂಚರೇ ಆಳುತ್ತಾರೆ. ಈಗ ಮೊರಕೋದ ಸುಲ್ತಾನನ ಕೆಳಗೆ ೧೨ ಮೊರಕನ್ ಮತ್ತು ೧೨ ಫ್ರೆಂಚ ಜನರಿಂದ ಕೂಡಿದ ಒಂದು 'ವಜೀರ ಮಂಡಲ' ನೇಮಿಸುವ 'ರಾಜಕೀಯ ಸುಧಾರಣೆ'ಯನ್ನು ಫ್ರೆಂಚರು ಸಾರಿದ್ದಾರೆ. ಆದರೆ ಇಷ್ಟೊಂದರಿಂದಲೆ ಮೊರಕ್ಕನ್ನರು ಸಂತುಷ್ಟರಾಗುವಂತೆ ತೋರಲಿಲ್ಲ.

✲ ಇಂಡೋಚೀನದಲ್ಲಿ ಫ್ರೆಂಚರಿಗೆ ಬಯಸಿದಂತೆ ಶೀಘ್ರ ಮಿಲಿಟರಿ ವಿಜಯ ದೊರೆಯಲಿಲ್ಲ. ಈಗ ಸ್ವಾತಂತ್ರ್ಯವಾದಿಗಳು ಸರ್ವವ್ಯಾಪಿಯಾದ ಅಸಹಕಾರ ಯೋಜನೆಯೊಂದನ್ನು ಸಿದ್ಧಗೊಳಿಸಿದ್ದಾರೆ. ಅದರಲ್ಲಿ ಫ್ರೆಂಚರ ಕೆಳಗೆ ನೌಕರಿ ಮಾಡದಿರುವದು, ಅವರು ಆಕ್ರಮಿಸಿದ ಭಾಗಗಳಿಗೆ ಆಹಾರಾದಿ ಅವಶ್ಯ ವಸ್ತುಗಳು ಹೋಗದಂತೆ ತಡೆಯುವದು ಮೊದಲಾದ್ದು ಸೇರಿದೆ. ಯೋಜನೆ ಇನ್ನೂ ಜಾರಿಗೆ ಬಂದಿರದಿದ್ದರೂ ಅನೇಕ ಕಾರಕೂನರೇ ಮೊದಲಾದವರು ರಾಜೀನಾಮೆ ಕೊಟ್ಟಿರುವರಲ್ಲದೆ "ಕಾರ್ಯ ವಿಲಂಬ"ದ ಪ್ರಯೋಗದಿಂದ ಫ್ರೆಂಚ ಸರಕಾರಿ ಕಚೇರಿಗಳಲ್ಲಿ ಕೆಲಸ ಹಿಂದೆ ಬೀಳತೊಡಗಿದೆ.

✲ ಮಡಗಾಸ್ಕರ ದ್ವೀಪದ ಸ್ವಾತಂತ್ರ್ಯವಾದಿಗಳ ದಂಗೆ ಇನ್ನೂ ಹಿಡಿತಕ್ಕೆ ಬಂದಿಲ್ಲ. ಅವರು ಆಗಾಗ್ಗೆ ಫ್ರೆಂಚರ ಮೇಲೆ ದಾಳಿ ಮಾಡುತ್ತಲೆ ಇದ್ದಾರೆ.

ಇಜಿಪ್ತದ ಸ್ಟರ್ಲಿಂಗುಗಳು

ಹಿಂದುಸ್ತಾನವನ್ನು ಬಿಟ್ಟರೆ ಯುದ್ಧಕಾಲದಲ್ಲಿ ಬ್ರಿಟಿಶರಿಗೆ ಸಾಲಕೊಟ್ಟು ಸ್ಟರ್ಲಿಂಗಗಳನ್ನು ಸಂಗ್ರಹಿಸಿದ ದೇಶಗಳಲ್ಲಿ ಇಜಿಪ್ತು ಅಗ್ರಗಣ್ಯವಾದುದು. ಅದಕ್ಕೆ ಬ್ರಿಟನ್ನಿನಿಂದ ೪೧ ಕೋಟಿ ಪೌಂಡು ಬರಬೇಕು. ಆದರೆ ಕಳೆದ ವಾರ ಬ್ರಿಟಿಶ ಅರ್ಥಿಕ ಮಂತ್ರಿ ಹ್ಯೂ ಡಾಲ್ಟನ್ನರು ಪಾರ್ಲಮೆಂಟಿನಲ್ಲಿ ಈ ಸಾಲವನ್ನು ಸಲ್ಲಿಸಲು ಬ್ರಿಟಿಶರು ನೈತಿಕ ದೃಷ್ಟಿಯಿಂದ ಸ್ವಲ್ಪವೂ [illegible] ಕಾಲ ಹಿಂದೆ [illegible] ಬೇಕೆ, ಎಷ್ಟು [illegible] ಕಷ್ಟಗಳಿಂದ [illegible] ಸರಕಾರ [illegible] ನೈತಿಕ [illegible] ಯೋಗಕ್ಕೆ [illegible] ಆದರೆ ೪ ಕೋಟಿ ಪೌಂಡುಗಳನ್ನು [illegible] ಲಕ್ಕ [illegible] ಕೋಟಿಯಲ್ಲಿ ಎಷ್ಟನ್ನು [illegible]

ಇಂಡೋನೇಶಿಯಾದಲ್ಲಿ ಹೊಸ ಮಂತ್ರಿಮಂಡಲ

ಡಾ. ಶಹರೀರರ ರಾಜೀನಾಮೆಯಿಂದ [illegible] ಇಂಡೊನೇಶಿಯಾದ ಮಂತ್ರಿ [illegible] ವಿವಿಧ ಪಂಗಡಗಳಲ್ಲಿ [illegible] ವಾರ [illegible] ಕಳೆದ ವಾರ [illegible] ಸಾಮ್ಯವಾದಿ ಪಕ್ಷದ ಡಾ. [illegible] ಮುಖ್ಯ ಮಂತ್ರಿಗಳಾಗಿ [illegible] ಸಂಯುಕ್ತ ಮಂತ್ರಿಮಂಡಲವನ್ನು [illegible] ಹೊಸ ಮಂತ್ರಿಮಂಡಲದಲ್ಲಿ [illegible] ಅವಿಶ್ವಾಸವಿರುವವರಿಗೇ ಪ್ರಾಧಾನ್ಯ [illegible] ಇದರಿಂದ ಅವರಿಗೆ ಅಸಂತೋಷವಾಗಿದೆ [illegible].

ಹೊಸ ಮಂತ್ರಿಮಂಡಲ [illegible] ರಾಯಸಕ್ಕೆ ಕಳಿಸಿದ ಉತ್ತರದಲ್ಲಿ ಅವರ [illegible] ಗಳನ್ನೆಲ್ಲ ಬಹುತರ ಒಪ್ಪಿಕೊಂಡಿದೆ. ೧೯೪೯ ಕ್ಕೆ ಇಂಡೊನೇಶಿಯಾದ ಸಂಯುಕ್ತ ರಾಜ್ಯ ಸ್ಥಾಪಿತವಾಗುವ ವರೆಗೆ ನಡುಗಾಲ ಸರಕಾರ ಬೇಕೆಂಬುದಕ್ಕೂ ಆ ವರೆಗೆ [illegible] ನರನೇ ಪರಿಪ್ಲಾಧಿಕಾರಿಯೆಂಬುದಕ್ಕೂ [illegible] ಸಿದೆ. ಆದರೆ ಪ್ರಜಾರಾಜ್ಯಕ್ಕೆ ಸೇರಿದ [illegible] ಪೋಲೀಸು ಪಡೆ ಮತ್ತು ವಿದೇಶ [illegible] ಸಂಬಂಧದ ಕಲಮುಗಳನ್ನು [illegible] ಸಿದೆ.

ಇದರಿಂದ ಡಚ್ಚರು ಅಸಮಾಧಾನಗೊಂಡಿದ್ದಾರೆಂದು ಗವರ್ನರ [illegible] ಸಾರಿದರು. ಆ ಮೇಲೆ ಪುನಃ ಕೆಲ [illegible] ಕೊಟ್ಟು ಇನ್ನೊಂದು ರಾಯಸ [illegible]

ಶರೀಫುದ್ದೀನ ಸರಕಾರ ಶಾಂತಿಗಾಗಿ [illegible] ಸೌಕರ್ಯ ಕೊಡಲು ಸಿದ್ಧವಿದ್ದರೂ ಯುದ್ಧಕ್ಕೆ ಸದಾ ಸಿದ್ಧವಾಗಿದೆ. ಈ ಕಂಟಿಯಲ್ಲಿ ಬ್ರಿಟಿಶರೂ ಅಮೇರಿಕನ್ನರೂ ಮಧ್ಯಸ್ಥಿಕೆ ವಹಿಸುವ ಸಂಭವವುಂಟು.

ಹಾರುವ "ಬಸಿ"ಗಳು

ಅಮೇರಿಕನ್ ಸೈನ್ಯ ಖಾತೆಯವರನ್ನು [illegible] ಡಿಸಿದ ವಿಚಿತ್ರವೊಂದು ಅಮೇರಿಕೆಯ [illegible] ಕರಾವಳಿಯ ಆಕಾಶದಲ್ಲಿ ಈಗ ಕೆಲ ದಿನ [illegible] ಗೋಚರಕ್ಕೆ ಬರುತಿದೆ. ಅದಕ್ಕಾಗಿ [illegible] ಯಾದ ಗಗನದಲ್ಲಿ ವಿಮಾನಗಳು [illegible] ಕಾವಲು ಹೂಡಿವೆ. ಈ ವಿಚಿತ್ರ ಮೊಟ್ಟ ಮೊದಲು ಜೂನ ೨೪ ಕ್ಕೆ ಗೋಚರಿಸಿತು. ಆಗ [illegible] ಅದರ ಸುದ್ದಿಯನ್ನು ತಿರಸ್ಕಾರದ ನಗೆಯಿಂದ ಎದುರಿಸಿದ್ದರು. ಆದರೆ ಅವರಿಂದೀಚೆಗೆ ಅದು ಹೆಚ್ಚು ಚಿಂತಾಜನಕವಾಗುತಿದೆ. [illegible] ಅದು ಪುನಃ ಅಧಿಕ ಸಂಖ್ಯೆಯಲ್ಲಿ ಕಾಣಿಸಿಕ್ಕಿತು. ಈ ಅದ್ಭುತವೆಂದರೆ "ಹಾರಾಡುವ [illegible] ೧೦೦೦೦ ಅಡಿ ಎತ್ತರದಲ್ಲಿ ದೊಡ್ಡ ವಿಮಾನ ಗುಂಪಿನಷ್ಟು ಅಗಲವಾದ ದುಂಡನ್ [illegible] ವಸ್ತುಗಳು ಹಾರುತಿವೆಯಂತೆ. ಅಮೇರಿಕನ್ ನೌಕಾಪಡೆಯಾಗಲಿ ವಿಮಾನ [illegible] ಅಣುಶಕ್ತಿ ಖಾತೆಯಾಗಲಿ ಅವುಗಳನ್ನು [illegible] ಸುತ್ತ ಇಲ್ಲಂತೆ. ಈ ಹಾರುವ [illegible] ತಾಸಿಗೆ ೩೦೦ ರಿಂದ ೧೨೦೦ ಮೈಲು ವೇಗದಿಂದ ಹಾರುತ್ತವೆಯಂತೆ. ಅವು ಎಲ್ಲಿಂದ ಬಂದವು, ಹೇಗೆ ಬಂದವೆಂಬದಾವದರ ಸುಳಿವೂ ಹತ್ತಿಲ್ಲ.

× × ×

ಬ್ರಹ್ಮದೇಶಕ್ಕೆ ಸ್ವಾತಂತ್ರ್ಯ ಕೊಡುವ ಮಸೂದೆ ಅದೇ ನವಂಬರದಲ್ಲಿ ಪಾರ್ಲಮೆಂಟಿನ ಮುಂದೆ ಬರುವದು.

× × ×

ಅಮೇರಿಕೆಯ ಗುಪ್ತಚರ ಖಾತೆಯ [illegible] ರಲ್ ಝುಕರಿಯಾಸ ಎಂಬವರು [illegible] ಯುದ್ಧದ ಬಗ್ಗೆ ಕೆಲ ಅಂಕೆ [illegible] ಕೊಟ್ಟಿದ್ದಾರೆ. ಅಮೇರಿಕನ್ ಮತ್ತು [illegible] ಗುಂಪುಗಳಲ್ಲಿ ಯುದ್ಧವಾಗುವದಿ [illegible] ಅಮೇರಿಕೆಯ ಪಕ್ಷದಲ್ಲಿ [illegible] ಲಕ್ಷ [illegible] ಪಕ್ಷದಲ್ಲಿ [illegible] ಲಕ್ಷ ಜನರು [illegible] ಹಿಂದುಸ್ತಾನ ಮೊದಲಾದ [illegible] ಲಕ್ಷ ಜನರು [illegible] ಫ್ರಾನ್ಸ, ಚೀನಗಳಂಥ ದೇಶಗಳಲ್ಲಿ [illegible] ಅಂತರ್ಯುದ್ಧದಲ್ಲಿ [illegible] ಅವರ ಅಭಿಪ್ರಾಯ.

ಜೀವನ ಮತ್ತು ವಿಜ್ಞಾನ

ಲೇ— ಶ್ರೀ ವೆಂಕೋಬಾಚಾರ್ಯ ಉಪಾಧ್ಯಾಯ
ಎಂ. ಎಸ್ ಸಿ.

ಗಂಧಕಾಮ್ಲ

ಗಂಧಕ (Sulphur) ದಿಂದ ಅಥವಾ ಇದರ ಸಂಯುಕ್ತಗಳಿಂದ ತಯಾರಾದ ಆಮ್ಲಕ್ಕೆ ಗಂಧಕಾಮ್ಲವೆಂದು ಹೆಸರು. ಇದನ್ನು ತಯಾರಿಸಬೇಕಾದರೆ ಮೊದಲು ಗಂಧಕದ ಡಾಯ ಆಕ್ಸಾಯಿಡು (Sulphur dioxide) ತಯಾರಿಸಬೇಕಾಗುತ್ತದೆ. ಈ ಆಕ್ಸಾಯಿಡು ಗಂಧಕ ಮತ್ತು ಆಮ್ಲಜನಕದಿಂದ ಕೂಡಿದ ಒಂದು ಸಂಯುಕ್ತವಾಗಿದೆ. ಇದನ್ನು ತಯಾರಿಸಬೇಕಾದರೆ ಗಂಧಕವನ್ನು ಅಥವಾ ಗಂಧಕ ಮತ್ತು ಕಬ್ಬಿಣದಿಂದ ಕೂಡಿದ ಒಂದು ಸಂಯುಕ್ತವಾದ ಆಯರ್ನ್ ಪೈರೈಟೀಜ್ (Ironpyrites) ನ್ನು ಭಟ್ಟಿಗಳಲ್ಲಿ ಸುಡುತ್ತಾರೆ. ಸುಡುವುದರಿಂದುಂಟಾದ ಗಂಧಕದ ಡಾಯ ಆಕ್ಸಾಯಿಡು ಮತ್ತು ಗಾಳಿಯಲ್ಲಿದ್ದ ಆಮ್ಲಜನಕದ ರಾಸಾಯನಿಕ ಮಿಲನದಿಂದ ಮತ್ತೊಂದು ಸಂಯುಕ್ತವು ತಯಾರಾಗುತ್ತದೆ. ಈ ಸಂಯುಕ್ತಕ್ಕೆ ಗಂಧಕದ ಟ್ರಾಯ ಆಕ್ಸಾಯಿಡು (Sulphur trioxide) ಎಂದು ಹೆಸರು. ಇದರಲ್ಲಿ ಆಮ್ಲಜನಕದ ಪ್ರಮಾಣವು ಗಂಧಕದ ಡಾಯ ಆಕ್ಸಾಯಿಡಕ್ಕಿಂತ ಅಧಿಕವಾಗಿರುತ್ತದೆ. ಸಾಮಾನ್ಯ ಸ್ಥಿತಿಯಲ್ಲಿ ಗಂಧಕದ ಡಾಯ ಆಕ್ಸಾಯಿಡು ಮತ್ತು ಆಮ್ಲಜನಕಗಳ ನಡುವೆ ರಾಸಾಯನಿಕ ಕ್ರಿಯೆಯು ಬಹಳ ನಿಧಾನವಾಗಿ ಆಗುತ್ತದೆ. ಆದರೆ ಇವುಗಳಲ್ಲಿ ಕೆಲವೊಂದು ವೇಗವರ್ಧಕ ವಸ್ತುಗಳನ್ನು (Catelysts) ಉದಾಹರಣವಾಗಿ, ಮಹಾರಜತ ಅಥವಾ ಪ್ಲಾಟೀನಂ ಉಪಯೋಗಿಸಿದರೆ, ರಾಸಾಯನಿಕ ಕ್ರಿಯೆಯು ವೇಗವು ಹೆಚ್ಚಾಗಿ, ಗಂಧಕದ ಡಾಯ ಆಕ್ಸಾಯಿಡು ಬಹುಬೇಗ ಟ್ರಾಯ ಆಕ್ಸಾಯಿಡಿನಲ್ಲಿ ಪರಿವರ್ತನೆಯಾಗುತ್ತದೆ. ಟ್ರಾಯ ಆಕ್ಸಾಯಿಡು ತಯಾರಾದ ನಂತರ ಗಂಧಕಾಮ್ಲವನ್ನು ತಯಾರಿಸುವುದು ಸುಲಭವಾದ ಕೆಲಸ. ಏಕೆಂದರೆ ನೀರಿನ ಮೇಲೆ ಬಹುಬೇಗ ಈ ಆಕ್ಸಾಯಿಡಿನ ಕ್ರಿಯೆಯಾಗಿ ಗಂಧಕಾಮ್ಲವು ಹುಟ್ಟುತ್ತದೆ. ಸಾಮಾನ್ಯವಾಗಿ ಈ ವಿಧಾನಕ್ಕೆ "ಸಂಪರ್ಕ ವಿಧಾನ" (Contact process) ವೆಂದು ಕರೆಯಲಾಗಿದೆ. ಈ ವಿಧಾನವಲ್ಲದೆ, ಗಂಧಕಾಮ್ಲವನ್ನು ತಯಾ ರಿ ಸು ವ ಇ ನ್ನೊಂ ದು ವಿಧಾನವೂ ಇದೆ. ಇದರಲ್ಲಿ ಗಂಧಕದ ಡಾಯ ಆಕ್ಸಾಯಿಡು, ಗಾಳಿ ಮತ್ತು ನೀರನ್ನು ನೈಟ್ರಿಕ್ ಆಕ್ಸಾಯಿಡ್ ಅನಿಲ (Nitric oxide gas) ದ ಸಾನ್ನಿಧ್ಯದಲ್ಲಿ ಪರಸ್ಪರ ಕಲೆಯುವುದಕ್ಕೆ ಬಿಟ್ಟುಬಿಡುತ್ತಾರೆ. ಇದರಿಂದ ದುರ್ಬಲ ಗಂಧಕಾಮ್ಲ (Dilute Sulphuric Acid) ದ ದ್ರಾವಕವು ತಯಾರಾಗುತ್ತದೆ. ಅನಂತರ ಇದನ್ನು ಬಿಚ್ಚಗೆ ಮಾಡಿ, ಇದರಲ್ಲಿದ್ದ ನೀರನ್ನು ಬೇರ್ಪಡಿಸಿ, ನಿರ್ಜಲ ಗಂಧಕಾಮ್ಲ (Concentrated Sulphuric Acid) ವನ್ನು ತಯಾರಿಸುತ್ತಾರೆ. ಈ ಕ್ರಿಯೆಯು ಒಂದು ಸೀಸದ ಕೋಣೆಯಲ್ಲಿ ಆಗುವುದರ ಮೂಲಕ ಈ ವಿಧಾನಕ್ಕೆ "ಕೋಣೆಯ ವಿಧಾನ" (Chamber Process) ಎಂದು ಹೆಸರು ಕೊಡಲಾಗಿದೆ. ಈ ಎರಡೂ ವಿಧಾನಗಳು ಹೆಚ್ಚಿನ ಪ್ರಮಾಣದಲ್ಲಿ ಗಂಧಕಾಮ್ಲವನ್ನು ತಯಾರಿಸಲಿಕ್ಕೆ ಉಪಯೋಗವಾಗುತ್ತವೆ.

ಸದ್ಯಕ್ಕೆ ಹಿಂದುಸ್ತಾನದಲ್ಲಿ ಗಂಧಕಾಮ್ಲವು ಹೆಚ್ಚಿನ ಪ್ರಮಾಣದಲ್ಲಿ, ಜಮಶೇದಪುರು (ಟಾಟಾ ಆಯರ್ನ ಅಂಡ ಸ್ಟೀಲಕಂಪನಿ) ಕಲ್ಕತ್ತಿ (ಬಂಗಾಲ ಕೆಮಿಕಲ್ ಅಂಡ ಫಾರ್ಮಾಸ್ಯೂಟಿಕಲ್ ವರ್ಕ್ಸ), ಮೈಸೂರು (ಕೆಮಿಕಲ್ಸ್ ಅಂಡ ಫರ್ಟಿಲಾಯಿಜರ್ಸ್), ಮದ್ರಾಸು (ಪ್ಯೆರ್ರಿ ಅಂಡ ಕಂಪನಿ), ಮುಂಬಯಿ (ಧರ್ಮಸಿ ಮುರಾರಜಿ), ಅಮೃತಸರ (ಶಂಭುನಾಥ ಅಂಡ ಸನ್ಸ್), ಆಗ್ರಾ (ಬ್ರ್ಯೂಯಿಂಗ್ ಅಂಡ ಕೆಮಿಕಲ್ ಇಂಡಸ್ಟ್ರೀಜ್ ಲಿಮಿಟೆಡ್), ಹೈದರಾಬಾದು (ಹೈದರಾಬಾದ ಕೆಮಿಕಲ್ಸ್ ಅಂಡ ಫರ್ಟಿಲಾಯಿಜರ್ಸ್) ಮತ್ತು ಕಾನಪೂರ (ಕಾನಪೂರ ಕೆಮಿಕಲ್ ವರ್ಕ್ಸ) ಗಳಲ್ಲಿ ತಯಾರಾಗುತ್ತದೆ. ಜಮಶೇದಪುರು, ಕಲ್ಕತ್ತ ಮತ್ತು ಮೈಸೂರುಗಳಲ್ಲಿ "ಸಂಪರ್ಕ ವಿಧಾನ" ದಿಂದಲೂ ಉಳಿದೆಲ್ಲ ಕಾರ್ಖಾನೆಗಳಲ್ಲಿ "ಚೇಂಬರ ವಿಧಾನ" ದಿಂದಲೂ ತಯಾರಿಸುತ್ತಾರೆ.

ಪ್ರತಿಯೊಂದು ಉದ್ಯಮದಲ್ಲಿ ಗಂಧಕಾಮ್ಲದ ಉಪಯೋಗವಿರುವುದರಿಂದ, ಎಲ್ಲಿಯವರೆಗೆ ಇದು ಹಿಂದುಸ್ತಾನದಲ್ಲಿ ಸಾಕಷ್ಟು ಪ್ರಮಾಣದಲ್ಲಿ ತಯಾರಾಗುವದಿಲ್ಲವೋ ಅಲ್ಲಿಯವರೆಗೆ ಹಿಂದುಸ್ತಾನದ ರಾಸಾಯನಿಕ ಉದ್ಯಮಗಳಾಗಲೀ ಅಥವಾ ಮತ್ತಿತರ ಉದ್ಯಮಗಳಾಗಲಿ ಏಳಿಗೆಯಾಗುವಂತಿಲ್ಲ. ಈ ಆಮ್ಲವನ್ನು ತಯಾರಿಸಲಿಕ್ಕೆ ಬೇಕಾದ ಕಚ್ಚಾ ವಸ್ತುಗಳಲ್ಲಿ ಪ್ರಕೃತಿದತ್ತವಾದ ಗಂಧಕ (Brim Stone) ಮತ್ತು ಆಯರ್ನ ಪೈರೈಟೀಜ್ ಮುಖ್ಯವಾದವುಗಳು. ಪ್ರಕೃತಿದತ್ತವಾದ ಗಂಧಕವು ಕೇವಲ ಬಲೂಚಿಸ್ತಾನ ಮತ್ತು ಸಿಮ್ಲಾದ ಗುಡ್ಡಗಳಲ್ಲಷ್ಟೆ ಸಿಕ್ಕುತ್ತದೆ. ಆಯರ್ನ ಸಲ್ಫಾಯಿಡು, ಸಿಮ್ಲಾದ ಹತ್ತಿರದಲ್ಲಿರುವ ತಾರಾದೇವಿ ಎಂಬ ಸ್ಥಳದಲ್ಲಿಯೂ ಮತ್ತು ಹೈದರಾಬಾದು ದಕ್ಷಿಣದಲ್ಲಿರುವ ತಾಂಡೂರು ಕಲ್ಲಿದ್ದಲಿನ ಗಣಿಯಲ್ಲಿಯೂ ಸಿಕ್ಕುತ್ತದೆ. ಹಿಂದುಸ್ತಾನದಲ್ಲಿ ಇಲ್ಲಿಯ ವರೆಗೆ, ಗಂಧಕಾಮ್ಲವನ್ನು ತಯಾರಿಸಲಿಕ್ಕೆ ಬೇಕಾಗುವ ಗಂಧಕವನ್ನು ಸಿಸಲಿ, ಜಪಾನು ಮತ್ತು ಅಮೇರಿಕೆಗಳಿಂದ ಬರಮಾಡಿಕೊಳ್ಳುತ್ತಿದ್ದರು. ಯುದ್ಧದ ಮೂಲಕ ಸಿಸಲಿ ಮತ್ತು ಜಪಾನಿನಿಂದ ಗಂಧಕದ ಆಯಾತ ನಿಂತ ಕಾರಣ ಸದ್ಯಃ ಅಮೇರಿಕೆಯಿಂದ ಬರುವ ಗಂಧಕವಷ್ಟೇ ಉಪಯೋಗಿಸಲ್ಪಡುತ್ತಿದೆ.

ಪ್ರಯೋಗ ಶಾಲೆಯಲ್ಲಿ ಗಂಧಕಾಮ್ಲವು ಬಹುತರವಾಗಿ ಎಲ್ಲ ಅನಿಲಗಳನ್ನು ಶುಷ್ಕ ಮಾಡುವಾಗ, ಅವುಗಳಲ್ಲಿದ್ದ ತೇವ ಅಥವಾ ನೀರನ್ನು ಹೀರಿಕೊಳ್ಳುವುದಕ್ಕೆ "ಜಲಗ್ರಾಹಕ" (Drying Agent) ದಂತೆ ಉಪಯೋಗವಾಗುವುದಲ್ಲದೆ, ನೈಟ್ರೇಟ, ಸಲ್ಫೇಟ ಸಂಯುಕ್ತಗಳನ್ನು ಮತ್ತು ಸಲ್ಫೋನಿಕ್ ಆಮ್ಲ (Sulphoric Acids) ಗಳನ್ನು ತಯಾರಿಸುವ ವಿಧಾನಗಳಲ್ಲಿಯು ಕೂಡ ಉಪಯೋಗವಾಗುತ್ತದೆ. ಉದ್ಯಮಗಳಲ್ಲಿ ಇದನ್ನು, ಹೈಡ್ರೋಕ್ಲೋರಿಕ್ ಮತ್ತು ನೈಟ್ರಿಕ್ ಆಮ್ಲ, ಪಟಿಕ, ಮೆಗ್ನೇಶಿಯಂ ಸಲ್ಫೇಟು, ಫೆರ್ರಸ್ ಸಲ್ಫೇಟು, ಕೃತಕ ಗೊಬ್ಬರ, ಸಿಡಿಮದ್ದು ಮತ್ತು ಬಣ್ಣಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಗಂಧಕಾಮ್ಲದ ವ್ಯಯದ ಮೇಲೆ ಯಾವುದೇ ದೇಶದ ಸರಿಯಾದ ವ್ಯಾವಹಾರಿಕ ಸಮಾಧಾನಕಾರಕತೆಯು ತೀರ್ಮಾನಿಸಲಾಗುತ್ತದೆ ಎಂದ ಮೇಲೆ ಉದ್ಯಮಗಳಲ್ಲಿ ಇದರ ಮಹತ್ವದ ವಿಷಯಕ್ಕೆ ಹೆಚ್ಚಿಗೆ ಹೇಳಬೇಕಾಗಿಲ್ಲ.

ಸಾದರ ಸ್ವೀಕಾರ

೧. ಘಟನಾ ಸಮಿತಿ

ಲೇಖಕರು:— ಕೃಷ್ಣಾಚಾರ್ಯ ಜೋಶಿ.
ಪ್ರಕಾಶನ— ರಾಜಕೀಯ ಗ್ರಂಥ ಪ್ರಕಾಶನ ಸಮಿತಿ. ಹೈದ್ರಾಬಾದ ಪುಟ ೧೦೬. ಬೆಲೆ ೧-೦-೦.

೨. ನೀತಿರಾಮಾಯಣ

ಲೇಖಕರು:— ಗಮಕಿ ಗುಂಡುರಾಮಯ್ಯ. ಅಧ್ಯಾಪಕರು ವಿಶ್ವವಿದ್ಯಾಲಯ ಚಿಕ್ಕಮಗಳೂರು.
ಪ್ರಕಾಶಕರು- ಸತ್ಯಶೋಧನ ಪ್ರಕಟನ ಮಂದಿರ, ಕೋಟೆ ಬೆಂಗಳೂರ ನಗರ. ಪುಟ ೧೦೦, ಬೆಲೆ ೧-೦-೦.

೩. ಧರ್ಮ ದುರಂತ

ಲೇಖಕರು:— ಎಂ. ಆರ್. ಶ್ರೀ.
ಪ್ರಕಾಶಕರು- ಸತ್ಯಶೋಧನ ಪ್ರಕಟನ ಮಂದಿರ, ಕೋಟೆ ಬೆಂಗಳೂರು ನಗರ. ಪುಟ ೧೬೦, ಬೆಲೆ ೨-೦-೦.

೪. ಸ್ವಪ್ನವಾಸವ ದತ್ತ

ಅನುವಾದಕ:— ಎಲ್. ಗುಂಡಪ್ಪ ಎಂ. ಎ.
ಪ್ರಕಾಶಕರು- ಸತ್ಯಶೋಧನ ಮಂದಿರ ಬೆಂಗಳೂರು. ಪುಟ ೫೬ ಬೆಲೆ ೦-೧೨-೦.

ಭಾರತ ಸ್ವಾತಂತ್ರ್ಯ ಮಸೂದೆಯ ವಿವರಗಳು

(ಮೊದಲನೆ ಪುಟದಿಂದ)

ಏಡನ್ನಿನ ಭವಿಷ್ಯ

೧೬ ನೆಯ ವಿಭಾಗದನುಸಾರ ಹಿಂದುಸ್ತಾನ ಸರಕಾರ ಕಾಯದೆಯಂತೆ ಚಕ್ರವರ್ತಿಗಳು ಏಡನ್ನಿನ ಆಡಳಿತ ಸಾಗಿಸುವುದು ನಿಂತು ೧೮೮೭ ಮತ್ತು ೧೯೪೫ ರ ಬ್ರಿಟಿಶ ವಸತಿಯ ಕಾಯದೆಯನ್ವಯ ಅದೊಂದು ಬ್ರಿಟಿಶ ವಸಾಹತೆಂದೇ ಗಣಿಸಲ್ಪಟ್ಟು ಆಡಳಿತ ನಡೆಸಲ್ಪಡುತ್ತದೆ.

ವಿವಾಹ ವಿಚ್ಛೇದದ ವ್ಯಾಪ್ತಿ

ವಿಭಾಗ ೧೭ ರ ಪ್ರಕಾರ ಹೊಸ ಸಾಮಂತ ಸರಕಾರಗಳು ಅಥವಾ ಪಾರ್ಲಿಮೆಂಟು, ಹೊಸ ಕಾಯದೆಯನ್ನು ಹೊರಡಿಸುವ ವರೆಗೆ ೧೯೨೬ ಮತ್ತು ೧೯೪೦ ರ "ವಸಾಹತುಗಳ ವಿವಾಹ ವಿಚ್ಛೇದ ಕಾಯದೆಗಳು" ಅಗಸ್ಟ ೧೫ ರೊಳಗೆ ಪ್ರಾರಂಭವಾದ ವಿವಾಹ ವಿಚ್ಛೇದ ವ್ಯಾಜ್ಯಗಳಲ್ಲಕ್ಕೂ ಅನ್ವಯಿಸುತ್ತವೆ.

ಈಗ ಅಮಲಿನಲ್ಲಿರುವ ಕಾಯದೆಗಳು

ಹೊಸ ಸಾಮಂತ ರಾಜ್ಯಗಳು ಹೊಸ ಕಾಯದೆ ಅಥವಾ ತಿದ್ದುಪಡಿಗಳನ್ನು ಮಾಡುವ ವರೆಗೆ ಸದ್ಯದ ಕಾಯದೆಗಳೆಲ್ಲವೂ ಯಥಾಪೂರ್ವ ಆ ರಾಜ್ಯಗಳಲ್ಲಿ ಅಮಲಿನಲ್ಲಿರುತ್ತವೆಯೆಂದು ೧೮ ನೆಯ ವಿಭಾಗದಲ್ಲಿ ಹೇಳಿದೆ.

ಚಕ್ರವರ್ತಿಗಳ ಆಜ್ಞೆಗಳು

ಭಾರತದ ಆಡಳಿತದ ಸಂಬಂಧದಲ್ಲಿ ಗವರ್ನರ ಜನರಲ್ಲರಿಗೂ ಗವರ್ನರರಿಗೂ ವಿಧಿಸಿದ ಆಜ್ಞೆಗಳೂ ಅವಕ್ಕೆ ಸಂಬಂಧಿಸುವ ೧೯೩೫ರ ಹಿಂದುಸ್ತಾನ ಸರಕಾರ ಕಾಯಿದೆಯ ಅಂಶಗಳೂ ಅಗಸ್ಟ ೧೫ರಿಂದ ಅವಸಾನ ಹೊಂದುವುವೆಂಬು ೧೮ನೆಯ ವಿಭಾಗದ ೪ನೆಯ ಉಪವಿಭಾಗವು ಸಾರುತ್ತದೆ.

ಮೇಲಿನ ವಿವರಗಳಿಂದ ೧೯೩೫ರ ಹಿಂದುಸ್ತಾನ ಸರಕಾರ ಕಾಯದೆಯು ಸಂಪೂರ್ಣ ನಷ್ಟವಾಗುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಒಂದೇ ಸಲ ಭಾರತದ ಎಲ್ಲ ಭಾಗಗಳಿಗೂ ಅನ್ವಯಿಸುವ ವಿವರವಾದ ಹೊಸ ಕಾಯದೆಗಳನ್ನು ರಚಿಸುವುದು ದುಸ್ತರವೆಂದು ನಮ್ಮ ಜನನಾಯಕರಿಗೆ ಕಂಡು ಬಂದು ಅವರು ಬ್ರಿಟಿಶರಿಗೆ ಹೊಸ ಕಾಯದೆಗಳು ಬರುವವರೆಗೆ ಅವು ಇರತಕ್ಕ ಅವಶ್ಯಕತೆಯನ್ನು ಮನನಮಾಡಿಕೊಟ್ಟುದೇ ಆ ಕಾಯದೆಯ ಹಲವು ಅಂಶಗಳು ಅಮಲಿನಲ್ಲಿರುವಂತಾದುದಕ್ಕೆ ಕಾರಣ. ಈ ಮಸೂದೆಯ ರಚನೆಯಲ್ಲಿ ಕಾಂಗ್ರೆಸ ಮತ್ತು ಲೀಗ ಮುಖಂಡರ ಅಂಗವಿಲ್ಲವೆಂದು ಹೇಳಲಾಗದು. ಯಾವ ಒಂದು ವಿಭಾಗ ಅಥವಾ ಉಪವಿಭಾಗಕ್ಕಾಗಲಿ ಮುಖಂಡರ ಪೂರ್ಣವಲ್ಲದಿದ್ದರೂ ಅರ್ಧ ಸಮ್ಮತಿಯನ್ನಾದರೂ ವೈಸರಾಯರು ಪಡೆದೇ ಇರುವರೆಂಬುದು ನಿಶ್ಚಿತ.

ಮದ್ರಾಸ ಪ್ರಾಂತದಲ್ಲಿ ಮೋಟಾರು ಸಾರಿಗೆಯನ್ನು ರಾಷ್ಟ್ರೀಕರಣ ಮಾಡಬೇಕೆಂದು ನಿರ್ಧರಿಸಲಾಗಿದೆ. ಅದರ ಮೊದಲ ಹೆಜ್ಜೆಯೆಂದು ಮದ್ರಾಸ ಸರಕಾರವು ಮದ್ರಾಸ ನಗರದಲ್ಲಿಯ ಮೋಟಾರು ಸಾರಿಗೆಯನ್ನು ಅಕ್ಟೋಬರದಿಂದ ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆಂದು ತಿಳಿದುಬಂದಿದೆ.

ಗಂಗಾನದಿಯ ಉಗಮವಾವುದು ?

ಲೇ. ಗೋಸಾವಿ, ಭಾರತಸಂಚಾರಿ

ಭಗೀರಥ ಮಹಾರಾಜನ ತಪಶ್ಚರ್ಯದಿಂದ ಗಂಗೆಯು ಸ್ವರ್ಗದಿಂದ ಭೂಲೋಕಕ್ಕೆ ಬರಲು ಒಪ್ಪಿದಳು. (ಅಂತೇ ಗಂಗೆಗೆ ಭಾಗೀರಥಿ ಎಂದು ಹೆಸರು ಬಂತು) ಆದರೆ ಅವಳು ಜೋರಿನಿಂದ ಭೂಮಿಗೆ ಇಳಿದರೆ ಆ ವೇಗವನ್ನು ತಾಳಿಕೊಳ್ಳುವಂಥ ಶಕ್ತಿಯು ಶಂಕರನ ಹೊರತು ಮತ್ತಾರಿಗೂ ಸಾಧ್ಯವಿಲ್ಲವೆಂದು ಕಂಡದ್ದರಿಂದ, ಭಗೀರಥನು ಶಂಕರನನ್ನು ಪ್ರಸನ್ನ ಮಾಡಿಕೊಂಡನು. ಗಂಗೆಯು ಎಷ್ಟೇ ವೇಗದಿಂದ ಬಿದ್ದರೂ ಶಿವನ ಜಟೆಯಲ್ಲಿ ಐಕ್ಯವಾಗಿ ಗರ್ವಹರಣವಾದ ಮೇಲೆ ಹೊರಬಿದ್ದು ಭಗೀರಥನ ಬೆನ್ನು ಹತ್ತಿ, ದೇವ, ಋಷಿ, ಗಂಧರ್ವ, ಯಕ್ಷ, ರಾಕ್ಷಸ, ಮಾನವಕೋಟಿಯನ್ನು ಆನಂದಗೊಳಿಸುತ್ತ ಸಗರಪುತ್ರನಿಂದ ಅಗಿಯಲ್ಪಟ್ಟ ಮಾರ್ಗದಿಂದ' (ಎಲ್ಲರನ್ನೂ ಉದ್ಧರಿಸಿ) ಸಮುದ್ರದ ತುಬಾಂತರ ಪಾತಾಳವನ್ನು ಸೇರಿದಳೆಂದು ಪುರಾಣಾದಿಗಳಲ್ಲಿ ವರ್ಣನೆಯಿದೆ—ಇರಲಿ.

ಆದರೆ ಕೇವಲ ಪುರಾಣ, ದಂತಕಥೆಗಳ ಮೇಲೆಯೇ ನಂಬಿಕೊಡ್ರುವ ಕಾಲವಿದಲ್ಲ. (ಇಂಥ ಸಂಗತಿಗಳನ್ನು ಜನರು ನಂಬುವದೂ) ಇಲ್ಲ) ಮತ್ತು ನಮ್ಮ ಪೂರ್ವಜರು ಕೇವಲ ಇಂಥ ಸಂಗತಿಗಳನ್ನೇ ನಂಬಿ ನಡೆಯಲು ಹೇಳಿಲ್ಲ. ಅನುಮಾನ, ಆಪ್ತವಾಕ್ಯಗಳಿಗಿಂತ ಪ್ರತ್ಯಕ್ಷ ಕಂಡು ಅನುಭವಿಸಿದ ಸಂಗತಿಗಳಿಗೇ ಹೆಚ್ಚು ಗಮನ ಕೊಟ್ಟಿದ್ದಾರೆ. ಅಂದ ಮೇಲೆ ನಾವೂ ಸಣ್ಣ ದೊಡ್ಡ ಸಂಗತಿಗಳನ್ನೆಲ್ಲ (ಸಾಧ್ಯವಿದ್ದಂಥವುಗಳನ್ನಾದರೂ) ಸ್ವತಃ ನೋಡಿಯೇ ತಿಳಕೊಳ್ಳುವದುತ್ತಮವಲ್ಲವೇ? ಇದೇ ಮಾತು ಆರ್ಯಾವರ್ತದಲ್ಲಿ ಹುಟ್ಟಿದ ಪವಿತ್ರ ಪ್ರಸಿದ್ಧ ನದಿಯಾದ ಗಂಗೆಯ ಉಗಮಸ್ಥಾನದ ಬಗ್ಗೆಯೂ (ನಿಜ ಸಂಗತಿಯು ಇನ್ನೂ ಶೋಧವಾಗದಿದ್ದುದು) ಆಶ್ಚರ್ಯವನ್ನುಂಟುಮಾಡುವಂತಿಲ್ಲವೇ? ಈ ಸಂಗತಿಯು ನಿಜವೋ? ಸುಳ್ಳೋ? ಎಂಬದನ್ನು ಸ್ವತಃ ನಮ್ಮ ವಾಚಕರೇ ಈ ಕೆಳಗಿನ ನಾಲ್ಕು ಸಾಲುಗಳನ್ನೋದಿ ತಿಳಕೊಳ್ಳಲೆಂದು ಕೊಟ್ಟಿದ್ದೇನೆ.

ನಮ್ಮ ಜನರಿಗಂತೂ ಶೋಧಕ ಬುದ್ಧಿ ಕಡಿಮೆ. (ಕುರಿಗಳಂತೆ ಅನುಕರಣ ಮಾಡುವವರೆಂದು ಹೇಳುವರು) ಆದರೆ ಪ್ರಸಿದ್ಧ ಭೂಗೋಲ (ಇತಿಹಾಸ) ತಜ್ಞರಾದ, ಇ. ಮಾರ್ಸಡೆನ್, ಬಿ. ಎ., ಫೆಲೋ ಆಫ್ ದಿ ರಾಯಲ್ ಜಿಯೋಗ್ರಾಫಿಕಲ್ ಸೊಸಾಯಿಟಿ, ಇಂಡಿಯನ್ ಎಜ್ಯುಕೇಶನಲ್ ಸರ್ವ್ಹಿಸ್, (ರಿಟಾಯರ್ಡ) ಇವರಿಂದ ರಚಿತವಾದ Geography for senior classes' ಭೂಗೋಲದಲ್ಲಿ:— 'It rises in a glacier, consisting of a bed of solid frozen snow, 300 feet thick, called Go-mukh (Cow-face), at the hight of 13,000 feet. This spot is known as Gangotri. It is in the little native state of Tehri-Garhwal in the United Provinces. ಎಂದು ಗಂಗೋತ್ರಿಯ ಚಿತ್ರದೊಂದಿಗೆ ಈ ಪಾಶ್ಚಾತ್ಯ ಪಂಡಿತರು ಪ್ರಸಿದ್ಧಿಸಿದ್ದಾರೆ. (ಇದೇ ಸಂಗತಿಯು ಎನ್‌ಸಾಯಕ್ಲೋಪೀಡಿಯಾದಲ್ಲಿಯೂ ಉಂಟು) ಈ ಸಂಗತಿಯನ್ನು ಇವರು ಹಿಂದುಸ್ಥಾನದ ಎಲ್ಲ ಭಾಷೆಗಳಲ್ಲಿ (ಮುಖ್ಯ ಲಿಪಿಯುಳ್ಳ ಪ್ರಾಂತಗಳಲ್ಲಿ) ರಚಿತವಾದ ತಮ್ಮ ಭೂಗೋಲಗಳಲ್ಲಿ ಪ್ರಸಿದ್ಧಿಸಿದಂತೆ ಕಾಣುತ್ತವೆ. (ಯಾಕಂದರೆ ಇವರಿಂದ ರಚಿತವಾದ ಪುಸ್ತಕಗಳನ್ನೇ ಅನೇಕ ಭಾಷೆಗಳಲ್ಲಿ ನಮ್ಮವರು ಭಾಷಾಂತರ ಮಾಡಿದ್ದಾರೆ.) ಇದೇ ಗ್ರಂಥಕರ್ತರಿಂದ ರಚಿತವಾಗಿ, ಕನ್ನಡದಲ್ಲಿ ಗಣೇಶವಾಮನ ಗೋಖಲೆ ಬಿ. ಎ., ಅಸಿಸ್ಟಂಟ ಮಾಸ್ತರ ಹಾಯಸ್ಕೂಲ, ಧಾರವಾಡ ಇವರಿಂದ ಪರಿವರ್ತಿಸಲ್ಪಟ್ಟ 'ಭೂಗೋಲ ಶಾಸ್ತ್ರವು' (೧೯೨೫ ರಲ್ಲಿ ಮ್ಯಾಕ್‌ಮಿಲನ್ ಮತ್ತು ಕಂಪನಿ ಲಿಮಿಟೆಡ್ ಮುಂಬೈ ಇವರಿಂದ ಪ್ರಸಿದ್ಧಿಸಲ್ಪಟ್ಟ) ಎಂಬ ಪುಸ್ತಕದಲ್ಲಿ—'ನಂದಾದೇವಿಯ ಹತ್ತರ ಗಂಗೋತ್ರಿ ಎಂಬ ಹಿಮಮಯವಾದ ಪ್ರದೇಶದಡಿಯಲ್ಲಿ ಸುಮಾರು ೧೩,೮೦೦ ಫೂಟು ಎತ್ತರವಾಗಿರುವ ಒಂದು ಹಿಮಗುಹೆಯಲ್ಲಿ ಗಂಗಾ ನದಿಯು ಉಗಮಹೊಂದುತ್ತದೆ.' ಎಂದು (ಭಾಷಾಂತರಿಸಿದ್ದಾರೆ) ಇದೆ. ಆದರೆ ನಂದಾ ದೇವಿಯು ಆಲ್ಮೋರಾ ಜಿಲ್ಲೆಯಲ್ಲಿದೆ. (ಗಂಗೋತ್ರಿಯು ಟಿಹರಿಂಗಢವಾಲದಲ್ಲಿದೆ)

ಇ. ಮಾರ್ಸಡನ್‌ರ 'ಭೂಗೋಲ ಶಾಸ್ತ್ರದ ಆರಂಭದ ಪಾಠಗಳು' ಎಂಬ ಪುಸ್ತಕದಲ್ಲಿ:—ಗಂಗಾ ನದಿಯು ಹಿಂದುಸ್ಥಾನದ ಮುಖ್ಯ ನದಿಯು ಮತ್ತು ಬಹು ಪವಿತ್ರವಾದದ್ದು. ಹಿಮಾಚ್ಛಾದಿತವಾದ ನಂದಾದೇವಿ ಎಂಬ ದೊಡ್ಡ ಶಿಖರವು ಇದರ ಉಗಮಸ್ಥಾನವು ಎಂದು ಭಿನ್ನ ಶಿಭಾರವನ್ನು ವ್ಯಕ್ತ ಮಾಡಿದ್ದಾರೆ. ಇವುಗಳ ಹೊರತು ಸದ್ಯ ಶಾಲೆಗಳಲ್ಲಿ ಹಚ್ಚಲ್ಪಟ್ಟ 'ನಮ್ಮ ಜಗತ್ತು' (ಸಾನೆ, ಪರೂಳೇಕರ) ಎಂಬ ಪುಸ್ತಕದಲ್ಲಿ—ಗಂಗಾ ನದಿಯು ಹಿಮಾಲಯದೊಳಗಿನ ಗಂಗೋತ್ರಿ ಹತ್ತಿರ ೧೩೮೦೦ ಫೂಟ ಎತ್ತರದ ಮೇಲೆ ಹುಟ್ಟುತ್ತದೆ ಎಂತಲೂ ಶ್ರೀ ಸಾನೆ ಪರೂಳೇಕರರಿಂದಲೇ ರಚಿತವಾದ ಇನ್ನೊಂದು 'ಭೂಲೋಕ'ದಲ್ಲಿ—ಗಂಗಾನದಿಯು ಹಿಮಾಲಯದ ದಕ್ಷಿಣದ ಇಳುಕಲಿನ ಮೇಲಿರುವ ಗಂಗೋತ್ರಿಯಲ್ಲಿ ಉಗಮಹೊಂದಿ ಬಂಗಾಲದ ಉಪಸಾಗರಕ್ಕೆ ಕೂಡುತ್ತದೆ. (ಆದರೆ 'ನಮ್ಮ ಜಗತ್ತು' ಇದರಲ್ಲಿ— ಯಮುನಾ ನದಿಯಾದರೂ ಗಂಗಾ ನದಿಯಂತೆ ಹಿಮಾಲಯದೊಳಗಿನ 'ಗಂಗೋತ್ರಿ'ಯ ಹತ್ತಿರ ೧೧೦೦೦ ಫೂಟ ಎತ್ತರದ ಮೇಲೆ ಉಗಮವಾಗಿ ಅಲ್ಲಾಬಾದದ ಹತ್ತರ 'ಗಂಗಾನದಿಗೆ ಕೂಡುತ್ತದೆ. ಎಂದು ಬರೆದದು ಮಾತ್ರ ನೋಜಿಗದ ಸಂಗತಿಯು.) ಇದೇರೀತಿ 'ಭೂಮಂಡಲ ಬೋಧಿನಿ' ಯಲ್ಲಿ (ಗೌರೀಶಂ) ಕುಲಕರ್ಣಿ ಇವರೂ ಗಂಗಾ ನದಿಯು ಗಂಗೋತ್ರಿಯಲ್ಲಿ ಹುಟ್ಟಿದೆ ಎಂದು ಬರೆದಿದ್ದಾರೆ. (ಇನ್ನು ಕೆಲವು ಭೂಗೋಲ ಪುಸ್ತಕಗಳಲ್ಲಿ ಗಂಗಾ ನದಿಯು ಮಾನಸ ಸರೋವರದ ಹತ್ತರ ಹುಟ್ಟಿದೆ ಎಂದೂ ಸಾಧಿಸಿದ್ದಾರೆ.) ಒಟ್ಟಿನ ಮೇಲೆ ಈ ಮೇಲಿನ ಎಲ್ಲ ಭೂಗೋಲ ಶಾಸ್ತ್ರಜ್ಞರೂ ಗಂಗಾನದಿಯ ಉಗಮ ಸ್ಥಾನವು 'ಗಂಗೋತ್ರಿ' ಎಂದೇ ಒಪ್ಪಿದ್ದಾರೆ ಮತ್ತು ನಮ್ಮ ಶಿಕ್ಷಣಖಾತೆಯ ಅಧಿಕಾರಿಗಳು ಅವನ್ನೆಲ್ಲಾ ಕಣ್ಣುಮುಚ್ಚಿಕೊಂಡು ಪ್ರಸಿದ್ಧಿಸಿ ಶಿಕ್ಷಕರಿಗೂ-ವಿದ್ಯಾರ್ಥಿಗಳಿಗೂ ತಪ್ಪು ಗ್ರಹಿಕೆಯಾಗುವಂತೆ ಪಾಠ ಕಲಿಸುತ್ತ ನಡೆದಿದ್ದಾರೆ. (ಇಂಥ ಅನೇಕ ತಪ್ಪುಗಳು ಅದರಲ್ಲಿವೆ.) ಈ ಪ್ರಕಾರ ಒಬ್ಬರೇ ಗ್ರಂಥಕರ್ತರ ಬೇರೆ ಬೇರೆ ಪುಸ್ತಕಗಳಲ್ಲಿ ಒಂದೇ ನದಿಯ ಉಗಮದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಅಂದಮೇಲೆ ಸಾಧಾರಣ ಜನತೆಗೆ ತಮ್ಮ ದೇಶದ ನಿಜ ಜ್ಞಾನವಾಗದೆ ತಪ್ಪು ಮಾರ್ಗ ಹಿಡಿಯಲು ಹಚ್ಚುವದೇ ಇವರ ಉದ್ದೇಶವಿರಬೇಕು. ನಾನು ಸ್ವತಃ ಎರಡಾವರ್ತಿ 'ಗಂಗೋತ್ರಿ' ಯಾತ್ರೆ ಮಾಡಿ ಬಂದವನಾದ್ದರಿಂದ ನಿಜ ಸಂಗತಿಯ ಕಡೆಗೆ ಜನರ ಮನಸ್ಸನ್ನೆಳೆಯಲು ಪ್ರಯತ್ನಿಸುವೆನು. (ಜಯಕರ್ನಾಟಕದಲ್ಲಿ ಕೊಟ್ಟ ಗಂಗಾ ಯಮುನಾ ಕೊಳ್ಳದ ಯಾತ್ರೆ ಎಂಬ ಲೇಖವನ್ನು ನೋಡಿರಿ) ಶೋಧಕ ಬುದ್ಧಿಯಿಂದ ಯಾತ್ರೆಗೆ ಹೋದವನಲ್ಲದಿದ್ದರೂ ಆ ಸ್ಥಾನದಲ್ಲಿ-ಗಂಗೋತ್ರಿಯಲ್ಲಿ ಗಂಗೆಯು ಉಗಮಹೊಂದಿಲ್ಲೆಂದು ಸಾರಿ ಹೇಳಬಲ್ಲೆನು. ಯಾಕಂದರೆ ಅಲ್ಲಿ ನದಿಯ ಪಾತ್ರವು ಸುಮಾರು ೩೦-೪೦ ಫೂಟ ಅಗಲವಿದ್ದು, ಮೇಲ್ಬದಿಗೆ ಎಷ್ಟೋ ದೂರದ ವರೆಗೆ ಹರಿದುಬರುವ ಧಾರಾ ಪ್ರವಾಹವನ್ನು ನೋಡಿದರೆ, ಗುಲಾಮಗಿರಿಯಲ್ಲಿದ್ದ ಭಾರತಕ್ಕಾಗಿ ಬರೆದ ಭೂಗೋಲ ಪಾಠಗಳೆಲ್ಲಾ ಮತ್ತಿಷ್ಟು ಗುಲಾಮರನ್ನಾಗಿ ಮಾಡಲು, ಅಂಥ ಭೂಗೋಲಶಾಸ್ತ್ರಜ್ಞರನ್ನೆ ಆರಿಸುತ್ತಾರೆಂಬದನ್ನೂ (ಬ್ರಿ. ಸರಕಾರವು) ಅವರು ಹೇಳಿದ್ದೇ ಉಗಮ ಸ್ಥಾನವೆಂದೂ, (ಗಂಗೋತ್ರಿಯೇ) ಬರೆದದ್ದೇ ವೇದವಾಕ್ಯವೆಂದೂ ನಂಬುವಬೆಂಥ ಅಂಧಾನುಕರಣವೆಂಬದನ್ನೂ ವಾಚಕರೇ ಊಹಿಸಲಿ! ಆದರೆ ಇನ್ನು ಮುಂದೆ ಸ್ವತಂತ್ರ ಭಾರತದಲ್ಲಿ ಈ ಅರ್ಧ—ಮರ್ಧ ಬುದ್ಧಿ ಕೆಡಿಸುವ ಪಠ್ಯ ಪುಸ್ತಕಗಳನ್ನು ಪ್ರಸಿದ್ಧಿಸಿದರೆ ಸಾಗದು.

ನಾನು ಈಗ ಅದರ ಉಗಮಸ್ಥಾನವನ್ನು ಪತ್ತೆ ಹಚ್ಚಲು ಹೊರಟಿಲ್ಲ ಮತ್ತು ಈ ಬಗ್ಗೆ ಬರೆದ ಲೇಖದಲ್ಲಿ ಕೆಲವು ಶೋಧಕ ತಜ್ಞರ ಮತದಂತೆ ಇನ್ನೂ ವರೆಗೂ 'ಗೋಮುಖ' ಕ್ಕಿಂತ ಮುಂದೆ ಸರ್ವೆ ಆಫ್ ಇಂಡಿಯಾ ಆಫೀಸಿನ ವರೆಗೆ ಹೋಗಿಲ್ಲವೆಂದು ಕೊಟ್ಟಿದ್ದೇನೆ. ಆದರೆ ಪ್ರತಿ ವರ್ಷ ಭಾರತದ ಎಲ್ಲ ಭಾಗಗಳಿಂದ ಸಾವಿರಾರು ಯಾತ್ರಿಕರು ಹೋಗಿಬರುವ 'ಗಂಗೋತ್ರಿ ಯಾತ್ರೆ'ಯ ಬಗ್ಗೆ ಈ ರೀತಿ " ಗಂಗೋತ್ರಿಯಲ್ಲಿ ಗಂಗೆ ಹುಟ್ಟಿದೆ— ಗೋಮುಖದಲ್ಲಿ ಹುಟ್ಟಿದ್ದರೂ ಅದಕ್ಕೆ ಗಂಗೋತ್ರಿ ಎನ್ನುತ್ತಾರೆ" ಎಂದು ಪಾಠ ಮಾಡಿಸುವ ಪ್ರಯತ್ನವು ಅಜ್ಞ ಜನರಿಗೇ ಒಪ್ಪುವದು. ತಜ್ಞರೆಂಬವರು ಈ ಕೆಲಸಕ್ಕಾಗಿ ಮುಂದೆ ಬಂದು 'ಭೂಗೋಲ-ಮಾಸಿಕ'ದವರಂತೆ ಪರಿಶ್ರಮದಿಂದ ಕೆಲಸ ಮಾಡಹತ್ತಿದರೆ ಇಂಥ ಹೊಳ್ಳು ಪಾಠದ ಸುಳ್ಳು ಪುಸ್ತಕಗಳೆಲ್ಲ ಬ್ರಿಟಿಶರ ಸಂಗಡಲೇ ಹಾರಿಹೋಗುವವೆಂಬದರಲ್ಲಿ ಸಂದೇಹವಿಲ್ಲ. ಅವರು ಹೇಳಿದಂತೆ ಕುಣಿದು ತಾಳದಲ್ಲಿ ಮೇಳಗೂಡುತ್ತಿದ್ದ 'ಶಿಕ್ಷಣ ಖಾತೆಯ ಅಧಿಕಾರಿಗಳೂ ಇದನ್ನು ಲಕ್ಷ್ಯದಲ್ಲಿಡಲಿ. ಆದರೆ ಯಾರನ್ನೂ ಟೀಕಿಸುವ ಉದ್ದೇಶದಿಂದ ಈ ಚಿಕ್ಕ ಲೇಖವನ್ನು ಬರೆಯದೆ, ನಮ್ಮವರು ಶೋಧಕ ಬುದ್ಧಿಯ ಸುಜ್ಞರಾಗಲೆಂದು ಹಾರೈಸುವೆ.

೩೧ ನೆಯ ಕನ್ನಡ ಸಾಹಿತ್ಯ ಸಮ್ಮೇಳನವು

ಕಾಸರಗೋಡು.

ಕನ್ನಡ ಸಾಹಿತ್ಯ ಪರಿಷತ್ತಿನ ಮುಂದಿನ ಅಧಿವೇಶನವು ದ. ಕ. ಜಿಲ್ಲೆಯ ಕಾಸರಗೋಡಿನಲ್ಲಿ ನಡೆಯುವುದೆಂದು ಗೊತ್ತಾಗಿದೆ. ಅದರ ಪಾತಸ್ಥಿಕ ಸಮಿತಿಯ ಸಂಯೋಜಕರಾದ ಶ್ರೀ ಬಿ. ಶ್ರೀಧರ ಶಾಸ್ತ್ರಿಗಳು ಯವರು ಕೆಳಗಿನಂತೆ ಪ್ರಕಟಿಸುತ್ತಾರೆ.

"ಭಾರತದ ಭವಿಷ್ಯವನ್ನು ರೂಪಿಸುತ್ತಲಿರುವ ಘಟನಾ ಸಭೆಯಲ್ಲಿ ಭಾಷಾವಾರು ಪ್ರಾಂತಗಳ ರಚನೆಗಾಗಿ ಒಂದು ಉಪಸಮಿತಿಯು ನೇಮಿಸಲ್ಪಟ್ಟಿರುವುದಷ್ಟೆ! ಪ್ರತಿಯೊಂದು ಪ್ರಾಂತವೂ ನವೀನ ರೂಪವನ್ನು ತಾಳಲಿದೆ. ಕರ್ನಾಟಕದ ರೂಪರೇಷೆಗಳು ಸ್ಪಷ್ಟ ಬದಲಾವಣೆಯನ್ನು ಹೊಂದಲಿವೆ. ಹಲವಾರು ಆಡಳಿತಗಳಿಗೆ ಒಳಪಟ್ಟು ಹರಿದು ಹಂಚಿ ಹೋಗಿರುವ ಕನ್ನಡನಾಡಿನ ಐಕ್ಯವನ್ನು ದೃಢಗೊಳಿಸಿ, ಎಲ್ಲೆಗಳಲ್ಲಿ ನಡೆಯುತ್ತಲಿರುವ ಆಕ್ರಮಣಗಳನ್ನು ತಡೆದು, ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಪೋಷಣೆಗಾಗಿ ಈಗಲಾದರೂ ನಾವು ದುಡಿಯಬೇಕಾಗಿದೆ.

ದಕ್ಷಿಣ ಕನ್ನಡದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧಿವೇಶನವು ಈ ಮೊದಲೊಮ್ಮೆ ಜರುಗಿದುದು ೨೫ ವರ್ಷಗಳಿಗೂ ಹಿಂದೆ. ಈಗಿನ ಸನ್ನಿವೇಶದಲ್ಲಿ ಕನ್ನಡ ನಾಡಿನ ಕೊಂಕಣ ಎಲ್ಲೆಯಲ್ಲಿರುವ ಕಾಸರಗೋಡಿನಲ್ಲಿ ಮುಂದಿನ ಸಾಹಿತ್ಯ ಸಮ್ಮೇಳನವನ್ನು ಜರುಗಿಸುವುದು ಸಮಯೋಚಿತವೂ ಅತ್ಯಾವಶ್ಯಕವೂ ಆಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಸಂಚಾಲಕರು ಮುಂದಿನ ಸಮ್ಮೇಳನವನ್ನು ಬರುವ ಡಿಸೆಂಬರ ತಿಂಗಳಲ್ಲಿ ಕಾಸರಗೋಡಿನಲ್ಲಿ ಜರುಗಿಸಲು ಒಪ್ಪಿರುವುದು ಸಂತೋಷದ ಸಂಗತಿ.

ಸಮ್ಮೇಳನದ ವಿವಿಧ ಕಾರ್ಯಕಲಾಪಗಳನ್ನೂ ಅತಿಥಿಗಳ ಸತ್ಕಾರ ಸೌಕರ್ಯಗಳನ್ನೂ ಯಶಸ್ವಿಯಾಗಿ ಕೈಗೂಡಿಸುವ ಸಲುವಾಗಿ ಸುಪ್ರಾತಿನಿಧ್ಯವುಳ್ಳ ಸ್ವಾಗತ ಸಮಿತಿಯನ್ನು ಕೂಡಲೇ ರಚಿಸಬೇಕಾಗಿದೆ. ಸದಸ್ಯತ್ವದ ವರ್ಗಗಳು ಈ ಕೆಳಗಿನಂತಿವೆ:—

ಶ್ರೇಣಿ ೧	— ರೂ. ೧೦೦ ಯಾ ಹೆಚ್ಚು		
" ೨	— ರೂ. ೫೦	"	
" ೩	— ರೂ. ೨೫	"	
" ೪	— ರೂ. ೧೦	"	
" ೫	— ರೂ. ೫	"	

ಅಭಿಮಾನಿಗಳು ಸ್ವಾಗತ ಸಮಿತಿಯ ಸದಸ್ಯರಾಗಿ ಸೇರುವುದರೊಂದಿಗೆ ತಮ್ಮ ಮಿತ್ರರನ್ನು ಕೂಡ ಸದಸ್ಯರನ್ನಾಗಿ ಸೇರಿಸಿ, ತಮ್ಮೆಲ್ಲರ ಪೂರ್ಣ ಸಹಾಯ ಸಹಕಾರಗಳನ್ನು ನೀಡಬೇಕಾಗಿ ವಿನಂತಿ. "

ಜೂನ ೨೯ರಲ್ಲಿ ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಯಮಾರ್ಗದಲ್ಲಿ ಬಿಲ್ಲವ, ಗುತ್ತೆದಾರ ಮತ್ತು ಮುರ್ಕದಾರರ ಸಭೆ ಜರುಗಿ ಸಂಘದ ಶಾಖೆ ಸ್ಥಾಪಿತವಾದದ್ದಲ್ಲದೆ ಮದ್ಯಪಾನ ನಿರೋಧದಿಂದ ತಮ್ಮ ಧಂದೆ ತಪ್ಪಿದ್ದರಿಂದ ತಮ್ಮ ಜೀವನ ನಿರ್ವಹಣೆಗೆ ಯಾವ ಮಾರ್ಗವನ್ನನುಸರಿಸಬೇಕೆಂಬುದನ್ನು ತೀರ್ಮಾನಿಸಿತು.

ಘಟನಾ ಸಮಿತಿಗೆ ಮೈಸೂರಿನ ಪ್ರತಿನಿಧಿಗಳು

[illegible] ಘಟನಾ ಸಮಿತಿಗೆ ಮೈಸೂರಿನ [illegible] ಶ್ರೀಯುತರಾದ ಎಚ್. ಆರ್. [illegible] ಮತ್ತು ಕೆ. [illegible] ಮೈಸೂರು [illegible] ಶ್ರೀಯುತರಾದ ಎಚ್. ಕೆ. [illegible] ಮತ್ತು ಬಿ. ಎಚ್. [illegible] ಎಸ್. [illegible] ಆಯ್ಕೆಯಾದರು.

ಶ್ರೀಯುತರಾದ [illegible] ಸರಕಾರದಿಂದ [illegible] ನಿಯಮಿಸಲ್ಪಟ್ಟರು. [illegible]

ಪಡುಗಾಲ ಸರಕಾರದ ಲೀಗ ಮಂತ್ರಿಗಳ ರಾಜೀನಾಮೆ

(೪ ನೇ ಪುಟದಿಂದ)

ವಿಭಜನೆಯ ಮುಕ್ತತೆ

[illegible] ವಿಭಜನೆಯ ವ್ಯವಸ್ಥೆಗಳು [illegible] ವಾಗಿ ಸಾಗಿವೆ. ಬಂಗಾಲದಲ್ಲಿ [illegible] ಮಂಡಲ ಸ್ಥಾಪಿಸಲ್ಪಟ್ಟು [illegible] ಆದರೆ ಕಲಕತ್ತೆಯಲ್ಲಿ ಎದ್ದ ಪ್ರಸಂಗ [illegible] ಕಾರಣದಿಂದ ಅದಕ್ಕೆ ಪ್ರಾರಂಭದಲ್ಲೇ ತೊಂದರೆಯಾಗಿದೆ.

ಗಡಿ ಸಮಿತಿಗಳ ಸಭೆ ಕೂಡಿದ್ದು [illegible] ಸಿರಿಲ್ ರಾಡಕ್ಲಿಫರೆಂಬ [illegible] ಕಾಯದೆ ತಜ್ಞರು ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದಾರೆ. ಈ ಸಮಿತಿಗಳು [illegible] ನಿರ್ಣಯಗಳನ್ನು [illegible] ಆರಿಸಲಾಗಿದೆ. ಅದು ಸಾಧ್ಯವಾಗದಿದ್ದರೆ [illegible] ಸ್ಪದ ಸಂಗತಿಗಳನ್ನು [illegible] ದೆಂದು ಹೇಳಲಾಗಿದೆ. ಗಡಿ ಪಕ್ಕದಲ್ಲಿ [illegible] ಸೀಖರು ತಮ್ಮ ಸಮಾಜವನ್ನು [illegible] ಯಾವುದೇ ಗಡಿ ನಿರ್ಣಯವನ್ನು ಪ್ರತಿಭಟಿಸು [illegible] ಬಾಗಿ ಸಾರಿ ಅದಕ್ಕಾಗಿ ಸಂಘಟನೆ [illegible] ವರು. ಈಗ ಸೂಚಿತವಾದಂತೆ ವಿಭಜನೆಯಾದರೆ ೨೦ ಲಕ್ಷ ಸೀಖರು [illegible] ಹಿಂದೀ [illegible] ಇದನ್ನು ತಡೆಯಲು ಲಾಹೋರ, [illegible] ಜಿಲ್ಲೆಗಳನ್ನು ಹಿಂದೀ [illegible] ಅವರು ಬೇಡುವರು. [illegible] ಸಹಾಯವನ್ನು ಕಾಂಗ್ರೆಸ್ಸು [illegible]

ಹಿಂದುಸ್ಥಾನದ ಸೊತ್ತು ಪಾಲುಗಳನ್ನು [illegible] ಕೊಳ್ಳುವದರಲ್ಲಿ ದಾತಭೇದವಾದರೆ [illegible] ನಿರ್ಣಯವನ್ನು ಒಪ್ಪಲು ಎರಡೂ [illegible] ಮಾತುಕೊಟ್ಟಿವೆಯೆಂದು [illegible] ಪತ್ರಿಕಾ ಪರಿಷತ್ತಿನಲ್ಲಿ ತಿಳಿಸಿದರು. [illegible] ಈ ವಿಷಯದಲ್ಲುಂಟಾಗಬಹುದಾದ [illegible] ಅಷ್ಟು ಚಿಂತಾಜನಕವಿಲ್ಲ.

ಮೈಸೂರಿನ ನ್ಯಾಯವಿಧಾಯಕ ಸಭೆಯ ಕಾರ್ಯಕಲಾಪಗಳು

ಆಹಾರದ ಕಠಿನ ಪರಿಸ್ಥಿತಿ. ಮೈಸೂರು ನಗರ ಸಭೆಗೆ ಖಾಸಗಿ ಅಧ್ಯಕ್ಷರು. ಧಾನ್ಯ ಸಂಗ್ರಹ ಕಾರ್ಯದಲ್ಲಿ ಅಧಿಕಾರಿಗಳ ದಬ್ಬಾಳಿಕೆ. ಸರಕಾರೀ ನೌಕರರಿಗೆ ಮನೆಗಳ ಅಭಾವ. ಘಟನಾಸಮಿತಿಗೆ ಮೈಸೂರು ಸೇರುವುದರ ಉದ್ದೇಶ. ಮಾತಾಡಲವಕಾಶ ಕೊಡದುದಕ್ಕಾಗಿ ಕಾಂಗ್ರೆಸ ಪಕ್ಷದವರ ಸಭಾತ್ಯಾಗ.

ಜುಲೈ ೧ ರ ಮಧ್ಯಾಹ್ನ ಶಾಸನಸಭೆಯಲ್ಲಿ ಸರಕಾರದವರು ತಂದ ೪ ಮಸೂದೆಗಳು ವಿಶೇಷ ಚರ್ಚೆಯಿಲ್ಲದೆ ಅಂಗೀಕೃತವಾದುವು.

ಸರಕಾರದ ಆಹಾರ ಶಾಖೆಯ ಕಾರ್ಯದರ್ಶಿಯವರಾದ ಶ್ರೀ ಕೆ. ಶ್ರೀನಿವಾಸನ್ನರು ಜುಲೈ ೨ ರಲ್ಲಿ ಆಹಾರದ ಕಠಿನ ಪರಿಸ್ಥಿತಿಯನ್ನು ಅಂಕೆ ಅಂಶಗಳೊಡನೆ ವಿವರಿಸಿದರು; ಸಂಸ್ಥಾನದಲ್ಲಿ ಈಗ ೬೯,೬೪೫ ಟನ್ ಧಾನ್ಯವಿದೆ; ಪ್ರತಿ ತಿಂಗಳೂ ಸರಾಸರಿ ೨೫,೦೦೦ ಟನ್ನಿನಂತೆ ಆಹಾರ ಧಾನ್ಯವು ಖರ್ಚಾಗುತ್ತಿದೆಯೆಂದ ಮೇಲೆ ಈಗಿರುವ ಸಂಗ್ರಹ ೩ ತಿಂಗಳಿಗೂ ಸಾಲದು ಎಂಬ ಅಂಶವನ್ನು ತಿಳಿಸಿದರು.

ಅನಂತರ ಸರಕಾರವು ಸೀದಾ ಪ್ರಮಾಣವನ್ನು ಕಡಿಮೆ ಮಾಡಿದುದರ ಮೇಲೆ ಶ್ರೀ ಟಿ. ಮರಿಯಪ್ಪನವರು ತಂದ ನಿಲುವಳಿ ಸೂಚನೆಯು ಚರ್ಚೆಯಲ್ಲಿಯೇ ಮುಗಿಯಿತು.

ಹಿಂದುಗಳಲ್ಲಿ ಅಂತರ್ಜಾತೀಯ ವಿವಾಹಗಳನ್ನು ನ್ಯಾಯಬದ್ಧ ಮಾಡಲು ಮಸೂದೆಯೊಂದನ್ನು ಶ್ರೀ ಎಂ. ಎ. ಗೋಪಾಲಸ್ವಾಮಿ ಅಯ್ಯಂಗಾರರು ಸಭೆಯ ಮುಂದಿಡಲು ಅದು ಸಿಲೆಕ್ಟ್ ಕಮಿಟಿಗೆ ಪರಿಶೀಲನೆಗಾಗಿ ಒಪ್ಪಿಸಲ್ಪಟ್ಟಿತು.

ಮೈಸೂರು ನಗರ ಸಭೆಯು ಚುನಾಯಿತ ಅಧ್ಯಕ್ಷರನ್ನು ಹೊಂದುವ ಹಕ್ಕನ್ನು ಕೊಡಬೇಕೆಂದು ಸರಕಾರಕ್ಕೆ ಶಿಫಾರಸು ಮಾಡುವ ನಿರ್ಣಯವು ಜುಲೈ ೩ ರ ರಲ್ಲಿ ಪಾಸಾಯಿತು.

ಬೆಂಗಳೂರು ನಗರದಲ್ಲಿ ಬೇಗನೆ ನಾಲ್ಕು ಹೆರಿಗೆಯ ಆಸ್ಪತ್ರೆಗಳು ತೆರೆಯಲ್ಪಡುತ್ತವೆ. ಬೆಂಗಳೂರು ಇಡಿಯ ಭಾರತದಲ್ಲಿಯೇ ಹೆರಿಗೆಯ ಆಸ್ಪತ್ರೆಗಳ ವಿಚಾರದಲ್ಲಿ ಮಾದರಿಯಾಗುವುದೆಂದು ಸಭಾನಾಯಕರೂ ವಿದ್ಯಾ ಮತ್ತು ಆರೋಗ್ಯಮಂತ್ರಿಗಳೂ ಆದ ದಿವಾನ ಬಹಾದ್ದೂರ ಡಾ. ಟಿ. ಸಿ. ಎಂ. ರಾಯನ್ನರು ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದರು. ಸಾರ್ವಜನಿಕ ಆರೋಗ್ಯ ಕಾನೂನನ್ನು ಇಡಿಯ ಸಂಸ್ಥಾನಕ್ಕೆ ಅನ್ವಯಿಸಲಾಗುವುದೆಂದೂ ಅವರು ಹೇಳಿದರು.

ದುಷ್ಕೃತ್ಯಗಳನ್ನು ನಡಿಸಿದವರ ಮೇಲೆ ಕಾರ್ಯಕ್ರಮ ಕೈಗೊಳ್ಳಲು ಸರಕಾರದವರು ಬಹಳ ಕಾತರರಾಗಿದ್ದಾರೆಂದೂ ರೈತರಿಗೆ ಅನಾವಶ್ಯಕವಾಗಿ ತೊಂದರೆಕೊಟ್ಟು ಹೆಚ್ಚಿಗೆ ಧಾನ್ಯ ಪಡೆಯಕೂಡದೆಂಧು ಸ್ಪಷ್ಟವಾಗಿ ಸೂಚನೆಕೊಡಲಾಗಿದೆಯೆಂದೂ ಆಹಾರ ಶಾಖೆಯ ಕಾರ್ಯದರ್ಶಿಯವರು ಜುಲೈ ನಾಲ್ಕರಲ್ಲಿ ಹೇಳಿದರು.

ಸರಕಾರಿ ನೌಕರರಿಗೆ ಮನೆಗಳ ಅಭಾವವಿರುವುದರಿಂದ ಸಂಸ್ಥಾನದಲ್ಲೆಲ್ಲ ಅವರಿಗೆ ಮನೆಗಳನ್ನೊದಗಿಸುವ ಯೋಜನೆಯು ಸರಕಾರದ ಪರಿಶೀಲನೆಯಲ್ಲಿದೆಯೆಂದು ಡಾ. ರಾಯನ್ನರು ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಮೈಸೂರಿನಲ್ಲಿ ಕಾಯಿದೆಯ ಕಾಲೇಜು ಸ್ಥಾಪಿಸುವ ಯೋಜನೆಯು ಸರಕಾರಕ್ಕಿಲ್ಲವೆಂಬುದಾಗಿ ಡಾ. ರಾಯನ್ನರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು.

ಜುಲೈ ೫ ರ ಪ್ರಾತಃಕಾಲ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಗಳ ಸಂಯುಕ್ತ ಅಧಿವೇಶನವು ಬೆಂಗಳೂರಿನ ಸರ್. ಕೆ. ಪಿ. ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಪ್ರಾರಂಭವಾಗಿ ದಿವಾಣರು ಸದಸ್ಯರನ್ನುದ್ದೇಶಿಸಿ ಭಾಷಣಮಾಡಲು ಉಪಕ್ರಮಿಸಿದಾಗ ಕಾಂಗ್ರೆಸ ಪಕ್ಷದ ಉಪನಾಯಕರಾದ ಶ್ರೀ ಟಿ. ಮರಿಯಪ್ಪನವರೆದ್ದು ಹೇಳಿಕೆ ಕೊಡಲು ಪ್ರಯತ್ನಿಸಿದರು. ದಿವಾಣರು ಅದಕ್ಕೆ ಅವಕಾಶಕೊಡದಿರಲು ಕಾಂಗ್ರೆಸ್ಸಿಗರು ಸಭಾತ್ಯಾಗಮಾಡಿದರು.

ದಿವಾಣರು ತಮ್ಮ ಭಾಷಣದಲ್ಲಿ ಮೈಸೂರು ಸಂಸ್ಥಾನವು ಭಾರತ "ಯೂನಿಯನ್" ಅಥವಾ ಫೆಡರೇಶನ್ನಿಗೆ ಸೇರಲು ಅನುಕೂಲವಾಗುವಂತಹ ಘಟನೆಯನ್ನು ರಚಿಸಲು ಮೈಸೂರಿನ ಪ್ರತಿನಿಧಿಗಳು ಘಟನಾಸಮಿತಿಗೆ ಸಹಾಯಮಾಡುವದಾಗಿ ತಿಳಿಸಿದರು. ಅದಲ್ಲದೆ ಪ್ರಾಂತಗಳೂ ಸಂಸ್ಥಾನಗಳಿಗೂ ಹೆಚ್ಚು ಸ್ವಾತಂತ್ರ್ಯಬೇಕೆಂದೂ ಪರಿಷ್ಕಾಧಿಕಾರವು ಸಂಸ್ಥಾನಗಳಿಗೆ ಪ್ರತ್ಯೇಕವಾಗುವುದೆಂದೂ ಆದರೆ ಮಹಾರಾಜರು ಒಪ್ಪಂದದ ಮೂಲಕ ಹಿಂದೀ ಒಕ್ಕೂಟಕ್ಕೆ ಸೇರಲು ನಿರ್ಧರಿಸಿದಲ್ಲಿ ಮೈಸೂರಿನಲ್ಲಿ ಪರಿಷ್ಕಾಧಿ

ಕಾರದ ಪ್ರಶ್ನೆಯೇ ಏಳುವುದಿಲ್ಲವೆಂದೂ ಭಾರತ ಸಾಮಂತ ರಾಜ್ಯದೊಡನೆ ಹೊಸ ವ್ಯವಸ್ಥೆ ಏರ್ಪಡಿಸಿಕೊಳ್ಳುವವರೆಗೆ ಇದ್ದ ಸ್ಥಿತಿಯೇ ಇರಬೇಕೆಂಬ ಒಪ್ಪಂದ ಮಾಡಿಕೊಳ್ಳತಕ್ಕದ್ದೆಂದೂ ಹೇಳಿದರು; ಮತ್ತು ಮೈಸೂರಿಂದ ಹೋಗುವ ಪ್ರತಿನಿಧಿಗಳ ನಿಯೋಗಮಂಡಲಿಯಲ್ಲಿ ನೂರಕ್ಕೆ ೫೦ ರಷ್ಟಾದರೂ ಚುನಾಯಿತ ಸದಸ್ಯರಿರಬೇಕಾದುದು ನಿಯಮವೆಂದೂ ಅಭಿಪ್ರಾಯ ಪಟ್ಟರು.

ಅನಂತರ ವೇತನ ಸಮಿತಿಯ ಕೊನೆಯ ಸಭೆಯು ಜರುಗಿತು. ಸಮಿತಿಯ ಶಿಫಾರಸಿನ ಪ್ರಕಾರ ಒಟ್ಟು ವೆಚ್ಚ ೯೩ ಲಕ್ಷ ರೂಪಾಯಿಗಳಾಗುತ್ತವೆ. ಶಿಕ್ಷಕರ ತಾರತಮ್ಯವನ್ನು ಅನುಸರಿಸಿ ಅವರ ವೇತನ ಪ್ರಮಾಣ, ಗುಮಾಸ್ತರ ಸಂಬಳ, ಮನೆಬಾಡಿಗೆಯ ಬಗ್ಗೆ ಸಂಪ್ರದಾನ, ತುಟ್ಟಿಭತ್ತೆ, ಬೋನಸ್ಸು, ಮಲೆನಾಡಿನಲ್ಲಿರುವ ನೌಕರರಿಗೆ ವಿಶೇಷ ಸಂಪ್ರದಾನ—ಇತ್ಯಾದಿಗಳ ಬಗ್ಗೆ ಸಮಿತಿಯ ಸಲಹೆಗಳು ಸಭೆಯ ಮುಂದಿಡಲ್ಪಟ್ಟವು. ಅವನ್ನು ಸರಕಾರವು ಮಾನ್ಯಮಾಡುವುದಾಗಿಯೂ ೧೯೪೭ ನೆಯ ಜನವರಿಯಿಂದ ಅವನ್ನು ಅಮಲಿನಲ್ಲಿ ತರುವುದಾಗಿಯೂ ದಿವಾಣರು ಹೇಳಿದರು.

ಆಹಾರ ಶಾಖೆಯು ಆರಂಭವಾದಾಗಿನಿಂದ ೧೯೪೬ ನೆಯ ಡಿಸೆಂಬರ ಅಂತ್ಯದ ವರೆಗೆ ೨೪,೧೪,೨೫,೪೧೫ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆಯೆಂದೂ ೨ ಕೋಟಿ ರೂಪಾಯಿಗಳನ್ನು "ಸಬ್ ಸಿಡಿ" ಯಾಗಿ ಕೊಡಲಾಗಿತ್ತೆಂದೂ ಆಹಾರ ಸಚಿವರು ಹೇಳಿದರು.

ಬೆಂಗಳೂರು-ಮೈಸೂರು

ಮೈಸೂರು ದಿವಾಣರಾದ ಸರ್. ಎ. ಆರ್. ಮುದಲಿಯಾರರನ್ನು "ಯೂನಿಯನ್ ಪವರ್ಸ್" ಸಮಿತಿಗೆ ನಿಯಮಿಸಲಾಗಿದೆಯೆಂದು ತಿಳಿದುಬಂದಿದೆ.

ಹರಪನಹಳ್ಳಿಯ ಸಾಹಿತ್ಯ ಸಮ್ಮೇಳನದಲ್ಲಿ ರಚಿತವಾದ ಯುವಜನ ಸ್ಥಾಯಿ ಸಮಿತಿಯ ಮೈಸೂರು ಪ್ರಾದೇಶಿಕ ಸದಸ್ಯರು ಜೂನ ೩೦ ರಲ್ಲಿ ಬೆಂಗಳೂರಿನ ದೇಶೀಯ ವಿದ್ಯಾಶಾಲೆಯಲ್ಲಿ ಕನ್ನಡ ಯುವಜನರ ಸಭೆಯೊಂದನ್ನು ಕರೆದಿದ್ದರು. ಸಭೆಯಲ್ಲಿ ಶ್ರೀಗಳಾದ ಎಲ್. ಎಸ್. ಶೇಷಗಿರಿರಾಯರು ಅಧ್ಯಕ್ಷರಾಗಿಯೂ ಜಿ. ಎ. ನರಸಿಂಹಮೂರ್ತಿಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟುದಲ್ಲದೆ ಕಾರ್ಯ ಸಮಿತಿಯ ಇತರ ಸದಸ್ಯರನ್ನೂ ಚುನಾಯಿಸಲಾಯಿತು.

ಅಖಿಲ ಮೈಸೂರು ಬ್ರಾಹ್ಮಣ ಮಹಾಸಭೆಯ ಸಹಕಾರ್ಯದರ್ಶಿಗಳು ಇತ್ತೀಚೆಗೆ ಸೇರಿದ ಸ್ಥಾಯಿಸಮಿತಿಯಲ್ಲಿ ಸರಕಾರಿ ನೌಕರಿಯಲ್ಲಿ ಬ್ರಾಹ್ಮಣ—ಬ್ರಾಹ್ಮಣೇತರ ಭೇದಮಾಡುವದನ್ನೂ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜು ಪ್ರವೇಶದಲ್ಲಿ ಅಡಚಣೆಯೊಡ್ಡಿರುವುದನ್ನೂ ಖಂಡಿಸಲಾಯಿತೆಂದು ಬರೆಯುತ್ತಾರೆ.

ಅಧಿಕಾರ ದುರುಪಯೋಗದ ಅಪಾದನೆಯ ಮೇಲೆ ಈಗ ಸರ್ವೆ ಮತ್ತು ಸೆಟ್ಲ್‌ಮೆಂಟ್ ಕಮಿಶನ್‌ರಾಗಿರುವ ಶ್ರೀ ಜಿ. ಸುಂದರರಾಯರನ್ನು ಅವರ ಹುದ್ದೆಯಿಂದ ಈ ಕೂಡಲೆ ನಿವೃತ್ತರನ್ನಾಗಿ ಮಾಡಲು ಮೈಸೂರು ಸರಕಾರವು ಆಜ್ಞೆಯಿತ್ತಿದೆ.

ಮೈಸೂರು ನಗರ "ಹೌಸಿಂಗ್ ಕೋ-ಅಪರೇಟಿವ್ ಸೊಸಾಯಿಟಿಗೆ" ಈ ವರ್ಷಕ್ಕೆ ಶ್ರೀ ಟಿ. ವಿ. ನಂಜುಂಡಯ್ಯನವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಮೇಲೂಸಿಂಗರನ್ನು ಉಪಾಧ್ಯಕ್ಷರನ್ನಾಗಿಯೂ ಶ್ರೀ ಎ. ವಿ. ಶ್ರೀನಿವಾಸಮೂರ್ತಿಯವರನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಲಾಯಿತು.

ಮೈಸೂರು ರೈಲಿನಲ್ಲಿ ಸುಧಾರಣೆಗಳನ್ನು ಮಾಡುವದಕ್ಕಾಗಿ ಬೋರ್ಡಿನವರು ಮಾಡಿದ ಹಲವು ಯೋಜನೆಗಳಿಗೆ ಸರಕಾರದವರು ಅಂಗೀಕಾರ ಕೊಟ್ಟಿದ್ದಾರೆ.

ಬೆಂಗಳೂರಿನ ವಿಶ್ವೇಶ್ವರಪುರದ ಉತ್ಸಾಹಿಗಳಾದ ಕೆಲವು ಯುವಕರು ಜುಲೈ ೬ ರಲ್ಲಿ ಶ್ರೀ ಮತಿಘಟ್ಟ ಕೃಷ್ಣಮೂರ್ತಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಒಂದು ಯುವಜನ ಸಂಘವನ್ನು ಸ್ಥಾಪಿಸಿದರು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೯.

ದೇಶದಲ್ಲಿ ಶಾಂತತೆ ಸ್ಥಾಪಿತವಾಗುವ ವಿಷಯದಲ್ಲಿ ವ್ಯಾಪಾರಿಗಳ ಸಂಶಯ ಇದ್ದೇಇದೆ. ಅಲ್ಲದೆ ಟಾಟಾ ಉಕ್ಕಿನ ಕಾರಖಾನೆಯಲ್ಲಿ ಕೂಲಿಕಾರರ ತಂಟೆಯ ಸಂಬಂಧದಲ್ಲಿಯೂ ಅವರು ಸಂಶಯಚಿತ್ತರಾಗಿದ್ದಾರೆ. ಇತ್ತ ಬಟ್ಟೆಯ ನಿಯಂತ್ರಣ ಹೋಗುವದಿಲ್ಲೆಂಬುದು ಅರ್ಧಮರ್ಧ ನಿಶ್ಚಿತವಾಗಿರುವದರಿಂದ ಅಲ್ಲಿಯೂ ಕೊಳ್ಳುವವರು ಹಿಂದೆ ಮುಂದೆ ನೋಡುತಿದ್ದಾರೆ. ಹೀಗೆ ಪೇಟೆಯ ಸ್ಥಿತಿ ಅನಿಶ್ಚಿತವಾಗಿದೆ. ೧೯೯೬-೮-೦ ಕ್ಕೆ ಇಳಿದು ಹೋಗಿ ಟಾಟಾ ಸ್ಟೀಲ ಡೆಫರ್ಡ ಮುಂದೆ ೨೦೪೫-೦-೦ಕ್ಕೆ ಸುಧಾರಿಸಿ ೨೦೩೫-೦-೦ ಕ್ಕೆ ಳಿಯಿತು. ಇಂಡಿಯನ್ ಅಯರ್ನ ೨೬೨-೦-೦ ರಿಂದ ೨೬೪-೦-೦ಕ್ಕೇರಿ ೨೬೩-೦-೦ ಕ್ಕೆ ಳಿಯಿತು, ಅಸೋಸಿಯೇಟೆಡ ಸಿಮೆಂಟ್ಸ ೧೬೦-೪-೦ ರಿಂದ ೧೬೨-೦-೦ಕ್ಕೇರಿ ೧೬೧-೮-೦ಕ್ಕಿಳಿಯಿತು. ಫಿನ್ಲೆ ೩೧೨-೦-೦ ಕ್ಕಿಳಿದು ೩೨೦-೦-೦ಕ್ಕೇರಿ ೩೧೮-೦-೦ ಕ್ಕೂ ಕೋಹಿನೂರು ೬೪೯-೦-೦ಕ್ಕಿಳಿದು ೬೬೦-೦-೦ಕ್ಕೇರಿ ೬೫೪-೦-೦ಕ್ಕೂ ಬಾಂಬೇ ಡಾಯಿಂಗ ೧೦೦೫-೦-೦ರಿಂದ ೧೧೬೦-೦-೦ಕ್ಕೇರಿ ೧೧೪೫-೦-೦ ಕ್ಕೂ ಸ್ವದೇಶಿ ೬೩೭—೦—೦ಕ್ಕಿಳಿದು ೬೫೫—೦—೦ ಕ್ಕೇರಿ ೬೪೭—೦—೦ ಕ್ಕೂ ಇಳಿದರೆ ಗೋಕಾಕ ೩೩೪ ರಿಂದ ೩೪೨—೮—೦ ಗೇರಿತು. ಬ್ಯಾಂಕುಗಳಲ್ಲಿ ಸೆಂಟ್ರಲ ೯೭—೪—೦ ರಿಂದ ೯೮—೮—೦ಕ್ಕೇರಿ ತಿರುಗಿ ೯೭—೪—೦ಕ್ಕೇ ಬಂತು. ಇಂಪೀರಿಯಲ್ ಎಸ್. ಸಿ. ೨೨೧೭—೦—೦ರಿಂದ ೨೨೫—೦—೦ಕ್ಕೇರಿದರೆ ರಿಝರ್ವ ೧೨೦—೦—೦ ರಿಂದ ೧೧೮—೦—೦ಕ್ಕೆ ಬಂತು.

ಚಿನ್ನ—ಬೆಳ್ಳಿ

ಪಂಜಾಬ, ಗಡಿನಾಡುಗಳಿಂದ ಓಡಿಬಂದ ನಿರಾಶ್ರಿತರು ಚಿನ್ನವನ್ನು ಮಾರುತಿದ್ದಾರೆಂಬ ಸುದ್ದಿಯಿಂದಲೂ ಕೋಲಾರ ಚಿನ್ನದ ಗಣಿಯಿಂದ ೧೬೦೦೦ ತೊಲೆ ಚಿನ್ನ ಪೇಟೆಗೆ ಬಂದದ್ದರಿಂದಲೂ ಚಿನ್ನ ಕಳೆದ ವಾರಾಂತ್ಯದಲ್ಲಿ ೧೧೦-೧೨-೦ ಕ್ಕಿಳಿದಿತ್ತು. ಆದರೆ ಸ್ಟರ್ಲಿಂಗ್ ಸಾಲಗಳನ್ನು ಸ್ಥಗಿತಗೊಳಿಸುವ ಭಯವೊಂದು ಈ ವಾರ ಹಬ್ಬಿದ್ದರಿಂದ ಬೆಲೆ ಮತ್ತೆ ಬಿಗಿಯಾಗಿ ೧೧೩-೦-೦ ಕ್ಕೇರಿದೆ. ಬೆಳ್ಳಿ ೧೬೮-೪-೦ ರಿಂದ ೧೬೩-೦-೦ ಕ್ಕೇರಿ ೧೬೨-೧೨-೦ಕ್ಕೆ ನಿಂತಿದೆ.

ಅರಳೆ

ಅರಳೆ ನಿರ್ಯಾತದ ಮೇಲಿನ ನಿರ್ಬಂಧಗಳನ್ನು ತೆತ್ತು ಹಾಕಿದ್ದರಿಂದ ವ್ಯಾಪಾರ ಹೆಚ್ಚಾಗುವಂತೆ ಕಾಣದುದರಿಂದ ಸುಧಾರಿಸ ತೊಡಗಿದ್ದ ಅರಳೆ ಬೆಲೆ ಮತ್ತೆ ಸಡಿಲತೊಡಗಿದೆ. ೪೪೨-೬-೦ ರ ವರೆಗೇರಿದ್ದ ಜುಲೈ ಅರಳೆ ೪೩೧—೦—೦ ಕ್ಕಿಳಿದು ಬಿಟ್ಟಿತು. ಸೆಪ್ಟೆಂಬರ ೪೫೫—೧೨—೦ ರಿಂದ ೪೪೭—೪—೦ ಕ್ಕಿಳಿಯಿತು.

ಎಣ್ಣೆ ಕಾಳು

ಶೇಂಗಾ	೧೬೪-೮-೦
ಅಗಸಿ	೩೧-೧೧-೦
ಅಗಸಿ ಎಣ್ಣೆ	೨೦-೧೨-೦

ಸಾಂಗಲಿ ಪೇಟೆ

ಅರಿಷಣ ಹೇರು		೧೦೫-೧೧೧
ಮೆಣಸಿನಕಾಯಿ ಹೇರು,,		೧೦೦-೧೫೦
ಶೇಂಗಾ	ಖಂಡಿ	೧೩೩

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ	ನಂ. ೧	೨೮೫
"	ನಂ. ೨	೨೬೫-೨೭೫
"	ನಂ. ೩	೨೩೫-೨೬೦
ಹಳೇ ಜಯವಂತ ಹತ್ತಿ		೨೯೫-೩೦೧
ಅಪ್ಲಂಡ ಹತ್ತಿ		೨೮೦-೨೮೫
ಜಿನ ಹೊಸದು		೧೮೦-೧೯೦
ಜಿನ ಹಳೇದು		೧೯೫-೨೦೧
ಡಬಲರೋಲ		೧೮೦-೧೮೫
ಸಾಜಿನ		೧೮೦-೧೮೫

ಗೋದಿಯನ್ನೇ ಮುಖ್ಯ ಆಹಾರವಾಗಿ ಉಪಯೋಗಿಸುವ ೭ ಜಾತಿಗಳ ಪ್ರತಿನಿಧಿಗಳು ಜುಲೈ ೭ ರಲ್ಲಿ ದಿವಾಣರನ್ನು ಭೆಟ್ಟಿಯಾಗಿ ಗೋದಿಯ ಕೊರತೆಯ ನಿವಾರಣದ ಬಗ್ಗೆ ಬಿನ್ನವಿಸಿಕೊಂಡಾಗ ದಿವಾಣರು ವ್ಯವಸ್ಥೆ ಮಾಡುವ ಭರವಸೆ ಕೊಟ್ಟರು.

ಮೈಸೂರು ನಗರದ ಕಾಂಗ್ರೆಸ ಸಮಿತಿಯ ಸಭೆಯು ಸಂಸ್ಥಾನದಲ್ಲಿ ಕೂಡಲೆ ಪ್ರಜಾರಾಜ್ಯ ಸ್ಥಾಪಿಸಬೇಕು, ಶ್ರೀ ಕೆ. ಹನುಮಂತಯ್ಯನವರನ್ನು ಬಂಧಮುಕ್ತರನ್ನಾಗಿ ಮಾಡಬೇಕು, ದಿವಾಣರ ಮಕ್ಕಳಾದ ಕೃಷ್ಣಸ್ವಾಮಿಯವರು ಬೆಂಗಳೂರಿನಲ್ಲಿ ಭಾಷಣ ಮಾಡಿದಾಗ ಗಲಭೆ ನಡೆಸಿದರೆಂದು ವಿ. ವಿ. ದಿಂದ ಹೊರಗೆ ಹಾಕಲ್ಪಟ್ಟ ೫ ವಿದ್ಯಾರ್ಥಿಗಳನ್ನು ತಿರುಗಿ ತೆಗೆದುಕೊಳ್ಳಬೇಕು ಮುಂತಾಗಿ ನಿರ್ಣಯ ಮಾಡಿತು.

ಸಂಸ್ಥಾನದ ರೈಲಿನ ಪ್ರಯಾಣದ ಸೌಕರ್ಯವನ್ನು ಹೆಚ್ಚಿಸಲು ಈಗ ಸರಕಾರದವರು ೪ ಕೋಟಿ ರೂಪಾಯಿಗಳ ಯೋಜನೆಯೊಂದನ್ನು ಮಂಜೂರು ಮಾಡಿದ್ದಾರೆ.

ದಿವಾಣರು ಬೆಂಗಳೂರು ಕುಮಾರ ಪಾರ್ಕಿನ ವಿಸ್ತರಣದಲ್ಲಿರುವ ಶ್ರೀ ತಿಮ್ಮೇಗೌಡರ ಉಚಿತ ವಿದ್ಯಾರ್ಥಿ ಮಂದಿರದ ಪ್ರಾರಂಭೋತ್ಸವವನ್ನು ಜುಲೈ ೬ ರಲ್ಲಿ ನೆರವೇರಿಸಿದರು.

ಜುಲೈ ೧ ರಿಂದ ೧ ತಿಂಗಳ ಅವಧಿಯಲ್ಲಿ ರಾಜಧಾನಿಯಲ್ಲಿ ತಮ್ಮಿಂದ ಲಾಯಿಸೆನ್ಸ ಪಡೆಯದೆ ಸಾರ್ವಜನಿಕ ಸಭೆ ಮೆರವಣಿಗೆ ಇತ್ಯಾದಿಗಳನ್ನು ನಡೆಸಕೂಡದೆಂದು ಜಿಲ್ಲಾಧಿಕಾರಿಗಳಾದ ಶ್ರೀ ಜಿ. ಎನ್. ನಾಗರಾಜರಾಯರು ಪ್ರತಿಬಂಧಕಾಜ್ಞೆಯೊಂದನ್ನು ಪೋ. ಕಾಯಿದೆಯ ೪೫ ನೆಯ ವಿಭಾಗದನ್ವಯವಾಗಿ ಹೊರಡಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆ ತೋಟಗಾರರು ಕೃಷಿಯ ಖರ್ಚಿಗಾಗಿ ಇಟ್ಟುಕೊಳ್ಳಬಹುದಾದ ಭತ್ತವನ್ನು ಇಟ್ಟುಕೊಳ್ಳಬಾರದೆಂದು ವಿಧಿಸಿದ ಭತ್ತವತ್ಸಲಂ ಸರಕಾರದ ಧೋರಣವನ್ನು ಬೇಸಾಯಗಾರರ ಸಂಘವು ನಿಷೇಧಿಸಿದೆ. ಈ ಕುರಿತು ಚರ್ಚಿಸಲು ತೋಟಗಾರರ ಪರವಾಗಿ ಶ್ರೀ ಎಂ. ಎನ್. ಭಿಡೆಯವರು ಮದ್ರಾಸಿಗೆ ತೆರಳಿದ್ದಾರೆಂದು ತಿಳಿದುಬಂದಿದೆ.

ದಕ್ಷಿಣ ಕನ್ನಡ

ಜೂನ ೨೯ ರಲ್ಲಿ ಚಿತ್ರಾಪುರ ಶ್ರೀಮಠದಲ್ಲಿ ಪ್ರಥಮ ಏಕಾದಶಿಯ ಕುರಿತು ಸುದರ್ಶನ ಹೋಮದೊಂದಿಗೆ ತಪ್ತಮುದ್ರಾಧಾರಣೆಯು ನಡೆಯಿತು.

ಕಳೆದ ೨೭ರಲ್ಲಿ ಪಾಣೆಮಂಗಳೂರು ಸರ್ಕಲ್ಲಿನ ಕೆಲ ಕಾಂ. ಕಾರ್ಯಕರ್ತರೂ ಹರಿಜನರೂ ಇತರರೂ ಕೂಡಿ ನೊಗರನಾಡು ದಾಮರ್ಸಬೈಲು ಶ್ರೀ ಲಕ್ಷ್ಮೀನರಸಿಂಹ ದೇವಸ್ಥಾನಕ್ಕೆ ಹೋಗಿ ದೇವರಿಗೆ ಹಣ್ಣುಕಾಯಿ ಅರ್ಪಿಸಿ ಗಂಧ ಪ್ರಸಾದ ಸ್ವೀಕರಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮುಂಬರುವ ಸಮ್ಮೇಳನವು ಬರುವ ಡಿಸೆಂಬರದಲ್ಲಿ ಕಾಸರಗೋಡಿನಲ್ಲಿ ಜರುಗುವುದೆಂದು ಗೊತ್ತಾಗಿದೆ.

ಮುಂದಿನ ತಿಂಗಳಲ್ಲಿ ಅರಿವೆಯ ನಿಯಂತ್ರಣ ಕಾಯಿದೆಯನ್ನು ತೆಗೆದುಹಾಕುವರೆಂದು ಕೇಳಿ ನಡುಗಾಲ ಸರಕಾರದ ಕೈಗಾರಿಕೆಯ ಮಂತ್ರಿಗಳಾದ ಶ್ರೀ ರಾಜಗೋಪಾಲಚಾರಿಯವರಿಗೆ ದ. ಕ. ಜಿಲ್ಲಾ ವಣಿಕ ಸಂಘದವರು ತಮ್ಮ ಅನುಮೋದನೆಯನ್ನು ತಿಳಿಸುವ ತಂತಿಯೊಂದನ್ನು ಕಳುಹಿದ್ದಾರೆ.

ಉಡುಪಿ ಸರ್ಕಲ್ ಕಾಂ. ಕಮಿಟಿಯ ಸಭೆಯು ಜುಲೈ ೨ರಲ್ಲಿ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಉಡುಪಿಯಲ್ಲಿ ಜರುಗಿತು.

ಗ್ರಾಮೋದ್ಧಾರ ಯೋಜನೆಗೆ ಆರಿಸಿದ ಕುಂಬಳೆ ಫಿರ್ಕಾದಲ್ಲಿ ಮಾಯಿಪಾಡಿ ಎಂಬಲ್ಲಿ ಚರಖಾ ಸಂಘದ ಕಡೆಯಿಂದ ಒಂದು ಖಾದಿ ವಿದ್ಯಾಲಯ ತೆರೆಯಲ್ಪಟ್ಟಿದೆ. ಇದಕ್ಕೆ ಉತ್ತಮವಾದ ಕಟ್ಟಡವನ್ನು ಕೊಟ್ಟ ಶ್ರೀ ಮಾಯಿಪಾಡಿರಾಜರ ಉಪಕಾರವು ಸ್ಮರಣೀಯವಿದೆ.

ಜುಲೈ ೧ರಲ್ಲಿ ಪುತ್ತೂರಿನ ದರ್ಬೆಯ ಸಮೀಪವಿರುವ ಬಿರುಮಲೆ ಗುಡ್ಡದ ಬಳಿ ಮಿಶನರಿಗಳು ಸ್ಕೂಲೊಂದನ್ನು ತೆರೆದರು.

ಈ ವಾರದ ಕತೆ

ನನ್ನ ಸಂಕಟ

ಶ್ರೀ. ಹುಲುಕುಂಟಿ.

ಸಂಧ್ಯಾಸಮಯ. ಇನ್ನೂ ನಾನು ಕೆಲಸದಲ್ಲಿರುವಾಗಲೇ ನನ್ನ ಗೆಳೆಯರಿಬ್ಬರು ಬಂದು ನನ್ನನ್ನು ಗಾಳಿಸಂಚಾರಕ್ಕೆ ಬರಲೇಬೇಕೆಂದು ಜುಲುಮೆ ಮಾಡಿದ್ದಕ್ಕಾಗಿ ನಾನು ಹೊರಡಬೇಕಾಯಿತು. ನಾವು ಹೊರಟು ತುಸು ದೂರಹೋಗಲಾಗಿ ನೈಸರ್ಗಿಕ ಸುಂದರತೆಯೋ ಏನೋ ಎನ್ನುವಹಾಗೆ ಆಕಾಶದಲ್ಲಿ ಕಾರ್ಮೋಡಗಳು ಒಂದೊಂದಾಗಿ ಕಾಣಿಸಿಕೊಳ್ಳಲು ಮೊದಲುಮಾಡಿದವು. ನನಗೆ ಆಕಾಶದಕಡೆ ನೋಡಲು ಹೆದರಿಕೆಯಾಯಿತು. ಈಗಲೆ ಮಳೆ ಸುರುವಾದರೆ ಮುಂದೆ ಹೇಗೆ? ತೊಯಿಸಿಕೊಳ್ಳದೆ ಗತ್ಯಂತರವಿಲ್ಲ. ತಿರುಗಿ ಹೋಗಬೇಕೆಂದರೆ ಎಂದಾದರೊಂದುದಿನ ಬಂದ ಗೆಳೆಯರೇನಂದುಕೊಂಡಾರು?, ಎಂಬ ಚಿಂತೆ ನನ್ನ ತಲೆಯಲ್ಲಿನ ವಿಚಾರ ಅವರಿಬ್ಬರಿಗೆ ತಿಳಿಯಿತೋ ಏನೋ ಕೂಡಲೆ ಅವರು ನನಗೆ "ಯಾಕ್ರಿ ಮಳೆಗೆ ಹೆದರುವಿರೇನು? ಕಾಳಜಿ ಮಾಡಬೇಡಿರಿ ನಾವು ನಿಮ್ಮನ್ನು ಮನೆಗೆ ಮುಟ್ಟಿಸುವೆ"ವೆಂದರು. ಇನ್ನೆಲ್ಲಾದರೂ ನನ್ನ "ಡಿಗ್ನಿಟಿ" ಕಡಿಮೆಯಾದೀತೆಂದು ನಾನೇ ಸುರುವು ಮಾಡಿದೆ. "ಇದೇನ್ರಿ ಎಷ್ಟೋಸಾರಿ ನಾನು ಭಾರಿಮಳೆಯಲ್ಲಿ ಸಿಕ್ಕಿದ್ದುಂಟು; ಈಗಾದರೋ ಇನ್ನೂ ಮಳೆಯೇ ಸುರುವಾಗಿಲ್ಲವಲ್ಲಾ" ಅಂತ ಮಾತನಾಡುತ್ತ ಮುಂದೆಸಾಗಿ ನದೀ ತೀರಕ್ಕೆ ಬಂದೆವು. ನದಿಯಲ್ಲಿ ದೋಣಿಗಳನ್ನು ನಡಸುತ್ತಾ ತಮ್ಮಷ್ಟಕ್ಕೆ ತಾವೇ ಕೇಕೆ ಹಾಕುತ್ತ ನಡೆದಿದ್ದ ಜನಸಮೂಹವೆಲ್ಲವೂ ಮೋಹಕವಾಗಿ ಕಾಣುತ್ತಿತ್ತು. ಆದರೆ ನನ್ನೆದೆ ಮಾತ್ರ ಆಕಾಶನೋಡಿ ನಡುಗುತ್ತಿತ್ತು. ಸಂಜೆಯಾಗಿ ಕಡೆಗೆ ಸೂರ್ಯಾಸ್ತವೂ ಆಯಿತು. ಹಾಗೆ ನಾನು ಮುಂದೆ ಎಲ್ಲಿಯವರೆಗೆ ಅವರೊಂದಿಗೆ ಹೋದೆನೋ ನನಗೆ ತಿಳಿಯದು. ನನ್ನ ಮನಸ್ಸು ಮಾತ್ರ ಹೊಯ್ದಾಡುತ್ತಿತ್ತು. ಈ ಮಹಾಶಯರ ಸಂಗಡ ನಾನಿಲ್ಲಿಗೇಕೆ ಬಂದೆನೋ ಅನ್ನುತ್ತಿತ್ತು. ಅಲ್ಲಿಗೆ ತಿರುಗಾಡಲಿಕ್ಕೆ ಬಂದ ಗೆಳೆಯ ಗೆಳತಿಯರು ಅಲ್ಲಲ್ಲಿ ನಕ್ಕುನಲಿಯುತ್ತಿದ್ದುದು ಕಂಡುಬಂತು. ನನ್ನ ಗೆಳೆಯರು ಹಾಸ್ಯರಸಕ್ಕಿಳಿದರು. ನಾನೂ ಏನೇನನ್ನೋ ಯೋಚಿಸುತ್ತಿದ್ದೆನು. ಕತ್ತಲೆ ಹೆಚ್ಚುತ್ತಹೋಯಿತು. ಜನ ಸಮೂಹವು ಕಡಿಮೆಯಾಗುತ್ತನಡೆಯಿತು. ನನ್ನ ಜೀವ ತಳಮಳಿಸಹತ್ತಿತು.

ನನಗೆ ಅಲ್ಲಿರುವದು ಅಸಾಧ್ಯವೆನಿಸಿತು. ನನ್ನ ಗೆಳೆಯನೊಬ್ಬನು ಹುರಿದ ನೆಲಗಡಲೆ ಕಾಯಿಗಳನ್ನು ತಂದು ಎಲ್ಲರಿಗೂ ಹಂಚುವಂತೆ ಹೇಳಿದನು. ಮೊದಲೆ ಹಸಿದಿದ್ದೆವು; ಮೂವರು ಕೂಡಿ ತಿಂದು ತೇಗಿದೆವು. ನಾನು ದೈನ್ಯದಿಂದ ಗೆಳೆಯರಿಗೆ ಮನೆಗೆಹೋಗೋಣ, ಮಳೆಯ ಚಿನ್ಹಗಳು ಹೆಚ್ಚಾಗುತ್ತಿವೆಯೆಂದು ಅರಿಕೆ ಮಾಡಿಕೊಂಡೆನು. ಆದರೆ ಅವರು ಈ ದಿವಸ ಆದೇಕೊ ವಿಚಿತ್ರ ವರ್ತನ ನಡಿಸಿದ್ದು ನನಗೆ ಸಂಶಯಾಸ್ಪದವಾಯಿತು. ನನ್ನತಲೆಯಲ್ಲಿಕಲ್ಪನಾತರಂಗಗಳೇಳತೊಡಗಿದವು. ನನ್ನ ಸಂಶಯವು ನನ್ನನ್ನು ಪೂರ್ಣಕೈವಶಮಾಡಿಕೊಂಡಿತು. ಗೆಳೆಯರಿಬ್ಬರ ವರ್ತನೆಯ ಪರಿಣಾಮವು ನನ್ನ ಮೇಲೆ ಆದೇಕೊ ಹೆಚ್ಚಾಗಿ ಆದಂತೆ ತೋರಿತು. ಕೋತಿಗೆ ಹೆಂಡ ಕುಡಿಸಿದಹಾಗೆ ನನ್ನ ಪರಿಸ್ಥಿತಿಯಾಯಿತು. ನದಿಯ ಮೇಲಿನ ತಂಗಾಳಿಯ ಸುಳಿದಾಟದಿಂದ ನನಗೆ ಮೊದಲೆ ಸಂಶಯ ಮೂಡಿದ ಕಾರಣ ಮತ್ತೂ ವಿಚಿತ್ರವಾಯಿತು. ಕಣ್ಣುಗಳಮುಂದೆ ಸಂಶಯದ ಭೂತಗಳ ತಾಂಡವನಡೆಯಿತು. ಇಷ್ಟರಲ್ಲಿಯೇ ಒಬ್ಬ ಗೆಳೆಯನು ತಾನು ಮುಂದಿನ ಪೂಲಿನ ಸನಿಯದ ವರೆಗೆ ಹೋಗಿಬರುವದಾಗಿಯೂ ನಾನು ಇಲ್ಲಿಯೇ ಅವನಿಗಾಗಿ ಕಾಯಬೇಕೆಂದೂ ಹೇಳಿದನು. ಇದಕ್ಕೆ ಪುಟ ಕೊಡುವ ರೀತಿಯಲ್ಲಿ ಇನ್ನೊಬ್ಬನು ತಾನೂ ಅವನ ಜತೆ ಹೋಗುವದಾಗಿಯೂ ವಿಶೇಷ ಕೆಲಸ ಅವನಿಗೆ ಅಲ್ಲಿರುವದಾಗಿಯೂ ನುಡಿದನು. ನನ್ನ ಮನಸ್ಸು ಪೂರ್ಣ ಬೆದರಿತು.

ಮೊದಲೇ ಬೆದರಿದ ಮನಸ್ಸು ಹಿಂದಿನಿಂದ ಸುಮಾರು ೧—೨ ಮೈಲುಗಳ ಅಂತರದಲ್ಲಿ ಯಾರೋ ರೋದನ ಮಾಡುತ್ತಿದ್ದುದು ಕೇಳಲಾಗಿ ಹೇಗಾಗಿರಬೇಕು? ಮುಂದೇನು ಮಾಡಬೇಕೆಂಬುದು ತಿಳಿಯದಹಾಗಾಯಿತು. ಗೆಳೆಯರು ತಮ್ಮ ಗುಪ್ತ ಕಾರ್ಯಕ್ಕಾಗಿ ಮುಂದೆ ಹೋಗಿದ್ದರು. ನನಗೆ ಜೀವ ಇದೆಯೋ ಇಲ್ಲವೋ ಎಂಬುದು ಮೊದಲನೆಯ ಸಮಸ್ಯೆಯಾಯಿತು. ಕತ್ತಲು ಕವಿದ ಕಾರಣ ಭೂತ, ಪಿಶಾಚಿಗಳು ಇಲ್ಲಿ ಇವೆಯೋ ಹೇಗೆ? ಎಂಬುದು ಎರಡನೆಯ ಸಮಸ್ಯೆಯಾಯಿತು.

ಭೂತ ಬಂದು ಮಾತನಾಡಿಸಿದರೆ ಉತ್ತರವೇನನ್ನು ಕೊಡಲಿ? ಇಲ್ಲವೇ ಭೂತವೇ ಸುಮ್ಮನಿದ್ದು ನನ್ನನ್ನು ಹೆದರಿಸಲಿಕ್ಕೆ ಯತ್ನಿಸಿದರೆ ಮಾಡುವದೇನು? ನನ್ನ ಸಂಶಯದ ರಾಜ್ಯದಲ್ಲಿ ಲೀನವಾಗಿದ್ದೆ. ಮತ್ತೆ ಸ್ವಲ್ಪ ಸಂಶಯ ನಿವಾರಿಸಿಕೊಂಡು ರೋದನದ ಧ್ವನಿ ಏನಿರಬಹುದೆಂದು ವಿಚಾರ ಸುರುವು ಮಾಡಿದೆ. ಧೈರ್ಯಬಂತು ಹಿಂದೆ ೧—೨ ಮೈಲಿನಲ್ಲಿ ಹುಚ್ಚರಾಸ್ಪತ್ರೆ ಇದೆ. ಅವೇ ಹುಚ್ಚುಗಳು ಒದರುತ್ತಿರಬಹುದು ಎಂದು ಮನಸ್ಸಿನಲ್ಲಿ ನಿರ್ಧರಿಸಿಕೊಂಡೆ, ಮತ್ತು ಸಂತೋಷಹೊಂದಿದೆ.

ಮುಂದೆ ಏನೋ ಒಂದು ನೆರಳಿನಂತೆ ಬರುತ್ತಿರುವ ಆಕೃತಿ ಪೂರ್ಣವಾಗಿ ಕಾಣಬಂತು. ಎದೆ ಬಡಿದುಕೊಳ್ಳುತ್ತಿತ್ತು. ತುಸುಹೊತ್ತಿನಲ್ಲಿಯೇ ಆಕೃತಿ ಚನ್ನಾಗಿ ಕಾಣಬಂತು. ಒಬ್ಬ ೧೮—೨೦ ವರ್ಷದ ಹುಡುಗಿ ಬರುತ್ತಿದ್ದಳು.! ನನ್ನಲ್ಲಿ ನನಗೇ ನಂಬಿಗೆ ಇಲ್ಲದಹಾಗಾಯಿತು. ಬರುತ್ತಿರುವವಳು ಯಾರಾಗಿರಬಹುದು? ಇಲ್ಲಿಗೇಕೆ ಕತ್ತಲೆಯಲ್ಲಿ ಬಂದಳು? ರಾತ್ರಿಯಲ್ಲಿ ಹೆಣ್ಣಿಗೇನು ಕಾರ್ಯ? ಅಡವಿಯಲ್ಲಿ ನದಿಯ ದಂಡೆಯಮೇಲೆ? ಅಯ್ಯೋ ಇವಳು ನದಿಯಲ್ಲಿ ಧುಮುಕಿದರೆ ನಾನೇನು ಮಾಡಲಿ? ದೇವಾ ನಾನಿಂದು ಈ ನೀಚಗೆಳೆಯರ ಬೆನ್ನುಹತ್ತಿ ಇಲ್ಲಿಗೇಕೆಬಂದೆನು! ಅಂತಾ ಯೋಚಿಸುತ್ತಿದ್ದೆ. ಆ ಹುಡುಗಿಯು ನನ್ನ ಸಮೀಪ ಬರುತ್ತಿದ್ದಳು. ಸಂಶಯಸಮಾಧಿಯಲ್ಲಿ ಹೆದರಿಕೆಯಾಗಿ ಇದು ಹೆಣ್ಣೋ, ಭೂತವೊ, ಪಿಶಾಚಿಯೋ ಅಥವಾ ಮತ್ತೇನಾದರೂ ಇದೆಯೋ ಎಂದು ತಿಳಿದು ದೇವರನ್ನು ಧ್ಯಾನಿಸಿ ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡೆನು.

"ಏನ್ರಿಮಿಸ್ಟರ ರಾಮರಾವ್, ನೀವೇಕೆ ಇಲ್ಲಿಗೆ ಇಂತಹ ವೇಳೆಯಲ್ಲಿ ಬಂದಿರುವಿರಿ? ನೀವೆಂದೂ ಸಂಜೆಯಾದನಂತರ ಮನೆಯಿಂದ ಹೊರಬೀಳುವವರಲ್ಲ, ಅಥವಾ ನಿಮ್ಮ ಗೆಳತಿ ಸುಂದರಿಯ ಜುಲುಮೆಯ ಮೇಲೆ ಬರೋಣವಾಯಿತೋ?" ಎಂದು ಯಾರೋ ಕೇಳಿದ ಹಾಗಾಯಿತು. ಮೊದಲೇ ಜೆವ್ವಬಡಕೊಂಡಾಗ ಬ್ರಹ್ಮರಾಕ್ಷಸ ಬಡಕ್ಕೊಳ್ಳುವದೇನೋ ಎನ್ನುವಹಾಗೆ ನನ್ನ ಮನಸ್ಸು ಪೂರ್ಣ ಅಂಕೆತಮೀರಿ ಮೈಮೇಲೆ ಮುಳ್ಳೆದ್ದು, ಬಾಯಿಂದ ಮಾತು ಬಾರದಹಾಗಾಗಿ ಸುಮ್ಮನೆ ಮೂಕನಹಾಗೆ 'ಹೂಂ' ಎಂದೆನು. ಜೀವ ಹೋದರೂ ಕಣ್ಣು ತೆರೆಯಬಾರದೆಂದು ಧೃಢವಾದ ಸಂಕಲ್ಪಮಾಡಿಕೊಂಡೆನು. ಆದರೆ ನನ್ನ ಮೆದುಳು ಮಾತ್ರ ಭಾರಿ ಕಾರ್ಯದಲ್ಲಿ ತೊಡಗಿತ್ತು. ಈಗ ಬಂದವಳಿಗೆ ನನ್ನ ಹೆಸರು ಹೇಗೆ ಗೊತ್ತಾಯಿತು? ನನ್ನ ಗೆಳತಿಯ ಹೆಸರು ಹೇಳುತ್ತಾಳಲ್ಲ? ನಾನು ಅಂಜುಬುರುಕನಿರುವದೂ ಗೊತ್ತಿದೆಯಲ್ಲಾ? ಅಂದಮೇಲೆ ನಿಜವಾಗಿಯೂ ಇದು ಹೆಣ್ಣಲ್ಲ ಮತ್ತು ಮನುಷ್ಯಪ್ರಾಣಿಯೂ ಅಲ್ಲಾ. ಇದು ನಿಶ್ಚಿತವಾಗಿ ಪಿಶಾಚಿಯಾಗಿರಬೇಕು! 'ದೆವ್ವ ದೆವ್ವ' ಎಂದು ಚೀರಿಬಿಡಲೇ ಎನಿಸಿತು. ಬಾಯಿಇದ್ದರೋ ಒದರುವದು.

"ಯಾಕ್ರಿ ಮಿಸ್ಟರ ರಾಮರಾವ್, ಬರಿಹೂಂಕಾರ ನಡಿಸೀರಿ ನನ್ನ ಜತೆಯಲ್ಲಿ, ಹೀಗೆ ನೀವೆಂದೂ ಸುಮ್ಮನೆ ಇದ್ದಿಲ್ಲ ಯಾರದಾದರೂ ಬರವನ್ನು ನಿರೀಕ್ಷಿಸುತ್ತಿರುವಿರೇನು? ಹಾಗಾದರೆ ನನಗೆ ಮುಂದಿನ ಪೂಲಿನ ಹತ್ತಿರ ಸ್ವಲ್ಪ ಕೆಲಸವಿದೆ ಹೋಗುವೆನು ನಮಸ್ಕಾರ." ದೇವಾ, ದೆವ್ವ ಹೋಯಿತೇ ಅಥವಾ ನನಗೆ ಮೋಸಮಾಡಲಿಕ್ಕೆ ನಾನು ಮುಚ್ಚಿದ ಕಣ್ಣು ತೆರೆಸಲಿಕ್ಕೆ ತನ್ನ ವಿಚಿತ್ರ ರೂಪವನ್ನು ನನಗೆ ತೋರಿಸಲಿಕ್ಕೆ ಈ ನಾಟಕವನ್ನು ನಡೆಸಿದೆಯೋ? ಮನೆಗೆ ಹೋದಮೇಲೆ ಆ ಶೀನ್ಯಾನ ಕೇಳಬೇಕು. ಪೂಲಿನ ಹತ್ತಿರ ದೆವ್ವ ಬಂದಿತ್ತೇನು ಅಂತ ಶೀನ್ಯಾ ಹೇಳೋಪೈಕಿ ಅಲ್ಲಾ ರಂಗ್ಯಾ ಹೇಳ್ಯಾನು. ಇಬ್ಬರೂ ಹೋಗ್ಯಾರಲ್ಲಾ ಅಲ್ಲಿಗೆ ನೀಚರು! ನನ್ನೊಬ್ಬನನ್ನ ಇಲ್ಲಿಬಿಟ್ಟು ಏನು ಮಾಡುತ್ತಿರಬಹುದು ಪೂಲಿನ ಹತ್ತಿರ? ಹಾ ಹಾ ಅದ್ದಿ ಇಲ್ಲಾ ದೇವರು ಅವರಿಗೆ ಕಳ್ಳದ್ದು ಮಾಡಿದ. ದೆವ್ವ ಈಗ ಅವರಿಗೆ ಬುದ್ಧಿ ಛಟ್ಟ ಮಾಡಸ್ತದ ನಾನೋ ದೇವರನ್ನು ಧ್ಯಾನಿಸುತ್ತ ಅವರದಾರಿ ಕಾಯುತ್ತೇನೆ ಎಂದುಕೊಂಡೆ.

ಯಾರೋ ಬರುತ್ತಿರುವ ಸದ್ದು ಕೇಳಿಸಿತು ಮತ್ತು ಮೋರೆ ಮೇಲೆ ಬೆಳಕು ಬಿದ್ದಹಾಗಾಯಿತು. ಆಕಾಶದಲ್ಲಿ ಗುಡುಗಿತು, ನನ್ನ ಮನಃಸಾಮ್ರಾಜ್ಯದಲ್ಲಿ 'ಅಯ್ಯೋ ಭಂಗವಂತಾ ದೆವ್ವಗಳಿಗೂ ಬ್ಯಾಟ್ರಿ ಹೇಗೆ ಹಚ್ಚಬೇಕೆಂಬುವದು ತಿಳಿದಿದೆಯೋ ಅಥವಾ ಇದು ಮಿಂಚು ಇರಬಹುದೇ ನಾನು ಕಣ್ಣು ಮುಚ್ಚಿದ್ದರಿಂದ ಹೀಗಾಗುತ್ತದೆಯೋ?' ಎಂಬ ದಂಗೆಯೆದ್ದಿತು.

Hollo mr. Ramarao you or here, what made you come here? ಎಂಬ ಸ್ವರವು ಕೇಳಿತು. ಹೇ ಭಗವಾನ್, ಈ ದೆವ್ವಗಳಿಗೂ ಇಂಗ್ಲೀಷು ಬರುತ್ತದೆಯೋ ಅಥವಾ ಇದು ನನ್ನ ಕನಸೇ? ನನ್ನ ಸಂರಕ್ಷಣೆಯ ಭಾರ ನಿನ್ನದು. ಈ ದಿನ ದೆವ್ವಗಳಿಂದ ನನ್ನನ್ನು ಪಾರು ಮಾಡು, ನಿನಗೆ ಒಂದಲ್ಲ ಹತ್ತು ತೆಂಗಿನ ಕಾಯಿ ಇಂಥ ದುಬಾರಿ ಕಾಲದಲ್ಲಿ ಹಿಂದುಮುಂದು ನೋಡದೆ ಒಡೆಸುತ್ತೇನೆ, ಮತ್ತು ಸಂಜೆಯಾದ ಮೇಲೆ ಎಂದಿಗೂ ಮನೆಯಿಂದ ಹೊರಬೀಳುವದಿಲ್ಲಾ. Why Mr. you have closed eyes tightly? ಅಯ್ಯೋ ಮತ್ತೆ ನನ್ನ ಕಣ್ಣು ಬೇರೆ ತೆರೆ ಅಂತದಲ್ಲಾ ಇದು! ಏನೇ ಆಗಲಿ ಈ ಒಂದು ತಾಸಿನಲ್ಲಿ ಎಷ್ಟೋ ಕಂಟಕ ಇವೆ; ನಾನು ಪಿಟ್ ಅನ್ನದೆ ಇದ್ದದ್ದು ನೋಡಿ ಈ ಎರಡನೇ ದೆವ್ವ (ಧನಿ ಹೆಂಗಸಿನದಿತ್ತು) ನನ್ನ ಮುಂದೆ ಹಾದು ಹಿಂದಿನ ದೆವ್ವ ಹೋದ ದಾರಿ ಹಿಡಿದು ಹೋಗುತ್ತಿದ ಸಪ್ಪಳ ಕೇಳಿತು. ನನಗೆ ಇದ್ದದ್ದರಲ್ಲಿಯೆ ಧೈರ್ಯ ಬಂದಂತಾಯಿತು.

ಇನ್ನೂ ದೆವ್ವ ಹೋಗಿ ೧೦-೧೫ ನಿಮಿಷಗಳಾಗಿರಲಿಕ್ಕಿಲ್ಲ, ರಸ್ತೆಯಲ್ಲಿ ಮೋಟಾರ ಬರುವ ಸದ್ದಾಯಿತು. ದೇವಾ ಕಡೆಗೆ ಕೃಪೆ ಮಾಡಿದೆಯಾ ಎಂದುಕೊಂಡು ಕಣ್ಣು ತೆರೆಯಬೇಕೆಂದಿದ್ದೆ. ಆದರೆ ಬರುವ ಮೋಟಾರಿನ ಸದ್ದು ಒಮ್ಮೆಲೆ ನಿಂತಹಾಗಾಯಿತು. ನನ್ನ ಚಿಂತೆ ಇನ್ನೂ ಜೋರಾಯಿತು. ದೆವ್ವಗಳಿಗೂ ಮೋಟಾರ ಇವೆಯೊ? ಅವೂ ಮೋಟಾರಿನಲ್ಲಿ ತಿರುಗಾಡುವವೆ? ಅಥವಾ ನನ್ನನ್ನು ಆದರಲ್ಲಿ ಕೂಡಿಸಿಕೊಂಡು ಹೋಗಲು ಆ ಹೆಣ್ಣು ದೆವ್ವಗಳ ನಾಟಕ ಇದು ಇರುವದೆ? ಎಂದು ಚಿಂತಿಸುತ್ತ ಇದೆಯಾದರೂ ಏನು, ಮೋಟಾರು ಕೆಟ್ಟಿರಬಹುದೆಂದು ತಿಳಿದು ಕಣ್ಣು ತೆರೆದೆ. [illegible] ಅರ್ಧ [illegible] ಒಂದೆ ನಿಂತಿತ್ತು. ಮುಂದಿನ ನಿಮಿಷಗಳು ಅತಿಕಷ್ಟಪಟ್ಟವು. ನನಗೆ ಹುಚ್ಚು [illegible] ಹೆಚ್ಚಾಗತೊಡಗಿತು. ಅಷ್ಟರಲ್ಲಿ [illegible] ಯಾಕೋ [illegible] ಅಂತ [illegible] ಇಲ್ಲಿ [illegible] — ಅಂತ ಅಂತ [illegible]. [illegible] ಈ ದೆವ್ವ [illegible] ಮೊದಲನೇ [illegible] ದೆವ್ವ [illegible] ಅಂತ ಎರಡನೇದು [illegible]. ಅಷ್ಟರಲ್ಲಿ ಎಲ್ಲೋ ಗಂಡು ದೆವ್ವ ಕಾಣತದ, ರಾಮ್ಯಾ ಅಂತದ. ನಾ ಏನು ಮಾಡಲಿ ಈಗ? ಮಾಡುತ್ತಿದ್ದ ದೆವ್ವ ಸಮೀಪಕ್ಕೆ ಬಂದು ನನ್ನ ಹೆಗಲ ಮೇಲೆ ಕೈಹಾಕಿತು. ನಾನು ಚಿಟ್ಟನೆ ಚೀರಿ ನೆಲಕ್ಕೆ ಬಿದ್ದೆ. ನನಗೆ ಸ್ವಲ್ಪ ಪ್ರಜ್ಞೆ ಬಂದ ಹಾಗಾಯಿತು. ಎದ್ದು ನೋಡಿದೆ, ನಾನು ಕಾರಿನಲ್ಲಿ ಮಲಗಿದ್ದೆ ಒಳಗಿನ ದೀಪ ಹಚ್ಚಿದ್ದ ಕಾರಿನ ಮುಂದೆ ಕುಳಿತು ನನ್ನ ಕಡೆ ನೋಡುತ್ತಿದ್ದ ವ್ಯಕ್ತಿ ಭೀಮ್ಯಾ ಅಂತ ನನಗೆ ತಿಳಿಯಿತು. ಯಾಕೋ ರಾಮ್ಯಾ ಹೆದರಿದೇನು? ಹಾಗೇಕೆ ಚೀರಿದೆಪ್ಪಾ ಅಂತ ಕೇಳಿದ. ನಾನು ಚಟಕ್ಕನೆ ಎದ್ದು ಕುಳಿತು ಹೇಳಿದೆ "ಭೀಮ್ಯಾ ಶೀ ಬಾಡದು ದೇವರ್ಹ್ಯಾಂಗ ಬಂದೀದಿ, ಇವತ್ತ ನನಗೆಲ್ಲೋ ಇದಿ ಕಾಡತದ; ಶೀನ್ಯಾ, ರಂಗ್ಯಾ ನನ್ನ ಹಿಡಕೊಂಡು ಬಂದು ಇಲ್ಲಿ ಕೂಡಿಸಿ ಹೋಗ್ಯಾರ. ಮೊದಲ ನಾ ಸ್ವಲ್ಪ ಹೆದರುವವ ಐನಪಾ. ಹಿಂದಾಗಿಲ್ಲೆ ಎರಡು ಹೆಣ್ಣು ದೆವ್ವಾ ಬಂದು ಮಾತಾಡಿಸಿದವು. ನಾನು ಗಟ್ಟಿ ಕಣ್ಣು ಮುಚ್ಚಿದ್ದೆ ಜೀವ ಹೋದರೂ ಕಣ್ಣು ತಗಿಬಾರದು ಅಂತ ಮಾಡಿದ್ದೆ. ಆದರೆ ಈ ಮೋಟಾರ ಸಪ್ಪಳಾ ಕೇಳಿ ಕಣ್ಣು ತಗದೆನಪಾ. ನಾಯಾಕ ಚೀರಿದೆನಂದ್ರ, ನನ್ನ ಹೆಗಲ ಮೇಲೆ ದೆವ್ವ (ಅದರಾಗೂ ಗಂಡು ಕಾಣತದ) ಕೈ ಹಾಕಿತು, ಅದಕ ಚೀರಿ ಬಿಟ್ಟೆ."

"ಅಲ್ಲೋ ರಾಮ್ಯಾ, ನೀ ಎಂಥಾ ಅಂಜುಬುರುಕೋ, ಇಲ್ಲಾಂಕ ನಿನಗೆ ದೆವ್ವ ಬರುತಾವೋ? ಎಲ್ಲೋ ನೀ ಶುದ್ಧ ಹುಚ್ಚು ಕಾಣತದ ಐನಪಾ? ನಿನಗ ಮಾತಾಡಿಸಿದ ಆ ಎರಡು ಹೆಣ್ಣು ದೆವ್ವಗಳು ಯಾರು ಗೊತ್ತದನ ಭೀಮ್ಯಾ. ಅವು ದೆವ್ವಲ್ಲೇನೋ ಹಂಗಾದರ ಮತ್ತೇನು? ರಾಮ್ಯಾ ನಾ ಹೇಳೋದು ಸ್ವಲ್ಪ ಕೇಳು— ಮೊದಲು ಬಂದ ದೆವ್ವ ಆ ರಂಗ್ಯಾನ ಕ್ಲಾಸಮೇಟ ಮಿಸ್. ಚಂದ್ರಾ. ಹಿಂದಿನಿಂದ ಬಂದ ಎರಡನೇ ದೆವ್ವ ಆ ಶೀನ್ಯಾನ ಕಾಲೇಜಿನ ಹುಡಿಗಿ ಮಿಸ್. ತಾರಾ, ಗೊತ್ತಾತ ಈಗರ. ಶೀನ್ಯಾ, ರಂಗ್ಯಾ ಇತ್ತಲಾಗ ಇಬ್ಬರ ನಾ ಅವರಿಗೆ ಚೆನ್ನಹತ್ತೇನಿ ಅಂತ "ಗ್ಯಾರಂಟೀ" ಅದ; ಅದಕ್ಕ ನಿನ್ನ ನಡುವೆ ಹಾಕ್ಕೊಂಡು ಬಂದಾರ, ನಾ ಮೊದಲ ಎಲ್ಲಾರು ತಿರುಗಾಡಲಿಕ್ಕೆ ಹೋಗಿದ್ದಾರು ಅಂತಾ ತಿಳಿದಿದ್ದೆ. ಸುಮಾರು ರಾತ್ರಿ ಎಂಟಕ್ಕೆ ರಂಗ್ಯಾನ ರೂಮಿ.ಗೆ ಹೋಗಿ ನೋಡಿದೆ ಅವಾ ಇದ್ದಿದ್ದಿಲ್ಲಾ. ಇತ್ತಲಾಗ ಬಂದಿದ್ದರು. ಅಂತೂ ಬಂದೆ ನಡುವೆ ನಿನ್ನನ್ನು ನೋಡಿದೆ, ನೀ ಒಬ್ಬನ ಯಾಕ ಇಲ್ಲಿ ಕುಳಿತಿದಿ ಅಂತಾ ಮೋಟಾರ ನಿಂದರಿಸಿ ಬಂದೆ. ಇಷ್ಟೆಲ್ಲಾ ಆಯಿತು ನೋಡು. ರಾಮ್ಯಾ ಇನ್ನು ಮ್ಯಾಲೆ ನೀನು ಆ ನೀಚರ ಜುಲುಮೆಗೆ ಬಂದರೆ ನಿನಗೆ ಹಿಂಗ ಅಗ್ತದ. ಅಲ್ಲೋ ಭೀಮ್ಯಾ ನಾ ಮೊದಲ ಅವು ದೆವ್ವಅಲ್ಲಾ ಹೆಣ್ಣು ಅಂತಾ ತಿಳಿದಿದ್ದರೆ........ಆಗಲಿ ಪ್ರೇಮದ ಈ ಗೆಳೆಯರನ್ನು ....ಮನೆಗೆ ನಡೆ ಹೋಗೋಣು."



ಜ್ಯೋತಿಷಿ:–ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಜುಲೈ ೧೪ ರಿಂದ ೨೦ ರ ವರೆಗೆ

ಮೇಷ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ ಮಕ್ಕಳಲ್ಲಿ ಒಬ್ಬರ ಬಹಳ ಉನ್ನತಿ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕೆಲ ಸಲ ಆನಂದದಾಯಕವಿದ್ದರೆ ಬೇರೆ ಸಲ ಕಷ್ಟದ್ದು. ರೋಖ ಸಂಗ್ರಹದಲ್ಲಿ ಹೆಚ್ಚಳ. ಆದರೆ ಸ್ಥಾವರದಲ್ಲಿ ಸ್ವಲ್ಪ ಹಾನಿ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಉತ್ತಮ ಆದರೆ ಲಾಭವಾಗುವದರಲ್ಲಿ ಅಯುಕ್ತವೇಳೆಗೆ ಆಕಸ್ಮಿಕ ಅಡಚಣಿ. ಮನೆಯಲ್ಲಿ 'ಪಾಹುಣ' ಜನರ ಗದ್ದಲ ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರರಿಗೆ ಯೋಗ್ಯ ಉಪದೇಶವೂ ಕಹಿಯೆನಿಸುವದು. ಸ್ವಪ್ನಭಯಾನಕ. ಪತ್ರವ್ಯವಹಾರಕ್ಕಿಂತ ಭೆಟ್ಟಿ ಶುಭ್ತ. ಪ್ರವಾಸ ಅನುಕೂಲ. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ಕೊನೆಯ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೪, ೧೫, ೧೬, ೧೭ ಅನುಕೂಲ.

ವೃಷಭ

ಸ್ವತಃಕ್ಕೆ ಮತ್ತು ಹೆಂಡತಿಗೆ ಕಿರಕೋಳ ಕ್ಲೇಶ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ ಪ್ರಿಯಜನರ ಸಹವಾಸ ದೈನಿಕ ಕೃತ್ಯಗಳು ಬಂಧುವರ್ಗದವರಲ್ಲಿ ಮತ್ತು ಮಕ್ಕಳಲ್ಲಿ ಉತ್ಕರ್ಷ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಅನುಕೂಲ ಆದರೆ ಲಾಭ ದೃಷ್ಟಿಯಿಂದ ಅಸಮಾಧಾನದ ಸ್ಥಿತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ ಮಿತ್ರರು ಕೆಲ ಕಾರಣಗಳಿಗಾಗಿ ರೊಚ್ಚಿಗೇಳುವರು ಬಹಳ ದೂರಿನ ಪ್ರವಾಸ ಭೆಟ್ಟಿ ಮತ್ತು ಪತ್ರವ್ಯವಹಾರ ಮನಸ್ಸಿನಂತೆ ಕೃತ್ತಿಕೆಯ ಕೊನೆಯ ೩ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೪, ೧೫, ೧೬, ೧೭ ಅನುಕೂಲ.

ಮಿಥುನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ ಕ್ಷುಲ್ಲಕ ಮಾತುಗಳಿಗಾಗಿ ಬಹಳ ದೊಡ್ಡ ಗಡಿಬಿಡಿ ಏಳುವ ಪ್ರಸಂಗ. ಮಿತ್ರಕೃತದಲ್ಲಿ ವಿರೋಧ ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅನುಕೂಲ. ಆದರೆ ಲಾಭ ಕಡಿಮೆ. ಬಗೆಬಗೆಯ ವೆಚ್ಚ ಮಾತ್ರ ಮಾಡಬೇಕಾದ ಅಪರಿಹಾರ್ಯ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಆದರೂ ವಿರೋಧಿಗಳಿಂದ ಅಂತಸ್ಥ ತೊಂದರೆಯಾಗುವದು ಒಂದೇ ಸವನೆ ನಡೆದದ್ದೆ ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಉತ್ತಮ ಆರಿದ್ರೆಯ ಕೊನೆಯ ೩ ಮತ್ತು ಪುನರ್ವಸುವಿನ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೬, ೧೭, ೨೦ ಅನುಕೂಲ.

ಕರ್ಕ

ಪ್ರಕೃತಿ ಉತ್ತಮ ಸ್ತ್ರೀಸುಖ ಅನುಕೂಲ ಮಕ್ಕಳಲ್ಲಿ ಒಬ್ಬರ ವಿಶೇಷ ಉನ್ನತಿ ಆದರೆ ಬಹುತರ ಎಲ್ಲ ಜನರ ವರ್ತನೆ ಮನಸ್ಸಿನ ವಿರುದ್ಧ ಪ್ರಪಂಚಿಕ ಸುಖ ಮಧ್ಯಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ ಆದರೆ ವೆಚ್ಚವೂ ವಿಪರೀತ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ ಪುಷ್ಯದ ಕೊನೆಯ ೩ ಮತ್ತು ಅಶ್ಲೇಷಾದ ಮೊದಲನೆ ೩ ಚರಣಕ್ಕೆ ತೊಂದರೆ ಕಡಮೆ. ತಾ. ೧೪, ೧೫, ೧೯, ೨೦ ಅನುಕೂಲ.

ಸಿಂಹ

ನಿಮ್ಮ ಪ್ರಕೃತಿ ಅನುಕೂಲ ಆದರೆ ಹೆಂಡತಿಯದು ಕೆಡುವದು. ನೆರೆಹೊರೆಯವರ ವಿರೋಧ. ನೋಕರ ಚಾಕರರಿಗೆ ಕಾಯಿಲೆ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಎಲ್ಲವೂ ತೇಜಿಯಲ್ಲಿ ಆದರೆ ವೆಚ್ಚದ ಮುಂದೆ ಎಲ್ಲವೂ ಫರಫುಕ್ ಆಗುವ ಸರತಿ. ಮಿತ್ರಸುಖ ಉತ್ತಮ ಸಮಾಜವು ಮಕ್ಕಳನ್ನು ಗೌರವಿಸುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನಸ್ಥಿತಿ ಪ್ರವಾಸಾದಿ ಕೆಲಸ ಮನಸ್ಸಿನಂತೆ ಮಘಾದ ಕೊನೆಯ ೩ ಮತ್ತು ಪೂರ್ವಾದ ಕೊನೆಯ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೪, ೧೫, ೧೬, ೨೦ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ ಎಲ್ಲ ಕಡೆಯಿಂದಲೂ ಉತ್ಕರ್ಷ ಉದ್ಯೋಗದಲ್ಲಿ ಬಹಳ ಪ್ರಗತಿ ತುಂಬ ಲಾಭ ಮತ್ತು ಅಸಾಮಾನ್ಯ ಪ್ರತಿಷ್ಠೆ ಒಬ್ಬ ಪ್ರಸಿದ್ಧ ಸ್ತ್ರೀಯಿಂದ ಗೌರವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ ಸ್ವಪ್ನ ಶುಭ ಸೂಚಕ ಅನೇಕರ ಕಲ್ಯಾಣವಾಗುವಂಥ ಕೃತ್ಯಗಳು. ಪ್ರವಾಸಾದಿ ಕೆಲಸ ಹಿತಕರ ಆದರೆ ಉತ್ತರಾದ ಕೊನೆಯ ೩ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೪, ೧೮ ಅನುಕೂಲ.

ತುಲಾ

ಪ್ರಕೃತಿ ನಿಮ್ಮದು ಅನುಕೂಲ. ಆದರೆ ಹೆಂಡತಿಯ ಪ್ರಕೃತಿಯಲ್ಲಿ ಸ್ವಲ್ಪ ಕುರಕುರಿ. ಪ್ರಾಪಂಚಿಕ ಸುಖದಲ್ಲಿ ಅನೇಕ ಅಡಚಣಿಗಳಿಂದ ಮನಸ್ಸು ವಿರಸ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಅತಿ ಉತ್ತಮ. ಆದರೆ ಪ್ರತಿಷ್ಠೆ ಬೆಳೆಯುತಿರುವಲ್ಲಿ ವಿಘ್ನ. ಸಂಕೋಚಿಗಳು ಮೋಸಮಾಡುವ ಪ್ರಯತ್ನ ಒಂದೇ ಸವನೆ ನಡೆಸುವರು. ಇದರಿಂದ ಮನಸ್ಸು ಗೊಂದಲದಲ್ಲಿ ಬೀಳುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳು ಜೋರಿನಿಂದ ಪ್ರಯತ್ನ ನಡೆಸುವರು. ಆದರೆ ಯಶಾಪಯಶಸ್ಸು ಅನಿರ್ಣಿತ. ಮಿತ್ರಸುಖ ಉತ್ತಮ. ಪ್ರವಾಸದಲ್ಲಿ ಕಳವು ಹೊಡತದ ಅಂಜಿಕೆ. ಭೆಟ್ಟಿಯಲ್ಲಿ ಪರಸ್ಪರರ ತಪ್ಪು ತಿಳುವಳಿಕೆ. ಆದರೆ ಪತ್ರವ್ಯವಹಾರ ಮತ್ತು ಲೇಖೀ ಕೆಲಸ ಉತ್ತಮ. ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ಮೊದಲನೆ ಚರಣಗಳಿಗೆ ತೊಂದರೆ ಕಡಮೆ. ತಾ. ೧೬, ೧೭, ೨೦ ಅನುಕೂಲ.

ವೃಶ್ಚಿಕ

ಪ್ರಕೃತಿ ಅನುಕೂಲ ಆದರೆ ಹೆಂಡತಿ ಮತ್ತು ಮಕ್ಕಳಲ್ಲಿ ಮೇಲಿಂದ ಮೇಲೆ ಮತಭೇದವಾಗುವದರಿಂದ ಪ್ರಾಪಂಚಿಕ ವಿಷಯಗಳಲ್ಲಿ ಔದಾಸ್ಯ. ಅತ್ತರು ಮತ್ತು ನೆರೆಯವರ ಪೀಡೆ ಮತ್ತು ಉಪದ್ರವ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಲಾಭ ಉತ್ತಮ ಅಕಲ್ಪಿತ ಲಾಭದ್ದು ಸಂಭವ. ಮಿತ್ರರಲ್ಲಿ ಒಬ್ಬರ ವಿಶೇಷ ಉತ್ಕರ್ಷ. ಮನನೀಯ ಗ್ರಂಥಗಳ ವಾಚನದಲ್ಲಿ ಒಲವು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಕಿಂಚಿತ್ ಅನುಕೂಲತೆ ಪ್ರವಾಸಾದಿ ಕೆಲಸ ಮಧ್ಯಮ ಅನುಕೂಲ. ಅನುರಾಧೆಯ ಕೊನೆಯ ೩ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೫, ೧೯, ೨೦ ಅನುಕೂಲ.

ಧನು

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಉಭಯತರಲ್ಲಿ ಒಳ್ಳೆ ಪ್ರೇಮ. ಆದರೆ ಮಕ್ಕಳ ದುಷ್ಪ್ರವೃತ್ತಿಯ ಕೆಲವು ಕೃತ್ಯಗಳನ್ನು ನಡೆಸುವದರಿಂದ ಎಲ್ಲರ ಮನಸ್ಸು ವಿರಸ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತಿ ಉತ್ತಮ. ರೋಖ ಸಂಗ್ರಹದಲ್ಲಿ ಹೆಚ್ಚಳ. ಹೆಂಡತಿಯ ತವರೂರಿನವರಲ್ಲಿ ಕೆಲವೊಂದು ಒಡಕು. ಮಿತ್ರ ಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷಿಗಳ ಜೋರು ಹೆಚ್ಚು ಎನಿಸಿದರೂ ಯಶಸ್ಸಿನ ಅನುಕೂಲತೆ. ನಿಮ್ಮ ಕಡೆಯಲ್ಲಿಯ ಪ್ರವಾಸಾದಿ ಕೆಲಸ ಹಿತಕರ. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢಾದ ಕೊನೆಯ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೬, ೧೭, ೨೦ ಅನುಕೂಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಆದರೆ ಹೆಂಡತಿಯು ಮಾತ್ರ ಮೇಲಿಂದ ಮೇಲೆ ವಿರೋಧಿಸುವಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸ್ವತಂತ್ರ ಧಂದೆಯವರಿಗೆ ಮಧ್ಯಮ. ಆದರೆ ನೋಕರಿಯವರಿಗೆ ಉತ್ತಮ. ಮಿತ್ರ ಸುಖ ಉತ್ತಮ. ಆದರೆ ಅವರಲ್ಲಿ ಒಬ್ಬರಿಗೆ ಬಹಳ ಕಾಯಿಲೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಬಹಳ ಪ್ರಯತ್ನ ಇಲ್ಲವೆ ವೆಚ್ಚ ಮಾಡಿದರೆ ಬಹಳ ಮನಸ್ಸಿನಂತೆ. ಉತ್ತರಾಷಾಢಾದ ಕೊನೆಯ ೩ ಮತ್ತು ಶ್ರವಣಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೪, ೧೫, ೧೯ ಅನುಕೂಲ.

ಕುಂಭ

ನಿಮ್ಮ ಪ್ರಕೃತಿ ಸ್ವಲ್ಪ ಕೆಡುವ ಸಂಭವ. ಆದರೆ ಹೆಂಡತಿ ಮತ್ತು ಮಕ್ಕಳ ಪ್ರಕೃತಿ ಚೆನ್ನಾಗಿ ಉಳಿದು ಮಕ್ಕಳಲ್ಲಿ ವಿಶೇಷ ಉತ್ಕರ್ಷದ ಮಾತು ಸಂಭವಿಸುವವು. ಸ್ಥಾವರಲ್ಲಿ ಬಹಳ ಅನುಕೂಲ ಸಂಗತಿಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಮಿತ್ರಸುಖ ಉತ್ತಮ. ಸ್ವಪ್ನ ಶುಭ ಮತ್ತು ಭಾವೀ ಸೂಚಕ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಪ್ರವಾಸಾದಿ ಕೆಲಸ ಹಿತದ್ದು. ಶತತಾರಿಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ಮೊದಲನೆ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೧೬, ೧೭, ೨೦ ಅನುಕೂಲ.

ಮೀನ

ಪ್ರಕೃತಿ ಸಾಧಾರಣವೆ, ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆ ಸೂಕ್ಷ್ಮ ಸ್ಥಿತಿಯಲ್ಲಿ ಬೀಳುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಆದರೆ ವಿರೋಧಿಗಳು ಸ್ವಪಕ್ಷದ ಜನರನ್ನು ಫಿತೂರ ಮಾಡುವ ಪ್ರಯತ್ನ ಮಾಡುವದು ಒಂದೇ ಸವನೆ ನಡೆದಿರುವದು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೪, ೧೫, ೧೮, ೧೯ ಅನುಕೂಲ.

ಕಾಫಿ ಚಹಾ ತೋಟಗಳಲ್ಲಿಯ ಕೂಲಿಕಾರರ ಪರಿಸ್ಥಿತಿ

(೩ ನೇ ಪುಟದಿಂದ)

ಮೆನೇಜರುಗಳೊಡನಾದವು. ಅವರಿಂದ ಪಟಿಕು ಹಾಲೂ ದೊರಕಲಾರದು. ಪ್ಲಾಂಟರು ಮೆನೇಜರುಗಳೊಡನೆ ಡಜನ್‌ಗಟ್ಟಲೆ ನಾಯಿಗಳಿದ್ದು ಅವು ಈ ನಿಯಂತ್ರಣದ ವೇಳೆಯಲ್ಲೂ ಸರಿಯಾದ ಆಹಾರ ತಿಂದು ಹೆಬ್ಬುಲಿಯಂತೆ ಕಾಣುವವು. ಅವುಗಳು ತಿನ್ನುವ ಒಂದು ದಿನದ ಹಾಲು, ಬ್ರೆಡ್, ಗಂಜಿ, ಮಾಂಸಗಳ ಮೇಲಿನ ವೆಚ್ಚ ನಮ್ಮ ಸಹೋದರ ವರ್ಗದ ವರ್ಷಗಟ್ಟಲೆಯ ಖರ್ಚಿಗೆ ಸರಿಸಮ. ಈ ನಾಯಿಗಳಿಂದಲೇ ಟೀ ಕಾಫಿಗಳ ಬೆಳವಣಿಗೆಯಾಗುತ್ತದೋ ತಿಳಿಯದು!

ದುರ್ಬೋಧನೆ

ಮೆನೇಜರರಿಂದ "ಅಡ್ವಾನ್ಸು ರೂಪಾಯಿ" ಮುಂದಾಗಿ ತಗೆದುಕೊಂಡ ಕೂಲಿ ಸಪ್ಲೈಯರರು–ರೈಟರುಗಳು ಬಹು ಸಂಖ್ಯೆಯಲ್ಲಿದ್ದು, ಈ ಕಾಫಿ—ಟೀ—ತೋಟಗಳಲ್ಲಿ ಕೆಲಸ ಮಾಡಲು ತಕ್ಕ ಕೆಲಸಗಾರರ ಅಭಾವದಿಂದ, ಒಬ್ಬ ಸಪ್ಲೈಯರನು ಬೇರೆ ಸಪ್ಲೈಯರರೊಡನೆ ಇರುವ ಜನಗಳನ್ನು ತಪ್ಪಿಸಿ ತನ್ನೊಡನೆ ಕರಕೊಂಡು ಹೋಗಲು ಆತನ ಆಳಿಗೆ ಬಹಳವಾದ ದುರ್ಬೋಧನೆ ಕೊಡುವನು. "ನಿನಗೆ ಮೇಸ್ತ್ರಿ ಕೆಲಸ ಕೊಡುವೆನು" ಸಂಬಳ ಜಾಸ್ತಿ ಕೊಡುವೆನು, ಜಾಸ್ತಿ ಖರ್ಚಿಗೆ ಕೊಡುವೆನು, ಅಲ್ಲದೆ ಸಾಲವನ್ನೂ ಜಾಸ್ತಿ ಕೊಡುವೆನು. ಈಗ ನೀನು ಸೇಂದಿ ಕುಡಿಯಲು ರೂಪಾಯಿ ತಕೊಂಡು ಹೋಗು"—ಎಂಬ ಹಲವಾರು ದುರ್ಬೋಧನೆಕೊಟ್ಟು ಆತನ ಮನಸ್ಸನ್ನು ತಿರುಗಿಸಿಬಿಟ್ಟು, ೪—೫ ರೂಪಾಯಿಗಳನ್ನು ಬೀಸಾಡಿ "ಇಗೋ ಸೇಂದಿ ಸರಾಯಿ ಕುಡಿದು ಬಾ, ಈಗ ಮಾತಾಡಲು ನಿನಗೆ ಹೆದರಿಕೆಯಾಗುವುದು. ಹೋಗು" ಎಂದು ಒತ್ತಾಯಿಸಿ ಕಳುಹಿಸುವರು.

"ಅಡ್ವಾನ್ಸು ಕೊಂಡರೆ ನೀನು ಬರುವೆಯೆಂಬ ದೃಢ ನನಗೆ ಆಗುತ್ತದೆ. ಸಾಲ ಅವರದ್ದು ಇದ್ದರೆ ಕೊಡೋಣ" ಎಂದು ಹೇಳಿ, ಕೂಲಿಯಾಳು ಒಪ್ಪದಿದ್ದರೂ, ಆತನ ಕಿಸೆಗೆ ೩–೪—೫ ನೂರು ರೂಪಾಯಿಗಳ ನೋಟನ್ನು ತುರುಕಿಸಿ ಬಿಟ್ಟು ಹೋಗಿನ್ನುವರು. ಈ ವಿಧವಾದ ಋಣಬದ್ಧನಾಗಿ ಕಣ್ಣು ಅರಳಿಸಿಕೊಂಡು ಕೂಲಿಯು ಸೇಂದಿ—ಸರಾಯಿಗಳ ಅಂಗಡಿಗೆ ನುಗ್ಗಿ, ತಾನು ಪ್ರಥಮತಃ ಬೇಕಾದಷ್ಟು ಕುಡಿದು, ದಾರಿಹೋಕರನ್ನು ಕರೆಕರೆದು ಕುಡಿಯಿರಿ ಭಾವ, ಕುಡಿಯುವ ಎಂಬ ಧ್ವನಿ ಮಾಡುತ್ತ ಹೊರಳಾಡುತ್ತ, ಬೈದಾಡುತ್ತ ಗುದ್ದಾಟ ನಡೆಸಿಕೊಂಡು ಕೆಲವು ರೂಪಾಯಿ (ಬೆಲೆ ಬಾಳುವ ಕಾಗದಗಳನ್ನು) ಬಿಸಾಡಿ, ಉಳಿದುದನ್ನು ಮರುದಿವಸ ಅಂಕೆಯೋ ಖರ್ಚಾಗುವ ತನಕ ಈ ವಿಧದ ನಾಟಕವನ್ನು ರಂಗ ಭೂಮಿಯಲ್ಲಿ ಆಡಿ ತೋರಿಸುವನು. ರೈಟರು ಕೊಟ್ಟ ಹಣದ ಲೆಕ್ಕ ತಪ್ಪಿತು. ಮತ್ತದರ ಭಾರವು ತೀರಾ ಕಮ್ಮಿಯಾಯಿತು. ಪುನಃ ಸಪ್ಲೈಯರುಗಳೊಡನೆ ಒಂದು ರೂಪಾಯಿ ಕೊಡಿ ಎಂದು ಕೇಳಲು ಧೈರ್ಯವೆನಿಸುವದು. ಸಾಲ ಜಾಸ್ತಿಯಾಗುತ್ತದೆ ಎಂತ ಹೇಳಿ ಆಳನ್ನು ವಾಪಸು ಕಳುಹಿಸಿದರೆ ಬೇರೊಂದು ಸಪ್ಲೈಯರೊಡನೆ ಸುಳ್ಳು ನೆವಗಳನ್ನು ಹೇಳಿ ಸಾಲಕೊಂಡು, ಸೇಂದಿಯಂಗಡಿಗೆ ಬಂದು ತನ್ನ ಮುಂದಿನ ಪೂರ್ಣಾಂಕವನ್ನು ತೀರಿಸುವನು. ಇತ್ತ ಸಪ್ಲೈಯರುಗಳು ಮೋಸ ಮಾಡಿದನೆಂದು ಆತನನ್ನು ಹುಡುಕಿ, ಸಿಕ್ಕಿದಾಗ ಆತನಿಗೆ ಸರಿಯಾದ ಏಟು, ಒದೆ, ಇನ್ನಿತರ ಮಾನಭಂಗವನ್ನು ಮಾಡುವರು. ದಂಗೆಖೋರನೆನ್ನುವರು. ಈ ವಿಧದ ಮೋಸತನ ತಾನು ಕಲಿಸಿದುದು ಎಂಬ ಎಣಿಕೆಯು ಸಪ್ಲೈಯರನ ಮನಸ್ಸಿಗೆ ಬರಲಾರದು. ಈ ವಿಧದ ದೋಷಗಳನ್ನು ಸಪ್ಲೈಯರು ಕಟ್ಟಿಕೊಂಡದ್ದಲ್ಲದೆ, ನಮಗೆ ಕಾಲಿನ ಬೂಟು ಮೆಟ್ಟುಗಳಿಂದ ಪೆಟ್ಟುಗಳನ್ನು ಹಂದಿ ನಾಯಿಗಳಿಗೆ ಕೊಡುವಂತೆ ಕೊಟ್ಟು ನಿರ್ಗತಿಕರಂತೆ ಮಾಡಿದ ಹೊಣೆಯು ಅವರದೇ ಆಗಿದೆ. ಈ ಸಪ್ಲೈಯರುಗಳು ನಮ್ಮ ಕೆಲಸದಿಂದ ಸಿಗುವ, ನಿರಾಯಾಸ ಧನ (ಕಮಿಶನ್)ಕ್ಕಾಗಿ ನಮ್ಮಗಳ ಬದಲಾವಣೆಯ ಹೋರಾಟ ನಡೆಸುತ್ತಾರೆ. ಸಪ್ಲೈಯರುಗಳೊಳಗೇ–ತಾನು ಆ ತೋಟಕ್ಕೆ ಆಳು ಸಪ್ಲೈ ಮಾಡುತ್ತೇನೆ, ಈ ತೋಟಕ್ಕೂ ನಾನೇ-ಎಂಬ ಮೇಲಾಟ.

ವಂಚನಾ ಪ್ರಪಂಚ

ನಮ್ಮ ಆರೇಳಾಣೆಯ ದೈನಿಕ ಸಂಬಳವೆತ್ತ, ಹತ್ತು ರೂಪಾಯಿಯಂತೆ ಈ ದಲ್ಲಾಳಿಗಳಿಗೆ ದೊರೆಯುವದೆತ್ತ! ಇದಲ್ಲದೆ ತೋಟವಲ್ಲಿಯೇ ಇದ್ದು ಕೆಲಸಗಳ "ಚಕ್ಕು" ಮಾಡ(ಕ್ಕ ಟರ್)ನಾಗಿ ಉಳಿದರೆ ಪ್ರತ್ಯೇಕ ೬೦—೮೦ ರೂಪಾಯಿಗಳ ಸಂಬಳವಿದೆ. ಅಲ್ಲದೆ ಎಷ್ಟು ಆಳುಗಳು ಆತನಲ್ಲಿ ಇವೆಯೋ ಕಲೆಗಣನೆಯ ಅನುಸಾರವಾಗಿ ಅಷ್ಟು ರೂಪಾಯಿಗಳ ಮಾಸಿಕ "ಬೋನಸ್ಸು" ಎಂತ ಪ್ರತ್ಯೇಕವಿದೆ. ಉದಾ:— ಒಬ್ಬ ಸಪ್ಲೈಯರನಲ್ಲಿ ೧೦೦ ಜನ ಕೂಲಿ ಆಳುಗಳಿದ್ದರೆ ೧೦೦! ರೂಪಾಯಿಗಳ ಬೋನಸ್ಸು, ಆತನು ರೈಟರಾಗಿದ್ದರೆ ೮೦! ರೂಪಾಯಿ ಸಂಬಳ, ಆತನ ಆಳುಗಳ ಮಾಸಿಕ ಸಂಬಳ ಜುಮ್ಲಾ ೯೦೦! ರೂಪಾಯಿಗಳಾಗುತ್ತದೆಯಾದರೆ ೧೦೬ ರೂಪಾಯಿ "ಕಮಿಶನ್" ಎಂದು ಒಟ್ಟಿಗೆ ಸಂಬಳ ೨೭೦-೦-೦ ರೂಪಾಯಿಗಳಾಗುತ್ತದೆ. ಇದಕ್ಕಿಂತಲೂ ಜಾಸ್ತಿ ಸಂಖ್ಯೆಯಲ್ಲಿ ಆಳುಗಳಿದ್ದು, ಇನ್ನೂ ಹಳೆಯ ಸಪ್ಲೈಯರುಗಳಿಗೆ ರೈಟರುಗಳಾಗಿದ್ದರೆ ಕೇಳುವುದೇ ಬೇಡ! ಸಪ್ಲೈಯರುಗಳೊಳಗೆ ಜಾಸ್ತಿ ಎಂದರೆ ೫೦೦–೬೦೦ ಆಳುಗಳಿರುವವರೂ ಇದ್ದಾರೆ. ಇನ್ನು ಈ ರೈಟರುಗಳು ತೋಟದಲ್ಲಿ ಸೇಂದಿಯಂಗಡಿ, ಸಾಮಾನುಗಳ ಅಂಗಡಿ, ಬಟ್ಟೆಯ ಅಂಗಡಿಗಳನ್ನು ಇಟ್ಟು ಅವುಗಳಿಂದ ಒಂದಕ್ಕೆರಡರಂತೆ ಹಣಗಳಿಸುವ ಹಂಚಿಕೆ ಮಾಡಿದ್ದಾರೆ. ಇವುಗಳಲ್ಲದೆ ಸಮೀಪದ ಹಳ್ಳಿಗಳಲ್ಲಿ ಗೌಡರುಗಳಿಗೆ ಬೇಕಾದಷ್ಟು ರೂಪಾಯಿಗಳನ್ನು ನೂರಕ್ಕೆ ೨೫ ರಂತೆ ಸಾಲಕೊಟ್ಟು ಅವರಿಂದ ಭತ್ತ ಪಡಕೊಂಡು ತೋಟಗಳಿಗೆ ಕೊಳ್ಳುವರು. ಇತ್ತ ಮೇನೇಜರುಗಳಿಗೆ ಲಾಭ ಹೊಡೆಯುವ ಲೆಕ್ಕ ತೋರಿಸುವರು. ಅತ್ತ, ಸಪ್ಲೈಯರುಗಳಲ್ಲಿ (ರೈಟರುಗಳಲ್ಲಿ) ಜನಗಳ ಲೆಕ್ಕದ ಹಾಜರಿಪಟ್ಟಿ Check-roll) ಇರುವದರಿಂದ ದಿನಕ್ಕೆ ೮-೧೦ ಜನಗಳ ಹೆಸರಿಗೆ ಹಾಜರು ಜಾಸ್ತಿ ಹಾಕಿ ಜನಗಳ ಆಖೈರಿ ಲೆಕ್ಕ ಮಾಡುತ್ತಿರುವಾಗ ವಜಾ ತಗೆದು ಆಳುಗಳ ಸಂಬಳ ತಿನ್ನುವರು. ಇದೂ ಒಂದು ಮೋಸ. ಇತ್ತ (ಆ ಜನಗಳ) ಹೆಚ್ಚು ಹಾಜರಿಯ ಕೆಲಸದ ಖರ್ಚನ್ನು ಭರ್ತಿ ಮಾಡಲು ಬಾಕಿ ಇರುವ ಕೆಲಸದ ಆಳುಗಳಿಂದ ಜಾಸ್ತಿ ಗಂಟೆ ಕೆಲಸ ಮಾಡಿಸಿ ಎಕರೆ ಲೆಕ್ಕಕ್ಕೆ ಜನದ ಖರ್ಚಿನ ಸಂಖ್ಯೆ ಭರ್ತಿ ಮಾಡುವರು. ಕೆಲಸಪ್ಲೈಯರುಗಳಿಗೆ "ಚಕ್ರೋಲಿ"ನ ಅಧಿಕಾರಸಿಗದುದರಿಂದ ಆಳಿನ ನಿಜ ಕೆಲಸದಿಂದ ಮಾಸಕ್ಕೆ ಎರಡೋ ಮೂರೋ ಅವರ ಮನಕ್ಕೆ ಬಂದಷ್ಟು ಕೆಲಸದ ದಿನಗಳನ್ನು ವಜಾ ತೆಗೆದು ಕಮ್ಮಿಯಾಗಿರಿಸಿ ಸಂಬಳ ಕೊಡುವರು. ಹೀಗೆ ಸಹಜರೂಪವಾದ ಗಳಿಕೆಯಲ್ಲದೆ ಇದೊಂದು ಮೋಸಗಾರಿಕೆಯ ಸಂಪಾದನೆಯೂ ಇದೆ. ಇವರ ಮೋಸವಾದರೂ ನಮಗೆ ತಿಳಿಯುವದೆಂತು? ಅವರು ಹೇಳಿದ ಲೆಕ್ಕವನ್ನು ತಲೆಯಲ್ಲಾಡಿಸುತ್ತ ಹೌದೆಂದು ಪ್ರತ್ಯುತ್ತರ ಕೊಡುತ್ತಿರಬೇಕಲ್ಲದೆ, ಮರು ಮಾತಾಡುವ ಅವಕಾಶವಿಲ್ಲ. ಅದರಮೇಲೆ ಲೆಕ್ಕವೆಂದರೇನೆಂದು ನಮ್ಮಲ್ಲಿ ಬಹಳ ಜನಕ್ಕೆ ಗೊತ್ತಿಲ್ಲ! ದೇವರೇ ಗತಿ!!

... ಧಿಕಾರವು ... ದೆಂದೂ ಆದರೆ ... ಮೂಲಕ ಹಿಂದೀಯ ಹುಬ್ಬಳ್ಳಿಯ ಸಂಯುಕ್ತ ... ದಲ್ಲಿ ಮೈಸೂರಿನ ಮುದ್ರಣಾಲಯದಲ್ಲಿ ... ಲೋಕ ... ಕರವಾಗಿ ಹ. ರಾ. ಮೋಹರೆ ... ಗೆ ಪ್ರಕಟವಾಯಿತು.